ಗುರುವಾರ, ಮೇ 29, 2025 | ₹ 7.00
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

prajavani.net prajavani prajavani prajavani

ಐಪಿಎಲ್ ಕ್ವಾಲಿಫೈಯರ್ ಇಂದು



ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯ ಪ್ರಥಮ ಕ್ವಾಲಿಫೈಯರ್ ಪಂದ್ಯವು ಚಂಡೀಗಢದ ಮುಲ್ಲನಪುರದಲ್ಲಿ ಗುರುವಾರ ನಡೆಯಲಿದೆ. ರಜತ್ ಪಾಟೀದಾರ್ ನಾಯಕತ್ವದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಶ್ರೇಯಸ್ ಅಯ್ಯರ್ ಮುಂದಾಳತ್ವದ ಪಂಜಾಬ್ ಕಿಂಗ್ಸ್ ತಂಡಗಳು ಮುಖಾಮುಖಿಯಾಗಲಿವೆ

ಪಂದ್ಯದ ಸಮಯ: ರಾತ್ರಿ 7.30 **ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್ ಆ್ಯಪ್**

ಚಿತ್ರರಂಗದ ಪ್ರಮುಖರ ಒಕ್ಕೊರಲ ಅಭಿಮತ • ಹೊಸಬರಿಗೆ ಸೂಕ್ತ ಮಾರ್ಗದರ್ಶನ, ಶಿಕ್ಷಣ ಒದಗಿಸಲು ಆಗ್ರಹ

ಸಿನಿಮಾಗಳು ಅಧಿಕ, ಗುಣಮಟ್ಟ ಕಳಪೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರತಿ ವಾರ ಕನ್ನಡದಲ್ಲಿ ಹತ್ತಾರು ಚಲನಚಿತ್ರಗಳು ಬಿಡುಗಡೆಯಾಗುತ್ತಿವೆ. ಆದರೆ, ಸೂಕ್ತ ಗುಣಮಟ್ಟ ಇರದ ಕಾರಣ ಪ್ರೇಕ್ಷಕರು ಚಿತ್ರಮಂದಿರಗಳ ಕಡೆಗೆ ಬರುತ್ತಿಲ್ಲ. ಈ ಸಂದರ್ಭದಲ್ಲಿ ಚಿತ್ರರಂಗ ಪ್ರವೇಶಿಸುವ ಹೊಸಬರಿಗೆ ಸೂಕ್ತ ಮಾರ್ಗದರ್ಶನ, ಶಿಕ್ಷಣ ಒದಗಿಸಬೇಕಾದ ಅಗತ್ಯವಿದೆ...'

'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ ಭಾಗವಾಗಿ ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ದುಂಡು ಮೇಜಿನ ಸಭೆಯಲ್ಲಿ ಚಿತ್ರರಂಗದ ಪ್ರಮುಖರಿಂದ ವ್ಯಕ್ತವಾದ ಅಭಿಪ್ರಾಯಗಳಿವು.

ಈ ಸಭೆಯಲ್ಲಿ ಚಲನಚಿತ್ರ ನಿರ್ದೇಶಕ ಟಿ.ಎಸ್. ನಾಗಾಭರಣ, ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸಾಧು ಕೋಕಿಲ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತ ಹೇಮಂತ್ ನಿಂಬಾಳ್ಕರ್, ಚಲನಚಿತ್ರ ನಿರ್ದೇಶಕಿ ಡಿ. ಸುಮನ್ ಕಿತ್ತೂರು, ನಿರ್ದೇಶಕ ತರುಣ್ ಸುಧೀರ್, ದಕ್ಷಿಣ ಭಾರತ ಚಲನಚಿತ್ರ ವಾಣಿಜ್ಯ ಮಂಡಳಿ ಸದಸ್ಯ ಕೆ.ವಿ. ಚಂದ್ರಶೇಖರ್ ಹಾಗೂ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ನರಸಿಂಹಲು ಎಂ. ಅವರು ಕನ್ನಡ ಚಿತ್ರರಂಗದ ಇಂದಿನ ಸ್ಥಿತಿಗತಿಯ ಬಗ್ಗೆ ಚರ್ಚಿಸಿದರು. ಈ ಸಭೆಯನ್ನು ಸಿನಿಮಾ ಪತ್ರಕರ್ತ ಸದಾಶಿವ ಶೆಣೈ ನಿರ್ವಹಿಸಿದರು.

'ಕನ್ನಡ ಚಿತ್ರರಂಗ ಸಂಕಷ್ಟಕ್ಕೆ ಸಿಲುಕಿದ್ದು, ಹಲವಾರು ಸವಾಲುಗಳನ್ನು ಎದುರಿಸುತ್ತಿದೆ. ಡಿಜಿಟಲೀಕರಣವು ಮುನ್ನೆಲೆಗೆ ಬಂದ ಬಳಿಕ ಚಲನಚಿತ್ರಗಳು ಅಧಿಕ ಸಂಖ್ಯೆಯಲ್ಲಿ ಬರುತ್ತಿವೆ. ಅನುಭವ ಇಲ್ಲದಿದ್ದರೂ ನಿರ್ಮಾಣ, ನಿರ್ದೇಶನ ಮಾಡುವವರ ಸಂಖ್ಯೆ ಹೆಚ್ಚುತ್ತಿದೆ. ಇದರಿಂದಾಗಿ ಚಿತ್ರಗಳು ತಂತ್ರಜ್ಞಾನ, ಕಲಾತ್ಮಕತೆಯ ಕೊರತೆ ಎದುರಿಸುತ್ತಿವೆ. ಪರಿಣಾಮ, ಚಿತ್ರಮಂದಿರಗಳಿಗೆ ಪ್ರೇಕ್ಷಕರು ಬರದೆ, ಕೈಸುಟ್ಟುಕೊಳ್ಳುತ್ತಿದ್ದಾರೆ. ಅನುಭವಿ ನಿರ್ದೇಶಕ, ನಿರ್ಮಾಪಕರು ಸಿನಿಮಾಗಳನ್ನು ಕಡಿಮೆ ಮಾಡಿದ್ದಾರೆ. ಚಲನಚಿತ್ರಗಳ ವಿಷಯ ವಸ್ತುಗಳಲ್ಲಿಯೂ ಭಿನ್ನತೆ ಬೇಕಿದೆ. ತಾರಾ ನಟ–ನಟಿಯರು, ತಂತ್ರಜ್ಞರಿಗೆ ಸಿನಿಮಾದ ಜತೆಗೆ ರಿಯಾಲಿಟಿ ಶೋ, ಜಾಹೀರಾತು ಸೇರಿ ವಿವಿಧ ಅವಕಾಶಗಳು ದೊರೆಯುತ್ತಿವೆ. ಆದ್ದರಿಂದ ಸಿನಿಮಾದಲ್ಲಿ ಅವರಿಗೆ ಆಸಕ್ತಿ ಕಡಿಮೆ ಆಗುತ್ತಿದೆ' ಎಂದು ಅಭಿಪ್ರಾಯಪಟ್ಟರು.

'ಎಲ್ಲ ಕಲಾವಿದರಿಗೂ ಸೂಕ್ತ ಸಂಭಾವನೆ ನೀಡಲು ನಿರ್ಮಾಪಕರಿಗೂ ಸಾಧ್ಯವಾಗುತ್ತಿಲ್ಲ. ಪರಿಣಾಮ, ಕಲಾವಿದರಿಗೆ ಸಿನಿಮಾದಲ್ಲಿ ಆಸಕ್ತಿ ಕಡಿಮೆ ಆಗುತ್ತಿದೆ. ಕನ್ನಡ ಚಿತ್ರರಂಗವನ್ನು ಮುನ್ನಡೆಸಲು ಸೂಕ್ತ ನಾಯಕರಿಲ್ಲ. ಇದರಿಂದಾಗಿ ಚಿತ್ರರಂಗದಲ್ಲಿ ಒಗ್ಗಟ್ಟು ಇಲ್ಲವಾಗಿದೆ' ಎಂದು ಬೇಸರ ವ್ಯಕ್ತಪಡಿಸಿದರು.



ದುಂಡು ಮೇಜಿನ ಸಭೆಯಲ್ಲಿ ತರುಣ್ ಸುಧೀರ್, ಡಿ. ಸುಮನ್ ಕಿತ್ತೂರು, ನರಸಿಂಹಲು ಎಂ., ಟಿ.ಎಸ್.ನಾಗಾಭರಣ, ಸದಾಶಿವ ಶೆಣೈ, ಸಾಧು ಕೋಕಿಲ, ಕೆ.ವಿ. ಚಂದ್ರಶೇಖರ್ ಹಾಗೂ ಹೇಮಂತ್ ನಿಂಬಾಳ್ಕರ್ ಅವರು ಚಿತ್ರರಂಗದ ಸ್ಥಿತಿಗತಿ ಬಗ್ಗೆ ಚರ್ಚಿಸಿದರು

– ಪ್ರಜಾವಾಣಿ ಚಿತ್ರ

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

ನಿರ್ದೇಶನ, ನಟನೆ, ನಿರ್ಮಾಣ, ತಂತ್ರಜ್ಞರ ಕ್ಷೇತ್ರ ಎಲ್ಲದರಲ್ಲೂ ಅನುಭವದ ಕೊರತೆ ಕಾಣುತ್ತಿದೆ. ಸ್ಮಾರ್ಟ್‌ಫೋನ್ ಇದ್ದವರೆಲ್ಲರೂ ಸಿನಿಮಾ ಮಾಡಬಹುದು ಎಂಬ ಸ್ಥಿತಿ ನಿರ್ಮಾಣವಾಗಿದೆ. ಇಂತಹ ಬೆಳವಣಿಗೆಯಿಂದಾಗಿ ಚಿತ್ರರಂಗ ಸೊರಗುತ್ತಿದೆ. ಉತ್ತಮ ಕತೆ ಇದ್ದರೂ ನಿರ್ಮಾಪಕರು ಸಿಗುತ್ತಿಲ್ಲ.

ಟಿ.ಎಸ್.ನಾಗಾಭರಣ, ಚಲನಚಿತ್ರ ನಿರ್ದೇಶಕ

ಕನ್ನಡದ ಸಿನಿಮಾಗಳು ಚಿತ್ರಮಂದಿರಗಳಲ್ಲೂ ಯಶಸ್ವಿ ಪ್ರದರ್ಶನ ಕಾಣುತ್ತಿಲ್ಲ, ಖ್ಯಾತ ಒಟಿಟಿ ವೇದಿಕೆಗಳಲ್ಲೂ ಅವುಗಳಿಗೆ ಬೇಡಿಕೆ ಇಲ್ಲ. ಕನ್ನಡ ಸಿನಿಮಾಗಳಿಗೆ ಪ್ರೇಕ್ಷಕರನ್ನು ಕರೆತರುವ ಅಥವಾ ಪ್ರೇಕ್ಷಕರ ಬಳಿಗೆ ಸಿನಿಮಾಗಳನ್ನು ಕೊಂಡೊಯ್ಯುವ ಪರ್ಯಾಯ ವ್ಯವಸ್ಥೆಯೊಂದು ನಮ್ಮಲ್ಲಿ ಇಲ್ಲ. ಇದು ನಾವು ಎದುರಿಸುತ್ತಿರುವ ಬಹುದೊಡ್ಡ ಕೊರತೆ.

ಡಿ. ಸುಮನ್ ಕಿತ್ತೂರು, ಚಲನಚಿತ್ರ ನಿರ್ದೇಶಕಿ

ಕನ್ನಡದಲ್ಲಿ ಹೆಸರಾಂತ ನಟರ, ನಿರ್ದೇಶಕರ ಸಿನಿಮಾಗಳು ನಿರ್ಮಾಣವಾಗುತ್ತಿಲ್ಲ. ನಟ–ನಿರ್ದೇಶಕರ ಹೆಸರು ನೋಡಿಯೇ ಚಿತ್ರಮಂದಿರಕ್ಕೆ ಬರುವ ಸಾವಿರಾರು ಮಂದಿ ಇನ್ನೂ ಇದ್ದಾರೆ. ಆದರೆ ಅಂತಹ ಸಿನಿಮಾಗಳು ಬರದೇ ಇರುವುದು ನಮ್ಮ ಚಿತ್ರೋದ್ಯಮ ಕುಸಿಯಲು ಮುಖ್ಯ ಕಾರಣ. ಉತ್ತಮ ಚಿತ್ರ ನಿರ್ಮಾಣಕ್ಕೆ ಪ್ರೋತ್ಸಾಹ ನೀಡಬೇಕು.

ಕೆ.ವಿ.ಚಂದ್ರಶೇಖರ್, ದಕ್ಷಿಣ ಭಾರತ ಚಲನಚಿತ್ರ ವಾಣಿಜ್ಯ ಮಂಡಳಿ ಸದಸ್ಯ

ಸಿನಿಮಾಗೆ ಸಹಾಯಧನ ನೀಡುವ ವ್ಯವಸ್ಥೆಯಲ್ಲಿ ಹಲವು ಸಮಸ್ಯೆಗಳಿವೆ. ಯಾರಿಗೆ ಸಹಾಯಧನ ಸಿಗುತ್ತದೆ? ಯಾರಿಗೆ ಸಿಗುವುದಿಲ್ಲ? ಸಹಾಯಧನಕ್ಕೆ ಮಾನದಂಡಗಳೇನು ಎಂಬುದರ ಬಗ್ಗೆ ಅಗತ್ಯ ಮಾಹಿತಿಗಳೇ ಇಲ್ಲ. ಸಣ್ಣ ಬಜೆಟ್‌ನ ಸಿನಿಮಾ ನಿರ್ಮಾಪಕರಿಗೆ ಈ ಸಹಾಯಧನವು ನೆರವಾಗಬಲ್ಲದು.

ತರುಣ್ ಕಿಶೋರ್ ಸುಧೀರ್, ಚಲನಚಿತ್ರ ನಿರ್ದೇಶಕ

ಸ್ಯಾಟಲೈಟ್ ಟಿ.ವಿಗಳು, ಒಟಿಟಿ ವೇದಿಕೆಗಳ ಕಡೆಗೆ ಹೆಚ್ಚಿನ ಗಮನ ನೀಡಲಾಗುತ್ತಿದೆ. ಚಿತ್ರಮಂದಿರಗಳನ್ನು ಗಮನದಲ್ಲಿ ಇರಿಸಿಕೊಂಡು ಸಿನಿಮಾ ಮಾಡುವವರ ಸಂಖ್ಯೆ ಕ್ಷೀಣಿಸಿದೆ. ಸಿನಿಮಾ ಹಂಚಿಕೆ ಮತ್ತು ಆದಾಯದ ವಿಚಾರದಲ್ಲಿ ಪಾರದರ್ಶಕತೆ ಇಲ್ಲವೇ ಇಲ್ಲ. ನಿರ್ಮಾಪಕರಿಗೆ ಮತ್ತು ಚಿತ್ರಮಂದಿರಗಳ ಮಾಲೀಕರಿಗೆ ಸತ್ಯ ಗೊತ್ತಾಗುವುದೇ ಇಲ್ಲ.

ನರಸಿಂಹಲು, ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ

ಚಿತ್ರರಂಗಕ್ಕೆ ಪ್ರವೇಶಿಸುವವರಿಗೆ ಸೂಕ್ತ ಶಿಕ್ಷಣ ಅಗತ್ಯ. ಆದ್ದರಿಂದ ಕಾಲೇಜು ಮಟ್ಟದಲ್ಲಿಯೇ ಸಿನಿಮಾ ಶಿಕ್ಷಣ ಒದಗಿಸಲು ಕ್ರಮ ವಹಿಸಲಾಗುವುದು. ಕನ್ನಡ ಚಿತ್ರಗಳಿಗಾಗಿಯೇ ಪ್ರತ್ಯೇಕ ಒಟಿಟಿ ವೇದಿಕೆ ರೂಪಿಸಲಾಗುತ್ತಿದೆ. ಈ ವೇದಿಕೆಯಿಂದ ಚಿತ್ರಮಂದಿರಗಳಿಗೆ ಸಮಸ್ಯೆಯಾಗದಂತೆಯೂ ಪರಿಹಾರೋಪಾಯ ಕಂಡುಕೊಳ್ಳಲಾಗುವುದು.

ಸಾಧು ಕೋಕಿಲ, ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ

ಸಿನಿಮಾದ ವಸ್ತುವಿಷಯ ಮತ್ತು ಭಾಷೆಯ ವಿಚಾರದಲ್ಲಿ ಕನ್ನಡ ಚಿತ್ರೋದ್ಯಮವು ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಅಗತ್ಯವಿದೆ. ನಿಮ್ಮ ಸಮಸ್ಯೆ ಮತ್ತು ಅವುಗಳಿಗೆ ಪರಿಹಾರದ ಬಗ್ಗೆ ವಿವರವಾದ ಪ್ರಸ್ತಾವ ಸಲ್ಲಿಸಿ. ಅದನ್ನು ಪರಿಶೀಲಿಸಿ, ಅನುಷ್ಠಾನಕ್ಕೆ ತರಲು ಸರ್ಕಾರ ಸಿದ್ಧವಿದೆ.

ಹೇಮಂತ್ ನಿಂಬಾಳ್ಕರ್, ವಾರ್ತಾ ಇಲಾಖೆ ಆಯುಕ್ತ

ಸುದ್ದಿ 2 ನಿಮಿಷ

'ಉನ್ನತ ಕಾನೂನು ಶಿಕ್ಷಣವನ್ನು ಕನ್ನಡದಲ್ಲಿ ಬೋಧಿಸಿ'

ಬೆಂಗಳೂರು: 'ವಿಶ್ವವಿದ್ಯಾಲಯ ಅನುದಾನ ಆಯೋಗವು (ಯುಜಿಸಿ) ಉನ್ನತ ಕಾನೂನು ಶಿಕ್ಷಣವನ್ನು ಕನ್ನಡ ಸೇರಿ ವಿವಿಧ ಪ್ರಾದೇಶಿಕ ಭಾಷೆಗಳಲ್ಲಿಯೂ ನೀಡುವ ವ್ಯವಸ್ಥೆಯನ್ನು ಜಾರಿಗೆ ತರಬೇಕು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಆಗ್ರಹಿಸಿದ್ದಾರೆ.

ಈ ಕುರಿತಂತೆ ಯುಜಿಸಿ ಅಧ್ಯಕ್ಷರಿಗೆ ಪತ್ರ ಬರೆದಿರುವ ಅವರು, 'ಪ್ರಸ್ತುತ ಎಲ್‌ಎಲ್‌ಎಂ, ಎಲ್‌ಎಲ್‌ಬಿ ಮತ್ತು ಪಿಎಚ್‌.ಡಿಯನ್ನು ಆಂಗ್ಲ ಭಾಷೆಯಲ್ಲಿ ಅಭ್ಯಸಿಸುವ ಅವಕಾಶವಿದೆ. ಆಂಗ್ಲ ಭಾಷೆಯ ಮೇಲೆ ಪ್ರಭುತ್ವ ಹೊಂದದ ಪ್ರತಿಭಾನ್ವಿತ ವಿದ್ಯಾರ್ಥಿಗಳು ಅವಕಾಶ ವಂಚಿತರಾಗುತ್ತಿದ್ದಾರೆ. ಯುಜಿಸಿ ತನ್ನ ನಿಯಮಗಳಲ್ಲಿ ತಿದ್ದುಪಡಿ ತರುವ ಮೂಲಕ ಅಸಂಖ್ಯ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಬೇಕಿದೆ. ಪ್ರಾಧಿಕಾರದ ಆಗ್ರಹದ ಮೇರೆಗೆ ರಾಜ್ಯದ ಹಲವು ವಿಶ್ವವಿದ್ಯಾಲಯಗಳ ತಾಂತ್ರಿಕ ಶಿಕ್ಷಣ ಬೋಧನೆಯಲ್ಲಿ ಕನ್ನಡ ಪಠ್ಯವನ್ನು ಅಳವಡಿಸಿಕೊಳ್ಳಲಾಗಿದೆ. ಇದೇ ಮಾದರಿಯ ಕ್ರಮವನ್ನು ಯುಜಿಸಿ ಅನುಸರಿಸಬಹುದಾಗಿದೆ' ಎಂದು ಹೇಳಿದ್ದಾರೆ.

'ಆಯೋಗವು ಕೂಡಲೇ ಪ್ರಾದೇಶಿಕ ಭಾಷೆಗಳಲ್ಲಿ ಪಠ್ಯ ತಯಾರಿಸಲು ಮುಂದಾಗಬೇಕು. ಈ ಕುರಿತಂತೆ ಸಮಿತಿಯೊಂದನ್ನು ರಚಿಸಿ, ಉನ್ನತ ಕಾನೂನು ಶಿಕ್ಷಣಕ್ಕೆ ನಿಗದಿಪಡಿಸಲಾಗಿರುವ ಆಂಗ್ಲ ಭಾಷೆಯ ಪಠ್ಯಕ್ರಮದ ಭಾಷಾಂತರಕ್ಕೆ ಕ್ರಮವಹಿಸಬೇಕಿರುತ್ತದೆ. ಆಸಕ್ತ ವಿದ್ಯಾರ್ಥಿಗಳಿಗೆ ಪ್ರಾದೇಶಿಕ ಭಾಷೆಯಲ್ಲಿ ಉನ್ನತ ಕಾನೂನು ಶಿಕ್ಷಣ ಮುಂದುವರೆಸುವ ಅವಕಾಶ ದೊರೆತಲ್ಲಿ ಉತ್ತಮ ನ್ಯಾಯದಾನ ವ್ಯವಸ್ಥೆಯನ್ನು ನಿರ್ಮಿಸಲು ಸಾಧ್ಯವಾಗಲಿದೆ. ಈ ರೀತಿಯ ತೀರ್ಮಾನದಿಂದ ಯುಜಿಸಿಯ ದೇಶ ಸೇವೆ ಶಾಶ್ವತವಾಗಿ ಉಳಿಯಲಿದೆ' ಎಂದಿದ್ದಾರೆ.



ಬಿಜೆಪಿ ರಾಜ್ಯ ಘಟಕ: ಶೀಘ್ರ ಚುನಾವಣೆ

ಬೆಂಗಳೂರು: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ಶೀಘ್ರವೇ ಚುನಾವಣೆ ನಡೆಯಲಿದೆ ಎಂದು ಪಕ್ಷದ ರಾಜ್ಯ ಉಸ್ತುವಾರಿ ರಾಧಾಮೋಹನ್ ದಾಸ್ ಅಗರ್‌ವಾಲ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ಎಲ್ಲ ರಾಜ್ಯ ಘಟಕಗಳ ಅಧ್ಯಕ್ಷರನ್ನೂ ಚುನಾವಣೆ ಮೂಲಕವೇ ಚುನಾಯಿಸಲಾಗುತ್ತಿದೆ. ಇಷ್ಟ ಬಂದವರನ್ನು ಆಯ್ಕೆ ಮಾಡುವ ಪದ್ಧತಿ ಪಕ್ಷದಲ್ಲಿ ಇಲ್ಲ. ಇದು ಬಿಜೆಪಿಯ ಪ್ರಜಾಸತ್ತಾತ್ಮಕ ನಡೆ. ಕರ್ನಾಟಕದಲ್ಲೂ ಜಿಲ್ಲಾ, ಮಂಡಲ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ಮುಗಿದಿದೆ. ರಾಜ್ಯ ಘಟಕದ ಅಧ್ಯಕ್ಷ ಚುನಾವಣಾ ಪ್ರಕ್ರಿಯೆ ಸದ್ಯದಲ್ಲೇ ಆರಂಭವಾಗಲಿವೆ ಎಂದರು.

ಬಸನಗೌಡ ಪಾಟೀಲ ಯತ್ನಾಳ ಅವರ ಉಚ್ಚಾಟನೆ ಹಿಂಪಡೆಯುವಿರಾ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, 'ಬಸನಗೌಡ ಪಾಟೀಲ ಯತ್ನಾಳ ಯಾರು ನನಗೆ ಗೊತ್ತಿಲ್ಲ. ಅವರು ನಮ್ಮ ಪಕ್ಷದಲ್ಲಿಲ್ಲ. ಪಕ್ಷದಲ್ಲಿ ಇಲ್ಲದವರ ಬಗ್ಗೆ ಪ್ರತಿಕ್ರಿಯಿಸುವುದಿಲ್ಲ' ಎಂದರು.

'ಪಕ್ಷದ ಶಾಸಕರಾದ ಎಸ್‌.ಟಿ. ಸೋಮಶೇಖರ್, ಶಿವರಾಮ ಹೆಬ್ಬಾರ್ ಅವರಿಗೆ ಸಾಕಷ್ಟು ಅವಕಾಶ ನೀಡಿದ್ದೇವು. ಉಚ್ಚಾಟನೆಯ ಕ್ರಮದಿಂದಾಗಿ ಬಿಜೆಪಿ ಇನ್ನಷ್ಟು ಸಶಕ್ತವಾಗಿ ಹೊರಹೊಮ್ಮುತ್ತದೆ' ಎಂದು ರಾಧಾಮೋಹನ್ ದಾಸ್ ಅಗರ್‌ವಾಲ್, ಬಿಜೆಪಿ ರಾಜ್ಯ ಉಸ್ತುವಾರಿ ಹೇಳಿದರು.

'ಪ್ರೀತಿ ಎಂದಿಗೂ ಕ್ಷಮೆಯಾಚಿಸದು'

ತಿರುವನಂತಪುರ (ಪಿಟಿಐ): 'ಕನ್ನಡ ಭಾಷೆ ಕುರಿತ ನನ್ನ ಹೇಳಿಕೆಗೆ ಅದರ ಮೇಲೆ ನನಗಿರುವ ಪ್ರೀತಿಯೇ ಕಾರಣ. ಪ್ರೀತಿ ಎಂದಿಗೂ ಕ್ಷಮೆ ಯಾಚಿಸುವುದಿಲ್ಲ' ಎಂದು ನಟ ಹಾಗೂ ರಾಜಕಾರಣಿ ಕಮಲ್ ಹಾಸನ್ ಬುಧವಾರ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನನ್ನ ಹೇಳಿಕೆ ಮುಂದಿಟ್ಟುಕೊಂಡು ವಿವಾದ ಸೃಷ್ಟಿಸುತ್ತಿರುವವರು ಈ ವಿಚಾರ ಕುರಿತು ಗೊಂದಲ ಉಂಟುಮಾಡುತ್ತಿದ್ದಾರೆ' ಎಂದರು.


'ನಾನು ಏನು ಹೇಳಿದ್ದೇನೋ ಅದನ್ನು ಪ್ರೀತಿ ಕಾರಣದಿಂದಾಗಿಯೇ ಹೇಳಿದ್ದೇನೆ ಎಂಬುದು ನನ್ನ ಭಾವನೆ. ಇತಿಹಾಸಕಾರರು ನನಗೆ ಭಾಷೆಯ ಚರಿತ್ರೆ ಬೋಧಿಸಿದ್ದಾರೆ. ಹೀಗಾಗಿ, ಬೇರೆ ಯಾವ ಉದ್ದೇಶದಿಂದಲೂ ನಾನು ಹೇಳಿಲ್ಲ' ಎಂದೂ ಹೇಳಿದರು.

'ತಮಿಳುನಾಡು ಅಪರೂಪವಾದ ರಾಜ್ಯ. ಎಲ್ಲರನ್ನೂ ಮುಕ್ತವಾಗಿ ಸ್ವಾಗತಿಸುತ್ತದೆ. ಹಾಗಂತ, ಇಂತಹ ರಾಜ್ಯ ಬೇರೆ ಇಲ್ಲ ಎಂದು ನಾನು ಹೇಳುವುದಿಲ್ಲ' ಎಂದರು.

'ಒಬ್ಬ ಮೆನನ್(ಎಂ.ಜಿ.ರಾಮಚಂದ್ರನ್), ಒಬ್ಬ ರೆಡ್ಡಿ (ಒಮಂದೂರ್ ರಾಮಸ್ವಾಮಿ ರೆಡ್ಡಿಯಾರ್) ನಮ್ಮ ಮುಖ್ಯಮಂತ್ರಿಯಾಗಿದ್ದರು. ತಮಿಳು ವ್ಯಕ್ತಿ ಎಂ.ಕರುಣಾನಿಧಿ ಹಾಗೂ ಮಂಡ್ಯ ಮೂಲದ ಕನ್ನಡ ಅಯ್ಯಂಗಾರ್ ಮಹಿಳೆ (ಜೆ.ಜಯಲಲಿತಾ) ಕೂಡ ನಮ್ಮ ಮುಖ್ಯಮಂತ್ರಿಯಾಗಿದ್ದರು' ಎಂದರು.

ಕರ್ನಾಟಕ ಮೂಲದ ಮುಖ್ಯಮಂತ್ರಿಯಿಂದ (ಜಯಲಲಿತಾ) ನನಗೆ ತೊಂದರೆಯಾಗಿದ್ದಾಗ ಕನ್ನಡಿಗರೇ ನನ್ನ ಬೆಂಬಲಕ್ಕೆ ನಿಂತಿದ್ದರು. ಕರ್ನಾಟಕಕ್ಕೆ ಬನ್ನಿ, ನಿಮಗೆ ಮನೆ ಕೊಡುತ್ತೇವೆ, ಎಲ್ಲಿಗೂ ಹೋಗಬೇಡಿ ಎಂದಿದ್ದರು. ಹೀಗಾಗಿ ಕನ್ನಡದ ಜನರು 'ಥಗ್ ಲೈಫ್' ಅನ್ನು ಸ್ವೀಕರಿಸುತ್ತಾರೆ ಎಂಬ ವಿಶ್ವಾಸ ಇದೆ

ಕಮಲ್ ಹಾಸನ್, ನಟ



ಕಮಲ್ ಹಾಸನ್ ಹೇಳಿಕೆ ಖಂಡಿಸಿ ಕನ್ನಡ ಪರ ಸಂಘಟನೆಗಳು ಪ್ರತಿಭಟನೆ ನಡೆಸಿದ್ದು ಹಾಸ್ಯಾಸ್ಪದ. ಒಬ್ಬರ ವಿರುದ್ಧ ಪ್ರತಿಭಟಿಸುವ ಮೊದಲು ಇತಿಹಾಸ ತಿಳಿದುಕೊಳ್ಳಬೇಕು

ಎಸ್.ಸೀಮನ್, ಎನ್‌ಟಿಕೆ ಪಕ್ಷದ ಸಮನ್ವಯಕಾರ

'ಕಮಲ್ ಕ್ಷಮೆಯಾಚಿಸಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡದ ಭಾಷೆ ಬಗ್ಗೆ ಹಗುರವಾಗಿ ಮಾತನಾಡಿರುವ ನಟ ಕಮಲ್ ಹಾಸನ್ ಅವರು ಕೂಡಲೇ ರಾಜ್ಯದ ಜನರ ಕ್ಷಮೆ ಯಾಚಿಸಬೇಕು. ಇಲ್ಲದಿದ್ದರೆ ಅವರ ಚಿತ್ರಗಳಿಗೆ ರಾಜ್ಯದಲ್ಲಿ ನಿರ್ಬಂಧ ಹೇರುವಂತೆ ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿಗೆ ಪತ್ರ ಬರೆಯಲಾಗುವುದು' ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಹೇಳಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿ, 'ಕನ್ನಡದ ನೆಲ, ಜಲ, ಭಾಷೆ ವಿಚಾರದಲ್ಲಿ ಹಗುರವಾಗಿ ಎಷ್ಟೇ ದೊಡ್ಡ ವ್ಯಕ್ತಿ ಮಾತನಾಡಿದರೂ ಸಹಿಸುವ ಪ್ರಶ್ನೆಯೇ ಇಲ್ಲ' ಎಂದರು. 'ಕನ್ನಡದ ಹಲವು ಚಿತ್ರಗಳಲ್ಲಿ ಕಮಲ್ ಹಾಸನ್ ಅವರು ನಟಿಸಿದ್ದಾರೆ. ಒಬ್ಬ ಹಿರಿಯ ನಟ ಈ ರೀತಿ ಹೇಳಿಕೆ ನೀಡುವುದು ಸರಿಯಲ್ಲ' ಎಂದು ಹೇಳಿದರು.

'ಹಣ ಸಂಪಾದಿಸಲು ನಮ್ಮ ಭಾಷೆ ಬೇಕು. ಇದೀಗ ಪುಕ್ಕಟೆ ಪ್ರಚಾರಕ್ಕೆ ಈ ರೀತಿ ಮಾತನಾಡುವುದೇ? ಈ ಹಿಂದೆ ಸೋನು ನಿಗಮ್ ಅವರು ಇದೇ ರೀತಿ ಕನ್ನಡಿಗರ ಬಗ್ಗೆ ಮಾತನಾಡಿ, ಬಳಿಕ ಎಚ್ಚೆತ್ತು ಕ್ಷಮೆಯಾಚಿಸಿದ್ದಾರೆ. ಇಂಥವರಿಗೆ ಪಾಠ ಕಲಿಸುವ ಅಗತ್ಯವಿದೆ' ಎಂದರು.

'ಅಲ್ಲಿಯೇ ಇದ್ದ ನಟ ಶಿವರಾಜ್ ಕುಮಾರ್ ಅವರು ಕಮಲ್ ಹಾಸನ್ ಹೇಳಿಕೆಯನ್ನು ಖಂಡಿಸಿಲ್ಲ' ಎಂದು ಗಮನಸೆಳೆದಾಗ ಪ್ರತಿಕ್ರಿಯಿಸಿದ ತಂಗಡಗಿ, 'ಕನ್ನಡಕ್ಕಾಗಿ ರಾಜ್ ಕುಮಾರ್ ಅವರು ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಹೀಗಾಗಿ ಕಮಲ್ ಹಾಸನ್ ಅವರ ಹೇಳಿಕೆಯನ್ನು ಶಿವರಾಜ್ ಕುಮಾರ್ ಖಂಡಿಸಬೇಕು' ಎಂದರು.

ಅವರಿಗೆ ಇತಿಹಾಸ ಗೊತ್ತಿಲ್ಲ: ಸಿ.ಎಂ

ಕನ್ನಡ ಭಾಷೆಗೆ ಬಹಳ ದೀರ್ಘ ಇತಿಹಾಸವಿದೆ. ಆದರೆ, ಅವರಿಗೆ (ಕಮಲ್ ಹಾಸನ್) ಗೊತ್ತಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ತಮಿಳಿನಿಂದ ಕನ್ನಡ ಹುಟ್ಟಿದೆ ಎಂಬ ಕಮಲ್‌ಹಾಸನ್ ಅವರ ಹೇಳಿಕೆ ಕುರಿತು ಸುದ್ದಿಗಾರರ ಪ್ರಶ್ನೆಗೆ ಸಿದ್ದರಾಮಯ್ಯ ಮೇಲಿನಂತೆ ಪ್ರತಿಕ್ರಿಯಿಸಿದರು.

ಹೇಳಿಕೆ ಖಂಡನೀಯ: ಯಡಿಯೂರಪ್ಪ

'ಕನ್ನಡ ಭಾಷೆಯ ಕುರಿತು ನಟ ಕಮಲ್ ಹಾಸನ್ ಹೇಳಿಕೆ ಖಂಡನೀಯ. ಅವರ ಹೇಳಿಕೆಯನ್ನು ಎಲ್ಲರೂ ಖಂಡಿಸಿದ್ದಾರೆ. ಅಂಥ ಹೇಳಿಕೆಗಳನ್ನು ಯಾರೂ ನೀಡಬಾರದು' ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಹೇಳಿದರು.

'ಹೇಳಿಕೆಯನ್ನು ಹಿಂಪಡೆಯಬೇಕು'

'ಕಮಲ್ ಹಾಸನ್ ಅವರು ಕನ್ನಡ ಭಾಷೆಯ ಉಗಮದ ಬಗ್ಗೆ ನೀಡಿದ ಹೇಳಿಕೆಯು ಕನ್ನಡಿಗರಿಗೆ ನೋವನ್ನುಂಟು ಮಾಡಿದೆ. ಅವರು ಕೂಡಲೇ ಕನ್ನಡಿಗರ ಬಳಿ ಕ್ಷಮೆಯಾಚಿಸುವ ಜತೆಗೆ ತಮ್ಮ ಹೇಳಿಕೆಯನ್ನು ಹಿಂಪಡೆಯಬೇಕು' ಎಂದು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಸಿ. ಸೋಮಶೇಖರ ಆಗ್ರಹಿಸಿದ್ದಾರೆ.

'ಅವರು ಪ್ರಬುದ್ಧ ನಟರು ಮತ್ತು ಚಿಂತಕರು ಎನ್ನುವ ಭಾವನೆ ಕನ್ನಡಿಗರಲ್ಲಿ ಇತ್ತು. ಆದರೆ, ಅವರು ಬಾಲಿಶವಾದ ಹೇಳಿಕೆ ನೀಡುವ ಮೂಲಕ ಎಲ್ಲರ ಹಾಸ್ಯಕ್ಕೆ ಒಳಗಾಗಿದ್ದಾರೆ' ಎಂದು ಹೇಳಿದ್ದಾರೆ.

'ಕಮಲ್ ಹೇಳಿಕೆ ಅಸಂಬದ್ಧ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಮಲ್ ಹಾಸನ್ ಅವರು ಕನ್ನಡ ಭಾಷೆಯು ತಮಿಳು ಭಾಷೆಯಿಂದ ಹುಟ್ಟಿದೆ ಎಂದು ಹೇಳಿರುವುದು ಅಸಂಬದ್ಧವಾಗಿದೆ. ಅಧ್ಯಯನವಿಲ್ಲದೇ ಬೀಸು ಹೇಳಿಕೆಗಳನ್ನು ಕೊಡುವುದು ತಪ್ಪು' ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಹೇಳಿದ್ದಾರೆ.

'ಇಂತಹ ಹೇಳಿಕೆಗಳಿಂದ ಭಾಷಿಕರ ನಡುವೆ ವೈಷಮ್ಯ ಹುಟ್ಟಿಸುವುದು ಕಮಲ್ ಹಾಸನ್ ಅವರಿಗೆ ಶೋಭೆ ತರುವುದಿಲ್ಲ. ಇದು ಖಂಡನೀಯ. ಅವರು ತಪ್ಪನ್ನು ಒಪ್ಪಿಕೊಳ್ಳಬೇಕು' ಎಂದು ಅವರು ಆಗ್ರಹಿಸಿದ್ದಾರೆ.

'ದ್ರಾವಿಡ ಭಾಷೆಗಳೆಲ್ಲ ಮೂಲ ದ್ರಾವಿಡದಿಂದ ಬಂದಿವೆಯೆಂದು ಭಾಷಾ ವಿಜ್ಞಾನಿಗಳು ಹೇಳಿದ್ದಾರೆ. ಕನ್ನಡ, ತಮಿಳು ಭಾಷೆಯಿಂದ ಹುಟ್ಟಿಲ್ಲ. ಕನ್ನಡವು ತಮಿಳು ಮೂಲವೂ ಅಲ್ಲ, ಸಂಸ್ಕೃತ ಮೂಲವೂ ಅಲ್ಲ. ಸ್ವತಂತ್ರ ದ್ರಾವಿಡ ಭಾಷೆ ಎನ್ನುವುದು ಭಾಷಾ ವಿಜ್ಞಾನಿಗಳ ಸ್ಪಷ್ಟ ಅಭಿಪ್ರಾಯವಾಗಿದೆ' ಎಂದು ಹೇಳಿದ್ದಾರೆ.

'ಕನ್ನಡ ಭಾಷೆಯು ಕ್ರಿಸ್ತ ಪೂರ್ವ ಮೂರನೇ ಶತಮಾನದಲ್ಲೇ ಬಳಕೆಯಲ್ಲಿ ಇತ್ತು ಎಂದು ಕೆಲವು ಸಂಶೋಧಕರು ಹೇಳಿದ್ದಾರೆ. ಕ್ರಿಸ್ತ ಪೂರ್ವ ಎರಡನೇ ಶತಮಾನದ ಗ್ರೀಕ್ ಪ್ರಹಸನದಲ್ಲಿ ಕನ್ನಡ ಪದ ಇರುವುದನ್ನೂ ಗುರುತಿಸಲಾಗಿದೆ. ರಾಷ್ಟ್ರಕವಿ ಗೋವಿಂದ ಪೈ ಅವರು ಕ್ರಿಸ್ತ ಪೂರ್ವ ಎರಡನೇ ಶತಮಾನದಿಂದಲೇ ಕನ್ನಡ ಭಾಷೆಯ ಪ್ರಾಚೀನತೆಯನ್ನು ಗುರುತಿಸಿದ್ದಾರೆ' ಎಂದು ತಿಳಿಸಿದ್ದಾರೆ.

ರಕ್ಷಣಾ ವೇದಿಕೆಯಿಂದ ದೂರು

ಬೆಂಗಳೂರು: 'ಕನ್ನಡ ತಮಿಳಿನಿಂದ ಹುಟ್ಟಿರುವುದು' ಎಂಬುದಾಗಿ ಹೇಳಿಕೆ ನೀಡಿರುವ ನಟ ಕಮಲ್ ಹಾಸನ್ ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್‌ಕುಮಾರ್ ಶೆಟ್ಟಿ ಬಣ) ಕಾರ್ಯಕರ್ತರು ಆರ್‌.ಟಿ. ನಗರ ಠಾಣೆಗೆ ಬುಧವಾರ ದೂರು ನೀಡಿದ್ದಾರೆ.

'ದೂರನ್ನು ಸ್ವೀಕರಿಸಲಾಗಿದೆ. ಇನ್ನೂ ಎಫ್‌ಐಆರ್ ದಾಖಲಿಸಿಲ್ಲ. ಕಾನೂನು ತಜ್ಞರು ಹಾಗೂ ಹಿರಿಯ ಅಧಿಕಾರಿಗಳ ಜತೆಗೆ ಚರ್ಚಿಸಿ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಚೆನ್ನೈನಲ್ಲಿ ನಡೆದ 'ಥಗ್ ಲೈಫ್' ಚಿತ್ರದ ಧ್ವನಿಸುರುಳಿ ಬಿಡುಗಡೆ ಸಮಾರಂಭದಲ್ಲಿ ವಿವಾದಾತ್ಮಕ ಹೇಳಿಕೆ ನೀಡಿರುವ ತಮಿಳು ನಟ ಕಮಲ್ ಹಾಸನ್ ವಿರುದ್ಧ ಕ್ರಮ ಕೈಗೊಳ್ಳಬೇಕು. ಕಮಲ್ ಹಾಸನ್ ಅವರು ಕನ್ನಡಿಗರ ಭಾವನೆಗೆ ಧಕ್ಕೆ ಉಂಟು ಮಾಡಿದ್ದಾರೆ. ಎರಡು ರಾಜ್ಯದ ಜನರ ನಡುವೆ ವಿಷಬೀಜ ಬಿತ್ತುವ ಹಾಗೆ ಮಾತನಾಡಿದ್ದಾರೆ. ಕನ್ನಡಿಗರಿಗೆ ಅಪಮಾನ ಮಾಡಿದ್ದಾರೆ' ಎಂದು ದೂರಿನಲ್ಲಿ ಪ್ರವೀಣ್ ಕುಮಾರ್ ಶೆಟ್ಟಿ ಉಲ್ಲೇಖಿಸಿದ್ದಾರೆ.

'ಪ್ರತಿ ಬಾರಿ ತಮಿಳಿನ ಹೊಸ ಚಲನಚಿತ್ರ ಬಿಡುಗಡೆ ಸಮಾರಂಭದಲ್ಲಿ ಕನ್ನಡಿಗರ ಭಾವನೆಗೆ ಧಕ್ಕೆ ತರಲಾಗುತ್ತಿದೆ' ಎಂದು ಹೇಳಿದ್ದಾರೆ.


ಬೆಂಗಳೂರಿನಲ್ಲಿ ಕಮಲ್ ಹಾಸನ್ ಅವರನ್ನು ಸ್ವಾಗತಿಸಲು ಹಾಕಿದ್ದ ಬ್ಯಾನರ್‌ಗಳನ್ನು ಕಿತ್ತು ಎಸೆದು ಆಕ್ರೋಶ ವ್ಯಕ್ತಪಡಿಸಲಾಗಿದೆ.

ಕಟ್ಟಡಗಳ ಎತ್ತರ, ವಿಸ್ತೀರ್ಣದ ಡ್ರೋನ್ ಸರ್ವೆ: ರಹೀಂ ಖಾನ್

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಮನೆ ಮತ್ತು ವಾಣಿಜ್ಯ ಕಟ್ಟಡಗಳ ವಿಸ್ತೀರ್ಣ ಮತ್ತು ಎತ್ತರವನ್ನು ಪತ್ತೆಹಚ್ಚಿ ಅವುಗಳಿಗೆ ತೆರಿಗೆ ವಿಧಿಸಲು ಡ್ರೋನ್‌ಗಳ ಮೂಲಕ ಸರ್ವೆ ಮಾಡಲಾಗುವುದು' ಎಂದು ಪೌರಾಡಳಿತ ಖಾತೆ ಸಚಿವ ರಹೀಂ ಖಾನ್ ಇಲ್ಲಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸ್ಥಳೀಯ ಸಂಸ್ಥೆಯಲ್ಲಿ ಎಷ್ಟು ಕಟ್ಟಡಗಳಿವೆ? ಅವುಗಳ ಎತ್ತರ ಮತ್ತು ವಿಸ್ತೀರ್ಣ ಎಷ್ಟಿದೆ ಎಂಬುದನ್ನು ಡ್ರೋನ್ ಸರ್ವೆ ಮೂಲಕ ಪತ್ತೆ ಹಚ್ಚಲಾಗುವುದು. ಜತೆಗೆ ಆ ಕಟ್ಟಡಗಳಿಂದ ಎಷ್ಟು ತೆರಿಗೆ ಬರಬೇಕಿದೆ ಎಂಬ ವರದಿ ಸಿದ್ಧಪಡಿಸಲಾಗುವುದು. ಮೂರು ತಿಂಗಳಲ್ಲಿ ಡ್ರೋನ್ ಸರ್ವೆ ಆರಂಭವಾಗಲಿದ್ದು, ಯೋಜನೆ ಪೂರ್ಣವಾಗಲು ಸಮಯ ಹಿಡಿಯುತ್ತದೆ' ಎಂದರು.



ರಹೀಂ ಖಾನ್

ಪಾನ್ ಮಸಾಲಾ ಕಳ್ಳಸಾಗಣೆ: ವಾಣಿಜ್ಯ ತೆರಿಗೆ ಅಧಿಕಾರಿಗಳ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೆಹಲಿಯಲ್ಲಿ ತೆರಿಗೆ ವಂಚಿಸಿ ಬೆಂಗಳೂರಿಗೆ ಪಾನ್ ಮಸಾಲಾ ಕಳ್ಳಸಾಗಣೆ ಮಾಡುವ ವ್ಯಕ್ತಿಗಳಿಗೆ ನೆರವು ನೀಡಲು ₹20 ಲಕ್ಷ ಪಡೆಯುತ್ತಿದ್ದಾಗ ಲೋಕಾಯುಕ್ತ ಪೊಲೀಸರಿಗೆ ಸಿಕ್ಕಿಬಿದ್ದಿದ್ದ ವಾಣಿಜ್ಯ ತೆರಿಗೆ ಪರಿವೀಕ್ಷಕ ನಿಜಾನಂದಮೂರ್ತಿ ಎಂ.ಆರ್ ಮತ್ತು ಇತರ ಮೂವರು ಅಧಿಕಾರಿಗಳನ್ನು ಆರ್ಥಿಕ ಇಲಾಖೆಯು ಅಮಾನತು ಮಾಡಿದೆ.

ಕಳ್ಳಸಾಗಣೆದಾರರಿಗೆ ನಿಜಾನಂದಮೂರ್ತಿ ಅವರು ನೆರವು ನೀಡುತ್ತಿದ್ದ ಬಗ್ಗೆ ಲಭಿಸಿದ ಮಾಹಿತಿ ಆಧಾರದಲ್ಲಿ ಏಪ್ರಿಲ್ 24 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಲೋಕಾಯುಕ್ತ ಪೊಲೀಸರು ಕಾರ್ಯಾಚರಣೆ ನಡೆಸಿದ್ದರು. ನಗರದ ನಾಗರಬಾವಿಯ ನಮ್ಮೂರ ತಿಂಡಿ ಹೋಟೆಲ್ ಸಮೀಪ ಮನೋಜ್ ಎಂಬಾತನಿಂದ ₹20 ಲಕ್ಷ ಪಡೆಯುತ್ತಿದ್ದ ವೇಳೆ ನಿಜಾನಂದ ಮೂರ್ತಿ ಅವರನ್ನು ಬಂಧಿಸಲಾಗಿತ್ತು.

ಮುಖ್ಯಾಂಶಗಳು

- ವಾಣಿಜ್ಯ ತೆರಿಗೆ ಉಪ ಆಯುಕ್ತ, ತೆರಿಗೆ ಪರಿವೀಕ್ಷಕರ ವಿರುದ್ಧ ಕ್ರಮ
- ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮಕ್ಕೂ ಆದೇಶ
- ಲೋಕಾಯುಕ್ತ, ವಾಣಿಜ್ಯ ತೆರಿಗೆ ಇಲಾಖೆಯಿಂದಲೂ ತನಿಖೆ

ಈ ಬಗ್ಗೆ ಆಂತರಿಕ ತನಿಖೆ ನಡೆಸಿದ ವಾಣಿಜ್ಯ ತೆರಿಗೆ ಇಲಾಖೆಯು, ಜಾಗೃತ ವಿಭಾಗ-1ರ ವಾಣಿಜ್ಯ ತೆರಿಗೆ ಉಪ ಆಯುಕ್ತ (ಕೋರಮಂಗಲ) ರಘುನಾಥ ಗೌಡ, ಕೋಲಾರದ ಸ್ಥಳೀಯ ಸರಕು ಮತ್ತು ಸೇವಾ ತೆರಿಗೆ ಕಚೇರಿಯ ವಾಣಿಜ್ಯ ತೆರಿಗೆ ಅಧಿಕಾರಿ ಲಕ್ಕಪ್ಪ ಮತ್ತು ಕೇಂದ್ರ ಕಚೇರಿಯ ಆಂತರಿಕ ಲೆಕ್ಕ ಪರಿಶೋಧನೆ ವಿಭಾಗದ ವಾಣಿಜ್ಯ ತೆರಿಗೆ ಅಧಿಕಾರಿ ನವೀನ್ ಕೆ.ಎಂ. ಅವರು ಕಳ್ಳಸಾಗಣೆ ಜಾಲಕ್ಕೆ ನೆರವು ನೀಡುತ್ತಿದ್ದರು ಎಂಬುದನ್ನು ಪತ್ತೆ ಮಾಡಿತ್ತು.

ನಿಜಾನಂದಮೂರ್ತಿ ಮತ್ತು ಇತರ ಮೂವರ ವಿರುದ್ಧ ಶಿಸ್ತು ಕ್ರಮಕ್ಕೆ ಕಾಯ್ದಿರಿಸಿ, ಅಮಾನತು ಮಾಡಬೇಕು. ಈ ಮೂಲಕ ತನಿಖೆ ನಡೆಸಲು ಅನುವು ಮಾಡಿಕೊಡಬೇಕು ಎಂದು ವಾಣಿಜ್ಯ ತೆರಿಗೆ ಇಲಾಖೆ ಹೆಚ್ಚುವರಿ ಆಯುಕ್ತರು ಸರ್ಕಾರಕ್ಕೆ ಶಿಫಾರಸು ಮಾಡಿದ್ದರು. ಅದರ ಆಧಾರದಲ್ಲಿ ಕ್ರಮ ತೆಗೆದುಕೊಂಡಿರುವ ಆರ್ಥಿಕ ಇಲಾಖೆಯು, ನಾಲ್ವರನ್ನು ಅಮಾನತು ಮಾಡಿ ಆದೇಶ ಹೊರಡಿಸಿದೆ.

'ಈ ಜಾಲವು ವ್ಯವಸ್ಥಿತವಾಗಿ ಕಾರ್ಯನಿರ್ವಹಿಸುತ್ತಿದ್ದು, ಹತ್ತಾರು ತಿಂಗಳಿಂದ ಸಕ್ರಿಯವಾಗಿತ್ತು ಎಂಬ ಮಾಹಿತಿ ದೊರೆತಿದೆ. ರಾಜ್ಯ ಸರ್ಕಾರಕ್ಕೆ ಈ ಜಾಲವು ಈಗಾಗಲೇ ಹತ್ತಾರು ಕೋಟಿ ತೆರಿಗೆ ವಂಚಿಸಿದೆ' ಎಂದು ಲೋಕಾಯುಕ್ತ ಪೊಲೀಸ್ ಮೂಲಗಳು ತಿಳಿಸಿವೆ.

'ವಾಣಿಜ್ಯ ಇಲಾಖೆಯ ಹಲವು ಅಧಿಕಾರಿಗಳು ಅಕ್ರಮದಲ್ಲಿ ಭಾಗಿಯಾಗಿದ್ದಾರೆ. ಈ ಬಗ್ಗೆ ತನಿಖೆ ಮುಂದುವರೆದಿದೆ' ಎಂದು ಹೇಳಿವೆ. ಲೋಕಾಯುಕ್ತ ತನಿಖೆ ಮುಂದುವರೆಸಿದ್ದು, ವಾಣಿಜ್ಯ ತೆರಿಗೆ ಇಲಾಖೆಯೂ ಆಂತರಿಕ ತನಿಖೆ ಕೈಗೊಂಡಿದೆ.

ತವರಿಗೆ ಮರಳಿದ ಬಾನು ಮುಷ್ತಾಕ್ ಅವರಿಗೆ ಆತ್ಮೀಯ ಸನ್ಮಾನ

'ಅನುವಾದವೇ ನನ್ನ ಬಯಕೆಯಾಗಿತ್ತು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬುಕರ್ ಅಥವಾ ಯಾವುದೇ ಪ್ರಶಸ್ತಿ ಪಡೆಯಬೇಕು ಎಂಬುದು ನನ್ನ ಮನಸ್ಸಲ್ಲಿ ಹೊಳೆದೇ ಇರಲಿಲ್ಲ. ಆದರೆ, ನನ್ನ ಕಥೆಗಳು ಇಂಗ್ಲಿಷ್‌ಗೆ ಅನುವಾದವಾಗಬೇಕು. ಭಾಷೆಯ ಮಿತಿ, ಗಡಿಯ ಎಲ್ಲೆಯನ್ನು ಮೀರಿ ಓದುವಂತಾಗಬೇಕು ಎಂಬುದು ನನ್ನ ಬಯಕೆಯಾಗಿತ್ತು' ಎಂದು ಬಾನು ಮುಷ್ತಾಕ್ ತಿಳಿಸಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಬಹುರೂಪಿ ಮತ್ತು ಗಾಂಧಿ ಪ್ರತಿಷ್ಠಾನ ಬುಧವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅಭಿನಂದನೆ ಸ್ವೀಕರಿಸಿ ಅವರು ಮಾತನಾಡಿದರು.

'ದೀಪಾ ಭಾಸ್ತಿ ಇಂಗ್ಲಿಷ್‌ಗೆ ಅನುವಾದ ಮಾಡಿದರು. ಇಂಗ್ಲಿಷ್‌ನಲ್ಲಿ ಪ್ರಕಟಿಸಿದ ಪ್ರಕಾಶಕರಿಗೆ ಈ ಪುಸ್ತಕದಿಂದ ₹6 ಕೋಟಿ ವ್ಯವಹಾರವಾಗಿದೆ ಎಂದರೆ ಇಂಗ್ಲಿಷ್ ಪುಸ್ತಕ ಸಂಸ್ಕೃತಿ ಹೇಗಿದೆ ಎಂಬುದು ಇದರಿಂದ ಗೊತ್ತಾಗುತ್ತದೆ' ಎಂದು ಹೇಳಿದರು.

'ಪ್ರಶಸ್ತಿ ಬಂದಿರುವುದರಿಂದ ಈ ಕೃತಿಯು ಜಗತ್ತಿನ 35 ಭಾಷೆಗಳಿಗೆ ಹಾಗೂ 12 ಭಾರತೀಯ ಭಾಷೆಗಳಿಗೂ ಅನುವಾದವಾಗಲಿದೆ. ಆಡಿಯೊ ಹಕ್ಕುಗಳನ್ನು ತೆಗೆದುಕೊಂಡಿದ್ದಾರೆ. ಸಿನಿಮಾ ಹಕ್ಕುಗಳನ್ನೂ ಪಡೆದಿದ್ದಾರೆ' ಎಂದರು.

ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯೆಷಾ ಖಾನುಂ, ಪತ್ರಕರ್ತೆಯರ ಸಂಘದ ಅಧ್ಯಕ್ಷೆ ಪದ್ಮಾ ಶಿವಮೊಗ್ಗ, ವಿಜಯವಾಣಿ ಪತ್ರಿಕೆ ಸಂಪಾದಕ ಕೆ.ಎನ್. ಚನ್ನೇಗೌಡ, ಗಾಂಧಿ ಭವನದ ಎಚ್‌.ಸಿ. ದಿನೇಶ್ ಉಪಸ್ಥಿತರಿದ್ದರು.

ಸಾಹಿತ್ಯದ ಬೆಸುಗೆ

ವಿಚ್ಛಿದ್ರಕಾರಿ ಶಕ್ತಿಗಳು, ಮತಾಂಧತೆ ಹಾಗೂ ಮೂಲಭೂತವಾದ ಒಟ್ಟಾಗಿ ಬೆಸೆದುಕೊಂಡು ಜಗತ್ತನ್ನು ನಾಶ ಮಾಡುತ್ತಿರುವ ಹೊತ್ತಲ್ಲಿ ಬಾನು ಮುಷ್ತಾಕ್ ಅವರಿಗೆ ಮಾನವೀಯತೆಯ ಮತ್ತು ಭಾರತೀಯತೆಯ ಬೆಸುಗೆಯ ಪ್ರತೀಕವಾಗಿ ಬುಕರ್ ಪ್ರಶಸ್ತಿ ಬಂದಿದೆ ಎಂದು ಮುಖ್ಯಮಂತ್ರಿಯವರ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ ತಿಳಿಸಿದರು.

ಸಾಹಿತ್ಯದ ಹೆಸರಿನಲ್ಲಿ ಕೊಡುತ್ತಿರುವ ಈ ಸಂದೇಶವು, ಎಲ್ಲ ಮೂಲಭೂತವಾದಿ ಶಕ್ತಿಗಳಿಗೆ ಕೊಟ್ಟಿರುವ ಕಪಾಳಮೋಕ್ಷ. ಎಲ್ಲಾ ರೀತಿಯ ಧಾರ್ಮಿಕ ದರ್ಪಗಳಿಗೆ ಕೊಟ್ಟಿರುವ ಏಟು ಮತ್ತು ಮಾನವೀಯ ಧರ್ಮಕ್ಕೆ, ಎಲ್ಲಾ ಧರ್ಮದಲ್ಲಿರುವ ಮಾನವೀಯ ವ್ಯಕ್ತಿತ್ವಗಳಿಗೆ ಸಿಕ್ಕಿರುವ ಮನ್ನಣೆ ಎಂದು ಬಣ್ಣಿಸಿದರು.

ಪತ್ರಕರ್ತ ಜಿ.ಎನ್. ಮೋಹನ್ ಮಾತನಾಡಿ, 'ಬಾಲ್ಯದಲ್ಲಿ ಬಾನು ಅವರನ್ನು ಅವರ ತಂದೆ ಕನ್ನಡ ಶಾಲೆಗೆ ಸೇರಿಸಲು ಹೋದಾಗ ಈ ಹುಡುಗಿಯನ್ನು ಉರ್ದು ಶಾಲೆಗೆ ಸೇರಿಸುವುದು ಬಿಟ್ಟು ಇಲ್ಲಿಗೆ ಕರೆ ತಂದಿದ್ದೀರಿ. ಕನ್ನಡ ಕಲಿಸಲು ಸಾಧ್ಯವೇ ಎಂದು ಶಾಲೆಯ ಶಿಕ್ಷಕರು ಪ್ರಶ್ನಿಸಿದ್ದರು. ನಾಲ್ಕನೇ ತರಗತಿಗೆ ಪ್ರವೇಶ ನೀಡಬೇಕಿದ್ದ ಮಗುವನ್ನು ಒಂದನೇ ತರಗತಿಯಲ್ಲಿ ಕೂರಿಸಿದ್ದರು. ಬಾನು ಅವರು ಆರೇ ತಿಂಗಳಲ್ಲಿ ಕನ್ನಡದ ಕಾಗುಣಿತಗಳನ್ನೆಲ್ಲ ಕಲಿತರು. ಆಗ ಅದೇ ಶಿಕ್ಷಕರು ಕೈ ಹಿಡಿದು ಕರೆದುಕೊಂಡು ಹೋಗಿ ನಾಲ್ಕನೇ ತರಗತಿಯಲ್ಲಿ ಕೂರಿಸಿದ್ದರು. ಇಂದು ಕನ್ನಡವನ್ನು ಜಗತ್ತೇ ನೋಡುವಷ್ಟು ಎತ್ತರಕ್ಕೆ ಒಯ್ದಿದ್ದಾರೆ' ಎಂದು ಹೇಳಿದರು.

ಅದ್ದೂರಿ ಸ್ವಾಗತ

ಅಂತರರಾಷ್ಟ್ರೀಯ ಬುಕರ್ ಪ್ರಶಸ್ತಿ ಪುರಸ್ಕೃತರಾದ ಬಾನು ಮುಷ್ತಾಕ್ ಅವರು ಲಂಡನ್‌ನಿಂದ ಬೆಂಗಳೂರು ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಿದಾಗ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಅದ್ದೂರಿ ಸ್ವಾಗತ ನೀಡಲಾಯಿತು.

ಡೊಳ್ಳು ಹಾಗೂ ಯಕ್ಷಗಾನ ತಂಡಗಳು ಬರಮಾಡಿಕೊಂಡವು. ಇಲಾಖೆಯ ಕಾರ್ಯದರ್ಶಿ ವೆಂಕಟೇಶ್ ಎಂ.ವಿ., ಇಲಾಖೆಯ ನಿರ್ದೇಶಕಿ ಕೆ.ಎಂ. ಗಾಯತ್ರಿ ಪುಷ್ಪಗುಚ್ಛ ನೀಡಿ ಸ್ವಾಗತಿಸಿದರು.

ಗುರುವಾರ, ಮೇ 29, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 148 | ಪುಟ 18

● www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಏಟು–ಎದಿರೇಟು



ನಿಮ್ಮನ್ನು (ಶಶಿ ತರೂರ್) ಬಿಜೆಪಿ 'ಸೂಪರ್ ವಕ್ತಾರ'ರನ್ನಾಗಿ ನೇಮಿಸುವಂತೆ ಪ್ರಧಾನಿ ಅವರನ್ನು ಒತ್ತಾಯಿಸುತ್ತೇನೆ. ನೀವು ವಾಪಸು ಬರುವ ಮುಂಚೆಯೇ ನಿಮ್ಮನ್ನು ವಿದೇಶಾಂಗ ಸಚಿವನನ್ನಾಗಿಯೂ ಘೋಷಿಸುವಂತೆ ಕೇಳಿಕೊಳ್ಳುತ್ತೇನೆ

ಉದಿತ್ ರಾಜ್, ಕಾಂಗ್ರೆಸ್ ಮುಖಂಡ

ಶಶಿ ತರೂರ್ ಅವರು ಪಕ್ಷದ ಹಿತಾಸಕ್ತಿ ಅಥವಾ ಮತಬ್ಯಾಂಕ್ ರಾಜಕಾರಣಕ್ಕಿಂತ ದೇಶದ ಹಿತಾಸಕ್ತಿಗೆ ಮಹತ್ವ ನೀಡಿದರು. ಇದಕ್ಕಾಗಿ ರಾಹುಲ್ ಆಣತಿಯಂತೆ ಅವರ ಮೇಲೆ ದಾಳಿಗಳು ನಡೆಯುತ್ತಿವೆ

ಶೆಹಜಾದ್ ಪೂನಾವಾಲ, ಬಿಜೆಪಿ ರಾಷ್ಟ್ರೀಯ ವಕ್ತಾರ



(ಕಾಂಗ್ರೆಸ್ ಸಂಸದ ಶಶಿ ತರೂರ್ ಅವರು, '2016ಕ್ಕೂ ಮೊದಲು ಭಾರತವು ಎಲ್‌ಒಸಿ ಅನ್ನು ದಾಟಿಲ್ಲ' ಎಂದು ಪನಾಮ ದೇಶದಲ್ಲಿ ಆಡಿದ ಮಾತಿಗೆ ಪ್ರತಿಕ್ರಿಯೆ) 11

ಆಳ–ಅಗಲ ಜಗತ್ತಿನ 4ನೇ ಆರ್ಥಿಕತೆಯತ್ತ ಭಾರತ

ಹೊಸ ಕರಡು ಮಸೂದೆ ಸಿದ್ಧಪಡಿಸಿರುವ ಭೂಸಂಪನ್ಮೂಲ ಇಲಾಖೆ

ದಾಖಲೆ ನೋಂದಣಿ: ಆಧಾರ್ ಐಚ್ಛಿಕ 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
81,312	24,752	₹1 ಲಕ್ಷ (ಬೆಂಗಳೂರು)	₹1.03 ಲಕ್ಷ (ಬೆಂಗಳೂರು)	85.40



ದಾವಣಗೆರೆಯ ನಿಟುವಳ್ಳಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಯಲ್ಲಿ ಗುರುವಾರದಿಂದ ವಿದ್ಯಾರ್ಥಿಗಳಿಗೆ ತರಗತಿ ಪ್ರಾರಂಭವಾಗುತ್ತಿರುವುದರಿಂದ ವಿದ್ಯಾರ್ಥಿಗಳಿಗೆ ವಿತರಿಸಲು ಹೊಸ ಪಠ್ಯಪುಸ್ತಕಗಳನ್ನು ಜೋಡಿಸುತ್ತಿರುವುದು ಕಂಡು ಬಂತು ಚಿತ್ರ: ಸತೀಶ ಬಡಿಗೇರ್

ಸರ್ಕಾರಿ ಶಾಲೆ: ಮಕ್ಕಳ ಹೆಸರಲ್ಲಿ 'ಠೇವಣಿ' ಯೋಜನೆ

● ಬಸವರಾಜ ಹವಾಲ್ದಾರ

ಬಾಗಲಕೋಟೆ: ಜಿಲ್ಲೆಯ ಉತ್ತೂರು, ಶಿರೋಳ, ಹನಗಂಡಿ ಸೇರಿ ವಿವಿಧ ಸರ್ಕಾರಿ ಶಾಲೆಗಳಲ್ಲಿ ಒಂದನೇ ತರಗತಿಗೆ ಸೇರುವ ಮಕ್ಕಳ ಹೆಸರಲ್ಲಿ ₹1 ಸಾವಿರದಿಂದ ₹2 ಸಾವಿರವರೆಗೆ 'ಠೇವಣಿ' ಇಡುವ ಯೋಜನೆ ಜಾರಿಗೊಳಿಸಲಾಗಿದೆ.

ಉತ್ತೂರು: 108 ವರ್ಷದ ಉತ್ತೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 1ರಿಂದ 7ನೇ ತರಗತಿಯವರೆಗೆ 175 ವಿದ್ಯಾರ್ಥಿಗಳು ಇದ್ದಾರೆ. ತಾವು ಓದಿರುವ ಶಾಲೆಗೆ ಈಚೆಗೆ ಭೇಟಿ ನೀಡಿದ ಅಬಕಾರಿ ಸಚಿವ ಆರ್‌.ಬಿ. ತಿಮ್ಮಾಪುರ, 'ಒಂದನೇ ತರಗತಿ ಪ್ರವೇಶ ಪಡೆಯುವ ವಿದ್ಯಾರ್ಥಿಯ ಹೆಸರಿನಲ್ಲಿ ₹2 ಸಾವಿರ ಠೇವಣಿ ಇಡಲಾಗುವುದು' ಎಂದು ಘೋಷಿಸಿದರು.

'ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆಯಡಿ ಯುಬಿ ಕಂಪನಿಯು ಉತ್ತೂರು ಶಾಲೆಗೆ ₹5 ಕೋಟಿ ವೆಚ್ಚದಲ್ಲಿ 20 ಕೊಠಡಿಗಳನ್ನು ನಿರ್ಮಿಸಲಿದೆ. ಸಚಿವ ತಿಮ್ಮಾಪುರ ಅವರು ಆಸಕ್ತಿ ತೋರಿದ್ದಾರೆ. ಸದ್ಯ 8 ಮಕ್ಕಳು ಪ್ರವೇಶ ಪಡೆದಿದ್ದು, ಪ್ರಕ್ರಿಯೆ ಮುಂದುವರಿದಿದೆ' ಎಂದು ಉತ್ತೂರು ಶಾಲೆಯ ಪ್ರಭಾರ ಮುಖ್ಯಶಿಕ್ಷಕ ಅಶೋಕ ಬಾಗೋಜಿ ತಿಳಿಸಿದರು.

ಶಿರೋಳ: 150 ವರ್ಷದ ಶಿರೋಳದ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳ ಸಂಖ್ಯೆ 500 ರಿಂದ 205ಕ್ಕೆ ಇಳಿಮುಖವಾಗಿದೆ. ಮಕ್ಕಳ ಸಂಖ್ಯೆಯನ್ನು ವೃದ್ಧಿಸಲು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಮೊದಲನೇ ತರಗತಿಗೆ ದಾಖಲಾಗುವ ಪ್ರತಿ ಮಗುವಿನ ಹೆಸರಿನಲ್ಲಿ ₹1 ಸಾವಿರ ಠೇವಣಿ ಇಡಲು ನಿರ್ಧರಿಸಿದೆ.

'ಶಿರೋಳದ ಶಾಲೆಯಲ್ಲಿ ಮೊದಲನೇ ತರಗತಿಗೆ ದಾಖಲಾದ ಏಳು ಮಕ್ಕಳ ಹೆಸರಿನಲ್ಲಿ ಠೇವಣಿ ಇಡಲಾಗಿದೆ. ಠೇವಣಿ ಜೊತೆಗೆ ಎರಡು ಸ್ಮಾರ್ಟ್ ಕ್ಲಾಸ್, ಗ್ರಂಥಾಲಯ ಸೇರಿ ಹಲವು ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಸಿಸಿಟಿವಿ ಕ್ಯಾಮೆರಾ ಸಹ ಅಳವಡಿಸಲಾಗಿದೆ' ಎಂದು ಶಿರೋಳ ಶಾಲೆಯ ಮುಖ್ಯ ಶಿಕ್ಷಕ ರಾಮನಗೌಡ ಪಾಟೀಲ ತಿಳಿಸಿದರು.

ಹನಗಂಡಿಯ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಆರ್‌.ಎಲ್. ಪತ್ತಾರ, ಅಲಗೂರ್ ತೋಟದ ಶಾಲೆಯ ಶಿಕ್ಷಕ ಬಿ.ಎಸ್. ಅರವತ್ತಿ ಮತ್ತು ಲಿಂಗನೂರ ಶಾಲೆ ಎಸ್‌ಡಿಎಂಸಿ ಸದಸ್ಯರು ಠೇವಣಿ ಇಡಲು ನಿರ್ಧರಿಸಿದ್ದಾರೆ.

> ಸರ್ಕಾರಿ ಶಾಲೆಗಳಲ್ಲಿ ಎಲ್ಲ ಸೌಲಭ್ಯಗಳಿವೆ. ಮಕ್ಕಳನ್ನು ಪ್ರೋತ್ಸಾಹಿಲು ಠೇವಣಿ ಯೋಜನೆ ಜಾರಿಗೊಳಿಸಲಾಗಿದೆ. ಇದು ಸದ್ಬಳಕೆ ಆಗಬೇಕು
> **ಆರ್‌.ಬಿ. ತಿಮ್ಮಾಪುರ,** ಸಚಿವ, ಅಬಕಾರಿ ಖಾತೆ

> ಸರ್ಕಾರಿ ಶಾಲೆಗೆ ಸೇರುವ ಮಕ್ಕಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಶಿಕ್ಷಕರೇ ಠೇವಣಿ ಯೋಜನೆ ಆರಂಭಿಸಿದ್ದಾರೆ. ಉತ್ತಮ ಕಾರ್ಯ
> **ಎ.ಕೆ. ಬಸಣ್ಣವರ,** ಕ್ಷೇತ್ರ ಶಿಕ್ಷಣಾಧಿಕಾರಿ, ಜಮಖಂಡಿ

'ಶಾಲಾ ಕಾಣಿಕೆ': ಶೈಕ್ಷಣಿಕ ಸಾಮಗ್ರಿ ಕೊಡುಗೆ

ಮಂಗಳೂರು: ಆರಂಭೋತ್ಸವಕ್ಕೆ ಸಜ್ಜಾಗಿರುವ ಇಲ್ಲಿನ ಶಕ್ತಿನಗರದ ನಾಲ್ಯಪದವಿನ ಪಿಎಂಶ್ರೀ ಕುವೆಂಪು ಶತಮಾನೋತ್ತರ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯು ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗೆ ನೆರವಾಗಲು 'ಶಾಲಾ ಕಾಣಿಕೆ' ಎಂಬ ವಿನೂತನ ಕಾರ್ಯಕ್ರಮ ಹಮ್ಮಿಕೊಂಡಿದೆ. 5

ಅನುಮತಿ ಪಡೆಯದೆ ಸಿಇಗಳ ವರ್ಗಾವಣೆ, ಸ್ಥಳ ನಿಯುಕ್ತಿಗೆ ಡಿ.ಕೆ. ಶಿವಕುಮಾರ್ ತೀವ್ರ ಆಕ್ಷೇಪ

ವರ್ಗ: ಸಿ.ಎಂ ಅಸ್ತು– ಡಿಸಿಎಂ ಮುನಿಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮ್ಮ ಅನುಮತಿ ಇಲ್ಲದೆ ಲೋಕೋಪಯೋಗಿ ಇಲಾಖೆಯಿಂದ ಜಲಸಂಪನ್ಮೂಲ ಇಲಾಖೆಗೆ ಮುಖ್ಯ ಎಂಜಿನಿಯರ್‌ಗಳನ್ನು (ಸಿಇ) ವರ್ಗಾವಣೆ ಮಾಡಿ, ಸ್ಥಳ ನಿಯುಕ್ತಿ ಅಧಿಸೂಚನೆ ಹೊರಡಿಸಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಡಿಪಿಎಆರ್) ನಡೆಗೆ ಜಲಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಅಲ್ಲದೆ, ಈ ಆದೇಶವನ್ನು ತಕ್ಷಣ ವಾಪಸ್ ಪಡೆಯಬೇಕು ಎಂದು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಸೂಚನೆ ನೀಡಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇರ ಅಧೀನದಲ್ಲಿ ಡಿಪಿಎಆರ್ ಕಾರ್ಯನಿರ್ವಹಿಸುತ್ತಿದೆ. ಮುಖ್ಯ ಎಂಜಿನಿಯರ್‌ಗಳ ವರ್ಗಾವಣೆ ಮತ್ತು ಸ್ಥಳ ನಿಯುಕ್ತಿಗೆ ಸಂಬಂಧಿಸಿದ ಕಡತವನ್ನು ಮುಖ್ಯಮಂತ್ರಿಗೆ ಡಿಪಿಎಆರ್ ಕಳುಹಿಸಿತ್ತು. ಮುಖ್ಯಮಂತ್ರಿ ಅನುಮೋದನೆ ನೀಡಿದ ಬಳಿಕ ಐವರು ಮುಖ್ಯ ಎಂಜಿನಿಯರ್‌ಗಳನ್ನು ಮೇ 9 ರಂದು ವರ್ಗಾವಣೆ ಮಾಡಲಾಗಿತ್ತು.

'ನನ್ನ ಇಲಾಖೆಗೆ ಸಂಬಂಧಿಸಿದಂತೆ ವರ್ಗಾವಣೆ, ನೇಮಕಾತಿ ಮುಂತಾದ ವಿಚಾರಗಳ ಬಗ್ಗೆ ಆದೇಶ ಹೊರಡಿಸುವ ಮೊದಲು ನನ್ನ ಪೂರ್ವಾನುಮತಿ ಪಡೆಯಲೇಬೇಕು' ಎಂದು ಸರ್ಕಾರ ಅಸ್ತಿತ್ವಕ್ಕೆ ಬಂದ ಆರಂಭದಲ್ಲಿಯೇ ಟಿಪ್ಪಣಿಯ ಮೂಲಕ ಮುಖ್ಯ ಕಾರ್ಯದರ್ಶಿಗೆ ಡಿ.ಕೆ ಶಿವಕುಮಾರ್ ಸೂಚನೆ ನೀಡಿದ್ದರು. ಆ ಸೂಚನೆಯನ್ನು ಉಲ್ಲಂಘಿಸಿ ಈ ಆದೇಶ ಹೊರಡಿಸಿರುವುದು ಶಿವಕುಮಾರ್ ಅವರನ್ನು ಕೆರಳಿಸಿದೆ ಎನ್ನಲಾಗಿದೆ.


ಏನಿದು ವಿವಾದ?: ಹಲವು ತಿಂಗಳುಗಳಿಂದ ಹುದ್ದೆ ನಿರೀಕ್ಷೆಯಲ್ಲಿದ್ದ ಲೋಕೋಪಯೋಗಿ ಇಲಾಖೆಯಲ್ಲಿ ಕರ್ತವ್ಯಕ್ಕೆ ಸೇರಿದ ಐವರು ಮುಖ್ಯ ಎಂಜಿನಿಯರ್ ವೃಂದದ ಅಧಿಕಾರಿಗಳನ್ನು ಆಡಳಿತಾತ್ಮಕ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಖಾಲಿ ಇದ್ದ ಹುದ್ದೆಗಳಿಗೆ ವರ್ಗಾವಣೆ ಮಾಡಿ ಮೇ 9ರಂದು ಡಿಪಿಎಆರ್ ಅಧಿಸೂಚನೆ ಹೊರಡಿಸಿತ್ತು. ಸ್ಥಳ ನಿಯುಕ್ತಿಗೊಳಿಸಿದ ಹುದ್ದೆಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡು, ಪ್ರಭಾರ ವರ್ಗಾವಣೆ ಪ್ರಮಾಣ ಪತ್ರವನ್ನು (ಸಿಟಿಸಿ) ಸಲ್ಲಿಸಬೇಕು ಎಂದೂ ಡಿಪಿಎಆರ್ ನಿರ್ದೇಶನ ನೀಡಿತ್ತು. ಅದರ ಅನ್ವಯ ಎಲ್ಲ ಐವರು ಎಂಜಿನಿಯರ್‌ಗಳು ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದರು.

ಅಂತರ ರಾಜ್ಯ ಜಲವಿವಾದ, ನೀರಾವರಿ ಯೋಜನೆಗಳ ವಲಯ, ಎತ್ತಿನಹೊಳೆ ಯೋಜನಾ ವಲಯ, ಕಾಡಾ ನೀರಾವರಿ ಯೋಜನೆಗಳ ವಲಯ ಮತ್ತು ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಮುಖ್ಯ ಎಂಜಿನಿಯರ್ ಹುದ್ದೆಗಳಿಗೆ ಈ ಐವರನ್ನು ಸ್ಥಳ ನಿಯುಕ್ತಿಗೊಳಿಸಲಾಗಿತ್ತು.

5ನೇ ಪುಟ ನೋಡಿ

ಡಿಕೆಶಿ ಬರೆದ ಟಿಪ್ಪಣಿಯಲ್ಲಿ ಏನಿದೆ?

'ನನ್ನ ಇಲಾಖೆಗೆ ಒಳಪಡುವ ವಿಭಾಗಗಳಿಗೆ ಸಂಬಂಧಿಸಿದಂತೆ ವರ್ಗಾವಣೆ, ನೇಮಕಾತಿ ಮುಂತಾದ ವಿಚಾರಗಳ ಬಗ್ಗೆ ಡಿಪಿಎಆರ್‌ನಿಂದ ಆದೇಶ ಹೊರಡಿಸಬೇಕಾದರೆ ನನ್ನ ಪೂರ್ವಾನುಮತಿ ಪಡೆದ ನಂತರವೇ ಹೊರಡಿಸಬೇಕೆಂದು ಈ ಸರ್ಕಾರ ಅಸ್ತಿತ್ವಕ್ಕೆ ಬಂದ ಆರಂಭದಲ್ಲಿಯೇ ಟಿಪ್ಪಣಿ ಮೂಲಕ ನಿಮಗೆ ತಿಳಿಸಲಾಗಿತ್ತು. ನಂತರ ಮುಖ್ಯ ಎಂಜಿನಿಯರ್‌ಗಳ ಕರ್ತವ್ಯಕ್ಕೆ ಸಂಬಂಧಿಸಿದ ಕಾರ್ಯವ್ಯಾಪ್ತಿಯನ್ನು ಜಲಸಂಪನ್ಮೂಲ ಇಲಾಖೆಯಿಂದ ಡಿಪಿಎಆರ್‌ಗೆ ವಹಿಸುವ ಕಡತದಲ್ಲಿಯೂ ಮೇಲಿನ ಸೂಚನೆಯನ್ನು ಪುನರುಚ್ಚರಿಸಿ, ಅಂತಹ ವಿಚಾರಗಳ ಬಗ್ಗೆ ನನ್ನ ಗಮನಕ್ಕೆ ತಂದು ನನ್ನ ಅನುಮೋದನೆ ಪಡೆದ ನಂತರವೇ ಡಿಪಿಎಆರ್‌ನಿಂದ ಆದೇಶ ಹೊರಡಿಸಬಹುದೆಂದು ಸ್ಪಷ್ಟವಾಗಿ ಸೂಚನೆ ನೀಡಿದ್ದೇನೆ. ಆದರೆ, ಮೇ 9ರಂದು ಹೊರಡಿಸಿದ ಆದೇಶದಲ್ಲಿ ನನ್ನ ಅನುಮೋದನೆ ಪಡೆಯದೆ ಕೆಲವು ಮುಖ್ಯ ಎಂಜಿನಿಯರ್‌ಗಳನ್ನು ಜಲಸಂಪನ್ಮೂಲ ಇಲಾಖೆಗೆ ವರ್ಗಾವಣೆ ಮಾಡಿರುವುದು ನನ್ನ ಗಮನಕ್ಕೆ ಬಂದಿದೆ. ನನ್ನ ಸೂಚನೆಯನ್ನು ಕಡೆಗಣಿಸಿ ಆದೇಶ ಹೊರಡಿಸಿರುವುದನ್ನು ನಾನು ಆಕ್ಷೇಪಿಸುತ್ತಿದ್ದೇನೆ. ಆದುದರಿಂದ ಈ ಆದೇಶವನ್ನು ಕೂಡಲೇ ವಾಪಸು ಪಡೆಯಬೇಕು. ಇಂತಹ ವಿಚಾರಗಳ ಬಗ್ಗೆ ಯಾವುದೇ ಆದೇಶ ಹೊರಡಿಸಬೇಕಾದರೆ ನನ್ನ ಪೂರ್ವಾನುಮತಿ ಪಡೆಯಬೇಕು' ಎಂದು ಮುಖ್ಯ ಕಾರ್ಯದರ್ಶಿಗೆ ಮೇ 13ರಂದು ಬರೆದಿರುವ ಟಿಪ್ಪಣಿಯಲ್ಲಿ ಡಿ.ಕೆ. ಶಿವಕುಮಾರ್ ಸೂಚನೆ ನೀಡಿದ್ದಾರೆ.



ಮೇ 9ರ ಆದೇಶದಲ್ಲಿ ವರ್ಗಾವಣೆಗೊಂಡ ಮುಖ್ಯ ಎಂಜಿನಿಯರ್‌ಗಳು

ಹೆಸರು	ಹುದ್ದೆ
ಎಚ್‌.ಸಿ.ರಮೇಂದ್ರ	ಅಂತರರಾಜ್ಯ ಜಲ ವಿವಾದ, ಬೆಂಗಳೂರು
ವಿನಾಯಕ ಜಿ.ಸುಗೂರ	ನೀರಾವರಿ ಯೋಜನೆಗಳ ವಲಯ, ಕರ್ನಾಟಕ ನೀರಾವರಿ ನಿಗಮ, ತುಮಕೂರು
ಜೆ.ಇ. ಯತೀಶ್ ಚಂದ್ರನ್	ಎತ್ತಿನಹೊಳೆ ಯೋಜನಾ ವಲಯ, ಕರ್ನಾಟಕ ನೀರಾವರಿ ನಿಗಮ, ತುಮಕೂರು
ಶಿವಾನಂದ ಆರ್‌. ನಾಯಕ್	ಆಡಳಿತಾಧಿಕಾರಿ, ಕಾಡಾ ನೀರಾವರಿ ಯೋಜನೆಗಳ ವಲಯ, ಕಲಬುರಗಿ
ಪಿ.ಬಿ.ಪ್ರಕಾಶ್	ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ, ಬೆಂಗಳೂರು

ಮುಖ್ಯಾಂಶಗಳು

- ಸಿಎಂ ಅಧೀನದ ಡಿಪಿಎಆರ್‌ನಿಂದ ಸಿಇಗಳ ವರ್ಗಾವಣೆ
- ತನ್ನ ಒಪ್ಪಿಗೆ ಪಡೆದಿಲ್ಲವೆಂದು ಡಿಸಿಎಂ ತಕರಾರು
- ಆದೇಶ ತಕ್ಷಣ ವಾಪಸಿಗೆ ಸಿಎಸ್‌ಗೆ ಡಿಕೆಶಿ ಸೂಚನೆ



ಪುಷ್ಪ ನಮನ

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಬೆಂಗಳೂರಿನ ಗಾಂಧಿ ಭವನದಲ್ಲಿ ತಮಗೆ ಹಮ್ಮಿಕೊಂಡಿದ್ದ ಸನ್ಮಾನ ಸಮಾರಂಭದಲ್ಲಿ, 'ಅಂತರರಾಷ್ಟ್ರೀಯ ಬುಕರ್' ಪ್ರಶಸ್ತಿ ಪುರಸ್ಕೃತರಾದ ಸಾಹಿತಿ ಬಾನು ಮುಷ್ತಾಕ್ ಅವರು ಮಹಾತ್ಮ ಗಾಂಧಿ ಪ್ರತಿಮೆಗೆ ಬುಧವಾರ ಪುಷ್ಪ ನಮನ ಸಲ್ಲಿಸಿದರು –ಪಿಟಿಐ ಚಿತ್ರ

ಕೆಪಿಸಿಎಲ್ ಎ.ಇ–ಜೆ.ಇ ಆಯ್ಕೆ ಪಟ್ಟಿ ರದ್ದು

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ (ಕೆಪಿಸಿಎಲ್) 404 ಸಹಾಯಕ ಎಂಜಿನಿಯರ್ (ಎ.ಇ) ಮತ್ತು ಕಿರಿಯ ಎಂಜಿನಿಯರ್ (ಜೆ.ಇ) ನೇಮಕಾತಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ 2024ರ ಮೇ 8ರಂದು ಪ್ರಕಟಿಸಿದ್ದ ಆಯ್ಕೆ ಪಟ್ಟಿ ರದ್ದುಗೊಳಿಸಿರುವ ಹೈಕೋರ್ಟ್, ಶೀಘ್ರವೇ ಮರು ಪರೀಕ್ಷೆ ನಡೆಸುವಂತೆ ಕೆಪಿಸಿಎಲ್ ಹಾಗೂ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (ಕೆಇಎ) ನಿರ್ದೇಶಿಸಿದೆ.

ಉತ್ತರ ಪತ್ರಿಕೆಗಳ ಮೌಲ್ಯಮಾಪನದಲ್ಲಿನ ಋಣಾತ್ಮಕ ಅಂಕಗಳ ಕುರಿತಂತೆ ಹೊರಡಿಸಲಾದ ಆದೇಶವನ್ನು ಪ್ರಶ್ನಿಸಿ ಅಭ್ಯರ್ಥಿಗಳು ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯನ್ನು ಏಕಸದಸ್ಯ ನ್ಯಾಯಪೀಠ ತಿರಸ್ಕರಿಸಿತ್ತು.

10ನೇ ಪುಟ ನೋಡಿ

ಬಡ್ಡಿ ಸಹಾಯಧನ ಅಬಾಧಿತ 10

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ: 'ಉಸ್ತುವಾರಿ'ಗಳಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರಿ ಮಳೆಯಿಂದಾಗಿ ಅನಾಹುತ ಸಂಭವಿಸಿರುವ ಮತ್ತು ಪ್ರವಾಹ ಪೀಡಿತ ಪ್ರದೇಶಗಳಿಗೆ ತಕ್ಷಣ ತೆರಳಿ ಪರಿಹಾರ ಕಾರ್ಯದ ಉಸ್ತುವಾರಿ ನೋಡಿಕೊಳ್ಳುವಂತೆ ಜಿಲ್ಲಾ ಉಸ್ತುವಾರಿ ಸಚಿವರು, ಉಸ್ತುವಾರಿ ಕಾರ್ಯದರ್ಶಿಗಳು ಹಾಗೂ ಜಿಲ್ಲಾಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.

ಮಳೆಯಿಂದ ಆಗಿರುವ ಅನಾಹುತಗಳ ಕುರಿತು ಅಧಿಕಾರಿಗಳಿಂದ ಬುಧವಾರ ಮಾಹಿತಿ ಪಡೆದುಕೊಂಡ ಮುಖ್ಯಮಂತ್ರಿ, ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ನಿರ್ದೇಶನ ನೀಡಿದರು.

ಅಲ್ಲದೆ, ಪರಿಸ್ಥಿತಿಯನ್ನು ಸಮಗ್ರವಾಗಿ ಅವಲೋಕಿಸಲು ಇದೇ 30 ಮತ್ತು 31ರಂದು ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಸಭೆ ಕರೆಯುವಂತೆ ಮುಖ್ಯ ಕಾರ್ಯದರ್ಶಿಗೆ ಮುಖ್ಯಮಂತ್ರಿ ಸೂಚನೆ ನೀಡಿದ್ದಾರೆ.

5ನೇ ಪುಟ ನೋಡಿ

ಅಂಕಿ ಅಂಶಗಳು

170 ಪ್ರವಾಹ, ಭೂಕುಸಿತಕ್ಕೆ ಗುರಿಯಾಗಿರುವ ತಾಲ್ಲೂಕು

2,296 ಕಾಳಜಿ (ಆಶ್ರಯ) ತಾಣಗಳನ್ನು ಗುರುತಿಸಲಾಗಿದೆ

201 ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ರವಾಹಪೀಡಿತ ಎಂದು ಗುರುತಿಸಲಾದ ಸ್ಥಳಗಳು



ಮುಸ್ಲಿಂ ಮೀಸಲು: ಮಸೂದೆ ಮತ್ತೆ ವಾಪಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಮಗಾರಿಗಳ ಗುತ್ತಿಗೆಯಲ್ಲಿ ಮುಸ್ಲಿಮರಿಗೆ ಶೇಕಡ 4ರಷ್ಟು ಮೀಸಲಾತಿಗೆ ಅವಕಾಶ ಕಲ್ಪಿಸುವ ಉದ್ದೇಶದಿಂದ ರೂಪಿಸಿದ್ದ 'ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ಕೆಟಿಪಿಪಿ) ತಿದ್ದುಪಡಿ' ಮಸೂದೆಯನ್ನು ರಾಷ್ಟ್ರಪತಿಯ ಅಂಕಿತಕ್ಕೆ ಕಾದಿರಿಸಿ ಎರಡನೇ ಬಾರಿಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ರಾಜ್ಯ ಸರ್ಕಾರಕ್ಕೆ ಹಿಂದಿರುಗಿಸಿದ್ದಾರೆ.

ವಿಧಾನ ಮಂಡಲದ ಎರಡೂ ಸದನಗಳು ಅಂಗೀಕರಿಸಿದ್ದ ಈ ಮಸೂದೆಯನ್ನು ಏಪ್ರಿಲ್ 1ರಂದು ರಾಜ್ಯಪಾಲರ ಅಂಕಿತಕ್ಕೆ ಸರ್ಕಾರ ಕಳುಹಿಸಿತ್ತು. ಆರು ಪುಟಗಳ ಪತ್ರದೊಂದಿಗೆ ಕಡತವನ್ನು ಏಪ್ರಿಲ್ 15ರಂದು ಹಿಂದಿರುಗಿಸಿದ್ದ ರಾಜ್ಯಪಾಲರು, 'ಧರ್ಮಾಧಾರಿತ ಮೀಸಲಾತಿಗೆ ದೇಶದ ಸಂವಿಧಾನದಲ್ಲಿ ಅವಕಾಶ ಇಲ್ಲ' ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದರು. ಅಲ್ಲದೆ, 'ಸಾಂವಿಧಾನಿಕ ತೊಡಕು ಮತ್ತು ನಿರ್ಬಂಧಗಳಿರುವುದರಿಂದ ಪ್ರಸ್ತಾಪಿತ ಮಸೂದೆಗೆ ಅಂಕಿತ ಹಾಕುವ ಬದಲು, ರಾಷ್ಟ್ರಪತಿಯ ಪರಿಶೀಲನೆಗೆ ಬಿಡುವುದು ಸೂಕ್ತವೆಂದು ಭಾವಿಸಿದ್ದೇನೆ' ಎಂದೂ ಪ್ರತಿಪಾದಿಸಿದ್ದರು.

ಅಭಿಪ್ರಾಯ ಪುನರಾವರ್ತನೆ



ಎರಡನೇ ಬಾರಿಗೆ ಮಸೂದೆಯನ್ನು ರಾಜ್ಯ ಸರ್ಕಾರಕ್ಕೆ ವಾಪಸ್ ಕಳುಹಿಸಿರುವ ಕಡತದಲ್ಲಿ, ಮೊದಲ ಬಾರಿ ವಾಪಸ್ ಕಳುಹಿಸಿದ್ದ ಸಂದರ್ಭದಲ್ಲಿ ವ್ಯಕ್ತಪಡಿಸಿದ್ದ ಅಭಿಪ್ರಾಯವನ್ನು ಮತ್ತೊಮ್ಮೆ ಪುನರಾವರ್ತಿಸಿರುವ ರಾಜ್ಯಪಾಲರು, ತಮಿಳುನಾಡು ಸರ್ಕಾರ ಮತ್ತು ಅಲ್ಲಿನ ರಾಜ್ಯಪಾಲರ ನಡುವಿನ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನಲ್ಲಿರುವ ಅಂಶಗಳನ್ನು ಉಲ್ಲೇಖಿಸಿದ್ದಾರೆ.

'ಸಾಂವಿಧಾನಿಕ ಬಿಕ್ಕಟ್ಟು ಎದುರಾಗುವ ಸಂದರ್ಭದಲ್ಲಿ, ರಾಷ್ಟ್ರಪತಿ ಮಾತ್ರ ನಿರ್ಧಾರ ಕೈಗೊಳ್ಳಬಹುದೆಂದೂ ತನ್ನ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್ ಹೇಳಿದೆ. ಮಸೂದೆಗಳಿಗೆ ಸಂಬಂಧಿಸಿದಂತೆ ರಾಜ್ಯಪಾಲರಿಗೆ, ಸಾಂವಿಧಾನಿಕ ನ್ಯಾಯಾಲಯಗಳಿಂದ ಅಭಿಪ್ರಾಯ ಪಡೆಯಲು ಕಾನೂನಿನಲ್ಲಿ ಯಾವುದೇ ರೀತಿಯ ಅಧಿಕಾರ ಇಲ್ಲ. ಈ ಮಸೂದೆಯು ಸಾಂವಿಧಾನಿಕ ಅಂಶಗಳನ್ನು ಹೊಂದಿರುವುದರಿಂದ, ಕಾನೂನು ಪ್ರಕಾರ ಮರು ಪರಿಶೀಲಿಸಲು ನನಗೆ ಕಷ್ಟವಾಗುತ್ತಿದೆ. ಹೀಗಾಗಿ, ರಾಷ್ಟ್ರಪತಿಯ ಪರಿಶೀಲನೆಗೆ ಮಸೂದೆಯನ್ನು ಕಾದಿರಿಸಿದ್ದೇನೆ' ಎಂದೂ ರಾಜ್ಯಪಾಲರೂ ಉಲ್ಲೇಖಿಸಿದ್ದಾರೆ.

'ಅಲ್ಲದೆ, ಮುಸ್ಲಿಂ ಸಮುದಾಯಕ್ಕೆ ಮೀಸಲಾತಿ ನೀಡುವ ವಿಚಾರವು ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಯ ಹಂತದಲ್ಲಿದೆ. ನ್ಯಾಯಾಲಯದಲ್ಲಿರುವ ವಿಷಯದಲ್ಲಿ ಮಧ್ಯಪ್ರವೇಶಿಸುವುದು ಸೂಕ್ತವಲ್ಲವೆಂದೂ ಭಾವಿಸಿದ್ದೇನೆ. ಈ ಕಾರಣಕ್ಕೆ ಮಸೂದೆಗೆ ಅಂಕಿತ ಹಾಕದೆ ರಾಷ್ಟ್ರಪತಿಗೆ ಪರಿಶೀಲನೆಗೆ ಬಿಡಲು ನಿರ್ಬಂಧಿತನಾಗಿದ್ದೇನೆ' ಎಂದೂ ಅವರು ರಾಜ್ಯಪಾಲರು ಹೇಳಿದ್ದಾರೆ.

ಅಮೆರಿಕ: ವೀಸಾ ಅರ್ಜಿಗಳ ಪರಿಶೀಲನೆ ಸ್ಥಗಿತ

ವಾಷಿಂಗ್ಟನ್ (ಎಎಫ್‌ಪಿ): ವಿದೇಶಿ ವಿದ್ಯಾರ್ಥಿಗಳ ವೀಸಾ ನೀಡುವ ಪ್ರಕ್ರಿಯೆಯನ್ನು ಅಮೆರಿಕ ರದ್ದುಗೊಳಿಸಿದೆ.

ಈ ಕುರಿತ ಆದೇಶಕ್ಕೆ ಅಮೆರಿಕದ ವಿದೇಶಾಂಗ ಇಲಾಖೆ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರು ಮಂಗಳವಾರ ಸಹಿ ಹಾಕಿದ್ದಾರೆ.

'ಹೆಚ್ಚುವರಿಯಾಗಿ ವಿದ್ಯಾರ್ಥಿಗಳಿಗೆ ವೀಸಾ ನೀಡುವುದು ಇಲ್ಲವೇ ವಿನಿಮಯ ಕಾರ್ಯಕ್ರಮದಡಿ ವೀಸಾ ನೀಡುವುದಕ್ಕೆ ಮುಂದಿನ ಆದೇಶದವರೆಗೆ ಅನುಮತಿ ಇಲ್ಲ' ಎಂದು ಇಲಾಖೆಯು ಎಲ್ಲ ರಾಯಭಾರ ಕಚೇರಿಗಳು ಹಾಗೂ ಕಾನ್ಸುಲೇಟ್ ಕಚೇರಿಗಳಿಗೆ ನೀಡಿರುವ ಆದೇಶದಲ್ಲಿ ತಿಳಿಸಿದೆ. ದೇಶದಲ್ಲಿನ ವಿಶ್ವವಿದ್ಯಾಲಯಗಳ ಮೇಲೆ ನಿಯಂತ್ರಣ ಸಾಧಿಸಲು ಟ್ರಂಪ್ ಆಡಳಿತ ಮುಂದಾಗಿದ್ದು, ವಿದೇಶಿ ವಿದ್ಯಾರ್ಥಿಗಳ ವೀಸಾಗಳನ್ನು ರದ್ದುಗೊಳಿಸಲಾಗುತ್ತಿದೆ.

14 ಬೆಳೆಗಳ ಕನಿಷ್ಠ ಬೆಂಬಲ ಬೆಲೆ ಹೆಚ್ಚಳ

ದ್ವಿದಳ ಧಾನ್ಯ, ಎಣ್ಣೆಬೀಜಗಳ ಎಂಎಸ್‌ಪಿ ಶೇ 9ರಷ್ಟು ಏರಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಂಗಾರು ಬಿತ್ತನೆ ಹಂಗಾಮಿಗೆ ಸಂಬಂಧಿಸಿದಂತೆ 14 ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಹೆಚ್ಚಳಕ್ಕೆ ಅನುಮೋದನೆ ನೀಡುವ ಮೂಲಕ ಕೇಂದ್ರ ಸಚಿವ ಸಂಪುಟ ಬುಧವಾರ ಮಹತ್ವದ ನಿರ್ಧಾರ ಕೈಗೊಂಡಿದೆ.

ಬಿಹಾರ ವಿಧಾನಸಭೆ ಚುನಾವಣೆ ಸಮೀಪಿಸುತ್ತಿರುವ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಆರ್ಥಿಕ ವ್ಯವಹಾರಗಳ ಸಚಿವ ಸಂಪುಟ ಸಮಿತಿ ಸಭೆಯಲ್ಲಿ ಎಂಎಸ್‌ಪಿ ಕುರಿತ ಕೃಷಿ ಸಚಿವಾಲಯದ ಪ್ರಸ್ತಾವವನ್ನು ಅನುಮೋದಿಸಲಾಗಿದೆ.

'ದೇಶದ ವಿವಿಧ ಭಾಗಗಳಲ್ಲಿ ಮುಂಗಾರು ಬಹಳ ಬೇಗ ಪ್ರವೇಶಿಸಿದೆ. ದೇಶದ ಒಟ್ಟು ವಾರ್ಷಿಕ ಆಹಾರ ಧಾನ್ಯ ಉತ್ಪಾದನೆಗೆ ಶೇ 50ಕ್ಕಿಂತ ಹೆಚ್ಚು ಕೊಡುಗೆ ನೀಡುವ ಬೆಳೆಗಳ ಬಿತ್ತನೆಗೆ ಉತ್ತೇಜನ ನೀಡಲು ಈ ಕ್ರಮ ಕೈಗೊಳ್ಳಲಾಗಿದೆ' ಎಂದು ವಾರ್ತಾ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಸುದ್ದಿಗಾರರಿಗೆ ಇಲ್ಲಿ ತಿಳಿಸಿದರು.

'ರೈತರು ತಮ್ಮ ಬೆಳೆಗಳಿಗೆ ಲಾಭದಾಯಕ ಬೆಲೆಗಳನ್ನು ಖಚಿತಪಡಿಸಿಕೊಳ್ಳಲು ಕನಿಷ್ಠ ಬೆಂಬಲ ಬೆಲೆ ಹೆಚ್ಚಿಸಲಾಗಿದೆ. ಹುಚ್ಚೆಳ್ಳು (ಪ್ರತಿ ಕ್ವಿಂಟಲ್‌ಗೆ ₹820), ರಾಗಿ (ಪ್ರತಿ ಕ್ವಿಂಟಲ್‌ಗೆ ₹596), ಹತ್ತಿ (ಪ್ರತಿ ಕ್ವಿಂಟಲ್‌ಗೆ ₹589) ಮತ್ತು ಎಳ್ಳು (ಪ್ರತಿ ಕ್ವಿಂಟಲ್‌ಗೆ ₹579) ಅತ್ಯಧಿಕ ಬೆಂಬಲ ಬೆಲೆಯನ್ನು ಶಿಫಾರಸು ಮಾಡಲಾಗಿದೆ' ಎಂದು ಅವರು ಹೇಳಿದರು.

10ನೇ ಪುಟ ನೋಡಿ

ಎಂಎಸ್‌ಪಿ ಹೆಚ್ಚಳ (₹ಕ್ವಿಂಟಲ್‌ಗೆ)

ಬೆಳೆ	2024-25	2025-26	ಏರಿಕೆ
ಭತ್ತ	2,300	2,369	69
ಭತ್ತ ಎ ಗ್ರೇಡ್	2,320	2,389	69
ಜೋಳ (ಹೈಬ್ರಿಡ್)	3,371	3,699	328
ಮಾಲ್ದಂಡಿ ಜೋಳ	3,421	3,749	328
ಸಜ್ಜೆ	2,625	2,775	150
ರಾಗಿ	4,290	4,886	596
ಮೆಕ್ಕೆಜೋಳ	2,225	2,400	175
ತೊಗರಿ	7,550	8,000	450
ಹೆಸರುಕಾಳು	8,682	8,768	86
ಉದ್ದು	7,400	7,800	400
ನೆಲಗಡಲೆ	6,783	7,263	480
ಸೂರ್ಯಕಾಂತಿ ಬೀಜ	7,280	7,721	441
ಸೋಯಾಬೀನ್ (ಹಳದಿ)	4,892	5,328	436
ಎಳ್ಳು	9,267	9,846	579
ಹುಚ್ಚೆಳ್ಳು	8,717	9,537	820
ಹತ್ತಿ (ಮಧ್ಯಮ ಎಳೆ)	7,121	7,710	589
ಹತ್ತಿ (ಉದ್ದನೆಯ ಎಳೆ)	7,521	8,110	589

ಅಬ್ದುಲ್ ರಹಿಮಾನ್ ಹತ್ಯೆ: ಭುಗಿಲೆದ್ದ ಆಕ್ರೋಶ, ಸುರತ್ಕಲ್‌ನಲ್ಲಿ ಬಸ್‌ಗೆ ಕಲ್ಲು

ಫರಂಗಿಪೇಟೆ, ಬಿ.ಸಿ.ರೋಡ್ ಅಘೋಷಿತ ಬಂದ್

ಪ್ರಜಾವಾಣಿ ವಾರ್ತೆ

ಮಂಗಳೂರು: ಬಂಟ್ವಾಳ ತಾಲ್ಲೂಕಿನ ಇರಾ ಕೋಡಿ ಎಂಬಲ್ಲಿ ಹತ್ಯೆಗೊಳಾದ ಕೊಳತ್ತಮಜಲುವಿನ ಅಬ್ದುಲ್ ರಹಿಮಾನ್ ಅವರ ಪಾರ್ಥಿವ ಶರೀರದ ಅಂತಿಮ ಯಾತ್ರೆಯಲ್ಲಿ ಭಾರಿ ಸಂಖ್ಯೆಯಲ್ಲಿ ಜನ ಭಾಗವಹಿಸಿದ್ದರು. ಅಂತಿಮ ಯಾತ್ರೆಯು ಸಾಗಿದ ಮಾರ್ಗದ ಉದ್ದಕ್ಕೂ ಅಂಗಡಿಗಳು ಮುಚ್ಚಿದ್ದು, ಅಘೋಷಿತ ಬಂದ್ ವಾತಾವರಣ ನಿರ್ಮಾಣವಾಗಿತ್ತು.

ದೇರಳಕಟ್ಟೆಯ ಯೆನೆಪೋಯ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆದ ಬಳಿಕ ಅಬ್ದುಲ್ ರಹಿಮಾನ್ ಮೃತದೇಹವನ್ನು ಕುತ್ತಾರು ಮದನಿ ನಗರದ ಜುಮಾ ಮಸೀದಿಗೆ ತರಲಾಯಿತು. ಅಲ್ಲಿ ಪ್ರಾರ್ಥನೆ ಸಲ್ಲಿಸಿದ ಬಳಿಕ ಬಂಟ್ವಾಳ ತಾಲ್ಲೂಕಿನ ಕುರಿಯಾಳ ಗ್ರಾಮದ ಕೊಳತ್ತಮಜಲಿಗೆ ಆಂಬುಲೆನ್ಸ್‌ನಲ್ಲಿ ಒಯ್ಯಲಾಯಿತು.

ಉಳ್ಳಾಲ ತಾಲ್ಲೂಕಿನ ಕುತ್ತಾರಿನಿಂದ ಆರಂಭವಾಗಿ ಕೊಳತ್ತಮಜಲುವರೆಗೆ ಅಂತಿಮಯಾತ್ರೆ ನಡೆಯಿತು. ಈ ಮಾರ್ಗದ ಎಲ್ಲ ಪಟ್ಟಣಗಳಲ್ಲಿ ಅಂಗಡಿಗಳು ಮಧ್ಯಾಹ್ನದವರೆಗೆ ಬಂದ್ ಆಗಿದ್ದವು. ಮಾರ್ಗದ ಉದ್ದಕ್ಕೂ 'ಶಹೀದ್ ಅಸ್ಸಲಾಂ' ಘೋಷಣೆ ಮುಗಿಲು ಮುಟ್ಟಿತ್ತು. ಅಂತಿಮಯಾತ್ರೆ ಸಾಗುವಾಗ ರಾಷ್ಟ್ರೀಯ ಹೆದ್ದಾರಿಯಲ್ಲಿ ಬಿ.ಸಿ.ರೋಡ್ ಮತ್ತು ಮಂಗಳೂರು ನಡುವೆ ವಾಹನ ಸಂಚಾರಕ್ಕೆ ಅಡ್ಡಿ ಉಂಟಾಯಿತು.

ಅಂತಿಮ ನಮನ: ಅಂತಿಮ ಯಾತ್ರೆ ಸಾಗಿದ ಮಾರ್ಗದಲ್ಲಿನ ಮಸೀದಿಗಳ ಬಳಿ ಅಲ್ಲಲ್ಲಿ ಸೇರಿದ್ದ ಜನರು ಪಾರ್ಥಿವ ಶರೀರಕ್ಕೆ ಅಂತಿಮ ಗೌರವ ಸಲ್ಲಿಸಿದರು. ಪಾರ್ಥಿವ ಶರೀರ ಫರಂಗಿಪೇಟೆಯ ತಲುಪುವಾಗ ಅಲ್ಲಿನ ಬಹುತೇಕ ಅಂಗಡಿಗಳು ಮುಚ್ಚಿದ್ದವು. ಸ್ಥಳದಲ್ಲಿ ಸೇರಿದ್ದ ಆಕ್ರೋಶಿತರ ಗುಂಪೊಂದು ಕೆಲಕಾಲ ರಸ್ತೆ ತಡೆ ನಡೆಸಿತು. ಅವರನ್ನು ಸಮಾಧಾನಪಡಿಸಲು ಪೊಲೀಸರು ಹರಸಾಹಸಪಟ್ಟರು.

8ನೇ ಪುಟ ನೋಡಿ



ಅಬ್ದುಲ್ ರಹಿಮಾನ್ ಅವರ ಪಾರ್ಥಿವ ಶರೀರ ಬಂಟ್ವಾಳ ತಾಲ್ಲೂಕಿನ ಬಡಗಬೆಳ್ಳೂರು ಗ್ರಾಮದ ಕೊಳತ್ತಮಜಲಿನಲ್ಲಿರುವ ಅವರ ಮನೆಗೆ ತಲುಪಿದಾಗ ಸೇರಿದ್ದ ಜನರು

ಮೂವರು ಆರೋಪಿಗಳು ವಶಕ್ಕೆ?

ಅಬ್ದುಲ್ ರಹಿಮಾನ್ ಹತ್ಯೆ ಹಾಗೂ ಕಲಂದರ್ ಶಾಫಿ ಮೇಲಿನ ಹಲ್ಲೆ ಬಗ್ಗೆ ಮಹಮ್ಮದ್ ನಿಸಾರ್ ದೂರು ನೀಡಿದ್ದು, ಬಂಟ್ವಾಳ ಗ್ರಾಮಾಂತರ ಠಾಣೆಯಲ್ಲಿ ದೀಪಕ್, ಸುಮಿತ್ ಸೇರಿ 15 ಮಂದಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಈ ಸಂಬಂಧ ದೀಪಕ್ ಸೇರಿದಂತೆ ಮೂವರು ಆರೋಪಿಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. 'ಮೂವರು ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಆರೋಪಿಗಳನ್ನೆಲ್ಲ ಶೀಘ್ರವೇ ಬಂಧಿಸುತ್ತೇವೆ' ಎಂದು ಎಡಿಜಿಪಿ (ಕಾನೂನು ಸುವ್ಯವಸ್ಥೆ) ಆರ್‌.ಹಿತೇಂದ್ರ 'ಪ್ರಜಾವಾಣಿ'ಗೆ ತಿಳಿಸಿದರು.

'ಡಿವೈಎಸ್‌ಪಿ ನೇತೃತ್ವದಲ್ಲಿ ತನಿಖೆ ನಡೆಯುತ್ತಿದೆ.ಈ ಸಲುವಾಗಿ ಪೊಲೀಸರ ಐದು ವಿಶೇಷ ತಂಡಗಳನ್ನು ರಚಿಸಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್ ಎನ್‌. ತಿಳಿಸಿದರು.

ಕಾಂಗ್ರೆಸ್‌ಗೆ ಸಾಮೂಹಿಕ ರಾಜೀನಾಮೆ?

ಜಿಲ್ಲೆಯಲ್ಲಿ ಕೋಮು ಆಧರಿತ ಹತ್ಯೆಗಳಿಗೆ ಕಡಿವಾಣ ಹಾಕಲು ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿ ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್‌ನ ಮುಸ್ಲಿಂ ಮುಖಂಡರು ತಮ್ಮ ಹುದ್ದೆಗಳಿಗೆ ರಾಜೀನಾಮೆ ಸಲ್ಲಿಸಲು ಮುಂದಾಗಿದ್ದಾರೆ.

ದ.ಕ. ಜಿಲ್ಲಾ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಶಾಹುಲ್ ಹಮೀದ್, 'ಜಿಲ್ಲೆಯಲ್ಲಿ ಧರ್ಮಾಧಾರಿತವಾಗಿ ನಡೆಯುತ್ತಿರುವ ಸರಣಿ ಹತ್ಯೆಗಳನ್ನು ತಡೆಯಲು ಗೃಹ ಇಲಾಖೆ ವಿಫಲವಾಗಿದೆ. ಪ್ರಚೋದನಕಾರಿ ಭಾಷಣ ಮಾಡಿ ಧರ್ಮಗಳ ನಡುವೆ ಗಲಭೆ ಸೃಷ್ಟಿಸುವವರ ವಿರುದ್ಧ ಕ್ರಮವಹಿಸಲು ಇಲಾಖೆಗೆ ಸಾಧ್ಯವಾಗುತ್ತಿಲ್ಲ' ಎಂದು ಹೇಳಿದರು.

8ನೇ ಪುಟ ನೋಡಿ

ಕುಕ್ಕೆ: ನಾಳೆಯಿಂದ ಉಪಾಹಾರ ವಿತರಣೆ

ಸುಬ್ರಹ್ಮಣ್ಯ: 'ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಭಕ್ತರಿಗೆ ಬೆಳಿಗ್ಗೆ ಉಪಾಹಾರ ನೀಡುವ ಯೋಜನೆ ಇದೇ 30ಕ್ಕೆ ಆರಂಭವಾಗಲಿದೆ' ಎಂದು ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಹರೀಶ್ ಇಂಜಾಡಿ ತಿಳಿಸಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಮುಜರಾಯಿ ಸಚಿವರ ಸಲಹೆಯಂತೆ ಅಧಿಕಾರಿಗಳು ನಡೆಸಿದ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಷಣ್ಮುಖ ಭೋಜನ ಶಾಲೆಯಲ್ಲಿ ಬೆಳಿಗ್ಗೆ 8 ಗಂಟೆಯಿಂದ 10ರವರೆಗೆ ಉಪಾಹಾರ ಸಿಗಲಿದೆ ಎಂದು ಹೇಳಿದರು.

ಏಕಕಾಲದಲ್ಲಿ ಮೂರು ಸಾವಿರ ಮಂದಿ ಕುಳಿತು ಭೋಜನ ಸ್ವೀಕರಿಸುವ ಭೋಜನಶಾಲೆಯಕಟ್ಟಡ ನಿರ್ಮಾಣದ ನೀಲ ನಕ್ಷೆ ಸಿದ್ಧಪಡಿಸಲಾಗಿದೆ. ಎರಡರಿಂದ ಮೂರು ವರ್ಷಗಳಲ್ಲಿ ಕಟ್ಟಡ ಸಿದ್ಧವಾಗಲಿದೆ ಎಂದರು.

ಎಂಎಸ್ಎಂಇ ಸಮಾವೇಶ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ (ಎಂಎಸ್ಎಂಇ) ಸಮಾವೇಶವನ್ನು ಮೇ 30ರಿಂದ ಜೂನ್1ರವರೆಗೆ ತ್ರಿಪುರ ವಾಸಿನಿ ಅರಮನೆ ಮೈದಾನದಲ್ಲಿ ಹಮ್ಮಿಕೊಳ್ಳಲಾಗುವುದು ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ (ಎಫ್‌ಕೆಸಿಸಿಐ) ಅಧ್ಯಕ್ಷ ಎಂ.ಜಿ. ಬಾಲಕೃಷ್ಣ ಹೇಳಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಎಫ್‌ಕೆಸಿಸಿಐ, ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ (ಕಾಸಿಯಾ) ಹಾಗೂ ಪೀಣ್ಯ ಕೈಗಾರಿಕಾ ಸಂಘದ ಸಹಯೋಗದಲ್ಲಿ ಸಮಾವೇಶ ನಡೆಯಲಿದೆ. ಎಂಎಸ್ಎಂಇಗಳಿಗೆ ಸಾರ್ವಜನಿಕ ವಲಯ ಘಟಕಗಳು ಹಾಗೂ ದೊಡ್ಡ ಕಂಪನಿಗಳೊಂದಿಗೆ ಸಂಪರ್ಕ ಸಾಧಿಸಲು ಈ ಸಮಾವೇಶ ವೇದಿಕೆ ಕಲ್ಪಿಸಲಿದೆ. ಮೇಕ್ ಇನ್ ಇಂಡಿಯಾ ಅಡಿಯಲ್ಲಿ ಸ್ಥಳೀಯ ಉತ್ಪನ್ನಗಳನ್ನು ಅಂತರರಾಷ್ಟ್ರೀಯ ಮಾರುಕಟ್ಟೆಗೆ ಕೊಂಡೊಯ್ಯಲು ಇದು ಸಹಾಯಕವಾಗಲಿದೆ' ಎಂದರು.

'ಸಮಾವೇಶದಲ್ಲಿ 250ಕ್ಕೂ ಹೆಚ್ಚು ಮಳಿಗೆಗಳು, ಬಿ2ಬಿ ಸಭೆಗಳು, ಕೈಗಾರಿಕಾ ತಜ್ಞರೊಂದಿಗೆ ಸಂವಾದ ಹಾಗೂ ಕಾರ್ಯಾಗಾರಗಳು ನಡೆಯಲಿವೆ.

ಮೇ 30ರಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸಮಾವೇಶ ಉದ್ಘಾಟಿಸಲಿದ್ದಾರೆ. ಸಚಿವರಾದ ಎಂ.ಬಿ. ಪಾಟೀಲ, ಶರಣಬಸಪ್ಪ ದರ್ಶನಾಪುರ ಭಾಗವಹಿಸಲಿದ್ದಾರೆ.

ಕೆಎಸ್‌ಆರ್‌ಟಿಸಿಗೆ ಎರಡು ಸ್ವರ್ಣ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಡಬ್ಲ್ಯು ಮಾರ್ಕೆಟಿಂಗ್ ವರ್ಲ್ಡ್ ಮತ್ತು ಬಿಡಬ್ಲ್ಯು ಬಿಸಿನೆಸ್ ವರ್ಲ್ಡ್ ಸಹಯೋಗದಲ್ಲಿ ನೀಡುವ ಸ್ವರ್ಣ ಪದಕಗಳಿಗೆ ಕೆಎಸ್‌ಆರ್‌ಟಿಸಿ ಭಾಜನವಾಗಿದೆ.

ಯುಪಿಐ ಸೌಲಭ್ಯದೊಂದಿಗೆ ಅವತಾರ್- 4.0 ಯೋಜನೆಗೆ 'ವರ್ಷದ ತಂತ್ರಜ್ಞಾನ' ವಿಭಾಗದಲ್ಲಿ ಮತ್ತು 'ಸಂಚಾರ, ಪ್ರವಾಸೋದ್ಯಮ ಮತ್ತು ಲೇಸರ್' ವಿಭಾಗದಲ್ಲಿ ಬಸ್‌ಗಳ ಬ್ರ್ಯಾಂಡಿಂಗ್‌ಗೆ ಚಿನ್ನದ ಪದಕಗಳನ್ನು ಪಡೆದಿದೆ.

ಮಂಗಳವಾರ ಮುಂಬೈಯಲ್ಲಿ ನಡೆದ 'ಬಿಡಬ್ಲ್ಯು ಮೆರಿಟ್ ಅವಾರ್ಡ್ಸ್ 2025' ಕಾರ್ಯಕ್ರಮದಲ್ಲಿ ಕೆಎಸ್‌ಆರ್‌ಟಿಸಿ ಪರವಾಗಿ ಮುಖ್ಯ ಸಂಚಾರ ವ್ಯವಸ್ಥಾಪಕಿ (ವಾಣಿಜ್ಯ) ವೀಣಾ ದೇಸಾಯಿ, ವಿಭಾಗೀಯ ಸಂಚಾರ ಅಧಿಕಾರಿ ರಾಘವೇಂದ್ರ ಎಸ್. ಎನ್. ಪ್ರಶಸ್ತಿ ಸ್ವೀಕರಿಸಿದರು.

ಶ್ರೀ ಚೈತನ್ಯ ಅಕಾಡೆಮಿ 'ಟೆಸ್ಟ್ ಪ್ರೆಪ್ ಸೆಂಟರ್' ಆರಂಭ

ಬೆಂಗಳೂರು: ಶ್ರೀ ಚೈತನ್ಯ ಅಕಾಡೆಮಿ ವತಿಯಿಂದ ಎಚ್‌ಎಸ್‌ಆರ್ ಲೇಔಟ್ ಹಾಗೂ ಯಲಹಂಕದಲ್ಲಿ 'ಟೆಸ್ಟ್ ಪ್ರೆಪ್ ಸೆಂಟರ್' ಆರಂಭಿಸಲಾಗಿದೆ.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಕೇಂದ್ರಗಳನ್ನು ಉದ್ಘಾಟಿಸಿದರು. ವೃತ್ತಿಪರ ಶಿಕ್ಷಣದ ಪ್ರವೇಶ ಪರೀಕ್ಷೆಗಳಾದ ಜೆಇಇ ಮೇನ್, ಜೆಇಇ ಅಡ್ವಾನ್ಸ್ಡ್ ಮತ್ತು ನೀಟ್‌ಗಳಿಗೆ ಅತ್ಯುನ್ನತ ಗುಣಮಟ್ಟದಲ್ಲಿ ಸಿದ್ಧಗೊಳ್ಳಲು ವಿದ್ಯಾರ್ಥಿಗಳಿಗೆ ಈ ಕೇಂದ್ರಗಳು ನೆರವಾಗಲಿವೆ.

'ಶ್ರೀ ಚೈತನ್ಯ 40 ವರ್ಷಗಳಿಂದ ಶಿಕ್ಷಣದ ಕನಸುಗಳನ್ನು ಸಾಕಾರಗೊಳಿಸಿಕೊಳ್ಳುವ ಆಕಾಂಕ್ಷಿಗಳಿಗೆ ವೇದಿಕೆಯಾಗಿದೆ. 2023ರಲ್ಲಿ ನಾವು ಜೆಇಇ ಮೇನ್, ಜೆಇಇ ಅಡ್ವಾನ್ಸ್ಡ್ ಮತ್ತು ನೀಟ್‌ಗಳಲ್ಲಿ ಅಖಿಲ ಭಾರತದ ರ್‍ಯಾಂಕ್‌ನಲ್ಲಿ(ಎಐಆರ್) ಮೊದಲ ಸ್ಥಾನಗಳಿಸಿದ್ದೆವು. ಈಗ ಎರಡು 'ಟೆಸ್ಟ್ ಪ್ರೆಪ್ ಸೆಂಟರ್' ಪ್ರಾರಂಭಿಸುವ ಮೂಲಕ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅತ್ಯುತ್ತಮ ಶಿಕ್ಷಣ ನೀಡಲಿದ್ದೇವೆ' ಎಂದು ಶ್ರೀ ಚೈತನ್ಯ ಗ್ರೂಪ್‌ನ ಸಿಇಒ, ನಿರ್ದೇಶಕಿ ಸುಷ್ಮಾ ಬೊಪ್ಪಣ ತಿಳಿಸಿದರು.

'ವೈಯಕ್ತಿಕ ಮಾರ್ಗದರ್ಶನ, ಅತ್ಯುನ್ನತ ತಂತ್ರಜ್ಞಾನ ಹಾಗೂ ಕೇಂದ್ರೀಕೃತ ಶೈಕ್ಷಣಿಕ ಮಾದರಿಯಿಂದ 'ಬಚ್ಚಾ ಸೀಖಾ ಕಿ ನಹಿ' ಎಂಬ ನಮ್ಮ ಗುರಿಯೊಂದಿಗೆ ಎಲ್ಲರಿಗೂ ಗುಣಮಟ್ಟದ ಶಿಕ್ಷಣ ನೀಡುತ್ತಿದ್ದೇವೆ' ಎಂದು ಶ್ರೀ ಚೈತನ್ಯದ ಇನ್ಫಿನಿಟ್ ಲರ್ನ್‌ನ ಸಂಸ್ಥಾಪಕ ಸಿಇಒ ಉಜ್ವಲ್ ಸಿಂಗ್ ಹೇಳಿದರು.

ತ್ಯಾಜ್ಯ ಶುಲ್ಕ: ವಾಪಸಾತಿಗೆ ಆಗ್ರಹ

ಬೆಂಗಳೂರಿನಲ್ಲಿ ಮಾತ್ರ ಎರಡು ಬಗೆಯ ತೆರಿಗೆ, ಇದು ಅನಾಗರಿಕ: ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವಿಧಿಸಿರುವ ಘನತ್ಯಾಜ್ಯ ನಿರ್ವಹಣೆಗೆ ಬಳಕೆದಾರರ ಶುಲ್ಕವನ್ನು ವಾಪಸ್ ಪಡೆಯಬೇಕು ಎಂದು ಬೆಂಗಳೂರು ನಗರ ವ್ಯಾಪ್ತಿಯ ಬಿಜೆಪಿ ಶಾಸಕರು ಒತ್ತಾಯಿಸಿದರು.

ಬಿಬಿಎಂಪಿ ಆಡಳಿತಾಧಿಕಾರಿ ತುಷಾರ್ ಗಿರಿನಾಥ್, ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರಿಗೆ ಪ್ರತಿಪಕ್ಷ ನಾಯಕ ಆರ್. ಅಶೋಕ ನೇತೃತ್ವದಲ್ಲಿ ಬಿಜೆಪಿ ಶಾಸಕರಾದ ಎಸ್. ರಘು, ಮುನಿರಾಜು, ಸಿ.ಕೆ. ರಾಮಮೂರ್ತಿ, ಡಾ. ಸಿ.ಎನ್. ಅಶ್ವತ್ಥನಾರಾಯಣ, ಗೋಪಾಲಯ್ಯ, ರವಿಸುಬ್ರಮಣ್ಯ ಅವರಿದ್ದ ನಿಯೋಗ ಬುಧವಾರ ಮನವಿ ಸಲ್ಲಿಸಿತು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಆರ್. ಅಶೋಕ, 'ಬೆಂಗಳೂರಿನ ಜನರ ಮೇಲೆ ಕಸದ ಸೆಸ್ ಜೊತೆಗೆ, ಬಳಕೆದಾರರ ಶುಲ್ಕ ವಿಧಿಸಲಾಗಿದೆ. ಈ ನಿರ್ಧಾರವನ್ನು ಸರ್ಕಾರ ಹಿಂಪಡೆದು ಹಿಂದಿನಂತೆಯೇ ಚದರ ಅಡಿಗೆ ತಕ್ಕಂತೆ ಶುಲ್ಕ ವಿಧಿಸಬೇಕು. ಬೆಂಗಳೂರಿನ ಜನರ ಮೇಲೆ ಕಾಂಗ್ರೆಸ್ ಸರ್ಕಾರ ಟನ್‌ಗಟ್ಟಲೆ ತೆರಿಗೆಯ ಭಾರವನ್ನು ಹೇರಿದೆ. ಈಗ ಕಸದಿಂದ ರಸ ತೆಗೆಯುವ ಸ್ಕೀಮ್ ಮಾಡಿದ್ದಾರೆ. ಇಡೀ ದೇಶದಲ್ಲಿ ಅತಿ ಹೆಚ್ಚು ಕಸದ ತೆರಿಗೆಯನ್ನು ಕಾಂಗ್ರೆಸ್ ವಿಧಿಸಿದೆ' ಎಂದರು.



ಎಸ್.ರಘು, ಸಿ.ಕೆ.ರಾಮಮೂರ್ತಿ, ಮುನಿರಾಜು, ಸಪ್ತಗಿರಿಗೌಡ ಮತ್ತು ಹರೀಶ್ ಅವರು ಮಹೇಶ್ವರ್ ರಾವ್ ಅವರಿಗೆ ಮನವಿ ಸಲ್ಲಿಸಿದರು

'ಸೆಸ್‌ನಿಂದಲೇ ಸುಮಾರು ₹250 ಕೋಟಿ ಸಂಗ್ರಹವಾಗುತ್ತಿದೆ. ಕಸದ ಟೆಂಡರ್‌ನ ಮೌಲ್ಯವೇ ₹147 ಕೋಟಿ. ಆದರೂ, ಜನರಿಂದ ಅತ್ಯಧಿಕ ಶುಲ್ಕ ವಸೂಲಿ ಮಾಡುತ್ತಿದ್ದಾರೆ. ಬಳಕೆದಾರರ ಶುಲ್ಕವೂ ಸೇರಿದರೆ ₹500 ಕೋಟಿಯಿಂದ ₹600 ಕೋಟಿ ಸಂಗ್ರಹವಾಗುತ್ತದೆ. ಯಾರ ಮನೆ ಹಾಳು ಮಾಡಲು ಸರ್ಕಾರ ಇಷ್ಟು ಹಣವನ್ನು ಸಂಗ್ರಹಿಸುತ್ತಿದೆ' ಎಂದು ಪ್ರಶ್ನಿಸಿದರು.

'ಒಂದೋ ಬಳಕೆದಾರರ ಶುಲ್ಕ, ಇಲ್ಲವಾದರೆ ಸೆಸ್ ಸಂಗ್ರಹಿಸಬೇಕು. ಎರಡೂ ಶುಲ್ಕ ವಿಧಿಸುತ್ತಿರುವುದರಿಂದ ಮನೆಗಳ ಬಾಡಿಗೆ ದರ ಹೆಚ್ಚಲಿದೆ. ವಾಣಿಜ್ಯ ಕಟ್ಟಡಗಳ ಬಾಡಿಗೆ, ಕಲ್ಯಾಣ ಮಂಟಪ, ಆಸ್ಪತ್ರೆ, ಶಾಲೆ, ಹೋಟೆಲ್‌ಗಳ ದರ ಹೆಚ್ಚಲಿದೆ. ಕೇಂದ್ರ ಸರ್ಕಾರದ ಕಾಯ್ದೆ ಎಂದು ನೆಪ ಹೇಳುತ್ತಾರೆ. ಎರಡು ಬಗೆಯ ಶುಲ್ಕ ವಿಧಿಸಬೇಕೆಂದು ಕೇಂದ್ರ ಸರ್ಕಾರ ಎಲ್ಲೂ ಹೇಳಿಲ್ಲ' ಎಂದರು.

ಸಭೆ ನಡೆಸಿ: 'ಬೆಂಗಳೂರಿನ ಶಾಸಕರ ಸಭೆ ಕರೆದು ಈ ಬಗ್ಗೆ ಚರ್ಚಿಸಬೇಕು. ಹಿಂದೆ ಚದರ ಅಡಿಗೆ ತಕ್ಕಂತೆ ಕಸದ ಸೆಸ್ ವಿಧಿಸಲಾಗುತ್ತಿತ್ತು. ಅದೇ ಮಾದರಿಯನ್ನು ಜಾರಿಗೆ ತರಬೇಕು. ಈಗಾಗಲೇ ಬೆಂಗಳೂರಿನ ಜನರು ಹೋರಾಟ ಆರಂಭಿಸಿದ್ದಾರೆ. ಇದಕ್ಕೆ ಸಂಪೂರ್ಣ ಬೆಂಬಲ ನೀಡಲಾಗುವುದು' ಎಂದು ತಿಳಿಸಿದರು.

ವಿಧಾನ ಪರಿಷತ್ತಿನ ವಿರೋಧಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್.ಹರೀಶ್, ಬೆಂಗಳೂರು ಕೇಂದ್ರ ಜಿಲ್ಲಾಧ್ಯಕ್ಷ ಸಪ್ತಗಿರಿ ಗೌಡ, ಬಿಜೆಪಿ ರಾಜ್ಯ ಮುಖ್ಯ ವಕ್ತಾರ ಅಶ್ವತ್ಥನಾರಾಯಣ್, ಬಿಬಿಎಂಪಿಯ ಮಾಜಿ ವಿರೋಧ ಪಕ್ಷದ ನಾಯಕ ಪದ್ಮನಾಭ ರೆಡ್ಡಿ ನಿಯೋಗದಲ್ಲಿದ್ದರು.

ಮುಖ್ಯಾಂಶಗಳು

- ಆರ್. ಅಶೋಕ ನೇತೃತ್ವದ ನಿಯೋಗದಿಂದ ಬಿಬಿಎಂಪಿಗೆ ಮನವಿ ಸಲ್ಲಿಕೆ
- ಶಾಸಕರ ಸಭೆ ಕರೆದು ಚರ್ಚಿಸುವಂತೆ ಒತ್ತಾಯ
- ನಗರದ ಜನರ ಮೇಲೆ ತೆರಿಗೆ ಭಾರ: ಟೀಕೆ

'ಬಸವಣ್ಣ ಮಹಾನ್ ಮಾನವತಾವಾದಿ'

ಪ್ರಜಾವಾಣಿ ವಾರ್ತೆ

ಯಲಹಂಕ: ಸಮಾನತೆ, ಭ್ರಾತೃತ್ವ, ದಯೆ, ಪರೋಪಕಾರ ಮತ್ತಿತರ ಮಾನವೀಯ ಮೌಲ್ಯಗಳು ಹಾಗೂ ಧರ್ಮವನ್ನು ಈ ನಾಡಿನಲ್ಲಿ ಪುನರ್ ಸ್ಥಾಪಿಸಿದ ಮಹಾನ್ ಮಾನವತಾವಾದಿ ಬಸವಣ್ಣನವರು ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಹೇಳಿದರು.

ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾ ಹಾಗೂ ಸಮನ್ವಯ ಸಮಿತಿಯ ಆಶ್ರಯದಲ್ಲಿ ಉಪನಗರದ ನಿಸರ್ಗ ಮೈದಾನದಲ್ಲಿ ಆಯೋಜಿಸಿದ್ದ ಜಗದ್ಗುರು ರೇಣುಕಾಚಾರ್ಯ ಯುಗಮಾನೋತ್ಸವ ಹಾಗೂ ಜಗಜ್ಯೋತಿ ಬಸವೇಶ್ವರ ಜಯಂತ್ಯುತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶಾಸಕ ಎಸ್.ಆರ್.ವಿಶ್ವನಾಥ್, ವೀರಸಿಂಹಾಸನ ಮಹಾಸಂಸ್ಥಾನ ಮಠದ ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ, ಮಾಜಿ ಸಚಿವ ರೇಣುಕಾಚಾರ್ಯ, ಬಿಬಿಎಂಪಿ ಮಾಜಿ ಮೇಯರ್ ಗಂಗಾಂಬಿಕೆ ಮಲ್ಲಿಕಾರ್ಜುನ, ವೀರಶೈವ ಮಹಾಸಭಾದ ಮಹಿಳಾ ಘಟಕದ ಅಧ್ಯಕ್ಷೆ ವೀಣಾ ಕಾಶಪ್ಪನವರ್, ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾ ಯಲಹಂಕ ಘಟಕದ ಅಧ್ಯಕ್ಷೆ ಹೇಮಲತ ಚಿದಾನಂದ ಮತ್ತಿತರರಿದ್ದರು.

ಬಿಡಿಎಯಿಂದ ಹೊಸ ಬಡಾವಣೆ ಬೇಡ: ಸುರೇಶ್ ಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಡಿಎ ನಿರ್ಮಿಸಿರುವ ಬಡಾವಣೆಗಳಿಗೆ ಮೂಲಸೌಕರ್ಯ ಒದಗಿಸಿ, ಪೂರ್ಣ ಪ್ರಮಾಣದ ಅಭಿವೃದ್ಧಿ ಮಾಡಿ ನಿವೇಶನಗಳನ್ನು ಹಂಚಿದ ನಂತರವಷ್ಟೇ ಹೊಸ ಬಡಾವಣೆಗಳನ್ನು ನಿರ್ಮಾಣ ಮಾಡಬೇಕು ಎಂದು ಶಾಸಕ ಎಸ್. ಸುರೇಶ್ ಕುಮಾರ್ ಒತ್ತಾಯಿಸಿದ್ದಾರೆ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಪತ್ರ ಬರೆದಿರುವ ಅವರು, 'ಈಗಾಗಲೇ ನಿರ್ಮಾಣವಾಗಿರುವ ಬಡಾವಣೆಗಳಿಗೆ ಮೂಲಸೌಕರ್ಯಗಳನ್ನು ಒದಗಿಸಲು ವಿಫಲವಾಗಿದ್ದರೂ ಮತ್ತಷ್ಟು ಹೊಸ ಬಡಾವಣೆಗಳನ್ನು ನಿರ್ಮಿಸಲು ಹೊರಟಿದ್ದೀರಿ. ಈಗಿರುವ ಬಡಾವಣೆಗಳನ್ನೇ ನಿರ್ವಹಿಸಲು ಸಾಧ್ಯವಾಗದಿದ್ದಾಗ, ಹೊಸ ಬಡಾವಣೆಗಳನ್ನು ನಿರ್ಮಾಣ ಮಾಡುವ ಸಾಮರ್ಥ್ಯ ಬಿಡಿಎಗೆ ಅರ್ಥಾತ್ ಸರ್ಕಾರಕ್ಕೆ ಇದೆಯೇ? ಬೆಂಗಳೂರು ಅಭಿವೃದ್ಧಿ ಸಚಿವರಾದ ನಿಮಗೆ ಈ ವಿಷಯಗಳ ಕುರಿತು ಸಂವೇದನೆ ಬೇಕಲ್ಲವೇ' ಎಂದು ಪ್ರಶ್ನಿಸಿದ್ದಾರೆ.

'ಶಿವರಾಮ ಕಾರಂತ ಬಡಾವಣೆಯಲ್ಲಿ 30 ಸಾವಿರ ನಿವೇಶನಗಳ ಹಂಚಿಕೆಗೆ ಮುನ್ನವೇ ಎರಡನೇ ಹಂತಕ್ಕೆ ಸರ್ವೆ ಶುರುವಾಗಿದೆ. ಮೊದಲ ಹಂತದಲ್ಲೇ ಕಾಮಗಾರಿ ಪೂರ್ಣಗೊಳ್ಳಲು ಮೂರು ತಿಂಗಳು ಗಡುವು ನೀಡಲಾಗಿದೆ. ನಿವೇಶನ ಹಂಚಿಕೆ ಪ್ರಕರಣ ನ್ಯಾಯಾಲಯದಲ್ಲಿ ಇತ್ಯರ್ಥ್ಯವಾಗದಿದ್ದರೂ, ಸುಮಾರು 12 ಸಾವಿರ ನಿವೇಶನಗಳನ್ನು ಹಂಚಿಕೆ ಮಾಡಲಾಗುತ್ತದೆ ಎಂದು ಬಿಡಿಎ ಮೂಲಗಳು ತಿಳಿಸಿವೆ' ಎಂದಿದ್ದಾರೆ.

'ಶಿವರಾಮ ಕಾರಂತ ಬಡಾವಣೆ ಮಾತ್ರವಲ್ಲ, ಸರ್ ಎಂ. ವಿಶ್ವೇಶ್ವರಯ್ಯ ಬಡಾವಣೆ, ಕೆಂಪೇಗೌಡ ಬಡಾವಣೆ, ಅರ್ಕಾವತಿ ಬಡಾವಣೆಗಳನ್ನು ನಿರ್ಮಿಸಲು ರೈತರಿಂದ ಪಡೆದುಕೊಂಡ ಭೂಮಿಗೆ ಇಲ್ಲಿಯವರೆಗೂ ಪರಿಹಾರ ನೀಡಿಲ್ಲ. ಬಡಾವಣೆಗಳಲ್ಲಿ ಪೂರ್ಣಪ್ರಮಾಣದ ಅಭಿವೃದ್ಧಿ ಮಾಡಿಲ್ಲ, ಮೂಲಸೌಕರ್ಯಗಳಿಲ್ಲದೆ ನಿವೇಶನದಾರರು ಮನೆ ಕಟ್ಟಿಕೊಳ್ಳಬೇಕಾದ ಸ್ಥಿತಿ ಇದೆ. ಈ ಎಲ್ಲ ಬಡಾವಣೆಗಳಲ್ಲಿ ಶೇ 30ರಿಂದ 40ರಷ್ಟು ನಿವೇಶನಗಳು ಖಾಲಿ ಇವೆ. ಹೀಗಿರುವಾಗ ಹೊಸ ಬಡಾವಣೆಗಳ ನಿರ್ಮಾಣದ ಅಗತ್ಯವಿದೆಯೇ' ಎಂದು ಪ್ರಶ್ನಿಸಿದ್ದಾರೆ.



ಕಾರ್ಮಿಕರ ದಿನಾಚರಣೆ ಕಾರ್ಯಕ್ರಮದಲ್ಲಿ ಮಹಿಳೆಯರಿಗೆ ಸೀರೆ ವಿತರಿಸಲಾಯಿತು

'ಕಾರ್ಮಿಕರ ಶ್ರಮದಿಂದ ದೇಶದ ಅಭಿವೃದ್ಧಿ'

ಪ್ರಜಾವಾಣಿ ವಾರ್ತೆ

ಯಲಹಂಕ: 'ಕಾರ್ಮಿಕರು ಈ ರಾಷ್ಟ್ರದ ಸಂಪತ್ತು. ಅವರ ಶ್ರಮದಿಂದಲೇ ಈ ದೇಶದ ಅಭಿವೃದ್ಧಿಯಾಗುತ್ತಿದೆ. ಕೇಂದ್ರ ಸರ್ಕಾರ ಕಾರ್ಮಿಕ ವಿರೋಧಿ ನೀತಿಗಳನ್ನು ಅನುಸರಿಸಿ, ಸವಲತ್ತು ನೀಡದೆ ಅನ್ಯಾಯ ಎಸಗುತ್ತಿದೆ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮದ್ ಆರೋಪಿಸಿದರು.

ಭಾರತೀಯ ರಾಷ್ಟ್ರೀಯ ಕಟ್ಟಡ ನಿರ್ಮಾಣ, ಅರಣ್ಯ ಮತ್ತು ಮರಗೆಲಸ ಕಾರ್ಮಿಕರ ಒಕ್ಕೂಟದ ಆಶ್ರಯದಲ್ಲಿ ಉಪನಗರದ ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ ಕಾರ್ಮಿಕರ ದಿನಾಚರಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

'ಈ ದೇಶ ಅಭಿವೃದ್ಧಿಯಾಗಬೇಕಾದರೆ ಕಾರ್ಮಿಕರ ಅಭಿವೃದ್ಧಿ ಅತ್ಯಗತ್ಯ. ಈ ನಿಟ್ಟಿನಲ್ಲಿ ರಾಜ್ಯಸರ್ಕಾರ ಕಾರ್ಮಿಕರ ಸಮಸ್ಯೆಗಳಿಗೆ ಪ್ರಾಮಾಣಿಕವಾಗಿ ಸ್ಪಂದಿಸುತ್ತಿದೆ' ಎಂದರು.

ಒಕ್ಕೂಟದ ರಾಷ್ಟ್ರೀಯ ಅಧ್ಯಕ್ಷ ರಾಮಚಂದ್ರ ಕುಂಟಿಯ ಮಾತನಾಡಿ, 'ದೇಶದ ಜನಸಂಖ್ಯೆಯ ಶೇ 40ರಷ್ಟು ಕಾರ್ಮಿಕರಿದ್ದು, ಅವರ ಸಮಸ್ಯೆಗಳಿಗೆ ಸ್ಪಂದಿಸದೆ ಅನ್ಯಾಯವೆಸಗುತ್ತಿರುವ ಕೇಂದ್ರ ಸರ್ಕಾರದ ವಿರುದ್ಧ ಒಕ್ಕೂಟದ ವತಿಯಿಂದ ರಾಷ್ಟ್ರವ್ಯಾಪಿ ಆಂದೋಲನ ಕೈಗೊಳ್ಳಲು ನಿರ್ಧರಿಸಲಾಗಿದೆ' ಎಂದು ತಿಳಿಸಿದರು.

ಒಕ್ಕೂಟದ ರಾಜ್ಯಘಟಕದ ಅಧ್ಯಕ್ಷ ಬಿ.ಆರ್.ದಿನೇಶ್, ಸಂಘಟನಾ ಕಾರ್ಯದರ್ಶಿ ಜ್ಯೋತಿಪುರ ಚಂದ್ರು, ಕಾಂಗ್ರೆಸ್ ಮುಖಂಡ ಎಂ.ಎನ್.ಗೋಪಾಲಕೃಷ್ಣ, ಐಎನ್‌ಟಿಯುಸಿ ಪ್ರಧಾನ ಕಾರ್ಯದರ್ಶಿ ವೆಂಕಟೇಶ್, ಕಾರ್ಮಿಕ ಸಂಘಟನೆಗಳ ಮುಖಂಡರಾದ ಶಿವಣ್ಣ, ವಿಜಯ್ ನಾಯಕ್, ಸಾಯಿ ಸತೀಶ್ ತೋಟಯ್ಯ, ಸೌಕತ್ ಆಲಿ, ಎ.ಜಾಕೀರ್ ಹುಸೇನ್ ಉಪಸ್ಥಿತರಿದ್ದರು.

ಸ್ಪರ್ಧಾ ವಾಣಿ

ರಕ್ಷಣಾ ವಿದ್ಯಮಾನಗಳು

DRDOನಿಂದ 'ಸ್ಕ್ರಾಮ್‌ಜೆಟ್' ಎಂಜಿನ್ ಭೂ ಪರೀಕ್ಷೆ ಯಶಸ್ವಿ


- ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (DRDO) ಈಚೆಗೆ 'ಸ್ಕ್ರಾಮ್‌ಜೆಟ್' ದಹನಕಾರಿ ಎಂಜಿನ್‌ನ ಭೂ ಪರೀಕ್ಷೆಯನ್ನು 120 ಸೆಕೆಂಡ್‌ವರೆಗೆ ಯಶಸ್ವಿಯಾಗಿ ನಡೆಸಿತು. ಈ ವೇಳೆ ಹೈಪರ್‌ಸಾನಿಕ್ ಕ್ಷಿಪಣಿಗಳಲ್ಲಿ ಬಳಸುವ ಸಾಮರ್ಥ್ಯವನ್ನು ಎಂಜಿನ್ ಪ್ರದರ್ಶಿಸಿತು.
- ಹೈಪರ್‌ಸಾನಿಕ್ ಕ್ಷಿಪಣಿಗಳು 'ಮ್ಯಾಕ್ 5' ಕ್ಕಿಂತ ಹೆಚ್ಚಿನ ವೇಗದಲ್ಲಿ ಅಥವಾ ಗಂಟೆಗೆ 5,400 ಕಿ.ಮೀ.ಗಿಂತ ಹೆಚ್ಚು ವೇಗದಲ್ಲಿ ಚಲಿಸುತ್ತವೆ. ಇದು ಶಬ್ದದ ವೇಗಕ್ಕಿಂತ 5 ಪಟ್ಟು ಹೆಚ್ಚಾಗಿರುತ್ತದೆ.
- ವಾಯು ರಕ್ಷಣಾ ವ್ಯವಸ್ಥೆಗಳನ್ನು ಬೈಪಾಸ್ ಮಾಡಲು ಹೈಪರ್‌ಸಾನಿಕ್ ಕ್ಷಿಪಣಿಗಳನ್ನು ವಿನ್ಯಾಸಗೊಳಿಸಲಾಗಿದೆ, ಈ ಮಾದರಿಯ ಕ್ಷಿಪಣಿಗಳು ತ್ವರಿತ ಮತ್ತು ಪರಿಣಾಮಕಾರಿ ದಾಳಿಗಳನ್ನು ನಿಖರವಾಗಿ ನಡೆಸುತ್ತವೆ.
- ಅಮೆರಿಕ, ರಷ್ಯಾ, ಚೀನಾ ಸೇರಿ ಪ್ರಮುಖ ದೇಶಗಳು ಹೈಪರ್‌ಸಾನಿಕ್ ತಂತ್ರಜ್ಞಾನದಲ್ಲಿ ಭಾರಿ ಪ್ರಮಾಣದ ಹೂಡಿಕೆ ಮಾಡುತ್ತಿವೆ.
- ಸ್ಕ್ರ್ಯಾಮ್‌ಜೆಟ್‌ಗಳಲ್ಲಿ ಇಂಧನ ದಹನ ಸವಾಲಿನ ಕೆಲಸವಾಗಿದ್ದು, ಇದು 'ಚಂಡಮಾರುತದಲ್ಲಿ ಮೇಣದಬತ್ತಿಯನ್ನು ಬೆಳಗಿದಂತೆ'!
- ಹೈಪರ್‌ಸಾನಿಕ್ ಎಂಜಿನ್‌ಗಳ ಹಾರಾಟದ ಸಮಯದಲ್ಲಿ ತೀವ್ರ ತಾಪಮಾನವನ್ನು ತಡೆದುಕೊಳ್ಳಲು ಅತ್ಯಾಧುನಿಕ ಥರ್ಮಲ್ ಬ್ಯಾರಿಯರ್ ಕೋಟಿಂಗ್ (TBC) ಅನ್ನು ಬಳಸಲಾಗುತ್ತದೆ. ಈ ಸುಧಾರಿತ ಸೆರಾಮಿಕ್ ಲೇಪನ ಎಂಜಿನ್‌ನ ಕಾರ್ಯಕ್ಷಮತೆ ಮತ್ತು ದೀರ್ಘಾಯುಷ್ಯವನ್ನು ಹೆಚ್ಚಿಸುತ್ತದೆ.
- ಸ್ಥಿರ ದಹನ ಮತ್ತು ಉಷ್ಣ ನಿರ್ವಹಣೆಯ ಯಶಸ್ವಿ ಪ್ರದರ್ಶನ ಭಾರತವನ್ನು ಹೈಪರ್‌ಸಾನಿಕ್ ತಂತ್ರಜ್ಞಾನದಲ್ಲಿ ಮುಂಚೂಣಿಯಲ್ಲಿ ಇರಿಸಿದೆ. ರಾಷ್ಟ್ರೀಯ ಭದ್ರತೆಯನ್ನು ಹೆಚ್ಚಿಸಲು ಕೊಡುಗೆ ನೀಡಿದೆ.

'ಯುರೋಡ್ರೋನ್' ವೀಕ್ಷಕ ರಾಷ್ಟ್ರವಾಗಿ ಭಾರತ ಸೇರ್ಪಡೆ

- ಭಾರತ ಇತ್ತೀಚೆಗೆ ಯುರೋಡ್ರೋನ್ ಕಾರ್ಯಕ್ರಮದ ವೀಕ್ಷಕ ರಾಷ್ಟ್ರವಾಗಿ ಸೇರಿಕೊಂಡಿದೆ.
- ಈ ಸೇರ್ಪಡೆಯೊಂದಿಗೆ, ಜಪಾನ್ ನಂತರ ಈ ಸ್ಥಾನಮಾನ ಪಡೆದ ಎರಡನೇ ಏಷ್ಯಾ-ಪೆಸಿಫಿಕ್ ರಾಷ್ಟ್ರವಾಗಿ ಭಾರತ ಗುರುತಿಸಲ್ಪಟ್ಟಿದೆ.
- 'ಯುರೋಡ್ರೋನ್' ಕಾರ್ಯಕ್ರಮವು ಫ್ರಾನ್ಸ್, ಜರ್ಮನಿ, ಸ್ಪೇನ್ ಮತ್ತು ಇಟಲಿಗಳನ್ನು ಒಳಗೊಂಡ 4 ರಾಷ್ಟ್ರಗಳ ಉಪಕ್ರಮವಾಗಿದೆ.
- ಬಾನ್ ಮೂಲದ ಜಂಟಿ ಶಸ್ತ್ರಾಸ್ತ್ರ ಸಹಕಾರ ಸಂಸ್ಥೆ(OCCAR: Organisation Conjointe de Coopération en matière d'Armement / Organisation for Joint Armament Co-operation) 'ಯುರೋಡ್ರೋನ್' ನಿರ್ವಹಿಸುತ್ತದೆ. ಇದನ್ನು ಏರ್‌ಬಸ್ ಡಿಫೆನ್ಸ್ ಅಂಡ್ ಸ್ಪೇಸ್ (ಜರ್ಮನಿ) ಮುನ್ನಡೆಸುತ್ತಿದ್ದು, ಲಿಯೊನಾರ್ಡೊ (ಇಟಲಿ), ಡಸಾಲ್ಟ್ ಏವಿಯೇಷನ್ (ಫ್ರಾನ್ಸ್), ಮತ್ತು ಏರ್‌ಬಸ್ (ಸ್ಪೇನ್) ಪ್ರಮುಖ ಪಾಲುದಾರರಾಗಿದ್ದಾರೆ.
- 'ಯುರೋಡ್ರೋನ್' ಎಂದರೆ ಗುಪ್ತಚರ, ಕಣ್ಗಾವಲು, ವಿಚಕ್ಷಣ, ಕಡಲ ಕಣ್ಗಾವಲು, ಜಲಾಂತರ್ಗಾಮಿ ವಿರೋಧಿ ಯುದ್ಧ ಮತ್ತು ಮುನ್ನೆಚ್ಚರಿಕೆ ಕಾರ್ಯಾಚರಣೆಗಳಿಗಾಗಿ ವಿನ್ಯಾಸಗೊಳಿಸಿದ ರಿಮೋಟ್ ನಿಯಂತ್ರಿತ ಮಾನವರಹಿತ ವೈಮಾನಿಕ ವ್ಯವಸ್ಥೆ (RPAS: Remotely piloted aircraft system) ಆಗಿದೆ.
- 7.1 ಬಿಲಿಯನ್ ಯೂರೋ ಮೌಲ್ಯದ ಈ ಯೋಜನೆ ಫ್ರಾನ್ಸ್, ಜರ್ಮನಿ, ಇಟಲಿ ಮತ್ತು ಸ್ಪೇನ್ ದೇಶಗಳ ಸಹಯೋಗ ಹೊಂದಿದ್ದು, 20 ಘಟಕಗಳ ಉತ್ಪಾದನೆಯ ಗುರಿಯನ್ನು ಹೊಂದಿದೆ.
- ಈ ರಕ್ಷಣಾ ವ್ಯವಸ್ಥೆಯು ಅವಳಿ-ಎಂಜಿನ್ ವಿನ್ಯಾಸದ ಕಾರಣದಿಂದ ನಿರಂತರವಾಗಿ 40 ಗಂಟೆಗಳ ಕಾಲ ಗಾಳಿಯಲ್ಲಿ ಇರಬಲ್ಲದು ಮತ್ತು 2.3 ಟನ್ ತೂಕದ ಪೇಲೋಡ್ ಅನ್ನು ಹೊತ್ತೊಯ್ಯಬಲ್ಲದು.
- 2024ರಲ್ಲಿ ಈ ರಕ್ಷಣಾ ವ್ಯವಸ್ಥೆಯ ಪ್ರಾಥಮಿಕ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಿದ್ದು, ಮೊದಲ ಪ್ರಾಯೋಗಿಕ ಅನುಷ್ಠಾನ 2026ರಲ್ಲಿ ನಡೆಯಲಿದೆ. 2028ರ ವೇಳೆಗೆ ಈ ವ್ಯವಸ್ಥೆ ರಕ್ಷಣಾ ಸೇವೆಗೆ ನಿಯೋಜನೆಗೊಳ್ಳಲಿದೆ. 2030ರಿಂದ ಪೂರ್ಣ ಪ್ರಮಾಣದ ಕಾರ್ಯಾಚರಣೆ ಆರಂಭವಾಗಲಿದೆ.
- ವೀಕ್ಷಕ ರಾಷ್ಟ್ರವಾಗಿ, ಭಾರತವು ಈ ರಕ್ಷಣಾ ವ್ಯವಸ್ಥೆಯ ತಾಂತ್ರಿಕ ದತ್ತಾಂಶವನ್ನು ಪಡೆಯಲು ಮತ್ತು ಯುರೋಡ್ರೋನ್ ಖರೀದಿಸಲು ಆದೇಶ ನೀಡುವ ಆಯ್ಕೆಯನ್ನು ಹೊಂದಿರುತ್ತದೆ.
- 'ಯುರೋಡ್ರೋನ್' ವ್ಯವಸ್ಥೆ ಯುರೋಪಿಯನ್ ರಕ್ಷಣಾ ಸಾಮರ್ಥ್ಯವನ್ನು ಬಲಪಡಿಸುತ್ತದೆ, ಅಮೆರಿಕದ 'ರೀಪರ್' ಮತ್ತು ಇಸ್ರೇಲ್‌ನ 'ಹೆರಾನ್' ಡ್ರೋನ್‌ಗಳ ಮೇಲಿನ ಅವಲಂಬನೆಯನ್ನು ತಗ್ಗಿಸುತ್ತದೆ.
- ಈಚೆಗೆ ಚೀನಾ, 'ಜೆ-20 ಸ್ಟೆಲ್ತ್ ಫೈಟರ್' ಮತ್ತು 'ಜೆ-35ಎ' ರಕ್ಷಣಾ ವ್ಯವಸ್ಥೆಗಳನ್ನು ಅನಾವರಣಗೊಳಿಸಿರುವುದು ಹಾಗೂ ಪಾಕಿಸ್ತಾನ ಕೂಡ 'ಜೆ-35ಎ' ರಕ್ಷಣಾ ವ್ಯವಸ್ಥೆ ಖರೀದಿಗೆ ಮುಂದಾಗಿರುವುದು ಭಾರತದ ರಕ್ಷಣಾ ಸವಾಲುಗಳನ್ನು ಹೆಚ್ಚಿಸಿದೆ ಹೀಗಾಗಿ, ಭಾರತವು 'ಯುರೋಡ್ರೋನ್' ಖರೀದಿಸುವ ಸಾಧ್ಯತೆಗಳು ಹೆಚ್ಚಿವೆ.
- ಐದನೇ ತಲೆಮಾರಿನ ಯುದ್ಧ ವಿಮಾನಗಳನ್ನು ಸ್ವಾಧೀನಪಡಿಸಿಕೊಳ್ಳಲು ಭಾರತವು ಈಚೆಗೆ ವಿವಿಧ ಆಯ್ಕೆಗಳನ್ನು ಹುಡುಕುತ್ತಿದೆ. ಅವುಗಳಲ್ಲಿ ಅಮೆರಿಕದ F-35 ಲೈಟ್ನಿಂಗ್ II, ರಷ್ಯಾದ Su-57 ಮತ್ತು ಸ್ಥಳೀಯ AMCA ಸೇರಿವೆ.

'ಸಂಜಯ್' ಯುದ್ಧಭೂಮಿ ಕಣ್ಗಾವಲು ವ್ಯವಸ್ಥೆಗೆ ಚಾಲನೆ

- 'ಸಂಜಯ್' ಯುದ್ಧಭೂಮಿ ಕಣ್ಗಾವಲು ವ್ಯವಸ್ಥೆಗೆ ಇತ್ತೀಚೆಗೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಚಾಲನೆ ನೀಡಿದರು.
- ಯುದ್ಧಭೂಮಿ ಕಣ್ಗಾವಲು ವ್ಯವಸ್ಥೆಯನ್ನು (BSS: Battlefield Surveillance System) ಭಾರತೀಯ ಸೇನೆಯ ಕಾರ್ಯಾಚರಣೆಯ ಸಾಮರ್ಥ್ಯ ಹೆಚ್ಚಿಸಲು ವಿನ್ಯಾಸಗೊಳಿಸಲಾಗಿದೆ.
- ಈ ವ್ಯವಸ್ಥೆಯು ಸ್ವಯಂಚಾಲಿತವಾಗಿ ಯುದ್ಧಭೂಮಿಯ ಸಮಗ್ರ ಕಣ್ಗಾವಲು ಚಿತ್ರಣವನ್ನು ಒದಗಿಸುತ್ತದೆ. ಭೂಮಿ ಮತ್ತು ವೈಮಾನಿಕ ಯುದ್ಧಕ್ಕೆ ಸಂಬಂಧಿಸಿದ ಸಂವೇದಕಗಳನ್ನು ಸಂಯೋಜಿಸುತ್ತದೆ.
- ಸಂಜಯ್' ವ್ಯವಸ್ಥೆಯು ಸುರಕ್ಷಿತವಾಗಿರುವ ಸೇನಾ ದತ್ತಾಂಶ ಜಾಲ ಮತ್ತು ಉಪಗ್ರಹ ಸಂವಹನ ಜಾಲದ ಮೂಲಕ, ಅತ್ಯಾಧುನಿಕ ಸಂವೇದಕ ಮತ್ತು ವಿಶ್ಲೇಷಣೆಗಳನ್ನು ಒದಗಿಸುತ್ತದೆ.
- ಇದು ವಿಶಾಲವಾದ ಭೂ ಗಡಿಗಳ ಮೇಲ್ವಿಚಾರಣೆ ಮಾಡುವ, ಪರಿಸ್ಥಿತಿಯನ್ನು ಹೆಚ್ಚಿನ ನಿಖರತೆಯೊಂದಿಗೆ ನಿರ್ಣಯಿಸುವ ಸಾಮರ್ಥ್ಯ ಹೊಂದಿದೆ. ಈ ಸಾಮರ್ಥ್ಯ ಗುಪ್ತಚರ, ಕಣ್ಗಾವಲು ಮತ್ತು ವಿಚಕ್ಷಣ (ISR: Intelligence, surveillance and reconnaissance) ಕಾರ್ಯಾಚರಣೆಗಳಲ್ಲಿ ಗುಣಕವಾಗಿ ಕಾರ್ಯನಿರ್ವಹಿಸುತ್ತದೆ.
- ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (BEL) ಸಹಯೋಗದಲ್ಲಿ ಅಭಿವೃದ್ಧಿಪಡಿಸಲಾದ ಸಂಜಯ್, 'ಆತ್ಮನಿರ್ಭರ ಭಾರತ' ಎಂಬ ಸ್ವಾವಲಂಬನೆಯ ಬದ್ಧತೆಯನ್ನು ಸಾಕಾರಗೊಳಿಸಿದೆ.
- ಯುದ್ಧಭೂಮಿಯ ಸನ್ನಿವೇಶಗಳನ್ನು ನಿರ್ಣಯಿಸಲು ಹಾಗೂ ವಿಶ್ಲೇಷಿಸಲು 'ಸಂಜಯ್' ಕೃತಕ ಬುದ್ಧಿಮತ್ತೆ ಮತ್ತು ಮಾಹಿತಿ ಆಧಾರಿತ ತಂತ್ರಗಳನ್ನು ಬಳಸಿಕೊಳ್ಳುತ್ತದೆ. 'ಸಂಜಯ್' ಸಂಗ್ರಹಿಸಿದ ದತ್ತಾಂಶವು ಸುರಕ್ಷಿತ ಡಿಜಿಟಲ್ ಸಂವಹನ ಲಿಂಕ್‌ಗಳ ಮೂಲಕ ರವಾನೆಯಾಗುವ ಧ್ವನಿ, ವಿಡಿಯೊ ಮತ್ತು ಚಿತ್ರಗಳನ್ನು ಒಳಗೊಂಡಿರುತ್ತದೆ. ಈ ತಂತ್ರಜ್ಞಾನವು ಮಿಲಿಟರಿ ಕಮಾಂಡರ್‌ಗಳಿಗೆ ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಹಕರಿಸುತ್ತದೆ.
- 'ಸಂಜಯ್' ಯುದ್ಧಭೂಮಿ ಕಣ್ಗಾವಲು ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ಸುಮಾರು ₹2,402 ಕೋಟಿ ವ್ಯಯಿಸಲಾಗಿದೆ.ಭಾರತೀಯ ಸೇನೆಯ ಎಲ್ಲಾ ಕಾರ್ಯಾಚರಣಾ ಬ್ರಿಗೇಡ್‌ಗಳು, ವಿಭಾಗಗಳು ಮತ್ತು ಕಾರ್ಪ್ಸ್‌ನಲ್ಲಿ 'ಸಂಜಯ್' ಕಣ್ಗಾವಲು ವ್ಯವಸ್ಥೆ ಸೇರಿಸಲು ರಕ್ಷಣಾ ಇಲಾಖೆ ನಿರ್ಧರಿಸಿದೆ.



ಏನಿದು 'LAAM' ತಂತ್ರಜ್ಞಾನ?

- IIT ಹೈದರಾಬಾದ್, ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (DRDO) ಮತ್ತು ವಿವಿಧ ಕೈಗಾರಿಕಾ ಪಾಲುದಾರರನ್ನು ಒಳಗೊಂಡ ಸಹಯೋಗದ ಉಪಕ್ರಮದಿಂದ ಒಡಮೂಡಿದ ದೊಡ್ಡ ಪ್ರದೇಶದ ಸಂಯೋಜಕ ಉತ್ಪಾದಕ ವಲಯ (LAAM: Large Area Additive Manufacturing) ಲೋಹದ ಘಟಕಗಳ ಉತ್ಪಾದನೆಯಲ್ಲಿ, ಅದರಲ್ಲೂ ವಿಶೇಷವಾಗಿ ಏರೋಸ್ಪೇಸ್ ವಲಯದಲ್ಲಿ ಕ್ರಾಂತಿಯನ್ನುಂಟು ಮಾಡುವತ್ತ ಮುಂದಡಿ ಇಟ್ಟಿದೆ.
- LAAM ದೊಡ್ಡ ಪ್ರದೇಶದ ಸಂಯೋಜಕ ಉತ್ಪಾದನೆಯು ದೊಡ್ಡ ಪ್ರಮಾಣದ ಲೋಹದ ಘಟಕಗಳ ತ್ವರಿತ ಉತ್ಪಾದನೆಗೆ ಅನುವು ಮಾಡಿಕೊಡುವ ಒಂದು ತಂತ್ರವಾಗಿದೆ.
- LAAM ವ್ಯವಸ್ಥೆಯು ಪೌಡರ್-ಆಧಾರಿತ ಡೈರೆಕ್ಟೆಡ್ ಎನರ್ಜಿ ಡಿಪಾಸಿಷನ್ ತಂತ್ರಜ್ಞಾನವನ್ನು ಬಳಸುತ್ತದೆ, ಇದು ಲೇಸರ್‌ಗಳು ಮತ್ತು ಬ್ಲೋನ್-ಪೌಡರ್ ವಿಧಾನಗಳನ್ನು ಬಳಸಿಕೊಂಡು ಸಂಕೀರ್ಣ ರಾಕೆಟ್ ಘಟಕಗಳನ್ನು ಒಳಗೊಂಡಂತೆ ಸಂಕೀರ್ಣ ಭಾಗಗಳನ್ನು ಸೃಷ್ಟಿಸುತ್ತದೆ, ಇದು ಭಾರತದ ರಕ್ಷಣಾ ಮತ್ತು ಏರೋಸ್ಪೇಸ್ ಸಾಮರ್ಥ್ಯಗಳನ್ನು ಬಲಪಡಿಸಲಿದೆ.
- IIT ಹೈದರಾಬಾದ್‌ನಲ್ಲಿರುವ DRDO ಅಂಗಸಂಸ್ಥೆ 'DIA CoE' (DRDO-Industry-Academia Centre of Excellence) ನಲ್ಲಿ ಅಭಿವೃದ್ಧಿಪಡಿಸಲಾದ LAAM ವ್ಯವಸ್ಥೆಯು ಭಾರತದ ಸಂಯೋಜಕ ಉತ್ಪಾದನಾ ಸಾಮರ್ಥ್ಯಗಳಲ್ಲಿ ಪ್ರಮುಖ ಸಾಧನೆಯಾಗಿದೆ.
- ಇದನ್ನು IIT ಹೈದರಾಬಾದ್, DRDO ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಪ್ರಯೋಗಾಲಯ ಮತ್ತು ಕೈಗಾರಿಕಾ ಪಾಲುದಾರರ ಸಹಯೋಗದ ಮೂಲಕ ಅಭಿವೃದ್ಧಿಪಡಿಸಲಾಗಿದೆ.
- IIT ಹೈದರಾಬಾದ್‌ನಲ್ಲಿ ಅಭಿವೃದ್ಧಿಪಡಿಸಲಾದ LAAM ವ್ಯವಸ್ಥೆಯು 1m x 1m x 3m ನ ಗಣನೀಯ ನಿರ್ಮಾಣ ಪರಿಮಾಣವನ್ನು ಹೊಂದಿದೆ. ಇದು ಭಾರತದ ಅತಿದೊಡ್ಡ ಲೋಹದ ಸಂಯೋಜಕ ಉತ್ಪಾದನಾ ಯಂತ್ರಗಳಲ್ಲಿ ಒಂದಾಗಿದೆ.
- ಈ ವ್ಯವಸ್ಥೆ ಉಷ್ಣ ಸಮತೋಲನ ಸುಗಮಗೊಳಿಸುವ ಮತ್ತು ಉತ್ಪಾದನಾ ವೇಗ ಹೆಚ್ಚಿಸುವ ಡ್ಯುಯಲ್ ಹೆಡ್ ಒಳಗೊಂಡಿದೆ.ಅಂಥ ಸಾಮರ್ಥ್ಯಗಳು ದೊಡ್ಡ ಘಟಕಗಳ ತಯಾರಿಕೆಯನ್ನು ಸಕ್ರಿಯಗೊಳಿಸುತ್ತವೆ,
- ಲೇಸರ್ ಮತ್ತು ಬ್ಲೋನ್-ಪೌಡರ್ ತಂತ್ರಜ್ಞಾನ ಆಧರಿಸಿ LAAM ನೇರ ಶಕ್ತಿ ಶೇಖರಣೆಯನ್ನು ಬಳಸುತ್ತದೆ.
- LAAM ತಂತ್ರಜ್ಞಾನವನ್ನು ರಕ್ಷಣೆ, ಏರೋಸ್ಪೇಸ್ ಮಾತ್ರವಲ್ಲದೇ, ಆಟೋಮೋಟಿವ್ ಮತ್ತು ಭಾರೀ ಎಂಜಿನಿಯರಿಂಗ್ ಕೈಗಾರಿಕೆಗಳಲ್ಲೂ ಬಳಸಬಹುದಾಗಿದೆ.

ಸಮರಾಭ್ಯಾಸ 'TROPEX'

- ಭಾರತೀಯ ನೌಕಾಪಡೆಯ ಅತಿದೊಡ್ಡ ದ್ವೈವಾರ್ಷಿಕ ನೌಕಾ ಸಮರಾಭ್ಯಾಸ 'TROPEX-2025' ಈಚೆಗೆ ನಡೆಯಿತು.
- ಇದರಲ್ಲಿ ಭಾರತೀಯ ನೌಕಾಪಡೆಯ INS ವಿಕ್ರಾಂತ್ ಸೇರಿ ಹಲವು ಪ್ರಮುಖ ನೌಕೆಗಳು ಪಾಲ್ಗೊಂಡಿದ್ದವು.
- TROPEX ಸಂಕೀರ್ಣ ಕವಾಯತುಗಳು, ನೇರ ಶಸ್ತ್ರಾಸ್ತ್ರ ಗುಂಡಿನ ದಾಳಿ ಮತ್ತು ಕಾರ್ಯಾಚರಣೆಯ ಪ್ರದರ್ಶನಗಳನ್ನು ಒಳಗೊಂಡಿತ್ತು.
- ಪೂರ್ವ ಮತ್ತು ಪಶ್ಚಿಮ ನೌಕಾಪಡೆಗಳ ಏಕೀಕೃತ ಕಡಲ ಪಡೆ ಈ ಸಮರಾಭ್ಯಾಸದ ಪ್ರಮುಖ ಆಕರ್ಷಣೆಯಾಗಿತ್ತು.
- ಪಶ್ಚಿಮ ನೌಕಾಪಡೆ ಅರೇಬಿಯನ್ ಸಮುದ್ರದ ಮೇಲೆ ಕೇಂದ್ರೀಕರಿಸುತ್ತದೆ ಮತ್ತು ಪೂರ್ವ ನೌಕಾಪಡೆಯು ಬಂಗಾಳಕೊಲ್ಲಿಯಲ್ಲಿ ಕಾರ್ಯನಿರ್ವಹಿಸುತ್ತದೆ. ಸಮರಾಭ್ಯಾಸದ ಸಮಯದಲ್ಲಿ ಅವರ ಸಂಯೋಜಿತ ಪ್ರಯತ್ನಗಳು ಎದುರಾಳಿಗಳಿಗೆ ಪ್ರಬಲವಾದ ತಡೆಗಟ್ಟುವಿಕೆಯನ್ನು ಸೂಚಿಸುತ್ತವೆ ಮತ್ತು ಭಾರತವು ತನ್ನ ಸಂಪೂರ್ಣ ನೌಕಾ ಬಲವನ್ನು ಸಜ್ಜುಗೊಳಿಸುವ ಸಾಮರ್ಥ್ಯವನ್ನು ಪ್ರದರ್ಶಿಸುತ್ತವೆ.
- ಅಮೆರಿಕ, ಜಪಾನ್ ಮತ್ತು ಆಸ್ಟ್ರೇಲಿಯಾಗಳನ್ನು ಒಳಗೊಂಡಿರುವ 'ಕ್ವಾಡ್'ನಲ್ಲಿರುವ ಮಿತ್ರರಾಷ್ಟ್ರಗಳಿಗೆ, TROPEX-25 ಭಾರತದ ಪ್ರಾದೇಶಿಕ ಭದ್ರತೆಯ ಬದ್ಧತೆಯನ್ನು ತೋರಿದೆ. ಈ ಸಮರಾಭ್ಯಾಸವು ಭಾರತದ ಮಿಲಿಟರಿ ಸಾಮರ್ಥ್ಯಗಳ ಬಗ್ಗೆ ಸಂಭಾವ್ಯ ವಿರೋಧಿಗಳಿಗೆ ಸ್ಪಷ್ಟ ಸಂದೇಶವನ್ನು ನಿಡಿದೆ.

ಬ್ರಹ್ಮೋಸ್ ಕ್ರೂಸ್ ಕ್ಷಿಪಣಿ



- ಭಾರತದ ಬ್ರಹ್ಮೋಸ್ ಕ್ರೂಸ್ ಕ್ಷಿಪಣಿ ಕಾರ್ಯಕ್ರಮ ಬ್ರಹ್ಮೋಸ್ NG (Next Generation) ಕ್ಷಿಪಣಿ ವ್ಯವಸ್ಥೆ ಅಭಿವೃದ್ಧಿಪಡಿಸುವಲ್ಲಿ ಪ್ರಗತಿಯಲ್ಲಿದೆ. 2027-28ರ ವೇಳೆಗೆ ಉತ್ಪಾದನೆ ಆರಂಭವಾಗಲಿದೆ.
- ಬ್ರಹ್ಮೋಸ್ NG ಕ್ಷಿಪಣಿ 290 ಕಿ.ಮೀ. ವ್ಯಾಪ್ತಿ ಹೊಂದಿದ್ದು, ಇದು ಸಣ್ಣ ವಿತರಣಾ ವ್ಯವಸ್ಥೆಗಳಿಗೆ ಹೊಂದಿಕೊಳ್ಳುವಂತಿರಲಿದೆ.
- ಕ್ಷಿಪಣಿ 3 ಟನ್ ತೂಕ ಮತ್ತು 9 ಮೀಟರ್ ಉದ್ದವಿದ್ದ ಹಳೆಯ ಆವೃತ್ತಿಗೆ ಹೋಲಿಸಿದರೆ ಚಿಕ್ಕದಿದ್ದು, ಸುಮಾರು 1.6 ಟನ್ ತೂಕ ಮತ್ತು 6 ಮೀಟರ್ ಉದ್ದವಿರುತ್ತದೆ.
- ಬ್ರಹ್ಮೋಸ್ NG ಕ್ಷಿಪಣಿಯನ್ನು ರಷ್ಯಾ ಮೂಲದ ಸುಖೋಯ್-30MKI ಯುದ್ಧ ವಿಮಾನ ಮತ್ತು ಸ್ಥಳೀಯ ಲಘು ಯುದ್ಧ ವಿಮಾನ ತೇಜಸ್‌ನಲ್ಲಿ ಅಳವಡಿಸಬಹುದಾಗಿದೆ.

ಏನಿದು 'ರಣಭೂಮಿ ದರ್ಶನ್'?

- 77ನೇ ಸೇನಾ ದಿನದ ಸಂದರ್ಭದಲ್ಲಿ, ರಕ್ಷಣಾ ಸಚಿವಾಲಯ 'ಭಾರತ್ ರಣಭೂಮಿ ದರ್ಶನ್' ಎಂಬ ಉಪಕ್ರಮ ಪ್ರಾರಂಭಿಸಿದೆ.
- ಈ ಕಾರ್ಯಕ್ರಮವು ಭಾರತದಾದ್ಯಂತ ಯುದ್ಧಭೂಮಿ ಪ್ರವಾಸೋದ್ಯಮವನ್ನು ಉತ್ತೇಜಿಸುವ ಗುರಿಯನ್ನು ಹೊಂದಿದೆ. ಇದು ಭಾರತೀಯ ಸಶಸ್ತ್ರ ಪಡೆಗಳ ತ್ಯಾಗಗಳನ್ನು ಸ್ಮರಿಸುವ 77 ತಾಣಗಳ ಮೇಲೆ ಕೇಂದ್ರೀಕರಿಸುತ್ತದೆ.
- 'ಭಾರತ್ ರಣಭೂಮಿ ದರ್ಶನ್' ಪ್ರವಾಸಿಗರಿಗೆ ಡಿಜಿಟಲ್ ವೇದಿಕೆ ಮೂಲಕ 77 ಶೌರ್ಯ ಹಾಗೂ ಬಲಿದಾನದ ತಾಣಗಳ ಬಗ್ಗೆ ಸಮಗ್ರ ಮಾಹಿತಿಯನ್ನು ಒದಗಿಸುತ್ತದೆ. ಮಿಲಿಟರಿ ಕಾರ್ಯಾಚರಣೆಗಳ ಸ್ಥಳಗಳು, ಯುದ್ಧ ಸ್ಮಾರಕಗಳು ಮತ್ತು ವಸ್ತು ಸಂಗ್ರಹಾಲಯಗಳಂಥ ತಾಣಗಳು ಇದರಲ್ಲಿ ಸೇರಿವೆ.
- ಗಮನಾರ್ಹ ತಾಣಗಳಲ್ಲಿ ಗಾಲ್ವಾನ್ ಕಣಿವೆ ಮತ್ತು ಲೋಂಗೆವಾಲಾ ಸೇರಿವೆ. ಈ ಪ್ರದೇಶಗಳು ನಿರ್ಣಾಯಕ ಯುದ್ಧಗಳಿಗೆ ಸಾಕ್ಷಿಯಾಗಿವೆ ಮತ್ತು ಭಾರತದ ಮಿಲಿಟರಿ ಇತಿಹಾಸದ ತ್ಯಾಗ-ಬಲಿದಾನಗಳನ್ನು ಅರ್ಥಮಾಡಿಕೊಳ್ಳಲು ಪ್ರಮುಖವಾಗಿವೆ.
- 'ಭಾರತ್ ರಣಭೂಮಿ ದರ್ಶನ್' ಉಪಕ್ರಮ ಗಡಿ ಪ್ರದೇಶಗಳಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸುವ ಗುರಿ ಹೊಂದಿದೆ. ಲಡಾಖ್ ಮತ್ತು ಸಿಕ್ಕಿಂನಂಥ ಪ್ರದೇಶಗಳಿಗೆ ಪ್ರವಾಸಿಗರನ್ನು ಸೆಳೆಯಲು ಈ ಯೋಜನೆ ರೂಪಿಸಲಾಗಿದೆ. ಮಿಲಿಟರಿ ಸನ್ನದ್ಧತೆ ಕಾಪಾಡಿಕೊಳ್ಳಲು ಸ್ಥಳೀಯ ಸಹಯೋಗ ವನ್ನೂ ಈ ಉಪಕ್ರಮ ಪ್ರೋತ್ಸಾಹಿಸುತ್ತದೆ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ- ಇಂಗ್ಲಿಷ್

Second Language ENGLISH
Unit-1 Poem
Grandma Climbs a Tree

4. "There was not a tree, she hadn't been up' is an expression.

Rewrite the above sentences without using 'not' (note: the meaning should be the same)

Give some more examples from outside the text to illustrate the effective use of double negatives.

Ans: There were no trees left, that grandama hadn't climed

Some more examples of double negatives:

a) All the witnesses claimed that didn't see nothing.
b) The pilot can't find no place to land.
c) There is no way you can do nothing about this.

C. Read the line 'she would be up in the branches in a trice'.

What picture do you get in your mind when you read this? May be it is the picture of the grandma climbing a tree deftly even like a monkey.

Now read the following lines and say what pictures or images you that come to your mind. Try to draw these pictures if you can.

1. An aged woman confined to bed.

Ans: It gives picture of a frail, difficult to walk forced to stay on bed.

2. Every breeze / whispered of summer and dancing leaves.

Ans: A low Wind speed of summer is whispering in ears that summer is here and it is being complimented by dry leaves fallen to ground start dancing as if to music.

3. Being happier in a tree than in a lift.

Ans: We get a picture of being happier while breathing fresh air on a tree than stale air in a claustrophobic lift.

****

Unit-2 PROSE
There's a Girl by the Tracks!

uthor – Deven Kanal

)even Kanal is a writer in English. He writes short tories in English to journals and magazines.

Check your understanding

hare your responses

. It's a regular scene." What was regular about he scene? (Para-1)

ns: It is regular scene that as the 6:32pm Mumbai uburban electric train makes its 20 second halt at a station, commuters swarm in and out of its 12 packed coaches.

2. "Roma Talreja tried to settle into a corner near the door in the train." Was she right in doing this? What would you have done, if you were there?

Ans: No, Roma Talreja was not doing right thing by trying to settle near door of a fast moving suburban train which is jam packed. If I were the traveller I would have tried to settle myself away from the door and with a grip on handlebar and would have persuaded to the same for Roma Talreja.

3. "There's a girl by the tracks," the voices cried out. Whose voices do you think those were?

Ans: The voices were of the co-passengers of Mr. Baleshwar Mishra who was travelling in a train running on parallel tracks in the opposite direction of the train of Ms.Roma Talreja

4. Baleshwar was impulsive in taking a decision because----------------

(Fill in the blank appropriately).(para-3)

Ans: He had just seen a young woman lying next to the track

Expln:- He could not believe that he has just seen-a young woman lying next to tracks. Meanwhile he also heard gasps and screams emanating from his compartment" There is a girl by tracks". His own sighting of girl lying by track unconscious and panic screams by co passengers made Mr Baleshwar Misha react impulsively.

5. The dictionary says 'callous' means 'unconcerned'. In this situation, who do you think were callous towards the accident.

Ans: When Mr Baleshwar Mishra pulled emergency stop chain, the train screeched to slow down but did not stop. It picked up speed again and disappeared. The first callousness was shown by the train driver and guard who had mandatory duty to enquire why emergency chain was pulled and mitigate the emergency by using their wireless communication equipment to control room. Then when Mr Baleshwar called the co-passengers to help the girl lying by the tracks,

none of them responded being wary of getting involved. The co-passengers of Mr Baleshwar were also callous.

6. 'Baleshwar rushed to help the girl.' His movement has been described with verbs like 'shoved'. Identify two more such verbs / verbal phrases in paragraph (5).

Ans: Jumped off, started to sprint back.

(Contd………..)


ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾದರಿಯ ಪ್ರಶ್ನೋತ್ತರಕ್ಕೆ ಇಲ್ಲಿ ಸ್ಕ್ಯಾನ್ ಮಾಡಿ

II PUC- BIOLOGY


II PUC : BIOLOGY
REPRODUCTION

Reproduction in flowering plants

39. In the diagram given, show the path of a pollen tube from the pollen on the stigma into the embryo sac. Name the components of egg apparatus.




Ans:- **(a)**



(b) Components of Embryo Sac.
Oospore or egg and two synergids.


Human Reproduction

1. In the given T.S of human ovary, identify –
(i) Corpus luteum, (ii) Secondary oocyte (iii) Antrum, (iv) Primary follicle (v) Primary oocyte



Ans:- (i) Corpus luteum – d, (ii) Secondary oocyte – c, (iii) Antrum – b, (iv) Primary follicle – e, (v) Primary oocyte – a

2.a) Write the correct sequence of the diagrams A, B, C.
b) Label (1) in A and write down its function.
c) Label (2) in B and write down its function.
d) Label (3) in C and write down its function.
e) What is place of fertilization in female reproductive tract?
f) At which stage implantation takes place?



Ans:- (a) The correct sequence is A, C, B
(b) (1) – acrosome. Possesses sperm lysins
(i) Hyaluronidase – for dissolution of cementing substance amongst corona cells.
(ii) Corona penetrating enzyme – for passage of sperms through corona
(iii) Acrosin or Zona Lysin – for passage through zona pellucida.
(c) (2) Tail of sperm – swimming of sperm
(d) (3) Middle piece of sperm – Mitochondria provides energy
(e) Ampulla – isthmus junction
(f) Blastocyst stage.

3. Mention some of the differences between Cleavage and Mitosis.

Ans:- Differences between Cleavage & Mitosis

Cleavage	*Mitosis*
1. Interphase is short.	Is comparatively long
2. Newly formed cleavage cells or blastomeres do not grow in size.	Daughter cells formed after normal mitosis grow in size.
3. There is a progressive decrease in cell size.	Cell size is maintained. It becomes equal to that of parent cell.
4. DNA replication is normal but other cell constitutions are not much synthesized.	Both DNA replication and synthesis of protoplasmic constituents are accomplished.
5. There is increase in oxygen consumption.	There is no change in oxygen consumption.
6. Nucleocytoplasmic ratio increases.	Nucleocytoplasmic ratio is maintained.
7. Cleavage is special type of mitosis that occurs during early segmentation of zygote.	Normal mitosis that occurs during division of somatic cells of the body.
8. It is comparatively Rapid.	It is comparatively slow.
9. There is synchronization of divisions.	Synchronization of divisions is rare.

4. Mention some of the differences between Morula and Blastocyst.

Ans:- Differences between Morula & Blastocyst ***(Contd..)***

ಆರಂಭೋತ್ಸವಕ್ಕೆ ಸಜ್ಜು: ನಾಲ್ಯಪದವು ಪಿಎಂಶ್ರೀ ಶಾಲೆಗೆ ಸ್ಥಳೀಯ ದಾನಿಗಳಿಂದ ದೇಣಿಗೆ

‘ಶಾಲಾ ಕಾಣಿಕೆ’: ಶೈಕ್ಷಣಿಕ ಸಾಮಗ್ರಿ ಕೊಡುಗೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಆರಂಭೋತ್ಸವಕ್ಕೆ ಸಜ್ಜಾಗಿರುವ ಇಲ್ಲಿನ ಶಕ್ತಿನಗರದ ನಾಲ್ಯಪದವಿನ ಪಿಎಂಶ್ರೀ ಕುವೆಂಪು ಶತಮಾನೋತ್ತರ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯು ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗೆ ನೆರವಾಗಲು ‘ಶಾಲಾ ಕಾಣಿಕೆ’ ಎಂಬ ವಿನೂತನ ಕಾರ್ಯಕ್ರಮ ಹಮ್ಮಿಕೊಂಡಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಊರಿನ ಜಾತ್ರೆ, ಬ್ರಹ್ಮಕಲಶೋತ್ಸವ ಮೊದಲಾದ ಧಾರ್ಮಿಕ ಕಾರ್ಯಕ್ರಮಗಳಿಗೆ ಸಾರ್ವಜನಿಕರಿಂದ ಹಸಿರು ತರಕಾರಿ ಹಾಗೂ ಆಹಾರ ಧಾನ್ಯಗಳನ್ನು ದೇಣಿಗೆ ರೂಪದಲ್ಲಿ ಸಂಗ್ರಹಿಸಿ ‘ಹೊರೆಕಾಣಿಕೆ’ ಮೆರವಣಿಗೆ ನಡೆಸುವುದು ವಾಡಿಕೆ.



ಮಂಗಳೂರಿನ ನಾಲ್ಯಪದವು ಸರಕಾರಿ ಪ್ರಾಥಮಿಕ ಶಾಲೆಯ ಆರಂಭೋತ್ಸವದ ದಾನಿಗಳು ಕೊಡುಗೆ ನೀಡಿದ ಶೈಕ್ಷಣಿಕ ಸಾಮಗ್ರಿಗಳನ್ನು ಶಿಕ್ಷಕರು ಬುಧವಾರ ಪರಿಶೀಲಿಸಿದರು ಪ್ರಜಾವಾಣಿ ಚಿತ್ರ

ಅದೇ ಮಾದರಿಯಲ್ಲಿ ಈ ಸರ್ಕಾರಿ ಶಾಲೆಯು ದಾನಿಗಳಿಂದ ಮಕ್ಕಳ ಶೈಕ್ಷಣಿಕ ಚಟುವಟಿಕೆಗೆ ಉಪಯೋಗವಾಗುವ ಸಾಮಗ್ರಿ ಸಂಗ್ರಹಿಸುತ್ತಿದೆ.

‘ಕಾಣಿಕೆ ರೂಪದಲ್ಲಿ ಇದುವರೆಗೆ ಟಿಪ್ಪಣಿ ಪುಸ್ತಕ, ಡಸ್ಟರ್, ಪೆನ್ಸಿಲ್‌ಬಾಕ್ಸ್, ಹೂದಾನಿ, ಎ4 ಮತ್ತು ಎ3 ಹಾಳೆಗಳು, ಪಠ್ಯ ಪೂರಕ ಸಾಮಗ್ರಿ, ಯುಕೆಜಿ ಎಲ್‌ಕೆಜಿ ವಿದ್ಯಾರ್ಥಿ ಗಳಿಗಾಗಿ ಆಟಿಕೆಗಳು ಸಂಗ್ರಹವಾಗಿವೆ. ಅವುಗಳನ್ನು ಇದೇ 30ರಂದು ಊರಿನ ವೈದ್ಯನಾಥ ದೇವಸ್ಥಾನದಿಂದ ಮೆರವಣಿಗೆಯಲ್ಲಿ ತರುತ್ತೇವೆ’ ಎಂದು ಪ್ರಭಾರ ಮುಖ್ಯಶಿಕ್ಷಕಿ ದಾಕ್ಷಾಯಣಮ್ಮ ಎಸ್. ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

ಪ್ರತಿವರ್ಷವೂ ಏನಾದರೂ ಹೊಸ ಕಾರ್ಯಕ್ರಮ ಹಮ್ಮಿಕೊಳ್ಳುವ ಈ ಶಾಲೆ, ಕಳೆದ ಶೈಕ್ಷಣಿಕ ವರ್ಷದಲ್ಲಿ ‘ಗುರು ಕಾಣಿಕೆ’ ಎಂಬ ಕಾರ್ಯಕ್ರಮ ಹಮ್ಮಿಕೊಂಡಿತ್ತು. ಶಾಲೆಯ ಅಧ್ಯಾಪಕರು ನಿತ್ಯ ಒಂದಿಷ್ಟು ಹಣವನ್ನು ಡಬ್ಬಿಯಲ್ಲಿ ಕೂಡಿಡುತ್ತಿದ್ದರು.

‘ಪ್ರತಿ ತಿಂಗಳು ಯಾವುದಾದರೂ ಒಂದು ತರಗತಿಯನ್ನು ಲಕ್ಕಿಡಿಪ್ ಮೂಲಕ ಆಯ್ಕೆ ಮಾಡಿ, ಆ ತರಗತಿಗೆ ಶೈಕ್ಷಣಿಕ ಸಾಮಗ್ರಿ ಖರೀದಿಸಲು ‘ಗುರು ಕಾಣಿಕೆ’ಯ ಹಣವನ್ನು ಬಳಸಲಾಗುತ್ತದೆ’ ಎಂದು ದಾಕ್ಷಾಯಣಮ್ಮ ತಿಳಿಸಿದರು.

63 ವರ್ಷ ಹಳೆಯದಾದ ಈ ಶಾಲೆಗೆ ಸಾವಿತ್ರಿಬಾಯಿ ಫುಲೆ ಪ್ರಶಸ್ತಿಯೂ ದೊರಕಿದೆ. ಎರಡು ವರ್ಷಗಳ ಹಿಂದೆ ಈ ಶಾಲೆ ಪಿಎಂಶ್ರೀ ಯೋಜನೆಗೆ ಆಯ್ಕೆಯಾಗಿದೆ. ಕುವೆಂಪು ಜನ್ಮಶತಮಾನೋತ್ಸವ ವರ್ಷದಲ್ಲಿ ಈ ಶಾಲೆಗೆ ವಿಶೇಷ ಅನುದಾನ ಬಿಡುಗಡೆಯಾಗಿತ್ತು. ಈ ಶಾಲೆಯಲ್ಲಿ ಎಲ್‌ಕೆಜಿ, ಯುಕೆಜಿ ಮತ್ತು ಒಂದರಿಂದ ಎಂಟನೇ ತರಗತಿವರೆಗೆ ಕಲಿಕೆಗೆ ಅವಕಾಶವಿದೆ.

ಗಣಿ ಇಲಾಖೆ ಉಪನಿರ್ದೇಶಕಿ ಸೇರಿ ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಮಂಗಳೂರು: ಮನೆ ನಿರ್ಮಿಸುವ ಸಲುವಾಗಿ, ಜಾಗದಲ್ಲಿದ್ದ ಕಟ್ಟಡದ ಕಲ್ಲು ತೆಗೆದು ಸಮತಟ್ಟುಗೊಳಿಸುವುದಕ್ಕಾಗಿ ಅನುಮತಿ ನೀಡಲು ಚಾಲಕನ ಮೂಲಕ ₹50 ಸಾವಿರ ಲಂಚ ಪಡೆದ ಆರೋಪದ ಮೇಲೆ ಇಲ್ಲಿನ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಪ್ರಭಾರ ಉಪ ನಿರ್ದೇಶಕಿ ಕೃಷ್ಣವೇಣಿ, ಕಚೇರಿ ಸಿಬ್ಬಂದಿ ಪ್ರದೀಪ್ ಹಾಗೂ ಚಾಲಕ ಮಧು ಎಂಬುವರನ್ನು ಲೋಕಾಯುಕ್ತ ಪೊಲೀಸರು ಬುಧವಾರ ಬಂಧಿಸಿದ್ದಾರೆ.



ಕೃಷ್ಣವೇಣಿ

‘ಉಳ್ಳಾಲ ತಾಲ್ಲೂಕು ಇರಾ ಗ್ರಾಮದಲ್ಲಿ ಮನೆ ನಿರ್ಮಿಸಲು ಆ ಜಾಗದ ಜಿಪಿಎ ಹಕ್ಕುದಾರರು ಬಯಸಿದ್ದರು. ಕಟ್ಟಡ ನಿರ್ಮಿಸುವ ಮುನ್ನ ಅಲ್ಲಿದ್ದ ಕಲ್ಲು ತೆರವುಗೊಳಿಸಿ ಜಾಗವನ್ನು ಸಮತಟ್ಟುಗೊಳಿಸಬೇಕಿತ್ತು. ಇದಕ್ಕಾಗಿ ಅನುಮತಿ ಪಡೆಯಲು ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ 2024ರ ಅ.28ರಂದು ಅರ್ಜಿ ಸಲ್ಲಿಸಿದ್ದರು. ಜಮೀನಿನಲ್ಲಿದ್ದ ಕಲ್ಲು ತೆರವುಗೊಳಿಸಿ ಜಾಗವನ್ನು ಸಮತಟ್ಟು ಮಾಡಲು ಪ್ರಮಾಣಪತ್ರ ನೀಡಬಹುದು ಎಂಬುದಾಗಿ ಉಳ್ಳಾಲ ತಾಲ್ಲೂಕಿನ ತಹಶೀಲ್ದಾರ್ ಅವರು 2025ರ ಮಾರ್ಚ್ 21ರಂದು ವರದಿ ಸಲ್ಲಿಸಿದ್ದರು. ಆದರೂ ಇಲಾಖೆಯ ಅಧಿಕಾರಿಗಳು ಅನುಮತಿ ನೀಡಿರಲಿಲ್ಲ.

ಈ ಬಗ್ಗೆ ವಿಚಾರಿಸಲು ಅರ್ಜಿದಾರರು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಕಚೇರಿಗೆ ತೆರಳಿದ್ದಾಗ ‘ಈ ಕಡತಕ್ಕೆ ₹50 ಸಾವಿರ ಪಡೆದುಕೊಳ್ಳಿ. ನಂತರ ಸಹಿ ಹಾಕುವ’ ಎಂದು ಕೃಷ್ಣವೇಣಿ ಅವರು ಸಿಬ್ಬಂದಿ ಪ್ರದೀಪ್ ಎಂಬವರನ್ನು ಕರೆಸಿ, ಅವರ ಸಮ್ಮುಖದಲ್ಲಿ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಅರ್ಜಿದಾರರು ಈ ಬಗ್ಗೆ ಇಲ್ಲಿನ ಲೋಕಾಯುಕ್ತ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಪ್ರಕರಣ ದಾಖಲಾಗಿತ್ತು.

‘ಕೃಷ್ಣವೇಣಿ ಅವರು ಚಾಲಕ ಮಧು ಅವರ ಮೂಲಕ ಬುಧವಾರ ₹50 ಸಾವಿರ ಲಂಚದ ಹಣ ಪಡೆದಿದ್ದಾರೆ. ಆ ಬಳಿಕ ಕೃಷ್ಣವೇಣಿ, ಪ್ರದೀಪ್ ಹಾಗೂ ಮಧು ಎಂಬುವರನ್ನು ವಶಕ್ಕೆ ಪಡೆದು ತನಿಖೆ ನಡೆಸಲಾಗುತ್ತಿದೆ’ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.



ಮಡಿಕೇರಿ ಸಮೀಪದ ಅಬ್ಬಿ ಜಲಪಾತದ ವೈಭವವನ್ನು ಪ್ರವಾಸಿಗರು ಬುಧವಾರ ಕಣ್ತುಂಬಿಕೊಂಡರು ಚಿತ್ರ: ರಂಗಸ್ವಾಮಿ

ಕಲಬುರಗಿ: 25 ಡಿಗ್ರಿ ಸೆಲ್ಸಿಯಸ್‌ಗೆ ಕುಸಿದ ತಾಪಮಾನ

ಸತತ ಮಳೆ; ತಂಪಾದ ಇಳೆ

ಪ್ರಜಾವಾಣಿ ವಾರ್ತೆ

ಮೈಸೂರು: ರಾಜ್ಯದ ಕರಾವಳಿ, ಮಲೆನಾಡು ಸೇರಿದಂತೆ ಹಲವೆಡೆ ಬುಧವಾರ ವರುಣನ ಅಬ್ಬರ ಮುಂದುವರಿದಿದೆ. ಸತತ ಮಳೆಯಿಂದಾಗಿ ಕಲಬುರಗಿಯ ತಾಪಮಾನ 25 ಡಿಗ್ರಿ ಸೆಲ್ಸಿಯಸ್‌ಗೆ ಕುಸಿದಿದೆ.

ಕುಶಾಲನಗರ ತಾಲ್ಲೂಕಿನ ದುಬಾರೆ ಸಾಕಾನೆ ಶಿಬಿರಕ್ಕೆ ಪ್ರವಾಸಿಗರ ಪ್ರವೇಶವನ್ನು ನಿರ್ಬಂಧಿಸಿದೆ. ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಬಿಸಿಲೆ ರಸ್ತೆಯಲ್ಲಿ ವಿದ್ಯುತ್ ತಂತಿಗಳೊಂದಿಗೆ ಮರ ಬಿದ್ದಿದ್ದು, ಸುಬ್ರಹ್ಮಣ್ಯಕ್ಕೆ ಸಂಪರ್ಕಿಸುವ ರಸ್ತೆಯಲ್ಲಿ ವಾಹನ ಸಂಚಾರ ಸ್ಥಗಿತವಾಗಿತ್ತು.

ವಿರಾಜಪೇಟೆ, ಸೋಮವಾರಪೇಟೆ ತಾಲ್ಲೂಕಿನಲ್ಲಿ ಮಳೆಯಾಗುತ್ತಿದ್ದು, ಕೊಡಗಿನಲ್ಲಿ ಎರಡು ದಿನ ಶಾಲಾ–ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ.

ಹಾರಂಗಿ ಜಲಾಶಯದ ಮಟ್ಟ ಬುಧವಾರ 2,841.93 ಅಡಿಗಳಿಗೆ ತಲುಪಿದೆ. (2,859 ಅಡಿ ಗರಿಷ್ಠ ಮಟ್ಟ) 4,724 ಕ್ಯುಸೆಕ್ ಒಳ ಹರಿವಿದೆ.

ಬೇಲೂರು ತಾಲ್ಲೂಕಿನ ಯಗಚಿ ಜಲಾಶಯ ಭರ್ತಿಯಾಗಿದೆ. ಹೇಮಾವತಿ ಜಲಾಶಯಕ್ಕೆ 22 ಸಾವಿರ ಕ್ಯುಸೆಕ್ ನೀರು ಹರಿದು ಬರುತ್ತಿದೆ. ಜಲಾಶಯ ಭರ್ತಿಗೆ ಇನ್ನು 18 ಅಡಿ ಬಾಕಿ ಇದೆ.

ಕಲಬುರಗಿ: ಕಲ್ಯಾಣ ಕರ್ನಾಟಕದ ಕಲಬುರಗಿ, ಬೀದರ್, ರಾಯಚೂರು ಹಾಗೂ ಯಾದಗಿರಿ ಜಿಲ್ಲೆಯ ಹಲವೆಡೆ ಮಳೆ ಮುಂದುವರಿದಿದೆ.

ಬೀದರ್, ಕಮಲನಗರದಲ್ಲಿ ಮನೆಗಳಿಗೆ ನೀರು ನುಗ್ಗಿದೆ. ಮಾಂಜ್ರಾ ನದಿಯಲ್ಲಿ ನೀರಿನ ಹರಿವು ಹೆಚ್ಚಾಗಿದ್ದು, ಔರಾದ್ ತಾಲ್ಲೂಕಿನ ಕೌಠಾ (ಬಿ) ಸೇತುವೆ ಸಮೀಪದಿಂದ ಬೀದರ್ ತಾಲ್ಲೂಕಿನ ಇಸ್ಲಾಂಪುರಕ್ಕೆ ಸಂಪರ್ಕ ಕಲ್ಪಿಸುವ ಸೇತುವೆ ಮೇಲೆ ನೀರು ಹರಿಯುತ್ತಿದೆ. ರಾಯಚೂರು, ಯಾದಗಿರಿಯಲ್ಲಿ ಮಳೆಯಾಗಿದೆ.

ಕಾರವಾರ: ಉತ್ತರ ಕನ್ನಡ ಜಿಲ್ಲೆಯಾದ್ಯಂತ ದಿನವಿಡೀ ಸುರಿದ ಮಳೆ, ಸಂಜೆ ಬಳಿಕ ಮಳೆ ಬಿರುಸು ಪಡೆಯಿತು.

ಮಳೆ ಗಾಳಿಯ ಅಬ್ಬರದ ಪರಿಣಾಮ ಅಂಕೋಲಾ ತಾಲ್ಲೂಕಿನ ಹಾರವಾಡ ಗ್ರಾಮ ಪಂಚಾಯಿತಿ ವ್ಯಾಪ್ತಿಯ ತರಂಗಮೇಟ ಮಜರೆಯಲ್ಲಿ ಕಡಲು ಕೊರೆತ ಆರಂಭಗೊಂಡಿದೆ. ಕೆಲ ತಿಂಗಳ ಹಿಂದೆ ನಿರ್ಮಿಸಿದ್ದ ಅಲೆ ತಡೆಗೋಡೆಯು ಅಲೆಗಳ ಅಬ್ಬರಕ್ಕೆ ಸಮುದ್ರ ಪಾಲಾಗಿದೆ.

ಚಡಚಣ (ವಿಜಯಪುರ ಜಿಲ್ಲೆ): ಉಜನಿ ಹಾಗೂ ವೀರಾ ಆಣೆಕಟ್ಟು ಜಲಾಯನ ಪ್ರದೇಶದಲ್ಲಿ ಧಾರಾಕಾರವಾಗಿ ಮಳೆ ಸುರಿಯುತ್ತಿದ್ದು, ಭೀಮಾ ನದಿಯಲ್ಲಿ ಪ್ರವಾಹ ಪರಿಸ್ಥಿತಿ ಏರ್ಪಟ್ಟಿದೆ.

ಮಹಿಳೆ, ಕಾರು ಚಾಲಕ ಸಾವು

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಬುಧವಾರ ದಿನವಿಡೀ ಮಳೆಯಾಗಿದೆ. ಸ್ವಲ್ಪ ಹೊತ್ತು ಧಾರಾಕಾರ ಸುರಿದರೆ, ನಂತರ ಸ್ವಲ್ಪ ಹೊತ್ತು ಹದವಾಗಿ ಸುರಿಯಿತು. ಮಳೆಯಿಂದಾಗಿ ಜಿಲ್ಲೆಯಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ಮೂಡುಬಿದಿರೆ ಸಮೀಪದ ಇರುವೈಲಿನಲ್ಲಿ ತುಂಡಾಗಿ ಬಿದ್ದ ವಿದ್ಯುತ್ ತಂತಿಯನ್ನು ತುಳಿದು ಲಿಲ್ಲಿ ಡಿಸೋಜ (52) ಎಂಬವರು ವಿದ್ಯುತ್ ಅಘಾತದಿಂದ ಮೃತಪಟ್ಟಿದ್ದಾರೆ.

ಕಾರೊಂದು ಚಾಲಕನ ನಿಯಂತ್ರಣ ತಪ್ಪಿ ನಗರದ ಕೊಟ್ಟಾರ ಬಳಿ ರಾಷ್ಟ್ರೀಯ ಹೆದ್ದಾರಿ 66ರ ಪಕ್ಕದಲ್ಲಿರುವ ಮಳೆ ನೀರು ಹರಿಯುವ ಕಾಲುವೆಗೆ ಬಿದ್ದಿದೆ. ಕಾರು ಚಲಾಯಿಸುತ್ತಿದ್ದ ವಿಡಿಯೊಗ್ರಾಫರ್ ಕಾಸರಗೋಡು ಜಿಲ್ಲೆಯ ಉಪ್ಪಳದ ಸೂರ್ಯನಾರಾಯಣ (49) ಮೃತಪಟ್ಟಿದ್ದಾರೆ.

ವರ್ಗ: ಸಿಎಂ ಅಸ್ತು ಡಿಸಿಎಂ ಮುನಿಸು

ಒಂದನೇ ಪುಟದಿಂದ...

ಈ ಪೈಕಿ, ಪೊಲೀಸ್ ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಮುಖ್ಯ ಎಂಜಿನಿಯರ್ ಹುದ್ದೆಯಲ್ಲಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಮುಖ್ಯ ಎಂಜಿನಿಯರ್ ಬಿ.ಎಚ್. ಮಂಜುನಾಥ್ ಅವರು ಮೇ 31ರಂದು ನಿವೃತ್ತಿ ಆಗಲಿದ್ದು, ಅವರಿಂದ ತೆರವಾಗುವ ಹುದ್ದೆಗೆ ವರದಿ ಮಾಡಿಕೊಳ್ಳುವಂತೆ ಆದೇಶದಲ್ಲಿ ಸೂಚನೆ ನೀಡಲಾಗಿತ್ತು.

ತನ್ನ ಅಧೀನದಲ್ಲಿರುವ ಇಲಾಖೆಯಲ್ಲಿ ಖಾಲಿ ಇರುವ ಈ ಕೆಲವು ವಿಭಾಗಗಳ ‘ಮುಖ್ಯಸ್ಥ’ರ ಹುದ್ದೆಗಳಿಗೆ ಸ್ಥಳ ನಿಯುಕ್ತಿಗೊಳಿಸುವ ಸಂದರ್ಭದಲ್ಲಿ ಗಮನಕ್ಕೆ ತಾರದ ಡಿಪಿಎಆರ್‌ನ ಕ್ರಮಕ್ಕೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ’

ಒಂದನೇ ಪುಟದಿಂದ...


‘ಜೋರು ಮಳೆಯಿಂದ ಹಾನಿಗೆ ಒಳಗಾಗಿರುವ ಮತ್ತು ಪ್ರವಾಹ ಪೀಡಿತ ಪ್ರದೇಶಗಳಲ್ಲಿನ ಪರಿಸ್ಥಿತಿಯನ್ನು ಉಸ್ತುವಾರಿ ಸಚಿವರು ಹಾಗೂ ಉಸ್ತುವಾರಿ ಕಾರ್ಯದರ್ಶಿಗಳು ಸಮಗ್ರವಾಗಿ ಅವಲೋಕಿಸಬೇಕು. ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಈ ಬಗ್ಗೆ ಕಟ್ಟೆಚ್ಚರ ಮತ್ತು ತೀವ್ರ ನಿಗಾ ವಹಿಸಿ ಪರಿಹಾರ ಕಾರ್ಯಗಳನ್ನು ಸಮರೋಪಾದಿಯಲ್ಲಿ ನಿರ್ವಹಿಸಬೇಕು’ ಎಂದು ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.

₹973.51 ಕೋಟಿ ಲಭ್ಯ: ಮಳೆಯಿಂದಾಗಿ ರಾಜ್ಯದಾದ್ಯಂತ ಸೋಮವಾರದವರೆಗೆ (ಮೇ 26) 45 ಮನೆಗಳಿಗೆ ಸಂಪೂರ್ಣವಾಗಿ ಹಾನಿಯಾಗಿದೆ. 1,385 ಮನೆಗಳಿಗೆ ಭಾಗಶಃ ಹಾನಿಯಾಗಿದೆ. ಮನೆ ಕಳೆದುಕೊಂಡವರ ಪೈಕಿ ಶೇಕಡಾ 99 ರಷ್ಟು ಕುಟುಂಬಗಳಿಗೆ ಆರ್ಥಿಕ ಸಹಾಯಧನ ನೀಡಲಾಗಿದೆ. ವಿಪತ್ತು ನಿರ್ವಹಣೆಗಾಗಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಪಿ.ಡಿ ಖಾತೆಯಲ್ಲಿ ಒಟ್ಟು ₹973.51 ಕೋಟಿ ಅನುದಾನ ಲಭ್ಯವಿದೆ ಎಂದು ಅವರು ಮಾಹಿತಿ ನೀಡಿದರು.

ನಿಧನ ವಾರ್ತೆ

ಹೈಕೋರ್ಟ್ ವಕೀಲ ಕೆ.ಎನ್. ಪುಟ್ಟೇಗೌಡ

ಬೆಂಗಳೂರು: ‘ಬೆಂಗಳೂರು ವಕೀಲರ ಸಂಘ’ದ ಮಾಜಿ ಅಧ್ಯಕ್ಷ ಹೈಕೋರ್ಟ್‌ನ ಹಿರಿಯ ವಕೀಲ ಕೆ.ಎನ್. ಪುಟ್ಟೇಗೌಡ ಬುಧವಾರ ಬೆಳಗಿನ ಜಾವ ನಿಧನರಾದರು.



ಪುಟ್ಟೇಗೌಡ

ಅವರಿಗೆ 71 ವರ್ಷವಾಗಿತ್ತು. ಮೃತರಿಗೆ ಪತ್ನಿ ಮತ್ತು ಇಬ್ಬರು ಹೆಣ್ಣು ಮಕ್ಕಳು (ಇಬ್ಬರೂ ವಕೀಲರು) ಇದ್ದಾರೆ.

ಪುಟ್ಟೇಗೌಡ ಅವರು ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕು ಬೆಳ್ಳೂರು ಹೋಬಳಿಯ ಕಂಚನ-ಹಳ್ಳಿಯಲ್ಲಿ ಕೃಷಿಕ ಕುಟುಂಬದಲ್ಲಿ ಜನಿಸಿದ್ದರು.

ಪ್ರಾಥಮಿಕ, ಪ್ರೌಢ ಶಿಕ್ಷಣವನ್ನು ಆದಿಚುಂಚನಗಿರಿ ವಿದ್ಯಾಸಂಸ್ಥೆಯಲ್ಲಿ ಮತ್ತು ಕಾನೂನು ಪದವಿಯನ್ನು ಬೆಂಗಳೂರಿನ ವಿಶ್ವವಿದ್ಯಾಲಯ ಕಾನೂನು ಕಾಲೇಜಿನಲ್ಲಿ ಅಭ್ಯಾಸ ಮಾಡಿದ್ದರು.

ಬಿ.ಎಂ.ದಯಾನಂದ ಅವರ ಬಳಿ ಕಿರಿಯ ವಕೀಲರಾಗಿ ವೃತ್ತಿ ಪ್ರವೇಶಿಸಿದ್ದ ಅವರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಪರ ಹೈಕೋರ್ಟ್ ವಕೀಲರಾಗಿ ಮೂರೂವರೆ ದಶಕಗಳಿಗೂ ಹೆಚ್ಚಿನ ಕಾಲ ಕೆಲಸ ಮಾಡಿದ್ದಾರೆ.

ಈ ಅವಧಿಯಲ್ಲಿ ಅವರು ಬಿಬಿಎಂಪಿಯ ನೂರಾರು ಕೋಟಿ ರೂಪಾಯಿ ಮೌಲ್ಯದ ಸ್ಥಿರಾಸ್ತಿ ಖಾಸಗಿಯವರಿಗೆ ಪರಭಾರೆ ಆಗದಂತೆ ಕಾನೂನು ಹೋರಾಟ ನಡೆಸಿದ್ದರು.

ಅವರ ದೇಹವನ್ನು ಆದಿಚುಂಚನಗಿರಿ ವೈದ್ಯಕೀಯ ಕಾಲೇಜಿಗೆ ದಾನ ಮಾಡಲಾಯಿತು.

ಸಂಕ್ಷಿಪ್ತ ಸುದ್ದಿ

ಬಳ್ಳಾರಿ: ಕೈದಿಗಳ ರಂಪಾಟ

ಬಳ್ಳಾರಿ: ಶಿವಮೊಗ್ಗದಲ್ಲಿ ನಡೆದಿದ್ದ ಬಜರಂಗ ದಳ ಕಾರ್ಯಕರ್ತ ಹರ್ಷ ಹತ್ಯೆ ಪ್ರಕರಣದ ಆರೋಪಿಗಳಾದ ಜಿಲಾನ್ ಮತ್ತು ಸೈಯ್ಯದ್ ನಿಹಾಲ್, ಬಳ್ಳಾರಿಯ ಕೇಂದ್ರ ಕಾರಾಗೃಹದಲ್ಲಿ ಸಿಬ್ಬಂದಿಯೊಂದಿಗೆ ರಂಪಾಟ ನಡೆಸಿದ್ದಾರೆ.

ಕಲಬುರಗಿ ಕಾರಾಗೃಹದಲ್ಲಿದ್ದ ಜಿಲಾನ್ ಅಲ್ಲಿ ಅವ್ಯವಸ್ಥೆ ಬಗ್ಗೆ ದೂರು ಹೇಳಿ, ಧಾರವಾಡ ಕಾರಾಗೃಹಕ್ಕೆ ವರ್ಗಾವಣೆ ಪಡೆದಿದ್ದ. ಅಲ್ಲಿಯೂ ಸಮಸ್ಯೆ ಇರುವ ಬಗ್ಗೆ ದೂರಿದಾಗ, ಆತನನ್ನು ನ್ಯಾಯಾಲಯವು ಬಳ್ಳಾರಿ ಕಾರಾಗೃಹಕ್ಕೆ ವರ್ಗಾಯಿಸಿತ್ತು. ಅಲ್ಲಿ ಇದೇ ಪ್ರಕರಣದ ಮತ್ತೊಬ್ಬ ಆರೋಪಿ ಸೈಯ್ಯದ್ ನಿಹಾಲ್ ಜೊತೆ ಸೇರಿ ಕಾರಾಗೃಹದ ಅವ್ಯವಸ್ಥೆ ಬಗ್ಗೆ ದೂರತೊಡಗಿದ. ‘ನಮ್ಮನ್ನು ಪ್ರತ್ಯೇಕವಾಗಿಸುವ ಬದಲು ಸಾಮಾನ್ಯ ಕೈದಿಗಳ ಜೊತೆ ಇರಲು ಬಿಡಬೇಕು’ ಎಂದು ಒತ್ತಾಯಿಸಿ ಇಬ್ಬರೂ ಅಲ್ಲಿನ ಜೈಲು ಸಿಬ್ಬಂದಿ ಜೊತೆ ಜಗಳವಾಡಿದ್ದಾರೆ.

‘ಎರಡು ದಿನಗಳ ಹಿಂದೆ ಇಬ್ಬರೂ ತಕರಾರು ತೆಗೆದು ಗಲಾಟೆ ಮಾಡಿದ್ದಾರೆ. ಇಬ್ಬರಿಗೂ ಎಚ್ಚರಿಕೆ ನೀಡಿ ಪ್ರತ್ಯೇಕವಾಗಿ ಇರಿಸಲಾಗಿದೆ’ ಎಂದು ಬಳ್ಳಾರಿ ಕೇಂದ್ರ ಕಾರಾಗೃಹದ ಅಧೀಕ್ಷಕಿ ಲತಾ ‘ಪ್ರಜಾವಾಣಿ’ಗೆ ತಿಳಿಸಿದರು.

ಹಸುಳೆ ಮಾರಾಟ ಮೂವರ ಬಂಧನ

ನರಸಿಂಹರಾಜಪುರ (ಚಿಕ್ಕಮಗಳೂರು): ಹೆರಿಗೆಯಾಗಿ ಎರಡು ದಿನಗಳಲ್ಲಿ ಮಗುವನ್ನು ₹1 ಲಕ್ಷಕ್ಕೆ ಮಾರಾಟ ಮಾಡಿದ ದಂಪತಿ ಹಾಗೂ ಮಧ್ಯವರ್ತಿ ಮಹಿಳೆ ಸೇರಿ ಮೂವರನ್ನು ಪೊಲೀಸರು ಬಂಧಿಸಿದ್ದಾರೆ.



ಕುಸುಮಾ

ತಾಲ್ಲೂಕಿನ ಕಾನೂರು ಗ್ರಾಮ ಪಂಚಾಯಿತಿಯ ಹರಾವರಿ ಗ್ರಾಮದ ರತ್ನಾ– ಸದಾನಂದ ದಂಪತಿ ಹಾಗೂ ಕೊಪ್ಪದ ನಿವೃತ್ತ ಶುಶ್ರೂಷಕಿ ಕುಸುಮಾ ಬಂಧಿತ ಆರೋಪಿಗಳು.



ಸದಾನಂದ



ರತ್ನಾ

ಘಟನೆ ವಿವರ: ಹೆರಿಗೆಗಾಗಿ ಕೊಪ್ಪ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿದ್ದ ರತ್ನಾ ಎಂಬವರು ಮೇ 22ರಂದು ಹೆಣ್ಣು ಮಗುವಿಗೆ ಜನ್ಮ ನೀಡಿದ್ದರು. ಈ ಮೊದಲೇ ಮಾಡಿಕೊಂಡ ₹1 ಲಕ್ಷ ಹಣದ ಒಪ್ಪಂದದಂತೆ, ಮುಂಗಡ ಹಣ ಪಡೆದು, ನಿವೃತ್ತ ಶುಶ್ರೂಷಕಿ ಕುಸುಮಾ ಮೂಲಕ ಕಾರ್ಕಳದ ರಾಘವೇಂದ್ರ ಎಂಬವರಿಗೆ ಮಗು ಮಾರಾಟ ಮಾಡಿದ್ದರು.

ಮಾಹಿತಿ ತಿಳಿದ ನರಸಿಂಹರಾಜಪುರ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ನಿರಂಜನಗೌಡ ಹಾಗೂ ಸಿಬ್ಬಂದಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಆರೋಗ್ಯ ಇಲಾಖೆ ಸಿಬ್ಬಂದಿ ಕಾರ್ಕಳಕ್ಕೆ ತೆರಳಿ ಮಗು ಸುರಕ್ಷಿತವಾಗಿ ತಂದು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗೆ ಒಪ್ಪಿಸಿದ್ದಾರೆ.

ಮಗು ಪಡೆದಿದ್ದ ರಾಘವೇಂದ್ರ ಎಂಬಾತ ಶುಶ್ರೂಷಕಿ ಕುಸುಮಾ ಅವರ ಸಹೋದರ. ತಮಗೆ ಮಕ್ಕಳು ಇಲ್ಲದ ಕಾರಣ ಸಾಕಲು ಮಗು ಪಡೆದಿರುವುದಾಗಿ ರಾಘವೇಂದ್ರ ತನಿಖೆ ವೇಳೆ ಒಪ್ಪಿಕೊಂಡಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ನರಸಿಂಹರಾಜಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೆಸಗರಹಳ್ಳಿ ರಾಮಣ್ಣ ಕಥಾ ಸಂಕಲನ ಪ್ರಶಸ್ತಿಗೆ ‘ಸರ್ವೆ ನಂಬರ್ 97’ ಆಯ್ಕೆ

ಮಂಡ್ಯ: ‘ಬೆಸಗರಹಳ್ಳಿ ರಾಮಣ್ಣ ವಾರ್ಷಿಕ ಕಥಾ ಸಂಕಲನ ಪ್ರಶಸ್ತಿ–2024’ಕ್ಕೆ ಯುವ ಕಥೆಗಾರ ಅನಿಲ್ ಗುನ್ನಾಪೂರ ಅವರ ‘ಸರ್ವೆ ನಂಬರ್ 97’ ಕಥಾ ಸಂಕಲನ ಆಯ್ಕೆಯಾಗಿದೆ.

ಪ್ರಶಸ್ತಿಯು ₹25 ಸಾವಿರ ನಗದು ಬಹುಮಾನ, ಫಲಕವನ್ನು ಒಳಗೊಂಡಿದೆ. ಜೂನ್ ಮೂರನೇ ವಾರದಲ್ಲಿ ಮಂಡ್ಯದಲ್ಲಿ ಪ್ರದಾನ ಮಾಡಲಾಗುವುದು. ಸ್ಪರ್ಧೆಗೆ ಒಟ್ಟು 48 ಕೃತಿಗಳು ಬಂದಿದ್ದವು. ಗೀತಾ ವಸಂತ, ಅಶೋಕ್ ಕುಮಾರ್ ರಂಜರೆ ಮತ್ತು ಕೆ.ಪುಟ್ಟಸ್ವಾಮಿ ತೀರ್ಪುಗಾರರ ಸಮಿತಿಯು ಈ ಕೃತಿಯನ್ನು ಆಯ್ಕೆ ಮಾಡಿದೆ ಎಂದು ಬೆಸಗರಹಳ್ಳಿ ರಾಮಣ್ಣ ಪ್ರತಿಷ್ಠಾನದ ಅಧ್ಯಕ್ಷೆ ಎಚ್.ಆರ್. ಸುಜಾತಾ ತಿಳಿಸಿದ್ದಾರೆ.



ಅನಿಲ್

ಸ್ನೇಹಿತರಿಂದಲೇ ಕೊಲೆ; ದೂರು

ಕೊಳ್ಳೇಗಾಲ (ಚಾಮರಾಜನಗರ ಜಿಲ್ಲೆ): ತಾಲ್ಲೂಕಿನ ಶಿವನಸಮುದ್ರದ ದರ್ಗಾ ಹಿಂಭಾಗದ ಕಾವೇರಿ ನದಿಯಲ್ಲಿ ಮಂಗಳವಾರ ಈಜಲು ಹೋಗಿ ಮೃತಪಟ್ಟ ವಿದ್ಯಾರ್ಥಿ ನಂದನ್ ಸಾವಿನ ಬಗ್ಗೆ ಪೋಷಕರು ಅನುಮಾನ ವ್ಯಕ್ತಪಡಿಸಿದ್ದು, ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಮಗನ ಸಾವು ಸಹಜವಲ್ಲ. ಚತುರ್, ತುಷಾರ್, ಪವನ್, ಪ್ರಫುಲ್ಲ, ತನ್ಮೈ, ರಜತ್ ಸೇರಿ ಭರಚುಕ್ಕಿಗೆ ಕರೆದೊಯ್ದು ರ‍್ಯಾಗಿಂಗ್ ಮಾಡಿದ್ದಾರೆ. ಬಟ್ಟೆ ಬಿಚ್ಚಿಸಿ ನೀರಿನಲ್ಲಿ ಕೊಲೆ ಮಾಡಿದ್ದಾರೆ’ ಎಂದು ನಂದನ್ ತಂದೆ ಡಾ.ಶಿವಶಂಕರ್ ದೂರು ನೀಡಿದ್ದು, ಪೊಲೀಸರು ತನಿಖೆ ನಡೆಸುತ್ತಿದ್ದಾರೆ.


ಎಚ್‌ಎಎಲ್ ಠಾಣೆ ಪೊಲೀಸರಿಂದ ₹50 ಲಕ್ಷ ಮೌಲ್ಯದ 550 ಗ್ರಾಂ ಚಿನ್ನಾಭರಣ ಜಪ್ತಿ

ಮೂವರು ಅಂತರರಾಜ್ಯ ಕಳ್ಳರ ಬಂಧನ

ಪ್ರಜಾವಾಣಿ ವಾರ್ತೆ


ದಿನಕರನ್


ರಘುರಾಮ್


ಆರ್ಮುಗಮ್

ಬೆಂಗಳೂರು: ಬೀಗ ಹಾಕಿರುವ ಮನೆಗಳನ್ನು ಗುರಿಯಾಗಿಸಿ ಕಾರಿನ ಜಾಕ್‌ನಿಂದ ಕಿಟಕಿ ಮೀಟಿ ಚಿನ್ನ ಹಾಗೂ ನಗದು ಕಳ್ಳತನ ಮಾಡುತ್ತಿದ್ದ ಇಬ್ಬರು ಅಂತರರಾಜ್ಯ ಕಳ್ಳರು ಹಾಗೂ ಕದ್ದ ವಸ್ತುಗಳನ್ನು ಖರೀದಿಸುತ್ತಿದ್ದ ವ್ಯಕ್ತಿಯನ್ನು ಎಚ್‌ಎಎಲ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ತಮಿಳುನಾಡಿನ ದಿನಕರನ್ (38) ರಘುರಾಮ್ (28) ಹಾಗೂ ಆರೋಪಿಗಳಿಂದ ಚಿನ್ನವನ್ನು ಖರೀದಿಸುತ್ತಿದ್ದ ಆರ್ಮುಗಮ್ (58) ಎಂಬುವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಬಂಧಿತರಿಂದ ₹50 ಲಕ್ಷ ಮೌಲ್ಯದ 550 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಎಚ್‌ಎಎಲ್‌ನ ಎಇಸಿಎಸ್ ಬಡಾವಣೆಯ ನಿವಾಸಿ ಕಮಲ್‌ಚರಣ್ ಪೀಠೋಪಕರಣ ಅಂಗಡಿ ನಡೆಸುತ್ತಿದ್ದಾರೆ. ಮಾರ್ಚ್ 4ರಂದು ಕುಟುಂಬ ಸಮೇತ ಚೆನ್ನೈಗೆ ಹೋಗಿದ್ದರು. ಆರೋಪಿಗಳು, ಇವರ ಮನೆಯ ಕಿಟಕಿಯ ಗ್ರಿಲ್ ಮುರಿದು ಒಳನುಗ್ಗಿ ಬೀರುವಿನಲ್ಲಿದ್ದ ₹3 ಲಕ್ಷ ನಗದು ಹಾಗೂ ಚಿನ್ನಾಭರಣ ಕದ್ದು ಪರಾರಿ ಆಗಿದ್ದರು. ಕಮಲ್‌ಚರಣ್ ಅವರು ವಾಪಸ್ ಬಂದು ನೋಡಿದಾಗ ಕಳ್ಳತನ ನಡೆದಿರುವುದು ಗೊತ್ತಾಗಿತ್ತು.

ಕಮಲ್‌ಚರಣ್ ಅವರು ನೀಡಿದ ದೂರಿನ ಮೇರೆಗೆ ತನಿಖೆ ನಡೆಸಿ ಶಿಕಾರಿಪಾಳ್ಯದ ಆಟೊ ನಿಲ್ದಾಣದ ಬಳಿ ಆರೋಪಿ ದಿನಕರ್‌ನನ್ನು ವಶಕ್ಕೆ ಪಡೆದುಕೊಳ್ಳಲಾಯಿತು. ದಿನಕರ್ ನೀಡಿದ ಮಾಹಿತಿ ಆಧರಿಸಿ ಮತ್ತಿಬ್ಬರನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ದಿನಕರ್ ನೀಡಿದ ಮಾಹಿತಿ ಆಧರಿಸಿ ತಮಿಳುನಾಡಿನ ತಿರುವಾಯುರ್‌ನಲ್ಲಿದ್ದ ರಘುರಾಮ್‌ನಿಂದ 278 ಗ್ರಾಂ ಚಿನ್ನಾಭರಣ ಹಾಗೂ ಪುದುಚೇರಿಯ ಆರ್ಮುಗಮ್‌ನಿಂದ 172 ಗ್ರಾಂ ಆಭರಣ ವಶಪಡಿಸಿಕೊಂಡು ಅವರನ್ನೂ ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ದಿನಕರ್ ಹಾಗೂ ರಘುರಾಮ್ ಸ್ನೇಹಿತರು. ದಿನಕರ್ ಕ್ಯಾಬ್ ಚಾಲಕನಾಗಿ ಕೆಲಸ ಮಾಡುತ್ತಿದ್ದ. ಇಬ್ಬರೂ ತಮಿಳುನಾಡಿನ ತಿರುವಾಯುರ್‌ನಿಂದ ಬೆಂಗಳೂರಿಗೆ ಬಸ್‌ನಲ್ಲಿ ಬರುತ್ತಿದ್ದರು. ಹಗಲು ವೇಳೆ ವಿವಿಧೆಡೆ ಸುತ್ತಾಟ ನಡೆಸಿ ಬೀಗ ಹಾಕಿದ ಮನೆಗಳನ್ನು ಗುರುತಿಸುತ್ತಿದ್ದರು. ರಾತ್ರಿ ವೇಳೆ ಕಾರಿನ ಜಾಕ್ ಬಳಸಿ ಮನೆ ಕಿಟಕಿ ಮುರಿಯುತ್ತಿದ್ದರು. ಮನೆಯೊಳಗೆ ನುಗ್ಗಿ ಚಿನ್ನಾಭರಣ ದೋಚಿ ಪರಾರಿ ಆಗುತ್ತಿದ್ದರು. ಬಸ್‌ನಲ್ಲಿ ತಮಿಳುನಾಡಿಗೆ ತೆರಳಿ ಆರ್ಮುಗಮ್‌ಗೆ ನೀಡುತ್ತಿದ್ದರು. ಆತ ನೀಡಿದ ಹಣದಲ್ಲಿ ಮೋಜು- ಮಸ್ತಿ ಮಾಡುತ್ತಿದ್ದರು ಎಂದು ಪೊಲೀಸರು ಹೇಳಿದರು.

ಆರೋಪಿಗಳ ಬಂಧನದಿಂದ ದಿನಕರನ್ ವಿರುದ್ಧ ದಾಖಲಾಗಿದ್ದ ಎಂಟು ಪ್ರಕರಣಗಳು, ರಘುರಾಮ್ ವಿರುದ್ಧ ದಾಖಲಾಗಿದ್ದ ಎರಡು ಪ್ರಕರಣಗಳು ಪತ್ತೆಯಾಗಿವೆ ಎಂದು ಪೊಲೀಸರು ಹೇಳಿದರು.

ದ್ವಿಚಕ್ರ ವಾಹನ ಕಳ್ಳತನ: ಆರೋಪಿ ಸೆರೆ


ಇಮ್ತಿಯಾಜ್

ಬೆಂಗಳೂರು: ಚಿನ್ನಾಭರಣ ಹಾಗೂ ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡುತ್ತಿದ್ದ ಆರೋಪಿ ಇಮ್ತಿಯಾಜ್ ಎಂಬಾತನನ್ನು ಬೇಗೂರು ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಆರೋಪಿಯಿಂದ 53 ಗ್ರಾಂ ಚಿನ್ನಾಭರಣ ಹಾಗೂ ಮೂರು ದ್ವಿಚಕ್ರ ವಾಹನಗಳನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ. ಇವುಗಳ ಮೌಲ್ಯ ₹ 6.50 ಲಕ್ಷ ಎಂದು ಅಂದಾಜಿಸಲಾಗಿದೆ.

ವಿಶ್ವಪ್ರಿಯಾ ಲೇಔಟ್‌ನ ನಿವಾಸಿ ನೀಡಿದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ದೂರುದಾರರು ತಮ್ಮ ಮನೆಗೆ ಬೀಗ ಹಾಕಿಕೊಂಡು ಸಹೋದರನ ಮನೆಗೆ ತೆರಳಿದ್ದರು. ಆ ಸಂದರ್ಭದಲ್ಲಿ ಮನೆಗೆ ಹಾಕಿದ್ದ ಬೀಗವನ್ನು ಒಡೆದು ಆರೋಪಿ ಕಳ್ಳತನ ಮಾಡಿದ್ದ. ಮನೆಯ ಮಾಲೀಕರು ನೀಡಿದ ದೂರು ಆಧರಿಸಿ ಪರಪ್ಪನ ಅಗ್ರಹಾರ ಬಾಷ್ ಕಂಪನಿಯ ಬಳಿ ಆರೋಪಿಯನ್ನು ವಶಕ್ಕೆ ಪಡೆದು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಆರೋಪಿ ಇಮ್ತಿಯಾಜ್, ಬಾಲಕನೊಂದಿಗೆ ಸೇರಿಕೊಂಡು ಮಡಿವಾಳ, ಬೇಗೂರು ಹಾಗೂ ಹುಳಿಮಾವು ಪೊಲೀಸ್ ಠಾಣಾ ವ್ಯಾಪ್ತಿಯ ಕೆಲವು ಮನೆಗಳಲ್ಲಿ ಕಳ್ಳತನ ಮಾಡಿದ್ದ ಎಂದು ಪೊಲೀಸರು ಹೇಳಿದರು.


ಸುದ್ದಿ 2 ನಿಮಿಷ

ತಲೆಮರೆಸಿಕೊಂಡಿದ್ದ ಪಶ್ಚಿಮ ಬಂಗಾಳದ ಆರೋಪಿ ಸೆರೆ

ಬೆಂಗಳೂರು: ಪಶ್ಚಿಮ ಬಂಗಾಳದಲ್ಲಿ 2024ರ ಆಗಸ್ಟ್ 28ರಂದು ನಡೆದಿದ್ದ ಗುಂಪು ಘರ್ಷಣೆ ವೇಳೆ, ಅಲ್ಲಿನ ಬಿಜೆಪಿ ಮುಖಂಡ ಪ್ರಿಯಾಂಗು ಪಾಂಡೆ ಅವರ ಮೇಲೆ ಹಲ್ಲೆ ನಡೆಸಿ ತಲೆಮರೆಸಿಕೊಂಡಿದ್ದ ಪ್ರಮುಖ ಆರೋಪಿ ಮೋಹಿತ್ ಮಹಾಥೊ ಅಲಿಯಾಸ್ ಸಾಹಿಲ್ ಎಂಬಾತನನ್ನು ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಅಧಿಕಾರಿಗಳು, ನಗರದಲ್ಲಿ ಬುಧವಾರ ಬಂಧಿಸಿದ್ದಾರೆ.

ಖಚಿತ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿ ಬಂಧಿಸಲಾಯಿತು. ಮೊಬೈಲ್ ಸೇರಿ ವಿವಿಧ ವಸ್ತುಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ. ತನಿಖೆ ಮುಂದುವರಿದಿದೆ ಎಂದು ಎನ್‌ಐಎ ತಿಳಿಸಿದೆ.

ಮಾಜಿ



ಸಂಸದ ಅರ್ಜುನ್ ಸಿಂಗ್ ಅವರ ನಿವಾಸಕ್ಕೆ ಪ್ರಿಯಾಂಗು ಪಾಂಡೆ ಮತ್ತು ಅವರ ಬೆಂಬಲಿಗರು ತೆರಳುತ್ತಿದ್ದ ವೇಳೆ ಗುಂಪೊಂದು ಹಲ್ಲೆ ಮಾಡಿತ್ತು. ಈ ಪ್ರಕರಣದಲ್ಲಿ ಇದುವರೆಗೂ 17 ಆರೋಪಿಗಳನ್ನು ಬಂಧಿಸಲಾಗಿದೆ.

ಆರಂಭದಲ್ಲಿ ಪ್ರಕರಣದ ತನಿಖೆಯನ್ನು ಪಶ್ಚಿಮ ಬಂಗಾಳದ ಸ್ಥಳೀಯ ಪೊಲೀಸರೇ ನಡೆಸಿ 12 ಮಂದಿಯನ್ನು ಬಂಧಿಸಿದ್ದರು. ನಂತರ ಪ್ರಕರಣವನ್ನು ಕಳೆದ ನವೆಂಬರ್‌ನಲ್ಲಿ ಎನ್‌ಐಎಗೆ ವರ್ಗಾಯಿಸಲಾಗಿತ್ತು. ಎನ್‌ಐಎ ಅಧಿಕಾರಿಗಳು ಐವರನ್ನು ಬಂಧಿಸಿದ್ದರು.

‘ಪ್ರಕರಣದಲ್ಲಿ ಪಶ್ಚಿಮ ಬಂಗಾಳದ ನಿವಾಸಿ ಸಾಹಿಲ್‌ನ ಪಿತೂರಿ ಇರುವುದು ತನಿಖೆಯಿಂದ ಗೊತ್ತಾಗಿತ್ತು. ಆತನನ್ನು ಬುಧವಾರ ಬೆಳಿಗ್ಗೆ ಬೆಂಗಳೂರಿನ ಸ್ಥಳವೊಂದರಲ್ಲಿ ವಶಕ್ಕೆ ಪಡೆದು ಬಂಧಿಸಲಾಯಿತು. ಪ್ರಕರಣದಲ್ಲಿ ಇದುವರೆಗೂ 14 ಆರೋಪಿಗಳ ವಿರುದ್ಧ ಎನ್‌ಐಎ ನ್ಯಾಯಾಲಯಕ್ಕೆ ಮೂರು ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ’ ಎಂದು ಎನ್‌ಐಎ ಹೇಳಿದೆ.

ದಟ್ಟಣೆ ರಸ್ತೆಗಳಲ್ಲಿ ಟೋಯಿಂಗ್

ಬೆಂಗಳೂರು: ‘ಸಂಚಾರ ನಿಯಮ ಉಲ್ಲಂಘಿಸಿದ ವಾಹನಗಳನ್ನು ಟೋಯಿಂಗ್ ಮಾಡುವ ಸಂಬಂಧ ನಿಯಮಾವಳಿ ರೂಪಿಸಲಾಗುತ್ತಿದೆ. ಸಂಚಾರ ದಟ್ಟಣೆ ಹೆಚ್ಚಿರುವ ರಸ್ತೆಗಳಲ್ಲಿ ಟೋಯಿಂಗ್ ಜಾರಿ ಆಗಲಿದೆ’ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಹೇಳಿದರು.

ನಗರದಲ್ಲಿ ಟೋಯಿಂಗ್ ಮರು ಜಾರಿ ಮಾಡುವ ಸಂಬಂಧ ಸರ್ಕಾರದ ಮಟ್ಟದಲ್ಲಿ ಚರ್ಚೆಯಾಗಿದೆ. ಟೋಯಿಂಗ್‌ಗೆ ಇಲಾಖೆ ವಾಹನಗಳನ್ನೇ ಬಳಸಬೇಕಾ ಅಥವಾ ಹೊಸ ವಾಹನ ಖರೀದಿಸಿ ಟೋಯಿಂಗ್ ಮಾಡಬೇಕಾ ಎಂಬುದು ಇನ್ನೂ ತೀರ್ಮಾನವಾಗಿಲ್ಲ. ಶೀಘ್ರದಲ್ಲೇ ಅದರ ರೂಪುರೇಷೆಗಳು ಸಿದ್ಧವಾಗಲಿದೆ. ಟೋಯಿಂಗ್ ಜಾರಿ ದಿನಾಂಕ ಇನ್ನೂ ನಿಗದಿ ಆಗಿಲ್ಲ ಎಂದು ತಿಳಿಸಿದರು.

ಮೂರು ಪತ್ನಿಯರು, 9 ಮಕ್ಕಳಿದ್ದ ಕುಟುಂಬ ಸಾಕಲು ಕಳ್ಳತನ

ಆರೋಪಿ ಬಂಧಿಸಿದ ಎಲೆಕ್ಟ್ರಾನಿಕ್ ಸಿಟಿ ಠಾಣೆಯ ಪೊಲೀಸರು • ₹16.50 ಲಕ್ಷ ಮೊತ್ತದ ನಗ–ನಗದು ವಶ

ಪ್ರಜಾವಾಣಿ ವಾರ್ತೆ


ಬಾಬಾಜಾನ್

ಬೆಂಗಳೂರು: ಮೂವರು ಪತ್ನಿಯರು, ಒಂಬತ್ತು ಮಕ್ಕಳಿದ್ದ ಸಂಸಾರ ಸಾಗಿಸಲು ಮನೆಗೆ ನುಗ್ಗಿ ಚಿನ್ನಾಭರಣ ಹಾಗೂ ನಗದು ದೋಚಿ ಪರಾರಿಯಾಗುತ್ತಿದ್ದ ಆರೋಪಿಯನ್ನು ಎಲೆಕ್ಟ್ರಾನಿಕ್ ಸಿಟಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಠಾಣಾ ವ್ಯಾಪ್ತಿಯ ಶಿಕಾರಿಪಾಳ್ಯದ ಬಾಬಾಜಾನ್ (36) ಬಂಧಿತ ಆರೋಪಿ. ಆರೋಪಿ ತನ್ನ 16 ವರ್ಷದ ಮಗನ ಜೊತೆಗೆ ಸೇರಿಕೊಂಡು ಕಳ್ಳತನ ಮಾಡುತ್ತಿದ್ದ ಎಂದು ಪೊಲೀಸರು ಹೇಳಿದರು.

ಆರೋಪಿಯಿಂದ 188 ಗ್ರಾಂ ಚಿನ್ನಾಭರಣ, 550 ಗ್ರಾಂ ಬೆಳ್ಳಿಯ ವಸ್ತುಗಳು, ₹1,500 ನಗದು ವಶಕ್ಕೆ ಪಡೆದುಕೊಳ್ಳಲಾಗಿದೆ. ಒಟ್ಟು ಮೌಲ್ಯ ₹16.50 ಲಕ್ಷ ಎಂದು ಅಂದಾಜಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಠಾಣಾ ವ್ಯಾಪ್ತಿಯ ಬೆಟ್ಟದಾಸಪುರದ ನಿವಾಸಿಯೊಬ್ಬರು ನೀಡಿದ ದೂರು ಆಧರಿಸಿ ಆರೋಪಿಯನ್ನು ಪತ್ತೆ ಹಚ್ಚಲಾಯಿತು.

ದೂರುದಾರರು ತಮ್ಮ ಮನೆಯ ಮಹಡಿಯಲ್ಲಿ ಬಟ್ಟೆ ಒಣಗಿಸಲು ತೆರಳಿದ್ದಾಗ, ಆರೋಪಿ ಮನೆಗೆ ನುಗ್ಗಿ ಚಿನ್ನ, ಬೆಳ್ಳಿಯ ವಸ್ತು ಹಾಗೂ ನಗದು ಕಳ್ಳತನ ಮಾಡಿಕೊಂಡು ಬಟ್ಟೆಯಲ್ಲಿ ಬಚ್ಚಿಟ್ಟುಕೊಂಡು ಪರಾರಿ ಆಗಿದ್ದ ಎಂದು ಮೂಲಗಳು ತಿಳಿಸಿವೆ.

ಬಾಬಾಜಾನ್ ಬಂಧನದಿಂದ 9 ಪ್ರಕರಣ ಪತ್ತೆ

‘ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟದ ನಿವಾಸಿ ಬಾಬಾಜಾನ್, ಶಿಕಾರಿಪಾಳ್ಯದಲ್ಲಿ ಬಾಡಿಗೆ ಮನೆಯಲ್ಲಿ ನೆಲಸಿದ್ದ. ಆರೋಪಿ ಮೂವರು ಮಹಿಳೆಯರನ್ನು ಮದುವೆ ಆಗಿದ್ದ. ಒಂಬತ್ತು ಮಕ್ಕಳಿದ್ದಾರೆ. ಮೊದಲ ಪತ್ನಿ ಶ್ರೀರಂಗಪಟ್ಟಣ, ಎರಡನೇ ಪತ್ನಿ ಶಿಕಾರಿಪಾಳ್ಯ ಹಾಗೂ ಮೂರನೇ ಪತ್ನಿ ಶಿಡ್ಲಘಟ್ಟದವರು. ಮೈಲಸಂದ್ರದ ಬಳಿ ಅನುಮಾನಸ್ಪದವಾಗಿ ಓಡಾಟ ನಡೆಸುತ್ತಿದ್ದ ಆರೋಪಿಯನ್ನು ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸಿದಾಗ ಕೃತ್ಯ ಎಸಗಿರುವುದನ್ನು ಒಪ್ಪಿಕೊಂಡಿದ್ದಾನೆ’ ಎಂದು ಮೂಲಗಳು ತಿಳಿಸಿವೆ.

‘ಒಂಬತ್ತು ಮಕ್ಕಳಿದ್ದ ಕಾರಣಕ್ಕೆ ಸಂಸಾರ ಸಾಗಿಸುವುದು ಕಷ್ಟವಾಗಿತ್ತು. ಹೀಗಾಗಿ ಕಳ್ಳತನ ಮಾಡುತ್ತಿದ್ದೆ. ಬೀಗ ಹಾಕಿದ ಮನೆಗಳನ್ನು ಗುರುತಿಸಿ, 16 ವರ್ಷದ ಮಗನ ಜೊತೆಗೆ ಸೇರಿಕೊಂಡು ಹಣ ಚಿನ್ನಾಭರಣ ಕಳ್ಳತನ ಮಾಡುತ್ತಿದ್ದೆ ಎಂಬುದಾಗಿ ಆರೋಪಿ ಒಪ್ಪಿಕೊಂಡಿದ್ದಾನೆ. ಆರೋಪಿಯನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಿ ಪರಪ್ಪನ ಅಗ್ರಹಾರ ಜೈಲಿಗೆ ಕಳುಹಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ಆರೋಪಿ ಬಂಧನದಿಂದ ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ಠಾಣೆಯಲ್ಲಿ ಏಳು, ಹೆಬ್ಬಗೋಡಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಎರಡು ಮನೆ ಕಳ್ಳತನ ಪ್ರಕರಣಗಳು ಪತ್ತೆಯಾಗಿವೆ ಎಂದು ಪೊಲೀಸರು ಹೇಳಿದರು.

ಆಗ್ನೇಯ ವಿಭಾಗದ ಡಿಸಿಪಿ ಸಾರಾ ಫಾತಿಮಾ ಹಾಗೂ ಎಲೆಕ್ಟ್ರಾನಿಕ್ ಸಿಟಿ ಉಪ ವಿಭಾಗದ ಎಸಿಪಿ ಕೆ.ಎಂ. ಸತೀಶ್ ಅವರ ಮಾರ್ಗದರ್ಶನದಲ್ಲಿ ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಜಿ.ಎಂ.ನವೀನ್ ನೇತೃತ್ವದ ತಂಡವು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿತ್ತು.

ಆರೋಪಿ ಬಂಧಿಸಿದ ನಂದಿನಿ ಲೇಔಟ್ ಠಾಣೆಯ ಪೊಲೀಸರು

ಅಜ್ಜಿಯ ಆಭರಣ ದೋಚಿದ್ದ ಮೊಮ್ಮಗ

ಪ್ರಜಾವಾಣಿ ವಾರ್ತೆ


ಮಿಥುನ್

ಬೆಂಗಳೂರು: ಆಟೊ ರಿಕ್ಷಾ ಖರೀದಿಸಲು ಅಜ್ಜಿ ಮನೆಯ ಚಿನ್ನಾಭರಣ ದೋಚಿದ್ದ ಮೊಮ್ಮಗನನ್ನು ನಂದಿನಿ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮಿಥುನ್(23) ಬಂಧಿತ ಆರೋಪಿ. ಆರೋಪಿಯಿಂದ 81 ಗ್ರಾಂ ಚಿನ್ನಾಭರಣ ಹಾಗೂ ₹9.44 ಲಕ್ಷ ನಗದು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ವಿಜಯಾನಂದ ಲೇಔಟ್‌ನ ನಿವಾಸಿ ಪುಟ್ಟಂಜಮ್ಮ ಎಂಬುವರು ನೀಡಿದ ದೂರಿನಂತೆ ಮೇ 6ರಂದು ನಂದಿನಿ ಲೇಔಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ತನಿಖೆ ನಡೆಸಿದಾಗ ಪುಟ್ಟಂಜಮ್ಮ ಅವರ ಮೊಮ್ಮಗನೇ ಕಳ್ಳತನ ಮಾಡಿದ್ದು ಗೊತ್ತಾಯಿತು ಎಂದು ಪೊಲೀಸರು ಹೇಳಿದರು.

‘ಮೇ 1ರಂದು ಪುಟ್ಟಂಜಮ್ಮ ಅವರು ಮನೆಗೆ ಬೀಗ ಹಾಕಿಕೊಂಡು ಅಮೃತ್ತೂರಿನ ಹೊಸಪಾಳ್ಯಕ್ಕೆ ಹಬ್ಬಕ್ಕೆಂದು ಹೋಗಿದ್ದರು. ಮೇ 5ರಂದು ವಾಪಸ್ ಬಂದು ನೋಡಿದಾಗ ಮನೆಯ ಬೀಗ ಒಡೆದು ಬೀರುವಿನಲ್ಲಿದ್ದ ₹10 ಲಕ್ಷ ನಗದು ಹಾಗೂ 125 ಗ್ರಾಂ ಚಿನ್ನಾಭರಣ ಕಳ್ಳತನ ಆಗಿರುವುದು ಗೊತ್ತಾಗಿತ್ತು. ಬಳಿಕ ಪುಟ್ಟಂಜಮ್ಮ ಅವರು ನೀಡಿದ ದೂರು ಆಧರಿಸಿ ತನಿಖೆ ನಡೆಸಿ ಆರೋಪಿಯನ್ನು ಪತ್ತೆ ಹಚ್ಚಲಾಯಿತು’ ಎಂದು ಪೊಲೀಸರು ಹೇಳಿದರು.

‘ಚಾಲಕನಾಗಿದ್ದ ಮಿಥುನ್ ಆಟೊ ರಿಕ್ಷಾ ಕೊಡಿಸುವಂತೆ ಅಜ್ಜಿಯನ್ನು ಕೇಳಿದ್ದ. ಇದಕ್ಕೆ ಪುಟ್ಟಂಜಮ್ಮ ಒಪ್ಪಿರಲಿಲ್ಲ. ಅಜ್ಜಿ ಅಮೃತ್ತೂರಿನ ಹೊಸಪಾಳ್ಯಕ್ಕೆ ಹೋಗಿದ್ದ ಮಾಹಿತಿ ತಿಳಿದು ಮನೆಯ ಬೀಗ ಒಡೆದು ಕಳ್ಳತನ ಮಾಡಿದ್ದ. ಕದ್ದ ಚಿನ್ನವನ್ನು ಮತ್ತಿಕೆರೆಯ ಚಿನ್ನಾಭರಣ ಅಂಗಡಿಗೆ ಮಾರಾಟ ಮಾಡಿದ್ದ. ನಗದನ್ನು ಅಂದ್ರಹಳ್ಳಿಯಲ್ಲಿರುವ ಸ್ನೇಹಿತನ ಮನೆಯಲ್ಲಿ ಇಟ್ಟಿದ್ದ. ನಗದು ಹಾಗೂ ಚಿನ್ನಾಭರಣ ಜಪ್ತಿ ಮಾಡಿಕೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದರು.


ಆರೋಪಿಯಿಂದ ಜಪ್ತಿ ಮಾಡಿಕೊಳ್ಳಲಾದ ನಗದನ್ನು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಪ್ರದರ್ಶಿಸಿದರು

ಅಹಲ್ಯಾಬಾಯಿ ಹೋಳ್ಕರ್ ಜಯಂತ್ಯುತ್ಸವ

ಪ್ರಜಾವಾಣಿ ವಾರ್ತೆ



ಕೆ.ಆರ್.ಪುರ: ‘ಅಹಲ್ಯಾಬಾಯಿ ಹೋಳ್ಕರ್ ಅವರು ಸಾವಿರಾರು ಹಿಂದೂ ದೇವಾಲಯ ಹಾಗೂ ಪುಣ್ಯ ಕ್ಷೇತ್ರಗಳನ್ನು ಪುನರುಜ್ಜೀವನಗೊಳಿಸುವ ಮೂಲಕ ಹಿಂದೂ ಧರ್ಮದ ರಕ್ಷಣೆಗೆ ನಿಂತಿದ್ದರು’ ಎಂದು ಪಾಲಿಕೆ ಮಾಜಿ ಸದಸ್ಯ ಕಲ್ಕೆರೆ ಶ್ರೀನಿವಾಸ್ ಹೇಳಿದರು.

ಕೆ.ಆರ್.ಪುರ ಸಮೀಪದ ಕಲ್ಕೆರೆಯ ವೈಷ್ಣವಿ ಬಡಾವಣೆಯ ಶ್ರೀಭಕ್ತಾಂಜನೇಯ ದೇವಸ್ಥಾನದಲ್ಲಿ ಶ್ರೀ ಅಹಲ್ಯಾಬಾಯಿ ಹೋಳ್ಕರ್ ಅವರ 300ನೇ ಜಯಂತ್ಯುತ್ಸವದ ಅಂಗವಾಗಿ ಜ್ಯೋತಿ ಯಾತ್ರೆಗೆ ಚಾಲನೆ ನೀಡಿ ಮಾತನಾಡಿದರು.

‘ಅಹಲ್ಯಾಬಾಯಿ ಹೋಳ್ಕರ್ ಅವರು ಭಾರತದಲ್ಲಿ ಅನೇಕ ದೇವಾಲಯಗಳನ್ನು ಸ್ಥಾಪನೆ ಮಾಡಿ ಧಾರ್ಮಿಕ ಪ್ರಜ್ಞೆ ಮೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಅನ್ಯ ಧರ್ಮೀಯರಿಂದ ದಾಳಿಗೆ ಒಳಗಾಗಿದ್ದ 12 ಜ್ಯೋತಿರ್ಲಿಂಗಗಳ ಜೀರ್ಣೋದ್ಧಾರ ಮಾಡಿದ ಕೀರ್ತಿ ಅವರಿಗೆ ಸಲ್ಲುತ್ತದೆ’ ಎಂದರು.

ಜಯಂತ್ಯುತ್ಸವದ ಅಂಗವಾಗಿ ಮೇ 31ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ. ಅಹಲ್ಯಾಬಾಯಿ ಹೋಳ್ಕರ್ ಅವರ ಬಗ್ಗೆ ಜನಜಾಗೃತಿ ಮೂಡಿಸುವ ಸಲುವಾಗಿ ಜ್ಯೋತಿ ಯಾತ್ರೆಯನ್ನು ಆಯೋಜಿಸಲಾಗಿದೆ ಎಂದರು.

ಕುರುಬರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಆಗರ ಪ್ರಕಾಶ್, ಪೂರ್ವ ತಾಲ್ಲೂಕು ಅಧ್ಯಕ್ಷ ಎಸ್. ಕೃಷ್ಣಪ್ಪ, ಕೆ.ಪಿ.ಶಂಕರಪ್ಪ, ರಾಮಚಂದ್ರ, ಮೂರ್ತಿ, ವೆಂಕಟರಮಣ, ಎನ್. ಶಂಕರಪ್ಪ, ಕೌದೇನಹಳ್ಳಿ ಗೋಪಾಲ್, ಕಲ್ಕೆರೆ ಸುನೀಲ್, ಮಧುಸೂದನ್, ಗೋವಿಂದಪ್ಪ, ಕೃಷ್ಣಮೂರ್ತಿ, ಕುಮಾರಣ್ಣ ಉಪಸ್ಥಿತರಿದ್ದರು.

ಅಸಭ್ಯತೆ: ಕಾರು ಮಾಲೀಕನಿಗೆ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಲಿಸುತ್ತಿದ್ದ ಕಾರಿನ ಸನ್ ರೂಫ್ ತೆರೆದು, ಎದ್ದು ನಿಂತು ಜೋಡಿಯೊಂದು ಅಸಭ್ಯ ವರ್ತನೆ ತೋರಿದ್ದ ಪ್ರಕರಣದಲ್ಲಿ ಕಾರಿನ ಮಾಲೀಕನಿಗೆ ಸಂಚಾರ ಪೊಲೀಸರು ದಂಡವನ್ನು ವಿಧಿಸಿದ್ದಾರೆ.

ಕಾರಿನ ಮಾಲೀಕನನ್ನು ಪತ್ತೆ ಹಚ್ಚಿದ ಹಲಸೂರು ಸಂಚಾರ ಠಾಣಾ ಪೊಲೀಸರು, ₹1,500 ದಂಡ ವಿಧಿಸಿ, ಎಚ್ಚರಿಕೆ ನೀಡಿ ಕಳುಹಿಸಿದ್ದಾರೆ ಎಂದು ಗೊತ್ತಾಗಿದೆ.

ಮೇ 26ರಂದು ರಾತ್ರಿ 11.30ರ ಸುಮಾರಿಗೆ ಘಟನೆ ನಡೆದಿತ್ತು.

ಕಾರಿನ ಸನ್ ರೂಫ್ ತೆರೆದು ನಿಂತಿದ್ದ ಜೋಡಿ ಅಸಭ್ಯವಾಗಿ ವರ್ತನೆ ತೋರಿದ್ದರು.

ಹಿಂಬದಿ ವಾಹನ ಸವಾರರೊಬ್ಬರು ಮೊಬೈಲ್ ಕ್ಯಾಮೆರಾದಲ್ಲಿ ಈ ದೃಶ್ಯವನ್ನು ಸೆರೆ ಹಿಡಿದಿದ್ದರು. ಆ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ವ್ಯಾಪಕವಾಗಿ ಹರಿದಾಡಿತ್ತು.

ಸಂಚಾರ ನಿಯಮ ಉಲ್ಲಂಘನೆ ಅಡಿ ಪ್ರಕರಣ ದಾಖಲಿಸಿಕೊಂಡು ದಂಡ ಹಾಕಲಾಗಿದೆ. ಸಂಚಾರ ನಿಯಮಗಳನ್ನು ಕಡ್ಡಾಯವಾಗಿ ಪಾಲನೆ ಮಾಡುವಂತೆ ಚಾಲಕನಿಗೆ ಸೂಚನೆ ನೀಡಲಾಗಿದೆ ಎಂದು ಹಲಸೂರು ಸಂಚಾರ ಠಾಣಾ ಪೊಲೀಸರು ‘ಎಕ್ಸ್’ ಖಾತೆಯಲ್ಲಿ ಪೋಸ್ಟ್ ಮಾಡಿದ್ದಾರೆ.

₹3 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ: ವಿದೇಶಿಗ ಸೆರೆ

ಪ್ರಜಾವಾಣಿ ವಾರ್ತೆ


ಪೆಪೆ

ಬೆಂಗಳೂರು: ನಗರದಲ್ಲಿ ಎಂಡಿಎಂಎ ಕ್ರಿಸ್ಟಲ್ ಮಾರಾಟ ಮಾಡುತ್ತಿದ್ದ ವಿದೇಶಿ ಪ್ರಜೆಯನ್ನು ಅಮೃತಹಳ್ಳಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ನೈಜೀರಿಯಾದ ಪೆಪೆ ಬಂಧಿತ ಆರೋಪಿ. ಆರೋಪಿಯಿಂದ ಮೂರು ಕೆ.ಜಿ ಎಂಡಿಎಂಎ ಕ್ರಿಸ್ಟಲ್ ಅನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ. ಇದರ ಮೌಲ್ಯ ₹3 ಕೋಟಿ ಆಗಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಪತ್ರಿಕಾಗೋಷ್ಠಿಯಲ್ಲಿ ಬುಧವಾರ ಮಾಹಿತಿ ನೀಡಿದರು.

ದಾಸರಹಳ್ಳಿಯ ನಾರ್ಥ್‌ಹಿಲ್ಸ್ ಶಾಲೆ ಹಿಂಭಾಗದ ಖಾಲಿ ಪ್ರದೇಶದಲ್ಲಿ ವಿದೇಶಿ ಪ್ರಜೆಯೊಬ್ಬ ಡ್ರಗ್ಸ್ ಮಾರಾಟ ಮಾಡುತ್ತಿದ್ದ ಬಗ್ಗೆ ಖಚಿತ ಮಾಹಿತಿ ಸಿಕ್ಕಿತ್ತು. ಆ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿದಾಗ ಅಪಾರ ಪ್ರಮಾಣದ ಡ್ರಗ್ಸ್ ಪತ್ತೆ ಆಯಿತು. ಆರೋಪಿ ವಿರುದ್ಧ ಮಾದಕ ದ್ರವ್ಯ ನಿಗ್ರಹ ಕಾಯ್ದೆ ಅಡಿ (ಎನ್‌ಡಿಪಿಎಸ್) ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ವಿವರಿಸಿದರು.

ಆರೋಪಿ 2023ರಲ್ಲಿ ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದ. ಎಲ್ಲಿಯೂ ಉತ್ತಮ ಕೆಲಸ ದೊರೆಯದ ಕಾರಣಕ್ಕೆ ಕಡಿಮೆ ಅವಧಿಯಲ್ಲಿ ಹೆಚ್ಚಿನ ಹಣ ಸಂಪಾದನೆ ಆಸೆಯಿಂದ ಡ್ರಗ್ಸ್ ಮಾರಾಟ ದಂಧೆಗೆ ಇಳಿದಿದ್ದ. ಮತ್ತೊಬ್ಬ ವಿದೇಶಿ ಪ್ರಜೆ ಬಾಣಸವಾಡಿಯ ಕಮ್ಮನಹಳ್ಳಿಯಲ್ಲಿ ನೆಲಸಿದ್ದ. ಆತನಿಂದ, ಆರೋಪಿ ಪೆಪೆ ಎಂಡಿಎಂಎ ಕ್ರಿಸ್ಟಲ್ ಅನ್ನು ಖರೀದಿಸಿ ಬಟ್ಟೆ ವ್ಯಾಪಾರ ಮಾಡುವ ನೆಪದಲ್ಲಿ ಡ್ರಗ್ಸ್ ಮಾರಾಟ ಮಾಡುತ್ತಿದ್ದ ಎಂದು ಹೇಳಿದರು.


ಆರೋಪಿಯಿಂದ ಜಪ್ತಿ ಮಾಡಿರುವ ಡ್ರಗ್ಸ್

‘ಕಾಲೇಜು ವಿದ್ಯಾರ್ಥಿಗಳು, ಸಾಫ್ಟ್‌ವೇರ್ ಎಂಜಿನಿಯರ್, ಪೇಯಿಂಗ್ ಗೆಸ್ಟ್ ನಿವಾಸಿಗಳಿಗೆ ಡ್ರಗ್ಸ್ ಮಾರಾಟ ಮಾಡುತ್ತಿದ್ದ’ ಎಂದು ಹೇಳಿದರು.

‘ಆರೋಪಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಲಾಯಿತು. ನ್ಯಾಯಾಧೀಶರು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಆದೇಶಿಸಿದ್ದು, ಪರಪ್ಪನ ಅಗ್ರಹಾರ ಜೈಲಿಗೆ ಕಳುಹಿಸಲಾಗಿದೆ’ ಎಂದು ತಿಳಿಸಿದರು.

ನಗರದಾದ್ಯಂತ ಜೂನ್ 2ರವರೆಗೆ ಕಾರ್ಯಾಚರಣೆ

ಕೋಟ್ಪಾ: 57,130 ಪ್ರಕರಣ, ₹80 ಲಕ್ಷ ದಂಡ

ಪ್ರಜಾವಾಣಿ ವಾರ್ತೆ


ಬಿ.ದಯಾನಂದ

ಬೆಂಗಳೂರು: ವಿಶ್ವ ಧೂಮಪಾನ ನಿಷೇಧ ದಿನದ(ಮೇ 31) ಅಂಗವಾಗಿ ಸಾರ್ವಜನಿಕರ ಆರೋಗ್ಯ ರಕ್ಷಿಸುವ ಹಾಗೂ ತಂಬಾಕು ನಿಯಂತ್ರಣದ ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವ ಉದ್ದೇಶದಿಂದ ಜೂನ್ 2ರವರೆಗೆ ನಗರದಲ್ಲಿ ಅರಿವು ಹಾಗೂ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ತಿಳಿಸಿದರು.

ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುವುದು, ಬಾಲಕರಿಗೆ ತಂಬಾಕು ಮಾರಾಟ ಹಾಗೂ ಶಿಕ್ಷಣ ಸಂಸ್ಥೆಗಳ ಬಳಿ ತಂಬಾಕು ಮಾರಾಟ ಮಾಡುವಂತಹ ಉಲ್ಲಂಘನೆ ಪ್ರಕರಣಗಳ ವಿರುದ್ಧ ಪೊಲೀಸರು ತೀವ್ರ ನಿಗಾ ವಹಿಸಿ ಕಾರ್ಯಾಚರಣೆ ನಡೆಸಲಿದ್ದಾರೆ ಎಂದು ಪತ್ರಿಕಾಗೋಷ್ಠಿಯಲ್ಲಿ ಬುಧವಾರ ತಿಳಿಸಿದರು.

ಪೊಲೀಸ್ ಸಿಬ್ಬಂದಿ, ಬಿಬಿಎಂಪಿ ಮಾರ್ಷಲ್ಸ್ ಹಾಗೂ ಎನ್‌ಜಿಒಗಳ ಸಹಭಾಗಿತ್ವದಲ್ಲಿ ವಿಶೇಷ ಕಾರ್ಯಾಚರಣೆ ನಡೆಸಲಾಗುವುದು ಎಂದು ಅವರು ಹೇಳಿದರು.

ಇ-ಸಿಗರೇಟ್‌ಗಳು, ವೇಪಿಂಗ್ ಸಾಧನಗಳನ್ನು ಒಳಗೊಂಡ ಎಲೆಕ್ಟ್ರಾನಿಕ್ ನಿಕೋಟಿನ್ ಡೆಲಿವರಿ ಸಿಸ್ಟಮ್ಸ್ ನಿಷೇಧದ ಅನುಷ್ಠಾನಕ್ಕೆ ವಿಶೇಷ ಗಮನ ಹರಿಸಲಾಗಿದೆ. ಮಾಲ್‌ಗಳು, ಕಾಫಿ ಬಾರ್‌ಗಳು, ಅಂಗಡಿಗಳಲ್ಲಿ ಅನಿರೀಕ್ಷಿತ ಭೇಟಿಯ ಮೂಲಕ ತಪಾಸಣೆ ನಡೆಸಲಾಗುವುದು. ತಂಬಾಕು ವ್ಯಾಪಾರಿಗಳು ಪರವಾನಗಿ ಹೊಂದಿರುವುದು ಕಡ್ಡಾಯ ಎಂಬ ಜಾಗೃತಿ ಮೂಡಿಸಲಿದ್ದೇವೆ. ಹುಕ್ಕಾ ಬಾರ್‌ಗಳ ವಿರುದ್ಧ ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. ನಗರದಲ್ಲಿ ಇನ್ನೂ ಹುಕ್ಕಾ ಬಾರ್‌ಗಳು ಕಾರ್ಯಾಚರಿಸುತ್ತಿದ್ದರೆ ಮಾಲೀಕರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹೇಳಿದರು.

₹80.8 ಲಕ್ಷ ದಂಡ ಸಂಗ್ರಹ: 2024ರಿಂದ 2025ರ ಏಪ್ರಿಲ್‌ವರೆಗೆ ನಗರದಲ್ಲಿ ಕೋಟ್ಪಾ (ಸಿಗರೇಟ್ ಮತ್ತಿತರ ತಂಬಾಕು ಉತ್ಪನ್ನಗಳ ಕಾಯ್ದೆ) ಅಡಿ 57,130 ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ. ₹80.8 ಲಕ್ಷ ದಂಡ ಸಂಗ್ರಹಿಸಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಮಾಹಿತಿ ನೀಡಿದರು.

ಹಳದಿ ಮಾರ್ಗ: ಕಾಮಗಾರಿ ಪೂರ್ಣಗೊಂಡು ವರ್ಷ ಕಳೆದರೂ ಆರಂಭಗೊಳ್ಳದ ನಮ್ಮ ಮೆಟ್ರೊ ಕಾರ್ಯಾಚರಣೆ

ಜೂನ್ ಬದಲು ಜುಲೈನಲ್ಲಿ ಸಂಚಾರ ಶುರು

• ಬಾಲಕೃಷ್ಣ ಪಿ.ಎಚ್.



ನಮ್ಮ ಮೆಟ್ರೊ ಹಳದಿ ಮಾರ್ಗ



ಐಎಸ್‌ಎ ಪ್ರಮಾಣಪತ್ರಕ್ಕಾಗಿ ಕಾಯುತ್ತಿದ್ದೇವೆ. ಪ್ರಮಾಣಪತ್ರ ಬಂದ ಕೂಡಲೇ ಸುರಕ್ಷತಾ ಆಯೋಗಕ್ಕೆ ಕಳುಹಿಸಲಾಗುವುದು

ಎಂ. ಮಹೇಶ್ವರ ರಾವ್, ವ್ಯವಸ್ಥಾಪಕ ನಿರ್ದೇಶಕ, ಬಿಎಂಆರ್‌ಸಿಎಲ್

ಬೆಂಗಳೂರು: ಸ್ವತಂತ್ರ ಸುರಕ್ಷತಾ ಮೌಲ್ಯಮಾಪನಾ ಪ್ರಮಾಣಪತ್ರ ಇನ್ನೂ ಸಿಗದೇ ಇರುವುದರಿಂದ ನಮ್ಮ ಮೆಟ್ರೊ ಹಳದಿ ಮಾರ್ಗದಲ್ಲಿ ಸಂಚಾರ ಮತ್ತೆ ಮುಂದಕ್ಕೆ ಹೋಗಿದೆ. ಜೂನ್ ಬದಲು ಜುಲೈಯಲ್ಲಿ ಸಂಚಾರ ಪ್ರಾರಂಭಿಸುವ ಗುರಿಯನ್ನು ಬಿಎಂಆರ್‌ಸಿಎಲ್ ಇಟ್ಟುಕೊಂಡಿದೆ.

ಬೊಮ್ಮಸಂದ್ರ–ಆರ್.ವಿ. ರಸ್ತೆ ನಡುವಿನ ಈ ಮಾರ್ಗದಲ್ಲಿ ಹಳಿ ಅಳವಡಿಕೆ, ನಿಲ್ದಾಣ ನಿರ್ಮಾಣ ಕಾಮಗಾರಿಗಳು ವರ್ಷದ ಹಿಂದೆಯೇ ಪೂರ್ಣಗೊಂಡಿತ್ತು. ಚಾಲಕ ರಹಿತ ಎಂಜಿನ್ ಹೊಂದಿರುವ ಪ್ರೊಟೊಟೈಪ್ (ಮೂಲ ಮಾದರಿ) ಮೊದಲ ರೈಲು 2024ರ ಏಪ್ರಿಲ್‌ನಲ್ಲೇ ಬಂದಿತ್ತು. ಅದೇ ರೈಲು ಬಳಸಿಕೊಂಡು ಸುಮಾರು ಮೂರು ತಿಂಗಳು ವಿವಿಧ ತಂತ್ರಜ್ಞರು ಹಳದಿ ಮಾರ್ಗದಲ್ಲಿ ಹಲವು ಪರೀಕ್ಷೆಗಳನ್ನು ನಡೆಸಿದ್ದರು. ಚಾಲಕ ರಹಿತ ಎಂಜಿನ್ ಕೋಚ್‌ನಲ್ಲಿ ಸಂಚರಿಸಿ ಟ್ರ್ಯಾಕ್ಷನ್ ಮತ್ತು ಬ್ರೇಕಿಂಗ್ ಪರೀಕ್ಷೆ ಕೂಡಾ ಮಾಡಿದ್ದರು.

ಬಳಿಕ ಸೆಪ್ಟೆಂಬರ್‌ನಲ್ಲಿ ಸಂಶೋಧನಾ ವಿನ್ಯಾಸ ಮತ್ತು ಗುಣಮಟ್ಟ ಸಂಸ್ಥೆ (ಆರ್‌ಡಿಎಸ್‌ಒ) ಪ್ರಾಯೋಗಿಕ ಸಂಚಾರದ ಮೂಲಕ ಪರೀಕ್ಷೆಗಳನ್ನು ನಡೆಸಿತ್ತು. ರೋಲಿಂಗ್ ಸ್ಟಾಕ್ (ರೈಲು) ತಜ್ಞರು, ಹಳಿ ತಂತ್ರಜ್ಞರು, ಬ್ರೇಕ್ ತಂತ್ರಜ್ಞರು, ವಿವಿಧ ತಾಂತ್ರಿಕ ಪರಿಣಿತರ ತಂಡದ ಸದಸ್ಯರು ಈ ಪರೀಕ್ಷೆಗಳಲ್ಲಿ ಭಾಗವಹಿಸಿದ್ದರು.

ಆದರೆ, ಆನಂತರ ರೈಲುಗಳ ಪೂರೈಕೆಯಾಗದೇ ಅಲ್ಲಿಗೆ ಪ್ರಗತಿ ನಿಂತು ಹೋಗಿತ್ತು. 2025ರ ಜನವರಿಯಲ್ಲಿ ಪ್ರೊಟೊಟೈಪ್ ಎರಡನೇ ರೈಲು, ಮೇ ತಿಂಗಳಲ್ಲಿ ಮೂರನೇ ರೈಲು ಬಂದಿತ್ತು. ಮೂರು ರೈಲುಗಳು ಬಂದ ಮೇಲೆ ಅರ್ಧಗಂಟೆಗೊಮ್ಮೆ ರೈಲು ಓಡಿಸಬಹುದು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದರು. ಇದೀಗ ಮೂರು ರೈಲುಗಳು ಬಂದಿದ್ದರೂ ಸಂಚಾರದ ದಿನ ಮುಂದಕ್ಕೆ ಹೋಗುತ್ತಲೇ ಇದೆ.

'ಇಂಡಿಪೆಂಡೆಂಟ್ ಸೇಫ್ಟಿ ಅಸೆಸ್ಸರ್ (ಐಎಸ್‌ಎ) ಎಲ್ಲ ದಾಖಲೆ, ಅಂಕಿ ಅಂಶಗಳನ್ನು ಪರಿಶೀಲಿಸಿದ ಬಳಿಕ ಪ್ರಮಾಣ ಪತ್ರ ನೀಡುತ್ತಾರೆ. ಆ ಪ್ರಮಾಣ ಪತ್ರವನ್ನು ರೈಲ್ವೆಯ ಮೆಟ್ರೊ ರೈಲು ಸುರಕ್ಷತಾ ಆಯೋಗಕ್ಕೆ (ಸಿಎಂಎಸ್‌ಆರ್) ಸಲ್ಲಿಸಲಾಗುವುದು. ಬಳಿಕ ಸಿಎಂಎಸ್‌ಆರ್ ಆಯುಕ್ತರು ಬಂದು ಅಂತಿಮ ಪರಿಶೀಲನೆ ನಡೆಸುತ್ತಾರೆ. ಅವರು ಸಂಚಾರಕ್ಕೆ ಒಪ್ಪಿಗೆ ನೀಡಿದರೆ ರಾಜ್ಯ ಮತ್ತು ಕೇಂದ್ರ ಸರ್ಕಾರ ನಿಗದಿಪಡಿಸಿದ ದಿನ ಸಂಚಾರ ಆರಂಭವಾಗುತ್ತದೆ' ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ. 'ಜುಲೈ ಹೊತ್ತಿಗೆ ಇನ್ನೂ ಒಂದು ರೈಲು ಬಂದು ಸೇರಲಿದೆ' ಎಂದಿದ್ದಾರೆ.

ಹಳದಿ ಮಾರ್ಗವು ಬೊಮ್ಮಸಂದ್ರ, ಹೆಬ್ಬಗೋಡಿ, ಹುಸ್ಕೂರು ರಸ್ತೆ, ಇನ್ಫೊಸಿಸ್ ಫೌಂಡೇಶನ್ (ಕೋನಪ್ಪನ ಅಗ್ರಹಾರ), ಎಲೆಕ್ಟ್ರಾನಿಕ್ ಸಿಟಿ, ಬೆರಟೇನ ಅಗ್ರಹಾರ, ಹೊಸ ರಸ್ತೆ, ಸಿಂಗಸಂದ್ರ, ಕೂಡ್ಲು ಗೇಟ್, ಹೊಂಗಸಂದ್ರ, ಬೊಮ್ಮನಹಳ್ಳಿ, ಸೆಂಟ್ರಲ್ ಸಿಲ್ಕ್ ಬೋರ್ಡ್, ಬಿಟಿಎಂ ಲೇಔಟ್, ಜಯದೇವ ಆಸ್ಪತ್ರೆ, ರಾಗಿಗುಡ್ಡ, ಆರ್.ವಿ. ರಸ್ತೆ ನಿಲ್ದಾಣಗಳನ್ನು ಹೊಂದಿದೆ.

ದಕ್ಷಿಣ ಬೆಂಗಳೂರನ್ನು (ಎಲೆಕ್ಟ್ರಾನಿಕ್ ಸಿಟಿ) ನಗರದ ಕೇಂದ್ರಕ್ಕೆ ಸಂಪರ್ಕಿಸುವ ಈ ಮಾರ್ಗವು 18.8 ಕಿ.ಮೀ ಉದ್ದವನ್ನು ಹೊಂದಿದೆ.

'ಯಲ್ಲೊ ಮೆಟ್ರೊ ಎಲ್ಲೊ ಎಂದು ಕೇಳುವ ಪರಿಸ್ಥಿತಿ ಬಂದಿದೆ. ಎಲ್ಲ ಕಾಮಗಾರಿ ಮುಗಿದು ವರ್ಷಗಟ್ಟಲೆ ಕಾಯುವುದು ಬಿಎಂಆರ್‌ಸಿಎಲ್‌ಗೆ ಕೋಟ್ಯಂತರ ರೂಪಾಯಿ ನಷ್ಟವನ್ನು ಉಂಟು ಮಾಡಿರುತ್ತದೆ. ಆದಷ್ಟು ಬೇಗ ಸಂಚಾರ ಆರಂಭಿಸಿದರೆ ಪ್ರಯಾಣಿಕರಿಗೂ ಅನುಕೂಲ. ಬಿಎಂಆರ್‌ಸಿಎಲ್‌ಗೂ ಆದಾಯ' ಎಂದು ಮೆಟ್ರೊ ಪ್ರಯಾಣಿಕ ಎಚ್. ರಮೇಶ್ ತಿಳಿಸಿದರು.

'ನಮ್ಮ ಮೆಟ್ರೊಗೆ ₹130 ಕೋಟಿ ಲಾಭ'



ಬೆಂಗಳೂರು: ಬಿಎಂಆರ್‌ಸಿಎಲ್ 2023–2024ರಲ್ಲಿ ₹130 ಕೋಟಿ ಲಾಭ ಗಳಿಸಿದೆ. ಮೆಟ್ರೊ ಆರಂಭವಾಗಿ 13 ವರ್ಷಗಳಲ್ಲಿಯೇ ಇದು ಹೆಚ್ಚಿನ ಲಾಭ ಪಡೆದಿರುವುದಾಗಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ಈ ಬಗ್ಗೆ ಅವರು 'ಇನ್‌ಸ್ಟಾಗ್ರಾಂ'ನಲ್ಲಿ ವಿವರ ಹಂಚಿಕೊಂಡಿದ್ದು, 'ನಮ್ಮ ಮೆಟ್ರೊ ಬೆಂಗಳೂರಿನ ಪ್ರಯಾಣಿಕರ ಜೀವನಾಡಿ. ಸಂಚಾರ ದಟ್ಟಣೆಯನ್ನು ನಿವಾರಿಸಿ, ಜನರಿಗೆ ಸುಗಮ ಸಂಚಾರವನ್ನು ಕಲ್ಪಿಸುವ ನಿಟ್ಟಿನಲ್ಲಿ ಮೆಟ್ರೊ ಸಂಚಾರ ನಿರಂತರವಾಗಿ ಸಾಗುತ್ತಿದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಮೆಟ್ರೊ ಅಭಿವೃದ್ಧಿಗೆ ಅನೇಕ ಕ್ರಮಗಳನ್ನು ಕೈಗೊಂಡಿದೆ' ಎಂದು ಬರೆದುಕೊಂಡಿದ್ದಾರೆ.

ಈ ವರ್ಷ ಇನ್ನೂ ಹೆಚ್ಚಿನ ಆದಾಯ ಬರುವ ನಿರೀಕ್ಷೆ ಇದೆ. ಮುಂದಿನ ಎಲ್ಲ ಮೆಟ್ರೊ ಮಾರ್ಗಗಳನ್ನು ಡಬಲ್ ಡೆಕರ್ ಮಾದರಿಯಲ್ಲಿ ನಿರ್ಮಿಸಲಾಗುವುದು. ಮೆಟ್ರೊ ಯೋಜನೆಯ ಮೊದಲ ಹಂತ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಿಕೊಂಡಿದ್ದಾರೆ.

ಕುಂದಲಹಳ್ಳಿಯಲ್ಲಿ ಹೊಸ ಗೇಟ್: ನಮ್ಮ ಮೆಟ್ರೊ ನೇರಳೆ ಮಾರ್ಗದಲ್ಲಿರುವ ಕುಂದಲಹಳ್ಳಿ ನಿಲ್ದಾಣದಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ಹೆಚ್ಚುವರಿಯಾಗಿ ಹೊಸ ಗೇಟ್ ಅಳವಡಿಸಲಾಗಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಶೌಚಾಲಯ ಬಳಕೆ ಶುಲ್ಕ ನಿಗದಿ ರದ್ದು

ಬೆಂಗಳೂರು: ನಮ್ಮ ಮೆಟ್ರೊದ 12 ನಿಲ್ದಾಣಗಳಲ್ಲಿ ಶೌಚಾಲಯ ಬಳಕೆ ಶುಲ್ಕ ವಿಧಿಸುವ ನಿರ್ಧಾರವನ್ನು ಪ್ರಯಾಣಿಕರ ವಿರೋಧದಿಂದಾಗಿ ಬಿಎಂಆರ್‌ಸಿಎಲ್ ವಾಪಸ್ ಪಡೆದಿದೆ.

ಹಸಿರು ಮಾರ್ಗದಲ್ಲಿ ನ್ಯಾಷನಲ್ ಕಾಲೇಜು, ಲಾಲ್‌ಬಾಗ್, ಸೌತ್ ಎಂಡ್ ಸರ್ಕಲ್, ಜಯನಗರ, ರಾಷ್ಟ್ರೀಯ ವಿದ್ಯಾಲಯ ರಸ್ತೆ, ಬನಶಂಕರಿ, ಜಯಪ್ರಕಾಶ್ ನಗರ, ಯಲಚೇನಹಳ್ಳಿ, ನೇರಳೆ ಮಾರ್ಗದಲ್ಲಿ ಸರ್ ಎಂ. ವಿಶ್ವೇಶ್ವರಯ್ಯ ನಿಲ್ದಾಣ - ಸೆಂಟ್ರಲ್ ಕಾಲೇಜು, ಡಾ.ಬಿ.ಆರ್. ಅಂಬೇಡ್ಕರ್ ನಿಲ್ದಾಣ - ವಿಧಾನಸೌಧ, ಕಬ್ಬನ್ ಪಾರ್ಕ್ ಮತ್ತು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಮೆಟ್ರೊ ನಿಲ್ದಾಣಗಳಲ್ಲಿ ಬಳಕೆದಾರರ ಶುಲ್ಕ ಸಂಗ್ರಹ ಮಾಡಲಾಗುತ್ತಿತ್ತು.

'ಸುಲಭ್ ಶೌಚಾಲಯ ಇಂಟರ್‌ನ್ಯಾಷನಲ್' ಸಂಸ್ಥೆಗೆ ಶೌಚಾಲಯ ನಿರ್ವಹಣೆಯನ್ನು ವಹಿಸಲಾಗಿತ್ತು. ಮೂತ್ರ ವಿಸರ್ಜನೆಗೆ ₹ 2, ಶೌಚಾಲಯ ಬಳಕೆಗೆ ₹5 ನಿಗದಿಪಡಿಸಲಾಗಿತ್ತು. ಇದನ್ನು ವಿರೋಧಿಸಿ ನಾಗರಿಕರು ವಿಧಾನಸೌಧ ಮೆಟ್ರೊ ನಿಲ್ದಾಣದ ಹೊರಗೆ ಪ್ರತಿಭಟನೆ ನಡೆಸಿದ್ದರು.

'ಮೆಟ್ರೊ ಸ್ವೈಪ್ ಗೇಟ್‌ಗಿಂತ ಹೊರಗೆ ಇರುವ ಶೌಚಾಲಯಗಳನ್ನು ಬಳಕೆ ಮಾಡುವವರಿಗೆ ಕನಿಷ್ಠ ಶುಲ್ಕ ಸಂಗ್ರಹಿಸಲು ನಿರ್ಧರಿಸಲಾಗಿತ್ತು. ಈಗ ಅದನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ' ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಸ್ಪಷ್ಟಪಡಿಸಿದರು.



ಡಾ. ವಿಜಯಲಕ್ಷ್ಮಿ ದೇಶಮಾನೆ ಅವರಿಗೆ ಯಶೋಧರಮ್ಮ ದಾಸಪ್ಪ ಸಮಾಜ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ, ಕನ್ನಡ ಜನಶಕ್ತಿ ಕೇಂದ್ರ ಅಧ್ಯಕ್ಷ ಸಿ. ಕೆ. ರಾಮೇಗೌಡ, ರೈತ ನಾಯಕಿ ಸುನಂದಾ ಜಯರಾಂ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ನಿಟಕಪೂರ್ವ ಕೋಶಾಧ್ಯಕ್ಷ ಪಿ. ಮಲ್ಲಿಕಾರ್ಜುನಪ್ಪ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

ವಿಜಯಲಕ್ಷ್ಮಿ ದೇಶಮಾನೆಗೆ 'ಸಮಾಜರತ್ನ ಪ್ರಶಸ್ತಿ' ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಜನಶಕ್ತಿ ಕೇಂದ್ರ ನಗರದಲ್ಲಿ ಬುಧವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ ಕ್ಯಾನ್ಸರ್ ತಜ್ಞೆ ಡಾ. ವಿಜಯಲಕ್ಷ್ಮಿ ದೇಶಮಾನೆ ಅವರಿಗೆ 'ಯಶೋಧರಮ್ಮ ದಾಸಪ್ಪ ಸಮಾಜರತ್ನ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಈ ಪ್ರಶಸ್ತಿಯು ₹ 10 ಸಾವಿರ ನಗದು ಒಳಗೊಂಡಿದೆ.

ಪ್ರಶಸ್ತಿ ಪ್ರದಾನ ಮಾಡಿದ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ. ಕೃಷ್ಣ ಮಾತನಾಡಿ, 'ಡಾ. ವಿಜಯಲಕ್ಷ್ಮಿ ದೇಶಮಾನೆ ಅವರು ನಾಲ್ಕು ದಶಕಗಳ ಕಾಲ ಆರೋಗ್ಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ್ದಾರೆ. ಕ್ಯಾನ್ಸರ್ ರೋಗಿಗಳಿಗೆ ಚಿಕಿತ್ಸೆ ನೀಡಿದ್ದಾರೆ. ಅವರು ತಮ್ಮ ಎಲ್ಲ ಅನುಭವಗಳನ್ನು ಪುಸ್ತಕ ರೂಪದಲ್ಲಿ ದಾಖಲಿಸಬೇಕು' ಎಂದು ಮನವಿ ಮಾಡಿದರು.

'ಅತ್ಯಂತ ತಳ ಸಮುದಾಯದಿಂದ ಬಂದ ವಿಜಯಲಕ್ಷ್ಮಿ ಅವರು ಆರೋಗ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ. ಇದನ್ನು ಪರಿಗಣಿಸಿ ಅವರಿಗೆ ಪದ್ಮಶ್ರೀ ಪ್ರಶಸ್ತಿಯೂ ಲಭಿಸಿದೆ. ಕನ್ನಡ ಜನಶಕ್ತಿ ಕೇಂದ್ರವು ಈ ಪ್ರಶಸ್ತಿ ನೀಡಿರುವುದು, ಅವರ ಸೇವೆಗೆ ಸಂದ ಗೌರವ' ಎಂದು ಹೇಳಿದರು.

'ಎಸ್. ನಿಜಲಿಂಗಪ್ಪ ಅವರ ಆಡಳಿತದಲ್ಲಿ ಯಶೋಧರಮ್ಮ ದಾಸಪ್ಪ ಅವರು ರಾಜ್ಯದ ಪ್ರಥಮ ಮಹಿಳಾ ಮಂತ್ರಿಯಾಗಿದ್ದರು. ಆದರೆ, ಮದ್ಯಪಾನ ನಿಷೇಧಿಸಿಲ್ಲವೆಂಬ ಕಾರಣಕ್ಕೆ ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಇವರು ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಮೊದಲ ಸಂಯೋಜಕಿಯೂ ಆಗಿದ್ದರು. ಇವರ ಆದರ್ಶಗಳನ್ನು ನಾವೆಲ್ಲರೂ ಅಳವಡಿಸಿಕೊಳ್ಳಬೇಕು' ಎಂದರು.

ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ. ರಾಮೇಗೌಡ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ಮಾನನಷ್ಟ: ಬಹಿರಂಗ ಚರ್ಚೆಗೆ ಪಂಥಾಹ್ವಾನ

ಸರ್ಕಾರದ ವಿಫಲತೆ ಕುರಿತು ಜಾಹೀರಾತು, ಜವಾಬ್ದಾರಿಯುತ ವಿರೋಧ ಪಕ್ಷವಾಗಿ ಕೆಲಸ: ಬಿಜೆಪಿ

ಪ್ರಜಾವಾಣಿ ವಾರ್ತೆ



ರಾಧಾಮೋಹನ್ ದಾಸ್ ಅಗರವಾಲ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ರಾಜ್ಯಸಭಾ ಸದಸ್ಯ ಲಹರ್ ಸಿಂಗ್ ಸಿರೋಯಾ ಮತ್ತು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಇದ್ದರು

ಬೆಂಗಳೂರು: ರಾಜ್ಯ ಸರ್ಕಾರ ಬಿಜೆಪಿ ವಿರುದ್ಧ ಹೂಡಿರುವ ಮಾನನಷ್ಟ ಮೊಕದ್ದಮೆ ಕುರಿತು ಬಹಿರಂಗ ಚರ್ಚೆ ಆಯೋಜಿಸಬೇಕು ಎಂದು ಬಿಜೆಪಿ ರಾಜ್ಯ ಉಸ್ತುವಾರಿ ರಾಧಾಮೋಹನ್ ದಾಸ್ ಅಗರ್‌ವಾಲ್ ಪಂಥಾಹ್ವಾನ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, 'ಯಥಾ ರಾಜ ತಥಾ ಪ್ರಜೆ' ಎನ್ನುವಂತೆ ಕಾಂಗ್ರೆಸ್ ನಡವಳಿಕೆ ಇದೆ. ಕಾಂಗ್ರೆಸ್ ಎರಡು ವರ್ಷಗಳಲ್ಲಿ ಜನರಿಗೆ ಬೆಲೆ ಏರಿಕೆ ಬಿಟ್ಟರೆ ಬೇರೆ ಯಾವುದೇ ಕೊಡುಗೆ ನೀಡಿಲ್ಲ. ಕಾಂಗ್ರೆಸ್ ನೇತೃತ್ವದ ಸರ್ಕಾರದ ವಿಫಲತೆ ಕುರಿತು ರಾಜ್ಯ ಬಿಜೆಪಿ ಜಾಹೀರಾತು ನೀಡಿದೆ. ಜವಾಬ್ದಾರಿಯುತ ವಿರೋಧ ಪಕ್ಷವಾಗಿ ಜನರ ಭಾವನೆಗಳನ್ನೇ ಆಧಾರವಾಗಿ ಇಟ್ಟುಕೊಂಡು ಆರೋಪ ಮಾಡಿದ್ದೇವೆ. ಈ ಕುರಿತು ಜನರಿಗೆ ಉತ್ತರ ಕೊಡುವ ಬದಲು ಮಾನನಷ್ಟ ಮೊಕದ್ದಮೆ ಮೂಲಕ ಬೆದರಿಸುವ ಕೆಲಸ ಮಾಡುತ್ತಿದ್ದಾರೆ. ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಜತೆ ಬಹಿರಂಗ ಚರ್ಚೆ ನಡೆಸಬೇಕು. ಈ ಚರ್ಚೆ ನೇರ ಪ್ರಸಾರ ಆಗಬೇಕು ಎಂದು ಒತ್ತಾಯಿಸಿದರು.

ಅಗರವಾಲ್ ಹೇಳಿದ್ದು

- ಒಳಮೀಸಲು ಸಮೀಕ್ಷೆಗೆ ಕಾನೂನು ಮಾನ್ಯತೆ ಇಲ್ಲ
- ಕೇಂದ್ರದ ಗಣತಿ, ಸಮೀಕ್ಷೆಯಷ್ಟೇ ಪರಿಹಾರ

ರಾಜ್ಯದಲ್ಲಿ ಬಿಜೆಪಿಯತ್ತ ಜನರ ಒಲವು ಹೆಚ್ಚಾಗಿದೆ. ಚುನಾವಣೆ ನಡೆದರೆ ಬಿಜೆಪಿ 150 ರಿಂದ 155 ಸೀಟುಗಳನ್ನು ಪಡೆಯುವ ಸಾಧ್ಯತೆ ಇದೆ ಎಂದು ಸಮೀಕ್ಷೆಗಳು ಹೇಳಿವೆ. 2023ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಉತ್ತಮ ಪ್ರದರ್ಶನ ನೀಡಲಿಲ್ಲ. ಕಾಂಗ್ರೆಸ್ ಪಕ್ಷ ಬಹುಮತ ಪಡೆದಿತ್ತು. ಆದರೆ, ಲೋಕಸಭಾ ಚುನಾವಣೆಯಲ್ಲಿ ನರೇಂದ್ರ ಮೋದಿ, ವಿಜಯೇಂದ್ರ ಅವರ ಸ್ಥಳೀಯ ನಾಯಕತ್ವದಲ್ಲಿ ಬಿಜೆಪಿ ಮುನ್ನಡೆ ಪಡೆದಿತ್ತು. ವಿಧಾನಸಭಾ ಚುನಾವಣೆಯ ತಪ್ಪು ನಿರ್ಣಯ ಕರ್ನಾಟಕದ ಜನರಿಗೆ ಒಂದೇ ವರ್ಷದಲ್ಲಿ ಅರ್ಥವಾಗಿದೆ ಎಂದರು.

ರಾಜ್ಯದಲ್ಲಿ ಕೋಮುದ್ವೇಷ, ಕೋಮು ಗಲಭೆಗಳಿಗೆ ಕಾಂಗ್ರೆಸ್‌ನ ಮುಸ್ಲಿಂ ತುಷ್ಟೀಕರಣ ನೀತಿ, ಹಿಂದೂ ಸಮಾಜದ ಅಪಮಾನ, ಆಕ್ರಮಣವೇ ಕಾರಣ. ತುಷ್ಟೀಕರಣಕ್ಕಾಗಿ ವಕ್ಫ್ ಮಂಡಳಿಗೆ ಭಾರಿ ಪ್ರಮಾಣದ ಜಮೀನು ನೀಡಿದ್ದರು. ರಾಜ್ಯದಲ್ಲಿ ಕಾಂಗ್ರೆಸ್ ಬದಲಾಗಿ ಮುಸ್ಲಿಂ ಲೀಗ್, ಎಸ್‌ಡಿಪಿಐ, ಪಿಎಫ್‌ಐ ಸರ್ಕಾರ ನಡೆಸುತ್ತಿವೆ ಎಂದು ದೂರಿದರು.

ರವಿಕುಮಾರ್ ಹೇಳಿಕೆ ಸಮರ್ಥನೆ

ಬಿಜೆಪಿ ಉಸ್ತುವಾರಿ ರಾಧಾಮೋಹನ್ ದಾಸ್ ಅಗರ್‌ವಾಲ್ ವಿಧಾನಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಅವರನ್ನು ಬಲವಾಗಿ ಸಮರ್ಥಿಸಿಕೊಂಡರು.

ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ವಿರುದ್ಧ ಕಲಬುರ್ಗಿಯಲ್ಲಿ ಹತ್ಯೆ ಪ್ರಯತ್ನ ನಡೆದಿದೆ. ಶಿಷ್ಟಾಚಾರದ ಉಲ್ಲಂಘನೆ ಯಾಗಿದೆ. ಕಾಂಗ್ರೆಸ್ ಬೆಂಬಲಿಗರು ಬಂದು ಮುತ್ತಿಗೆ ಹಾಕಿದರೂ ಅವರನ್ನು ಚದುರಿಸುವ ಕೆಲಸವಾಗಿಲ್ಲ. ಕರ್ತವ್ಯ ಲೋಪ ಎಸಗಿದ ಕಲಬುರ್ಗಿ ಜಿಲ್ಲಾಧಿಕಾರಿ ಹಾಗೂ ಎಸ್.ಪಿ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದರು.

ಜಿಲ್ಲಾಧಿಕಾರಿ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿದ ರವಿಕುಮಾರ್ ವಿರುದ್ಧ ಪಕ್ಷ ಕ್ರಮ ತೆಗೆದುಕೊಳ್ಳುವ ಪ್ರಶ್ನೆಯೇ ಇಲ್ಲ. ಮೊದಲು ಸರ್ಕಾರ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಿ ಎಂದು ಒತ್ತಾಯಿಸಿದರು.

ಸರ್ಕಾರದ ಪತನ ಸಾಧ್ಯತೆ

ಕಾಂಗ್ರೆಸ್ ಒಳಜಗಳದಿಂದ ಯಾವುದೇ ಕ್ಷಣದಲ್ಲಿ ಸರ್ಕಾರ ಬೀಳಬಹುದು. ಸಿದ್ದರಾಮಯ್ಯ ಪದತ್ಯಾಗ ಮಾಡಿದರೆ ಜಿ. ಪರಮೇಶ್ವರ, ಡಿ.ಕೆ. ಶಿವಕುಮಾರ್, ಪ್ರಿಯಾಂಕ್ ಖರ್ಗೆ ಯಾರು ಮುಖ್ಯಮಂತ್ರಿ ಸ್ಥಾನ ಅಲಂಕರಿಸುತ್ತಾರೆ ಎನ್ನುವುದನ್ನು ತಿಳಿದುಕೊಳ್ಳಲು ಜನರು ಬಯಸುತ್ತಿದ್ದಾರೆ ಎಂದು ರಾಧಾಮೋಹನ್ ದಾಸ್ ಅಗರ್‌ವಾಲ್ ಹೇಳಿದರು.

'ರಾಮಯ್ಯ ಅನ್ವಯಿಕ ವಿಜ್ಞಾನ ವಿಶ್ವವಿದ್ಯಾಲಯ ಆಯ್ಕೆ'

'ಯುವ ಶಕ್ತಿ, ಭಾರತದ ಶಕ್ತಿ' ಅಭಿಯಾನಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ



'ಯುವ ಶಕ್ತಿ, ಭಾರತದ ಶಕ್ತಿ' ಅಭಿಯಾನದಲ್ಲಿ ಪ್ರತಿಜ್ಞೆ ಸ್ವೀಕರಿಸಲಾಯಿತು

ಬೆಂಗಳೂರು: ಭಾರತ ವಿಶ್ವವಿದ್ಯಾಲಯ ಸಂಘಟನೆ (ಎಐಯು) ಸಹಯೋಗದಲ್ಲಿ ಪೀಣ್ಯದಲ್ಲಿರುವ ರಾಮಯ್ಯ ಅನ್ವಯಿಕ ವಿಜ್ಞಾನ ವಿಶ್ವವಿದ್ಯಾಲಯವು 'ಯುವ ಶಕ್ತಿ, ಭಾರತದ ಶಕ್ತಿ' ಅಭಿಯಾನಕ್ಕೆ ಬುಧವಾರ ಚಾಲನೆ ನೀಡಿತು.

ಭಾರತಕ್ಕೆ ನೀಡಬಹುದಾದ ಕೊಡುಗೆ ಬಗ್ಗೆ ಸಾವಿರಾರು ವಿದ್ಯಾರ್ಥಿಗಳು ಪ್ರತಿಜ್ಞೆ ಮಾಡಿದರು.

ರಾಮಯ್ಯ ಅನ್ವಯಿಕ ವಿಜ್ಞಾನ ವಿಶ್ವವಿದ್ಯಾಲಯ ಕುಲಪತಿ ಕುಲದೀಪ್ ಕುಮಾರ್ ರೈನಾ ಮಾತನಾಡಿ, 'ಎಐಯು ಈ ಅಭಿಯಾನಕ್ಕೆ ದೇಶದಲ್ಲಿ 5 ವಿಶ್ವ-ವಿದ್ಯಾಲಯಗಳನ್ನು ಆಯ್ಕೆ ಮಾಡಿದೆ. ಇದರಲ್ಲಿ ಕರ್ನಾಟಕದಿಂದ ಆಯ್ಕೆ ಆಗಿರುವ ಏಕೈಕ ವಿಶ್ವವಿದ್ಯಾಲಯ ನಮ್ಮದು. ನಮ್ಮಲ್ಲಿ 5 ಸಾವಿರ ವಿದ್ಯಾರ್ಥಿಗಳು ಭಾಗವಹಿಸಿ ದೇಶದ ಅಭಿವೃದ್ಧಿಗೆ ಕೊಡುಗೆ ನೀಡುವುದಾಗಿ ಪ್ರತಿಜ್ಞೆ ಮಾಡಿದ್ದಾರೆ' ಎಂದರು.

'ವಿದ್ಯಾರ್ಥಿಗಳು ಪ್ರತಿಜ್ಞೆ ಮಾಡಿದಂತೆ ಪ್ರಾಮಾಣಿಕವಾಗಿ ಭಾರತಕ್ಕೆ ಕೊಡುಗೆ ನೀಡುತ್ತಾರೆ ಎಂಬ ನಂಬಿಕೆ ಇದೆ. ಯುವ ಜನರು ಭಾರತದ ಆರ್ಥಿಕ ಅಭಿವೃದ್ಧಿ, ಸಾಮಾಜಿಕ ಭದ್ರತೆ ಸೇರಿದಂತೆ ಎಲ್ಲಾ ವಿಷಯದಲ್ಲೂ ಕೊಡುಗೆ ನೀಡಲು ಸಿದ್ಧರಿದ್ದೇವೆ ಎಂದು ತೋರಿಸಿದ್ದಾರೆ' ಎಂದರು.

'ಇತ್ತೀಚಿಗೆ ನಡೆದ ಅಪರೇಷನ್ ಸಿಂಧೂರ ನಮ್ಮೆಲ್ಲರಿಗೂ ಒಂದು ಹೆಮ್ಮೆಯ ವಿಚಾರ. ನಾವು ನಮ್ಮ ತಾಯಿ ಮತ್ತು ತಾಯ್ನಾಡು ಎರಡನ್ನೂ ಎಂದಿಗೂ ಮರೆಯಬಾರದು' ಎಂದರು.

ಪ್ರಧಾನಿ ನರೇಂದ್ರ ಮೋದಿ ಜಾರಿಗೆ ತಂದಿರುವ ಆತ್ಮ ನಿರ್ಭರ್ ಭಾರತ್, ಏಕ್ ಭಾರತ್, ಶ್ರೇಷ್ಠ ಭಾರತ್, ಸಬ್ ಕಾ ಸಾತ್, ಸಬ್ ಕಾ ವಿಕಾಸ್ ಜತೆಗೆ ಯುವ ಶಕ್ತಿ, ಭಾರತದ ಶಕ್ತಿ ಕೂಡ ಬಲಿಷ್ಠ ಭಾರತ ನಿರ್ಮಾಣಕ್ಕೆ ಸಹಕಾರ ನೀಡಲಿದೆ ಎಂದು ಹೇಳಿದರು.

ಅನ್ವಯಿಕ ವಿಜ್ಞಾನ ವಿಶ್ವವಿದ್ಯಾಲಯ ಸಹ ಕುಲಪತಿ ಗೋವಿಂದ ಆರ್. ಕಡಂಬಿ, ಅಕಾಡೆಮಿಕ್ ಡೀನ್ ಆರ್. ವಿ. ರಂಗನಾಥ್, ಎಂಜಿನಿಯರಿಂಗ್ ಡೀನ್ ಶರತ್ ಕುಮಾರ್ ಮಹಾರಾಣಾ, ಅಸೋಸಿಯೇಟ್ ಡೀನ್ ಆಕಾಡೆಮಿಕ್ಸ್ ಸೈನಾ ಪಾಟೀಲ್ ಭಾಗವಹಿಸಿದ್ದರು.

ಯಲಹಂಕ: ಆಂಬುಲೆನ್ಸ್ ಚಾಲಕರಿಗೆ ಸನ್ಮಾನ

ಪ್ರಜಾವಾಣಿ ವಾರ್ತೆ



ಕಾರ್ಯಕ್ರಮದಲ್ಲಿ ಆಂಬುಲೆನ್ಸ್ ಚಾಲಕರನ್ನು ಸನ್ಮಾನಿಸಲಾಯಿತು

ಯಲಹಂಕ: ರಾಷ್ಟ್ರೀಯ ಪೈಲಟ್ಸ್ (ಆಂಬುಲೆನ್ಸ್ ಚಾಲಕರ) ದಿನಾಚರಣೆಯ ಪ್ರಯುಕ್ತ ಬ್ಯಾಟರಾಯನಪುರ ಕ್ಷೇತ್ರದ ಬೆಟ್ಟಹಲಸೂರು ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಆರೋಗ್ಯ ಕವಚ (108) ಸಂಘದ ಸದಸ್ಯರು ಹಾಗೂ ಗ್ರಾಮದ ಮುಖಂಡರು ಆಂಬುಲೆನ್ಸ್ ಚಾಲಕರನ್ನು ಸನ್ಮಾನಿಸಿ ಗೌರವಿಸಿದರು.

ಚಾಲಕರು ಕೇಕ್ ಕತ್ತರಿಸಿ, ಸಿಹಿಹಂಚುವ ಮೂಲಕ ಸಂಭ್ರಮಿಸಿದರು. ಈ ವೇಳೆ ಮಾತನಾಡಿದ ಸಂಘದ ಬೆಂಗಳೂರು ಕೇಂದ್ರ ಘಟಕದ ವ್ಯವಸ್ಥಾಪಕ ಸ್ವಾಮಿ, ಅಪಘಾತಗಳಾದ ತುರ್ತು ಸಂದರ್ಭದಲ್ಲಿ ತಕ್ಷಣ ಸ್ಥಳಕ್ಕೆಧಾವಿಸಿ, ಜನರ ಪ್ರಾಣ ಉಳಿಸಲು ಶ್ರಮಿಸುವ ಆಂಬುಲೆನ್ಸ್ ಚಾಲಕರ ಕಾರ್ಯ ಶ್ಲಾಘನೀಯ. ಅವರ ಸೇವೆಯನ್ನು ಗುರುತಿಸಿ, ಸನ್ಮಾನಿಸುವುದರ ಜೊತೆಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಸೇವೆ ಸಲ್ಲಿಸಲು ಪ್ರೋತ್ಸಾಹ ನೀಡುವ ಉದ್ದೇಶದಿಂದ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಕಾಂಗ್ರೆಸ್ ಸದಸ್ಯರಿಂದ ರಾಜ್ಯಪಾಲರಿಗೆ ದೂರು ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಬುರಗಿ ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ಅವರನ್ನು ಪಾಕಿಸ್ತಾನಿ ಎಂದು ನಿಂದಿಸಿರುವ ವಿಧಾನ ಪರಿಷತ್ ಬಿಜೆಪಿ ಸದಸ್ಯ ಎನ್. ರವಿಕುಮಾರ್ ವಿರುದ್ಧ ರಾಜ್ಯಪಾಲರಿಗೆ ದೂರು ನೀಡಲು ವಿಧಾನ ಪರಿಷತ್‌ನ ಕಾಂಗ್ರೆಸ್ ಸದಸ್ಯರು ನಿರ್ಧರಿಸಿದ್ದಾರೆ.

ಪರಿಷತ್‌ನಲ್ಲಿ ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹ್ಮದ್ ಮಾತನಾಡಿ, 'ರವಿಕುಮಾರ್ ಅವರ ಹೇಳಿಕೆಯನ್ನು ನಾವೂ ಖಂಡಿಸುತ್ತೇವೆ. ಪರಿಷತ್‌ನ ಎಲ್ಲ ಕಾಂಗ್ರೆಸ್ ಸದಸ್ಯರು ರಾಜ್ಯಪಾಲರನ್ನು ಗುರುವಾರ ಭೇಟಿ ಮಾಡುತ್ತೇವೆ. ರವಿಕುಮಾರ್ ಮೇಲೆ ಕ್ರಮ ತೆಗೆದುಕೊಳ್ಳಲು ಒತ್ತಾಯಿಸುತ್ತೇವೆ' ಎಂದರು.

'ರವಿಕುಮಾರ್ ಅವರ ಹೇಳಿಕೆಯನ್ನು ಬಿಜೆಪಿ ನಾಯಕರು ಸಮರ್ಥನೆ ಮಾಡಿಕೊಳ್ಳುತ್ತಾರೆಯೇ, ಇಲ್ಲವೇ ಎಂದೂ ಸ್ಪಷ್ಟಪಡಿಸಬೇಕು' ಎಂದರು.

'ಪಕ್ಷದ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರ ಜೊತೆ ಪರಿಷತ್‌ನ ಕಾಂಗ್ರೆಸ್ ಸದಸ್ಯರೆಲ್ಲರೂ ಬುಧವಾರ ಚರ್ಚೆ ಮಾಡಿದ್ದೇವೆ. ಸದನದಲ್ಲಿ ಪಕ್ಷದ ಪರವಾಗಿ ಆಕ್ರಮಣಕಾರಿಯಾಗಿ ಮಾತನಾಡುವಂತೆ ವರಿಷ್ಠರು ಸಲಹೆ ನೀಡಿದ್ದಾರೆ' ಎಂದರು.

ಕುತೂಹಲ ಮೂಡಿಸಿದ ಭೇಟಿ

ನಗರದ ಪುರಭವನದಲ್ಲಿ ಬುಧವಾರ ನಡೆದ 'ಜೈ ಹಿಂದ್' ಸಭಾ ಕಾರ್ಯಕ್ರಮದಲ್ಲಿ ಭಾಗವಹಿಸಲು ಮಂಗಳವಾರ ರಾತ್ರಿಯೇ ನಗರಕ್ಕೆ ಬಂದಿದ್ದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಮತ್ತು ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ರಾತ್ರಿಯೇ ಡಿಸಿಎಂ ಡಿ.ಕೆ ಶಿವಕುಮಾರ್ ಅವರು ಭೇಟಿ ಮಾಡಿ ಚರ್ಚೆ ನಡೆಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉಭಯ ನಾಯಕರನ್ನು ಬುಧವಾರ ಬೆಳಿಗ್ಗೆ ಭೇಟಿ ಮಾಡಿ ಮಾತುಕತೆ ನಡೆಸಿದರು. ಎಐಸಿಸಿ ನಾಯಕರನ್ನು ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಪ್ರತ್ಯೇಕವಾಗಿ ಭೇಟಿ ಮಾಡಿ ಚರ್ಚೆ ನಡೆಸಿರುವುದು ರಾಜಕೀಯ ವಲಯದಲ್ಲಿ ಕುತೂಹಲ ಮೂಡಿಸಿದೆ.

ಅಂಬೇಡ್ಕರ್, ಜಗಜೀವನ್ ರಾಮ್ ಜಯಂತಿ

ಪ್ರಜಾವಾಣಿ ವಾರ್ತೆ



ಸಂತೋಷ್ ಹೆಗ್ಡೆ ಅವರು ಬೈಕ್, ಆಟೊ ರ್‍ಯಾಲಿಗೆ ಚಾಲನೆ ನೀಡಿದರು

ಕೆ.ಆರ್.ಪುರ: 'ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರು ನೀಡಿದ ಸಂದೇಶಗಳು, ಇಂದಿಗೂ ಪ್ರಸ್ತುತವಾಗಿದ್ದು, ಅವುಗಳನ್ನು ಪಾಲಿಸುವವರು ಜೀವನದಲ್ಲಿ ಎಂದಿಗೂ ಕುಗ್ಗಲಾರರು' ಎಂದು ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ತಿಳಿಸಿದರು.

ಕೆ.ಆರ್.ಪುರ ಸಮೀಪದ ಹೂಡಿಯಲ್ಲಿ ಭಾರತೀಯರ ಸೇವಾ ಸಮಿತಿ ವತಿಯಿಂದ ಡಾ.ಬಿ.ಆರ್ ಅಂಬೇಡ್ಕರ್ ಹಾಗೂ ಬಾಬೂ ಜಗಜೀವನ್ ರಾಮ್ ಅವರ ಜಯಂತಿ ಪ್ರಯುಕ್ತ ಹಮ್ಮಿಕೊಂಡಿದ್ದ ಬೃಹತ್ ಆಟೊ ಮತ್ತು ಬೈಕ್ ರ್‍ಯಾಲಿಗೆ ಚಾಲನೆ ನೀಡಿ ಅವರು ಮಾತನಾಡಿದರು.

'ಇಂದಿನ ಪ್ರಜೆಗಳು ಅಕ್ಷರಸ್ಥರೇ ಆಗಿರಲಿ, ಅನಕ್ಷರಸ್ಥರೇ ಆಗಿರಲಿ ಎಲ್ಲರೂ ತಿಳಿದು, ಆಲೋಚಿಸಬೇಕಾದ ಅಂಬೇಡ್ಕರ್ ಅವರ ಒಂದು ಸೂಕ್ಷ್ಮ ಸಂದೇಶವೆಂದರೆ 'ಕಾನೂನು ಮತ್ತು ಸುವ್ಯವಸ್ಥೆ ರಾಜಕೀಯ' ದೇಹಕ್ಕೆ ಔಷಧಿ ಎಂಬುದಾಗಿದೆ' ಎಂದು ಅವರು ಅಭಿಪ್ರಾಯಪಟ್ಟರು.

ಭಾರತೀಯ ಸೇವಾ ಸಮಿತಿ ಸಂಸ್ಥಾಪಕ ಅಧ್ಯಕ್ಷ ಹೂಡಿ ರಾಮಚಂದ್ರ (ಚಿನ್ನಿ), ಸಮಾಜ ಸೇವಕ ತಿಪ್ಪಸಂದ್ರ ಗಜೇಂದ್ರ, ಮುಖಂಡರಾದ ಮುನಿಮಾರಪ್ಪ, ಆಂಜಿನಪ್ಪ ಯಾದವ್, ಮುನಿರಾಜ್ ಹಾಜರಿದ್ದರು.

'ನಮ್ಮ ಆರ್ಟ್ ಬೆಂಗಳೂರು' ರಾಷ್ಟ್ರೀಯ ಕಲಾ ಉತ್ಸವದಲ್ಲಿ ಸಚಿವ ಪಾಟೀಲ

ಪಾರಂಪರಿಕ ತಾಣ ದತ್ತು: ನಿರ್ವಹಣೆಗೆ ಸಹಕಾರಿ

ಪ್ರಜಾವಾಣಿ ವಾರ್ತೆ



'ನಮ್ಮ ಆರ್ಟ್ ಬೆಂಗಳೂರು' ರಾಷ್ಟ್ರೀಯ ಕಲಾ ಉತ್ಸವದಲ್ಲಿ ಕಲಾಪ್ರಿಯರು ಕಲಾಕೃತಿಗಳನ್ನು ವೀಕ್ಷಿಸಿದರು – ಪ್ರಜಾವಾಣಿ ಚಿತ್ರ

ಬೆಂಗಳೂರು: 'ರಾಜ್ಯದಲ್ಲಿರುವ ಪಾರಂಪರಿಕ ತಾಣಗಳನ್ನು ದತ್ತು ಪಡೆದು ಅಭಿವೃದ್ಧಿಪಡಿಸಿದರೆ, ನಿರ್ವಹಣೆಗೆ ಸಹಕಾರಿಯಾಗುತ್ತದೆ' ಎಂದು ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ ತಿಳಿಸಿದರು.

ಕರ್ನಾಟಕ ಚಿತ್ರಕಲಾ ಪರಿಷತ್, ರಾಜ್ಯ ಪ್ರವಾಸೋದ್ಯಮ ಇಲಾಖೆಯ ಸಹಯೋಗದಲ್ಲಿ ಮೊದಲ ಬಾರಿಗೆ ಆಯೋಜಿಸಿರುವ 'ನಮ್ಮ ಆರ್ಟ್ ಬೆಂಗಳೂರು' ರಾಷ್ಟ್ರೀಯ ಕಲಾ ಉತ್ಸವಕ್ಕೆ ಬುಧವಾರ ಚಾಲನೆ ನೀಡಿ ಅವರು ಮಾತನಾಡಿದರು.

'ರಾಜ್ಯದಲ್ಲಿ ಸುಮಾರು 25 ಸಾವಿರ ಪಾರಂಪರಿಕ ತಾಣಗಳಿದ್ದು, ಇವುಗಳೆಲ್ಲವನ್ನೂ ಸರ್ಕಾರವೇ ನಿರ್ವಹಣೆ ಮಾಡುವುದು ಕಷ್ಟವಾಗಿದೆ. ಪ್ರವಾಸೋದ್ಯಮವನ್ನು ಉತ್ತೇಜಿಸಿ, ಅಭಿವೃದ್ಧಿಪಡಿಸಲು ಕೈಗಾರಿಕೋದ್ಯಮಿಗಳು, ಟ್ರಸ್ಟ್, ಮಠಗಳು 'ನಮ್ಮ ಸ್ಮಾರಕ ದತ್ತು ಯೋಜನೆ' ಅಡಿಯಲ್ಲಿ ದತ್ತು ಪಡೆಯಬೇಕು' ಎಂದರು.

'ಸರ್ಕಾರವು ಸ್ಮಾರಕಗಳ ರಕ್ಷಣೆಗೆ ಬದ್ಧವಾಗಿದ್ದು, ಎಲ್ಲೆಡೆ ಮೂಲಸೌಕರ್ಯ ಒದಗಿಸಲಾಗುತ್ತದೆ. ಉಳ್ಳವರು ಬಂದು ಕಲೆಯನ್ನು ಉಳಿಸಬೇಕು. ಅದಕ್ಕಾಗಿ ಪಾರಂಪರಿಕ ತಾಣಗಳನ್ನು ದತ್ತು ಪಡೆಯಬೇಕು' ಎಂದರು.

'ಚಿತ್ರಕಲಾ ಪರಿಷತ್‌ನ ಚಿತ್ರಸಂತೆ ಜಾಗತಿಕವಾಗಿ ಗಮನ ಸೆಳೆದಿದೆ. ಕೋಲ್ಕತಾ ಹೊರತುಪಡಿಸಿದರೆ, ಬೆಂಗಳೂರಿನಲ್ಲಿ ಎಲ್ಲ ಬಗೆಯ ಕಲೆಗಳಿಗೂ ಆಸಕ್ತಿ ಇದೆ. ಇಂತಹ ರಾಷ್ಟ್ರೀಯ ಉತ್ಸವವನ್ನು ಆಯೋಜಿಸಿ, ದೇಶದ ಹಲವು ಭಾಗಗಳ ಕಲಾವಿದರ ಕಲಾಕೃತಿಗಳನ್ನು ಪ್ರದರ್ಶಿಸುತ್ತಿರುವುದು ಶ್ಲಾಘನಾರ್ಹ' ಎಂದರು.

'ನಮ್ಮ ಆರ್ಟ್ ಬೆಂಗಳೂರು–ರಾಷ್ಟ್ರೀಯ ಕಲಾ ಉತ್ಸವ ಜೂನ್ 1ರವರೆಗೆ ನಡೆಯಲಿದೆ. ಕಲಾವಿದರಿಂದ ಪ್ರಾತ್ಯಕ್ಷಿಕೆ, ಉಪನ್ಯಾಸ, ಸಂವಾದ, ಕಲಾಕೃತಿಗಳ ಪ್ರದರ್ಶನ, ಮಾರಾಟವಿರುತ್ತದೆ. ಕಲಾವಿದರು ಗ್ರಾಹಕರಿಗೆ ನೇರವಾಗಿ ಕಲಾಕೃತಿಗಳನ್ನು ಮಾರಾಟ ಮಾಡಬಹುದು' ಎಂದು ಚಿತ್ರಕಲಾ ಪರಿಷತ್ ಅಧ್ಯಕ್ಷ ಬಿ.ಎಲ್. ಶಂಕರ್ ತಿಳಿಸಿದರು.

ದೇಶ–ವಿದೇಶಗಳ ಕಲಾವಿದರ ಕಲಾಕೃತಿಗಳ ಪ್ರದರ್ಶನ

ದುಬೈನ ಹಲವು ಕಲಾವಿದರು ಕಲಾಕೃತಿಗಳನ್ನು ಪ್ರದರ್ಶಿಸಿದ್ದಾರೆ. ಕೇರಳ, ತಮಿಳುನಾಡು, ಮಧ್ಯಪ್ರದೇಶ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ದೆಹಲಿ, ಪುದುಚೇರಿ, ಉತ್ತರ ಪ್ರದೇಶ, ತೆಲಂಗಾಣ ರಾಜ್ಯಗಳಿಂದ ನೂರಾರು ಕಲಾವಿದರು ಪ್ರದರ್ಶನದಲ್ಲಿ ಭಾಗವಹಿಸಿದ್ದಾರೆ. ಸಂಸ್ಕೃತಿ, ಹೆಣ್ಣಿನ ಭಾವ-ಭಂಗಿ, ಆಲದ ಮರದಡಿ ಕುಳಿತ ಜ್ಞಾನಿಗಳು, ಗ್ರಾಮೀಣ ಬದುಕು, ನಿಸರ್ಗ-ಕಡಲತೀರದ ಸೌಂದರ್ಯ, ಪುರಾಣದ ಬಹುತೇಕ ಪಾತ್ರಗಳ ಕಲಾಕೃತಿಗಳು ಪ್ರದರ್ಶನದಲ್ಲಿವೆ. ₹5 ಸಾವಿರದಿಂದ ₹5 ಲಕ್ಷದವರೆಗೆ ಕಲಾಕೃತಿಗಳ ದರ ಇದೆ.

ಅಧಿಸೂಚನೆ ಹೊರಡಿಸಿ 24 ವರ್ಷ ಕಳೆದರೂ ಭೂಮಿ ಸ್ವಾಧೀನಪಡಿಸಿಕೊಂಡಿರದ ಪ್ರಕರಣ

ಬಿಡಿಎ ಭೂ ಸ್ವಾಧೀನ ಪ್ರಕ್ರಿಯೆ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಯ (ಬಿಡಿಎ) ಬನಶಂಕರಿ 6ನೇ ಹಂತದ ಬಡಾವಣೆ ಅಭಿವೃದ್ಧಿಗಾಗಿ ಭೂ ಸ್ವಾಧೀನದ ಅಧಿಸೂಚನೆ ಹೊರಡಿಸಿ 24 ವರ್ಷ ಕಳೆದರೂ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳದ ಹಿನ್ನೆಲೆಯಲ್ಲಿ, ಕೆಲವು ಜಮೀನುಗಳಿಗೆ ಸಂಬಂಧಿಸಿದಂತೆ ಬಿಡಿಎ ಕೈಗೊಂಡಿದ್ದ ಭೂ ಸ್ವಾಧೀನ ಪ್ರಕ್ರಿಯೆಯನ್ನು ಹೈಕೋರ್ಟ್ ರದ್ದುಪಡಿಸಿದೆ.

ಭೂ ಸ್ವಾಧೀನ ಪ್ರಕ್ರಿಯೆ ಪ್ರಶ್ನಿಸಿ ತಲಘಟ್ಟಪುರದ ಎಚ್.ನಾಗರಾಜಯ್ಯ ಸೇರಿದಂತೆ ಒಟ್ಟು ನಾಲ್ವರು ಸಲ್ಲಿಸಿದ್ದ ರಿಟ್ ಅರ್ಜಿ ಪುರಸ್ಕರಿಸಿರುವ ನ್ಯಾಯಮೂರ್ತಿ ಇ.ಎಸ್.ಇಂದಿರೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಬಿಡಿಎ ಒಟ್ಟು 2,138 ಎಕರೆ ಭೂ ಸ್ವಾಧೀನಕ್ಕೆ ಉದ್ದೇಶಿಸಿತ್ತು. ಆದರೆ, 24 ವರ್ಷ ಕಳೆದರೂ ಜಮೀನನ್ನು ತನ್ನ ಸ್ವಾಧೀನಕ್ಕೆ ಪಡೆದುಕೊಂಡಿಲ್ಲ. ಈತನಕ ಎಷ್ಟು ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂಬ ಬಗ್ಗೆ ಪೂರಕ ದಾಖಲೆಗಳನ್ನೂ ಸಲ್ಲಿಸಿಲ್ಲ. ಹಾಗಾಗಿ, ಬಡಾವಣೆ ಅಭಿವೃದ್ಧಿ ಯೋಜನೆಯನ್ನು ಬಹುತೇಕ ಅನುಷ್ಠಾನಗೊಳಿಸಲಾಗಿದೆ ಎಂಬ ಸರ್ಕಾರ ಮತ್ತು ಬಿಡಿಎ ವಾದವನ್ನು ಒಪ್ಪಲಾಗದು' ಎಂದು ನ್ಯಾಯಪೀಠ ಹೇಳಿದೆ.

'ಕೆಲವು ಜಮೀನುಗಳಿಗೆ ಸಂಬಂಧಿಸಿದಂತೆ ಬಿಡಿಎ ಭೂ ಸ್ವಾಧೀನ ಅಧಿಸೂಚನೆಯನ್ನು ರದ್ದುಗೊಳಿಸಿತ್ತು. ಈ ನಿಟ್ಟಿನಲ್ಲಿ ಕೆಲವು ಜಮೀನುಗಳನ್ನು ಸ್ವಾಧೀನ ಪ್ರಕ್ರಿಯೆಯನ್ನೂ ಕೈಬಿಡಲಾಗಿತ್ತು. ಆದರೂ, ಕೆಲವು ರೈತರ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆ ಮುಂದುವರಿಸಿರುವುದು ಸಂವಿಧಾನದ 14ನೇ ವಿಧಿಗೆ ವಿರುದ್ಧವಾದುದಾಗಿದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಮನವಿ ಏನಿತ್ತು?: 'ಸ್ವಾಧೀನ ಪ್ರಕ್ರಿಯೆ ಆರಂಭಿಸಿ 24 ವರ್ಷ ಕಳೆದರೂ ಭೂ ಸ್ವಾಧೀನಪಡಿಸಿಕೊಂಡಿಲ್ಲ. ಬಹುತೇಕ ಭೂಮಿಯನ್ನು ಸ್ವಾಧೀನದಿಂದ ಕೈಬಿಟ್ಟು ಕೆಲವು ಜಮೀನುಗಳಿಗೆ ಸಂಬಂಧಿಸಿದಂತೆ ಮಾತ್ರವೇ ಪ್ರಕ್ರಿಯೆ ಮುಂದುವರಿಸಿರುವುದು ಕಾನೂನು ಬಾಹಿರ ಮತ್ತು ತಾರತಮ್ಯದ ಕ್ರಮವಾಗಿದೆ. ಹಾಗಾಗಿ ಸ್ವಾಧೀನ ಪ್ರಕ್ರಿಯೆ ರದ್ದುಗೊಳಿಸಬೇಕು' ಎಂದು ಅರ್ಜಿದಾರರು ಕೋರಿದ್ದರು.

ಈ ಆದೇಶದಿಂದಾಗಿ ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೆಂಗೇರಿ ಹೋಬಳಿಯ ಹೆಮ್ಮಿಗೆಪುರ, ಗಾಣಕಲ್ಲು ಮತ್ತಿತರೆ ಗ್ರಾಮಗಳ ಸುಮಾರು 350 ನಿವೇಶನಗಳ ಭೂ ಮಾಲೀಕರಿಗೆ ಪರಿಹಾರ ದೊರೆತಂತಾಗಿದೆ.

ಹೆಚ್ಚಿನ ಬೆಲೆಗೆ ಐಪಿಎಲ್ ಟಿಕೆಟ್: ಪ್ರಕರಣ ರದ್ದು

ಕ್ರಿಕೆಟ್ ಪಂದ್ಯದ ಟಿಕೆಟ್‌ಗಳನ್ನು ಅಧಿಕ ಬೆಲೆಗೆ ಖರೀದಿಸಿ ಮಾರಾಟ ಮಾಡುತ್ತಿದ್ದ ಆರೋಪದಡಿ ಯುವಕನೊಬ್ಬನ ವಿರುದ್ಧ ದಾಖಲಾಗಿದ್ದ ವಂಚನೆ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ.

'ಬೆಳ್ಳಂದೂರು ಠಾಣೆಯಲ್ಲಿ ನನ್ನ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ನಗರದ ಯಮಲೂರಿನ 'ಓಂ ಶಕ್ತಿ ರೆಸಿಡೆನ್ಸಿ' ನಿವಾಸಿ ಸೋಮಾರಪು ವಂಶಿ (22) ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ರಜಾಕಾಲದ ಪೀಠದಲ್ಲಿನ ನ್ಯಾಯಮೂರ್ತಿ ಸೂರಜ್ ಗೋವಿಂದ ರಾಜ್ ಅವರು ಪ್ರಕರಣ ರದ್ದುಪಡಿಸಿ ಆದೇಶಿಸಿದ್ದಾರೆ.

'ಐಪಿಎಲ್ ಟಿಕೆಟ್ ಮಾರಾಟದ ಮೇಲೆ ಯಾವುದೇ ನಿರ್ಬಂಧವಿಲ್ಲ. ಹಾಗಾಗಿ, ಅರ್ಜಿದಾರರ ವಿರುದ್ಧ ಕ್ರಿಮಿನಲ್ ಪ್ರಕರಣ ಮುಂದುವರಿಸುವುದು ಕಾನೂನು ಪ್ರಕ್ರಿಯೆಯ ದುರ್ಬಳಕೆಯಾಗಲಿದೆ' ಎಂಬ ಅಭಿಪ್ರಾಯದೊಂದಿಗೆ ನ್ಯಾಯಪೀಠ, ಸೋಮಾರಪು ವಂಶಿ (22) ವಿರುದ್ಧದ ಎಫ್‌ಐಆರ್ ರದ್ದುಪಡಿಸಿದೆ.

ಪ್ರಕರಣವೇನು?: ನಗರದ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ 2025ರ ಮೇ 17ರಂದು ಆರ್‌ಸಿಬಿ ಮತ್ತು ಕೆಕೆಆರ್ ತಂಡಗಳ ಮಧ್ಯೆ ಐಪಿಎಲ್ ಟಿ-20 ಕ್ರಿಕೆಟ್ ಪಂದ್ಯ ಆಯೋಜನೆಯಾಗಿತ್ತು. 'ಈ ಪಂದ್ಯ ವೀಕ್ಷಣೆಯ ₹1,600 ಮುಖಬೆಲೆಯ ಟಿಕೆಟ್‌ಗಳನ್ನು ವಂಶಿ ಹೆಚ್ಚಿನ ಬೆಲೆಗೆ ಮಾರಾಟ ಮಾಡಿದ್ದಾರೆ' ಎಂದು ಆರೋಪಿಸಿ ಸಿಸಿಬಿಯ ಜಿ.ಟಿ.ಶ್ರೀನಿವಾಸ್ ಬೆಳ್ಳಂದೂರು ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು.

ತನಿಖೆ ನಡೆಸಿದ್ದ ಪೊಲೀಸರು, ಭಾರತೀಯ ನ್ಯಾಯ ಸಂಹಿತೆ–2023ರ (ಬಿಎನ್‌ಎಸ್) ಕಲಂ 318(4)ರ ಅಡಿಯಲ್ಲಿ ವಂಚನೆ ಅಪರಾಧಕ್ಕೆ ಸಂಬಂಧಿಸಿದಂತೆ ವಂಶಿ ವಿರುದ್ಧ ಎಫ್‌ಐಆರ್ ದಾಖಲಿಸಿದ್ದರು.

ಖರೀದಿ ಕೇಂದ್ರ ಹೆಚ್ಚಿಸಲು ನಿರ್ದೇಶನ

ಹೈಕೋರ್ಟ್ ಸುದ್ದಿ

'ರೈತರ ಉತ್ಪನ್ನಗಳ ಶಾಶ್ವತ ಖರೀದಿ ಕೇಂದ್ರಗಳ ಸ್ಥಾಪನೆ, ಬೆಳೆಗಳನ್ನು ಬೆಳೆಯುವ ಸ್ವರೂಪ ಹಾಗೂ ಆಹಾರ ಧಾನ್ಯಗಳ ಇಳುವರಿ ಪ್ರಮಾಣದ ಕುರಿತು ಆಯಾ ಜಿಲ್ಲಾಧಿಕಾರಿಗಳು ವೈಜ್ಞಾನಿಕ ಅಧ್ಯಯನ ನಡೆಸಬೇಕು' ಎಂದು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ, 'ಕರ್ನಾಟಕ ರೈತ ಸೇನೆ' ಅಧ್ಯಕ್ಷ ವಿರೇಶ್ ಸಿ. ಸೊಬರದಮಠ ಸ್ವಾಮೀಜಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಆದೇಶವನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಪ್ರಕಟಿಸಿದ್ದು, ಕೆಲವು ನಿರ್ದೇಶನ ಪಾಲಿಸುವಂತೆ ರಾಜ್ಯ ಸರ್ಕಾರಕ್ಕೆ ತಾಕೀತು ಮಾಡಿದೆ.

'ಸಾಂಪ್ರದಾಯಿಕ ಕೊಯ್ಲುಗಳ ನಂತರವೂ ಬೆಳೆಗಳನ್ನು ಬೆಳೆಯುವ ಈಗಿನ ಸಂದರ್ಭದಲ್ಲಿ ರೈತರು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಮತ್ತು ಮಧ್ಯವರ್ತಿಗಳಿಂದ ತಪ್ಪಿಸಿಕೊಳ್ಳಲು ಪ್ರತಿ ತಾಲ್ಲೂಕಿನಲ್ಲಿ ಕನಿಷ್ಠ ಒಂದು ಹೆಚ್ಚುವರಿ ಖರೀದಿ ಕೇಂದ್ರ ತೆರೆಯಬೇಕು. ಅವುಗಳು ಕೇಂದ್ರ ಸರ್ಕಾರ ನಿಗದಿಪಡಿಸಿದ ಅವಧಿಗಿಂತ 2 ತಿಂಗಳು ಹೆಚ್ಚುವರಿಯಾಗಿ ಕಾರ್ಯನಿರ್ವಹಿಸಬೇಕು' ಎಂದು ನ್ಯಾಯಪೀಠ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

'ನಿರ್ದಿಷ್ಟ ಪ್ರದೇಶದ ಭೌಗೋಳಿಕ ಸ್ಥಿತಿಗತಿ ಹಾಗೂ ಅಲ್ಲಿ ಉತ್ಪಾದಿಸಲಾಗುವ ಆಹಾರ ಧಾನ್ಯಗಳ ಪ್ರಮಾಣವನ್ನು ಗಮನದಲ್ಲಿಟ್ಟುಕೊಂಡು ಹಾಗೂ ಕನಿಷ್ಠ ಬೆಂಬಲ ಯೋಜನೆಯ ಉದ್ದೇಶಗಳನ್ನು ಸಫಲಗೊಳಿಸಲು ಕೇಂದ್ರ ಸರ್ಕಾರ ನಿಗದಿಪಡಿಸಿದ ಅವಧಿಯ ಹೊರತಾಗಿಯೂ ರಾಜ್ಯ ಸರ್ಕಾರ ಹೆಚ್ಚುವರಿ ಅವಧಿಗೆ ಖರೀದಿ ಕೇಂದ್ರಗಳನ್ನು ತೆರೆಯಲು ಅಧಿಕಾರ ಹೊಂದಿರುತ್ತದೆ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

'ಈಗಿರುವ ಖರೀದಿ ಕೇಂದ್ರಗಳು ಸಾಕಷ್ಟು ಸಂಖ್ಯೆಯಲ್ಲಿ ಇಲ್ಲ. ಆದ್ದರಿಂದ, ಬೇಡಿಕೆಯನ್ನು ಈಡೇರಿಸಲು ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಅಗತ್ಯ ಸಂಖ್ಯೆಯಲ್ಲಿ ಹೆಚ್ಚುವರಿ ಖರೀದಿ ಕೇಂದ್ರಗಳನ್ನು ಸ್ಥಾಪಿಸಿ ಅವುಗಳ ಕಾರ್ಯನಿರ್ವಹಣೆಗೆ ಅನುವು ಮಾಡಿಕೊಡಬೇಕು' ಎಂದು ನಿರ್ದೇಶಿಸಿದೆ.

ಮನವಿ ಏನಿತ್ತು?: 'ಕನಿಷ್ಠ ಬೆಂಬಲ ಯೋಜನೆಯಡಿ (ಎಂಎಸ್‌ಪಿ) ರೈತರು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಈಗಾಗಲೇ ಸ್ಥಾಪಿಸಲಾಗಿರುವ ಖರೀದಿ ಕೇಂದ್ರಗಳನ್ನು ವರ್ಷದ 365 ದಿನಗಳ ಕಾಲ ಶಾಶ್ವತವಾಗಿ ಕಾರ್ಯನಿರ್ವಹಿಸುವಂತೆ ಮಾಡಲು ನಿರ್ದೇಶಿಸಬೇಕು ಮತ್ತು ಪ್ರತಿ ಜಿಲ್ಲೆಯಲ್ಲಿ ಬೇಡಿಕೆಗೆ ತಕ್ಕಂತೆ ಹೆಚ್ಚುವರಿ ಖರೀದಿ ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದರು.

ಥಾಯ್ಲೆಂಡ್ ಗಾಂಜಾ: ಎಂಟು ಜನರ ಬಂಧನ

ಪ್ರಜಾವಾಣಿ ವಾರ್ತೆ


ಹೈಡ್ರೊ ಗಾಂಜಾ

ಕೊಪ್ಪಳ: ಥಾಯ್ಲೆಂಡ್‌ನಿಂದ ಹೈಡ್ರೊ ಗಾಂಜಾ ತಂದು ಮಾರಾಟ ಮಾಡಲು ಕಾರಿನಲ್ಲಿ ತೆಗೆದುಕೊಂಡು ಹೋಗುತ್ತಿದ್ದ ಎಂಟು ಜನ ಆರೋಪಿಗಳನ್ನು ಪೊಲೀಸರು ಗಂಗಾವತಿಯಲ್ಲಿ ಬುಧವಾರ ಬಂಧಿಸಿದ್ದಾರೆ.

ಬಿಇ ಪದವೀಧರ, ಬಿಕಾಂ ಹೀಗೆ ಉತ್ತಮ ಓದಿನ ಹಿನ್ನೆಲೆ ಹೊಂದಿರುವ ಕೇರಳದ ಕಣ್ಣೂರಿನ ಮೂವರು ಮತ್ತು ಬಳ್ಳಾರಿಯ ಐದು ಜನರನ್ನು ಬಂಧಿಸಲಾಗಿದ್ದು, ಅವರಿಂದ ಅಂದಾಜು ₹ 18.06 ಲಕ್ಷ ಮೌಲ್ಯದ 1,806 ಗ್ರಾಂ ಗಾಂಜಾ ವಶಕ್ಕೆ ಪಡೆಯಲಾಗಿದೆ. ಅನುಮಾನ ಬರದಂತೆ ಎಚ್ಚರ ವಹಿಸಲು ಬೆಳ್ಳಿ ಬಣ್ಣದ ಕವಚದಲ್ಲಿಟ್ಟುಕೊಂಡು ಸಾಗಾಟ ಮಾಡುತ್ತಿದ್ದರು.

'ಇದೇ 24ರಂದು ಗಂಗಾವತಿಯಲ್ಲಿ ಗಾಂಜಾ ಸೇವನೆ ಪ್ರಕರಣ ಕುರಿತು ಎಫ್‌ಐಆರ್ ದಾಖಲಾಗಿತ್ತು. ಅದರ ಮೂಲ ಹುಡುಕಿ ತನಿಖೆ ನಡೆಸುತ್ತಿದ್ದಾಗ ಈ ಘಟನೆ ಬಹಿರಂಗವಾಗಿದೆ. ಆರೋಪಿಗಳಿಂದ ಎರಡು ಕಾರು ಹಾಗೂ ಎಂಟು ಮೊಬೈಲ್‌ಗಳನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ. ಇವರು ಥಾಯ್ಲೆಂಡ್‌ನಿಂದ ಅಕ್ರಮವಾಗಿ ಹೈಡ್ರೊ ಗಾಂಜಾವನ್ನು ಹೈದರಾಬಾದ್ ಮೂಲಕ ತರಿಸಿ ಇಲ್ಲಿಗೆ ತೆಗೆದುಕೊಂಡು ಬಂದಿದ್ದರು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ರಾಮ್ ಎಲ್. ಅರಸಿದ್ಧಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಸುದ್ದಿ 2 ನಿಮಿಷ

ತುಂಗಭದ್ರಾ ಅಣೆಕಟ್ಟೆ ಕ್ರಸ್ಟ್‌ಗೇಟ್ ನಾಲ್ಕು ಕಂಪನಿಗಳಿಂದ ಬಿಡ್

ಹೊಸಪೇಟೆ (ವಿಜಯನಗರ): 'ತುಂಗಭದ್ರಾ ಅಣೆಕಟ್ಟೆಯ 32 ಕ್ರಸ್ಟ್‌ಗೇಟ್‌ಗಳನ್ನು ಬದಲಿಸಿ ಹೊಸ ಗೇಟ್ ಅಳವಡಿಸಲು ಕರೆಯಲಾಗಿದ್ದ ಟೆಂಡರ್‌ಗೆ ನಾಲ್ಕು ಕಂಪನಿಗಳು ಬಿಡ್ ಸಲ್ಲಿಸಿವೆ' ಎಂದು ತುಂಗಭದ್ರಾ ಮಂಡಳಿಯ ಮೂಲಗಳು ತಿಳಿಸಿವೆ.

'ಯಾವ ಕಂಪನಿ ಟೆಂಡರ್ ನಿಯಮಾವಳಿ ಪಾಲಿಸಿದೆ ಎಂಬುದನ್ನು ಪರಿಶೀಲಿಸಿ ಅಂತಿಮವಾಗಿ ಕಂಪನಿಯನ್ನು ಆಯ್ಕೆ ಮಾಡಲಾಗುವುದು. ಇನ್ನು ಮೂರು–ನಾಲ್ಕು ದಿನಗಳಲ್ಲಿ ನಿರ್ಧಾರವಾಗಲಿದೆ' ಎಂದು ಮಂಡಳಿಯ ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಅಣೆಕಟ್ಟೆಯ 19ನೇ ಗೇಟ್‌ಗೆ ಕ್ರಸ್ಟ್‌ಗೇಟ್ ಅಳವಡಿಸುವ ಗುತ್ತಿಗೆಯನ್ನು ಅಹಮದಾಬಾದ್‌ನ ಹಾರ್ಡ್‌ವೇರ್ ಟೂಲ್ಸ್ ಆ್ಯಂಡ್ ಮೆಷಿನರಿ ಪ್ರೊಜೆಕ್ಟ್ ಕಂಪನಿ ಪಡೆದಿದೆ. ಮುಂಗಾರು ಮಳೆ ಆರಂಭವಾಗಿದ್ದರೂ ಕೆಲಸ ಇನ್ನೂ ಆರಂಭವಾಗಿಲ್ಲ.

ವೀರ ಸಾವರ್ಕರ್ ಜಯಂತ್ಯುತ್ಸವ



ಯಲಹಂಕ: ಬಿಜೆಪಿ ನಗರಮಂಡಲ ಹಾಗೂ ಸಂಘಪರಿವಾರದ ಸಹಯೋಗದೊಂದಿಗೆ ಶಾಸಕ ಎಸ್.ಆರ್. ವಿಶ್ವನಾಥ್ ನೇತೃತ್ವದಲ್ಲಿ ಸ್ವಾತಂತ್ರ್ಯ ಹೋರಾಟಗಾರ ವೀರ ಸಾವರ್ಕರ್ ಅವರ 142ನೇ ಜಯಂತ್ಯುತ್ಸವವನ್ನು ಉಪನಗರದಲ್ಲಿ ಬುಧವಾರ ಆಚರಿಸಲಾಯಿತು.

ವೀರಸಾವರ್ಕರ್ ಅವರ ಭಾವಚಿತ್ರವನ್ನು ರಥದಲ್ಲಿಟ್ಟು ಪೂಜೆ ನೆರವೇರಿದ ಬಳಿಕ ಜ್ಞಾನಜ್ಯೋತಿ ಕಾಲೇಜಿನಿಂದ ಆರಂಭವಾದ ಮೆರವಣಿಗೆಯು, ಚಿಕ್ಕಬೊಮ್ಮಸಂದ್ರ ಕ್ರಾಸ್ ಹಾಗೂ ಮದರ್ ಡೈರಿ ಕ್ರಾಸ್ ಮೂಲಕ ವೀರ ಸಾವರ್ಕರ್ ಮೇಲ್ಸೇತುವೆಯವರೆಗೆ ಸಾಗಿತು.

ಎಸ್.ಆರ್.ವಿಶ್ವನಾಥ್ ಮಾತನಾಡಿ, 'ಬಾಲ್ಯದಲ್ಲಿಯೇ ಬಾಲಗಂಗಾಧರ ತಿಲಕ್ ಅವರ ಪ್ರೇರಣೆಯಿಂದ ಸ್ವಾತಂತ್ರ್ಯ ಹೋರಾಟದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದ ಸಾವರ್ಕರ್ ಅವರು, ತಮ್ಮ ಕ್ರಾಂತಿಕಾರಿ ಹೋರಾಟದ ಮೂಲಕ ಬ್ರಿಟಿಷರನ್ನು ದೇಶದಿಂದ ತೊಲಗಿಸಲು ಮಾಡಿದ್ದ ಸಂಕಲ್ಪ ಸದಾ ಸ್ಫೂರ್ತಿಯಾಗಿದೆ' ಎಂದರು.

ಬಿಜೆಪಿ ಮುಖಂಡರಾದ ಎಸ್.ಎನ್.ರಾಜಣ್ಣ, ದಿಬ್ಬೂರು ಜಯಣ್ಣ, ಸತೀಶ್ ಕಡತನಮಲೆ, ಚೊಕ್ಕನಹಳ್ಳಿ ವೆಂಕಟೇಶ್, ಅಲೋಕ್ ವಿಶ್ವನಾಥ್, ಡಿ.ಜಿ.ಅಪ್ಪಯ್ಯಣ್ಣ, ಈಶ್ವರ್, ಎಂ.ಮಂಜುನಾಥ್, ಎಂ.ಮುನಿರಾಜು, ಪವನ್‌ಕುಮಾರ್.ವಿ, ಮಧುಸೂದನ್, ಮುರಾರಿರಾಮು ಉಪಸ್ಥಿತರಿದ್ದರು.

ನಗರದಲ್ಲಿ ಇಂದು

'ಕರ್ನಾಟಕ ಹೋಟೆಲ್ ಉದ್ಯಮ–ಪ್ರವೃತ್ತಿ, ಸವಾಲುಗಳ ಮತ್ತು ಭವಿಷ್ಯದ ನಿರೀಕ್ಷೆಗಳು', 'ಆತಿಥ್ಯ ರತ್ನ', 'ಉದ್ಯಮ ರತ್ನ' ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಉದ್ಘಾಟನೆ: ಥಾವರಚಂದ್ ಗೆಹಲೋತ್, ಅತಿಥಿ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಅಧ್ಯಕ್ಷತೆ: ಜಿ.ಕೆ. ಶೆಟ್ಟಿ, ಆಯೋಜನೆ: ಕರ್ನಾಟಕ ರಾಜ್ಯ ಹೋಟೆಲುಗಳ ಸಂಘ, ಸ್ಥಳ: ಸರ್ ಎಂ.ವಿ. ಸಭಾಂಗಣ, ಎಫ್‌ಕೆಸಿಸಿಐ, ಕೆಂಪೇಗೌಡ ರಸ್ತೆ, ಬೆಳಿಗ್ಗೆ 10


ನಿರ್ಮಲಾನಂದನಾಥ ಸ್ವಾಮೀಜಿ

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಲಾಲ್ ಸುಮೇಧಾ ಐಶಾನಿ, ಉಪಸ್ಥಿತಿ: ಶುಭಾ ಧನಂಜಯ, ಶಾಲಿನಿ ರಜನೀಶ್, ಕೆ. ವೆಂಕಟೇಶ್, ತೇಜಸ್ವಿನಿ ಅನಂತಕುಮಾರ್, ಎಂ. ಶಕುಂತಲಾ ಹನುಮಂತಪ್ಪ, ಎಂ. ಸೂರ್ಯಪ್ರಸಾದ್, ಆಯೋಜನೆ: ನಾಟ್ಯತರಂಗ, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ಮಲ್ಲೇಶ್ವರ, ಸಂಜೆ 5.30

ಎನ್. ಅಮೃತ್ ಅವರಿಗೆ ಗುರುವಂದನೆ ಕಾರ್ಯಕ್ರಮ: ಅತಿಥಿಗಳು: ಮೈಸೂರು ಎಂ. ಮಂಜುನಾಥ್, ಎಂ. ಸೂರ್ಯಪ್ರಸಾದ್, ಆರ್.ವಿ. ರಾಘವೇಂದ್ರ, ಅಭಿನಂದನಾ ಭಾಷಣ: ಬಿ.ಎಸ್. ಪುರುಷೋತ್ತಮ್, ಅಧ್ಯಕ್ಷತೆ: ಆರ್.ಕೆ. ಪದ್ಮನಾಭ, ಉಪಸ್ಥಿತಿ: ಎಂ. ವಾಸುದೇವರಾವ್, ಎ.ವಿ. ಆನಂದ್, ಸ್ಥಳ: ಶ್ರೀಜಯರಾಮ್ ಸೇವಾ ಮಂಡಳಿ, ಎಂಟನೇ ಬ್ಲಾಕ್, ಜಯನಗರ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಕಲಿತ ಶಾಲೆಗೆ ಸಚಿವರಿಂದ ಹೈಟೆಕ್ ಸ್ಪರ್ಶ

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಮರಸೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಶೆಟ್ಟಿಹಳ್ಳಿಯ ತಾವು ಓದಿದ ಹುಟ್ಟೂರಿನ ಸರ್ಕಾರಿ ಶಾಲೆಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೈಟೆಕ್ ಸ್ಪರ್ಶ ನೀಡಿದ್ದಾರೆ.

ಸಚಿವ ರಾಮಲಿಂಗಾರೆಡ್ಡಿ 1958-59ನೇ ಸಾಲಿನಲ್ಲಿ ಶೆಟ್ಟಿಹಳ್ಳಿಯ ಸರ್ಕಾರಿ ಶಾಲೆಯಲ್ಲಿ ಕಲಿತಿದ್ದಾರೆ. ಶಿಥಿಲಗೊಂಡಿದ್ದ ಈ ಶಾಲೆಯು ಕೆಲ ವರ್ಷಗಳ ಹಿಂದೆ ಮುಚ್ಚಿತ್ತು. ಗ್ರಾಮಸ್ಥರು ಮಕ್ಕಳನ್ನು ಬೇರೆ ಗ್ರಾಮಗಳ ಶಾಲೆಗಳಿಗೆ ಕಳುಹಿಸುತ್ತಿದ್ದರು.

ಸ್ನೇಹಿತರ ಜೊತೆ ಚರ್ಚಿಸಿ ಅಂದಾಜು ₹1 ಕೋಟಿ ವೆಚ್ಚದಲ್ಲಿ ಶೆಟ್ಟಿಹಳ್ಳಿ ಸರ್ಕಾರಿ ಶಾಲೆಗೆ ಸುಸಜ್ಜಿತ ಕಟ್ಟಡ ನಿರ್ಮಿಸಿದ್ದಾರೆ. ಇದು ಮೇ 30ರಂದು ಲೋಕಾರ್ಪಣೆಗೊಳ್ಳಲಿದೆ.

ಕೀ ಫೌಂಡೇಷನ್ ಮೂಲಕ ಪೂರ್ವ ಪ್ರಾಥಮಿಕ ಶಾಲೆ ಎಲ್‌ಕೆಜಿ ಮತ್ತು ಯುಕೆಜಿ ತರಗತಿ ಆರಂಭಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಎಲ್‌ಕೆಜಿಯಿಂದ 5ನೇತರಗತಿವರೆಗೆಆರಂಭಿಸಲಾಗುತ್ತದೆ.

ನವೀಕೃತ ಶಾಲೆ ಪರಿಶೀಲಿಸಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಚಿವರು, ಶಾಲೆಯಲ್ಲಿ ಎಲ್ಲಾ ಸೌಲಭ್ಯ ಕಲ್ಪಿಸಲಾಗಿದೆ. ಸುಸಜ್ಜಿತ ಕೊಠಡಿ, ಸ್ಮಾರ್ಟ್ ಕ್ಲಾಸ್, ಆಟದ ಮೈದಾನ, ಕಂಪ್ಯೂಟರ್ ಕೊಠಡಿ, ಶೌಚಾಲಯ, ಅಡುಗೆ ಕೋಣೆ, ಪ್ರಾರ್ಥನಾ ಸಭಾಂಗಣ, ಪೀಠೋಪಕರಣ ಸೇರಿದಂತೆ ಎಲ್ಲಾ ಸೌಲಭ್ಯ ಕಲ್ಪಿಸಲಾಗಿದೆ. ಶಿಕ್ಷಣ ಇಲಾಖೆಯು ಶಿಕ್ಷಕರನ್ನು ನೇಮಿಸಿದೆ. ಅಗತ್ಯವಿದ್ದಲ್ಲಿ ವೈಯಕ್ತಿಕವಾಗಿಯೂ ಶಿಕ್ಷಕರ ನೇಮಕ ಮಾಡಲಾಗುವುದು ಎಂದರು.


ಹುಟ್ಟೂರ ಶಾಲೆಯ ಕೊಠಡಿಯಲ್ಲಿ ತಮ್ಮ ಹಳೆಯ ಸಹಪಾಠಿಯಾದ ಬಸವರಾಜು, ರಾಮರೆಡ್ಡಿ ಮತ್ತು ಕೃಷ್ಣಾರೆಡ್ಡಿ ಅವರೊಂದಿಗೆ ಕುಳಿತು ಶಾಲಾ ದಿನ ಮೆಲುಕು ಹಾಕಿದ ಸಚಿವ ರಾಮಲಿಂಗಾರೆಡ್ಡಿ

ಸಹಪಾಠಿಗಳೊಂದಿಗೆ ಶಾಲೆ ದಿನ ಮೆಲುಕು

ನೂತನ ಕಟ್ಟಡದ ಉದ್ಘಾಟನೆಯ ಪೂರ್ವಸಿದ್ಧತೆ ವೀಕ್ಷಿಸಲು ಗ್ರಾಮಕ್ಕೆ ಆಗಮಿಸಿದ್ದ ಸಚಿವ ರಾಮಲಿಂಗಾರೆಡ್ಡಿ ಅವರು ತಮ್ಮ ಸಹಪಾಠಿಗಳೊಂದಿಗೆ ಶಾಲಾ ದಿನಗಳನ್ನು ಮೆಲುಕು ಹಾಕಿದರು.

'ಹುಟ್ಟೂರಿನ ಶಾಲೆಯನ್ನು ಅಭಿವೃದ್ಧಿ ಪಡಿಸಬೇಕೆಂದು ಸಂಕಲ್ಪ ಮಾಡಿದಾಗ ಗ್ರಾಮಸ್ಥರು ಜೊತೆಗೂಡಿದರು. ಗ್ರಾಮ ಪಂಚಾಯಿತಿ ಸದಸ್ಯರಾದ ಪ್ರಭಾಕರರೆಡ್ಡಿ, ವನಿತಾ ಹಾಗೂ ಗ್ರಾಮಸ್ಥರು ತಮ್ಮ ಸ್ವಂತ ಮನೆ ಕೆಲಸದಂತೆ ಕಟ್ಟಡ ನಿರ್ಮಾಣದಲ್ಲಿ ಜೊತೆಯಾದರು. ವಿಧಾನ ಪರಿಷತ್‌ನ ಕೆಲ ಸದಸ್ಯರು ಸಹಕಾರ ನೀಡಿದರು' ಎಂದು ತಿಳಿಸಿದರು.

ನಾನು ಓದಿದ ಶಾಲೆಯನ್ನು ಬೆಂಗಳೂರಿನ ಶಾಲೆಗಳಂತೆ ಸಜ್ಜುಗೊಳಿಸಬೇಕೆಂಬ ಸಂಕಲ್ಪ ನಮ್ಮದು. ಈ ದಿಕ್ಕಿನಲ್ಲಿ ಹೆಜ್ಜೆ ಇಡಲಾಗಿದೆ
ರಾಮಲಿಂಗಾರೆಡ್ಡಿ, ಸಚಿವ

ನಮ್ಮೂರಿನ ಸರ್ಕಾರಿ ಶಾಲೆ ಮುಚ್ಚಿದ್ದರಿಂದ ಏನೋ ಕಳೆದುಕೊಂಡ ಅನುಭವವಾಗಿತ್ತು. ನೂತನ ಶಾಲಾ ಕಟ್ಟಡ ನಿರ್ಮಾಣ ಆಗಿರುವುದು ಸಂತಸ ತಂದಿದೆ
ವನಿತಾ, ಗ್ರಾಮ ಪಂಚಾಯಿತಿ ಸದಸ್ಯೆ

ಫುಟ್‌ಬಾಲ್: ಎಂಆರ್‌ಯು ತಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂ.ಆರ್.ಯು ಫುಟ್‌ಬಾಲ್ ಕ್ಲಬ್ ತಂಡವು ಇಲ್ಲಿ ನಡೆಯುತ್ತಿರುವ ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆ ಆಶ್ರಯದ 21 ವರ್ಷದೊಳಗಿನವರ ಫುಟ್‌ಬಾಲ್ ಟೂರ್ನಿಯ ಎ ಗುಂಪಿನ ಪಂದ್ಯದಲ್ಲಿ ಜಯಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಎಂ.ಆರ್.ಯು ತಂಡವು 5–0ಯಿಂದ ಬ್ಲ್ಯೂಸ್ಟಾರ್ಸ್ ಎಫ್‌ಸಿ ವಿರುದ್ಧ ಜಯಿಸಿತು. ವಿಜೇತ ತಂಡದ ಎಸ್. ಸಚಿನ್ (2ನೇ ನಿಮಿಷ), ಆರ್. ಸಚಿನ್ (30ನಿ, 90ನಿ) ಮತ್ತು ರಾಹುಲ್ ಕೆನಡಿ (53ನಿ, 66ನಿ) ಗೋಲು ಗಳಿಸಿದರು.

ಬಿ ಗುಂಪಿನಲ್ಲಿ ಆಲ್ಕೇಮಿ ಐಎಫ್‌ಎ 12–0ಯಿಂದ ವಿಲಿಯಂ ಎಸ್.ಎ ವಿರುದ್ಧ ಜಯಿಸಿತು. ಆಲ್ಕೇಮಿಯ ಸಂಪ್ರಂಶೈ ರಾಣೆ (3ನಿ, 22ನಿ), ಸನಾಬಂ ದೇವಸನ್ (17ನಿ, 25ನಿ), ಜೋಮನ್ ಜೇಕಬ್ (27ನಿ.59ನಿ.65ನಿ.68ನಿ, 75ನಿ.81ನಿ.90 + 2ನಿ) ಮತ್ತು ಜಿ. ಉದಿತ್ (55ನಿ) ಗೋಲು ಹೊಡೆದರು.

ಇನ್ನೊಂದು ಪಂದ್ಯದಲ್ಲಿ ಬಿಪಿಎಸ್‌ಎಸ್ ಮತ್ತು ಸ್ಪಾಟ್ ಹುಡ್ ಎಫ್‌ಸಿ ತಂಡಗಳ ನಡುವಣ ಪಂದ್ಯವು 1–1ರಿಂದ ಡ್ರಾ ಆಯಿತು.

ಬಿಪಿಎಸ್‌ಎಸ್ ತಂಡದ ಅಲ್ಬರ್ಟ್ ಮ್ಯಾಂಗ್‌ಲಂಗ್ ಥಾಂತ್ (64ನಿ) ಮತ್ತು ಹುಡ್ ತಂಡದ ಮೊಹಮ್ಮದ್ ಫಹಾದ್ (78ನಿ) ಗೋಲು ಗಳಿಸಿದರು.


ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಅವರು ಬುಧವಾರ ಬೆಂಗಳೂರಿನ ಗೆದ್ದಲಹಳ್ಳಿಯಲ್ಲಿ ಮನೆಗಳಿಗೆ ಭೇಟಿ ನೀಡಿ ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆಯ ಕಾರ್ಯವಿಧಾನಗಳನ್ನು ಪರಿಶೀಲಿಸಿದರು


ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆ ನಡೆಸುತ್ತಿದ್ದ ಶಿಕ್ಷಕರ ಜತೆಗೆ ಎಚ್.ಆಂಜನೇಯ ಅವರು ಮನೆ–ಮನೆಗೆ ಭೇಟಿ ನೀಡಿ ಸಮಾಲೋಚನೆ ನಡೆಸಿದರು

ಸಮೀಕ್ಷೆ ಅವಧಿ ವಿಸ್ತರಿಸಿ ಎಚ್.ಆಂಜನೇಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಶಿಷ್ಟ ಜಾತಿಗಳಿಗೆ ಒಳಮೀಸಲಾತಿ ಕಲ್ಪಿಸುವ ಉದ್ದೇಶದಿಂದ ನಡೆಸಲಾಗುತ್ತಿರುವ ಸಮಗ್ರ ಸಮೀಕ್ಷೆಯ ಪ್ರಗತಿ ಬೆಂಗಳೂರು ವ್ಯಾಪ್ತಿಯಲ್ಲಿ ನಿಧಾನಗತಿಯಲ್ಲಿದೆ. ಹೀಗಾಗಿ ಸಮೀಕ್ಷೆಯ ಅವಧಿಯನ್ನು ವಿಸ್ತರಿಸಬೇಕು' ಎಂದು ಮಾಜಿ ಸಚಿವ ಎಚ್.ಆಂಜನೇಯ ಹೇಳಿದರು.

ಸಿ.ವಿ.ರಾಮನ್ ನಗರ ವ್ಯಾಪ್ತಿಯ ಎಂ.ಸಿ.ಕಾಲೊನಿಯ ದೊಡ್ಡಗುಂಟ ಬಡಾವಣೆಯಲ್ಲಿ ಬುಧವಾರ ಸಮೀಕ್ಷೆ ನಡೆಸುತ್ತಿದ್ದ ಶಿಕ್ಷಕರ ಜತೆಗೆ ಆಂಜನೇಯ ಅವರೂ ಮನೆ–ಮನೆಗೆ ಭೇಟಿ ನೀಡಿದರು.

ಮಾದಿಗ ಸಮುದಾಯದವರ ಮನೆಗೆ ಭೇಟಿ ನೀಡಿದ ಅವರು, 'ಸಮೀಕ್ಷೆ ವೇಳೆ ಎಲ್ಲರೂ ನಿಮ್ಮ ಜಾತಿಯಲ್ಲಿ ಮಾದಿಗ ಎಂದೇ ಬರೆಸಿ. ಸಮೀಕ್ಷೆಯಲ್ಲಿ ನಿಮ್ಮ ಜಾತಿಯ ಕ್ರಮ ಸಂಖ್ಯೆ 061. ಇದನ್ನು ಸರಿಯಾಗಿ ನೆನಪಿನಲ್ಲಿ ಇರಿಸಿಕೊಳ್ಳಿ' ಎಂದರು.

ನಂತರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಗ್ರಾಮೀಣ ಪ್ರದೇಶದಲ್ಲಿ ಸಮೀಕ್ಷೆ ತ್ವರಿತವಾಗಿ ಆಗುತ್ತಿದೆ. ಬೆಂಗಳೂರಿನಲ್ಲಿ ನಿಧಾನವಾಗುತ್ತಿದೆ. ಜತೆಗೆ ಸಮೀಕ್ಷೆ ನಡೆಸುತ್ತಿರುವವರಿಗೂ ಪೂರ್ಣ ಮಾಹಿತಿ ಇಲ್ಲ. ಈ ಸಮಸ್ಯೆಗಳನ್ನು ಸರಿಪಡಿಸಿ, ಅವಧಿಯನ್ನೂ ವಿಸ್ತರಿಸಿ ಎಂದು ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ಏಕಸದಸ್ಯ ವಿಚಾರಣಾ ಆಯೋಗಕ್ಕೆ ಪತ್ರ ಬರೆದಿದ್ದೇನೆ' ಎಂದರು.

ದುಷ್ಟರ ಸಂಹಾರದಲ್ಲಿ ಭಾರತ ರಾಜಿ ಮಾಡಿಕೊಳ್ಳಲ್ಲ: ಮುಖ್ಯಮಂತ್ರಿ ಸಿದ್ದರಾಮಯ್ಯ

ಸೇನಾ ಕ್ಯಾಂಟೀನ್‌ಗೆ ಅಬಕಾರಿ ಸುಂಕವಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಸೇನಾ ಕ್ಯಾಂಟೀನ್‌ಗೆ ಅಬಕಾರಿ ಸುಂಕ ವಿಧಿಸುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸೈನಿಕರಿಗೆ ನಮಿಸುವ ಉದ್ದೇಶದಿಂದ ಕಾಂಗ್ರೆಸ್ ವತಿಯಿಂದ ನಗರದಲ್ಲಿ ಬುಧವಾರ ಆಯೋಜಿಸಲಾಗಿದ್ದ 'ಜೈ ಹಿಂದ್ ಸಭಾ' ಕಾರ್ಯಕ್ರಮದಲ್ಲಿ ಮಾತನಾಡಿ ಅವರು ಈ ವಿಷಯ ತಿಳಿಸಿದರು.

ರಾಜ್ಯದಲ್ಲಿ ನೆಲಸಿರುವ ನಿವೃತ್ತ ಸೈನಿಕರ ಕಲ್ಯಾಣಕ್ಕಾಗಿ ರಾಜ್ಯ ಸರ್ಕಾರವು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಿದೆ. ಅವರ ಬೇಡಿಕೆಗಳಿಗೆ ಸ್ಪಂದಿಸಲಿದೆ ಎಂದು ಭರವಸೆ ನೀಡಿದರು.

'ತ್ಯಾಗ ಮನೋಭಾವದಿಂದ ಯೋಧರು ದೇಶ ರಕ್ಷಣೆಯಲ್ಲಿ ತೊಡಗಿದ್ದಾರೆ. ದೇಶದ ರಕ್ಷಣೆ ಕೇವಲ ಯೋಧರ ಜವಾಬ್ದಾರಿಯಲ್ಲ. 140 ಕೋಟಿ ಭಾರತೀಯರ ಜವಾಬ್ದಾರಿ. ದುಷ್ಟರ ಸಂಹಾರದ ವಿಚಾರದಲ್ಲಿ ಭಾರತ ಯಾವತ್ತೂ ರಾಜಿ ಆಗಿಲ್ಲ. ಮುಂದೆಯೂ ಆಗುವುದಿಲ್ಲ. ಇದು ಪ್ರತಿಯೊಬ್ಬ ಭಾರತೀಯರ ಬದ್ಧತೆ' ಎಂದರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ರಾಜ್ಯದಲ್ಲಿರುವ ಎಲ್ಲಾ ಮಾಜಿ ಯೋಧರಿಗೆ ನೆರವಾಗಲು ಪ್ರತ್ಯೇಕ ನಿಗಮ ಸ್ಥಾಪಿಸಲು ಚಿಂತನೆ ನಡೆಸಲಾಗಿದ್ದು, ಈ ವಿಚಾರವನ್ನು ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ತೀರ್ಮಾನ ಮಾಡಲಾಗುವುದು ಎಂದು ಹೇಳಿದರು.

ಕದನ ವಿರಾಮ ಘೋಷಿಸಿದ್ದೇಕೆ?': ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಮಾತನಾಡಿ, 'ಪಾಕಿಸ್ತಾನದ ವಿರುದ್ಧ ನಮ್ಮ ಪಡೆಗಳು ಮೇಲುಗೈ ಸಾಧಿಸಿದ್ದವು. ಅವರ ರಕ್ಷಣಾ ವ್ಯವಸ್ಥೆಯನ್ನು ನಿಷ್ಕ್ರಿಯಗೊಳಿಸಿದ್ದವು. ಅಲ್ಲಿನ ವಾಯುನೆಲೆಯನ್ನು ಧ್ವಂಸಗೊಳಿಸಿದ್ದವು. ಇಂತಹ ಮುನ್ನಡೆ ಸಾಧಿಸಿದ್ದ ಅವಧಿಯಲ್ಲಿ ಕೇಂದ್ರ ಸರ್ಕಾರವು ದಿಢೀರ್ ಎಂದು ಕದನ ವಿರಾಮ ಘೋಷಿಸಿತು. ಕದನ ವಿರಾಮದ ಅವಶ್ಯಕತೆ ಏನಿತ್ತು' ಎಂದು ಪ್ರಶ್ನಿಸಿದರು.

'ಭಾರತ ಮತ್ತು ಪಾಕಿಸ್ತಾನ ಕದನ ವಿರಾಮಕ್ಕೆ ಒಪ್ಪಿಕೊಂಡಿವೆ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮೊದಲು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದರು. ಆ ನಂತರ ಪಾಕಿಸ್ತಾನ ಘೋಷಿಸಿತು. ಅದಾದ ನಂತರ ನಮ್ಮ ವಿದೇಶಾಂಗ ಕಾರ್ಯದರ್ಶಿ ಈ ಬಗ್ಗೆ ಮಾಹಿತಿ ನೀಡಿದರು. ನಮ್ಮ ದೇಶದ ಪರವಾಗಿ ಕದನ ವಿರಾಮಕ್ಕೆ ಮಧ್ಯಸ್ಥಿಕೆ ವಹಿಸಲು ಅಥವಾ ಅದನ್ನು ಘೋಷಿಸಲು ಅಮೆರಿಕಕ್ಕೆ ಅಧಿಕಾರ ಕೊಟ್ಟವರು ಯಾರು' ಎಂದು ಪ್ರಶ್ನಿಸಿದರು.

ಕೆ.ಸಿ.ವೇಣುಗೋಪಾಲ್, 'ಕದನ ವಿರಾಮ ಘೋಷಿಸುವ ಮೂಲಕ ನಮ್ಮ ಸೈನಿಕರ ನೈತಿಕತೆಯನ್ನು ಕುಗ್ಗಿಸುವ ಕೆಲಸವನ್ನು ಸರ್ಕಾರ ಮಾಡಿತು. ಕದನ ವಿರಾಮ ಘೋಷಣೆಯ ನಂತರ, ಅದರ ಷರತ್ತುಗಳ ಬಗ್ಗೆ ಮಾತುಕತೆ ನಡೆಸುತ್ತೇವೆ ಎಂದು ವಿದೇಶಾಂಗ ಕಾರ್ಯದರ್ಶಿ ಹೇಳಿದ್ದರು. ಸಭೆ ನಡೆಯಿತೇ ಅಥವಾ ಯಾವ ಷರತ್ತುಗಳನ್ನು ಹೇರಲಾಯಿತು ಎಂಬುದರ ಬಗ್ಗೆ ಸರ್ಕಾರ ಮಾಹಿತಿ ಏಕೆ ನೀಡುತ್ತಿಲ್ಲ' ಎಂದೂ ಪ್ರಶ್ನಿಸಿದರು.

ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿರುವ ಹಿರಿಯ ಸೇನಾಧಿಕಾರಿಗಳು ಹಾಗೂ ಮಾಜಿ ಯೋಧರಿಗೆ ಸ್ಮರಣಿಕೆ ನೀಡಿ ಗೌರವಿಸಲಾಯಿತು. ದೇಶ ಸೇವೆಯಲ್ಲಿ ಹುತಾತ್ಮರಾದ ವೀರ ಯೋಧರ ಕುಟುಂಬಗಳ ಸದಸ್ಯರನ್ನೂ ಸನ್ಮಾನಿಸಲಾಯಿತು.

ಸೇನಾ ನೇಮಕಾತಿ ಏಕಿಲ್ಲ: ಸುರ್ಜೇವಾಲಾ

'ಭಾರತೀಯ ಸೇನೆಯ ಮೂರೂ ಪಡೆಗಳಲ್ಲಿ 1.76 ಲಕ್ಷ ಹುದ್ದೆಗಳು ಖಾಲಿ ಉಳಿದಿವೆ. ಹಲವು ವರ್ಷಗಳಿಂದ ನೇಮಕಾತಿಯೇ ನಡೆದಿಲ್ಲ. ಇಂತಹ ಕೊರತೆಯ ಮಧ್ಯೆಯೂ ನಮ್ಮ ಸೇನೆಯು ಪಾಕಿಸ್ತಾನಕ್ಕೆ ತಕ್ಕ ಉತ್ತರ ನೀಡಿತು' ಎಂದು ರಣದೀಪ್ ಸಿಂಗ್ ಸುರ್ಜೇವಾಲಾ ಹೇಳಿದರು.

'ಗಡಿಗಳಲ್ಲಿ ನಿಂತು ನಮ್ಮ ಸೈನಿಕರು ಹೋರಾಡುತ್ತಿರುವ ಕಾರಣದಿಂದಲೇ ನಾವು ನಮಗೆ ನೀಡಲಾಗಿರುವ ಸ್ವಾತಂತ್ರ್ಯವನ್ನು ಪೂರ್ಣಪ್ರಮಾಣದಲ್ಲಿ ಅನುಭವಿಸಲು ಸಾಧ್ಯವಾಗುತ್ತಿದೆ' ಎಂದರು.


ನಗರದ ಪುರಭವನದಲ್ಲಿ ಬುಧವಾರ ನಡೆದ ಮಾಜಿ ಸೈನಿಕರಿಗೆ ನಮನ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹುತಾತ್ಮರಾದ ಯೋಧರ ಕುಟುಂಬಗಳಿಗೆ ಮರಣೋತ್ತರ ಪ್ರಶಸ್ತಿ ನೀಡಿ ಗೌರವಿಸಿದರು. ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಎಐಸಿಸಿ ಪಕ್ಷದ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಇದ್ದರು ಪ್ರಜಾವಾಣಿ ಚಿತ್ರ

'ಸ್ವಲ್ಪ ಹೊತ್ತಿನಲ್ಲೇ ಬರುವೆ ಎಂದವ ಮರಳಲೇ ಇಲ್ಲ'

ಕಾರ್ಯಕ್ರಮಕ್ಕೆ ತೆರಳಲು ಅಣಿಯಾಗಿದ್ದ ಪತ್ನಿ, ಮಕ್ಕಳು

ಪ್ರಜಾವಾಣಿ ವಾರ್ತೆ

ಮಂಗಳೂರು: ಬಂಧುಗಳ ಕಾರ್ಯಕ್ರಮಕ್ಕೆ ಹೋಗಲು ಅಣಿಯಾಗಿದ್ದ ಪತ್ನಿ ಮತ್ತು ಮಕ್ಕಳ ಬಳಿ 'ಸ್ವಲ್ಪ ಹೊತ್ತಿನಲ್ಲೇ ಬರುತ್ತೇನೆ' ಎಂದು ಹೇಳಿ ಮನೆಯಿಂದ ಮಂಗಳವಾರ ಸಂಜೆ ತೆರಳಿದ್ದ ಅಬ್ದುಲ್ ರಹಿಮಾನ್ ಕಡೆಗೂ ಮನೆಗೆ ಮರಳಲೇ ಇಲ್ಲ.

ಕಾರ್ಯಕ್ರಮಕ್ಕೆ ಕರೆದೊಯ್ಯಲು ಅಪ್ಪ ಬರುತ್ತಾರೆ ಎಂದು ಕಾದಿದ್ದ ಇಬ್ಬರು ಮಕ್ಕಳ ಹಾಗೂ ಪತಿ ಬಂದಾಗ ಕಾರ್ಯಕ್ರಮಕ್ಕೆ ಒಟ್ಟಿಗೆ ಹೊರಡಲು ಉತ್ತಮ ಬಟ್ಟೆ ಧರಿಸಿ ಅಣಿಯಾಗಿದ್ದ ಪತ್ನಿಯ ಆಸೆ ಕೊನೆಗೂ ಈಡೇರಲೇ ಇಲ್ಲ.

ಮನೆಗೆ ರಹಿಮಾನ್ ಪಾರ್ಥಿವ ಶರೀರ ಬಂದಾಗ ಅವರ ಪತ್ನಿ ಫಾತಿಮತ್ ನುಸ್ರಾ ಮತ್ತು ಮಕ್ಕಳ (ಫಾತಿಮತ್ ನಶ್ವಾ ಮತ್ತು ಮೊಹಮ್ಮದ್ ನಶೀಫ್) ನೋವನ್ನು ಸಂತೈಸುವ ಧೈರ್ಯ ಅಲ್ಲಿದ್ದವರಿಗೆ ಇರಲಿಲ್ಲ.

'ಅಬ್ದುಲ್ ರಹಿಮಾನ್ ಪಿಕಪ್ ವಾಹನವನ್ನು ಹೊಂದಿದ್ದು, ಅದರಲ್ಲಿ, ಮರಳು, ಕಲ್ಲು ಮೊದಲಾದ ನಿರ್ಮಾಣ ಸಾಮಗ್ರಿ ಸಾಗಿಸಿ ಅದರಲ್ಲಿ ಬರುವ ಬಾಡಿಗೆ ಹಣದಿಂದ ಬದುಕು ಸಾಗಿಸುತ್ತಿದ್ದರು. ಮಂಗಳವಾರ ಸಂಜೆ ಬಂಧುಗಳ ಮನೆಯಲ್ಲಿ ಕಾರ್ಯಕ್ರಮವೊಂದಕ್ಕೆ ತೆರಳಲು ಅಣಿಯಾಗಿದ್ದರು. ಅಷ್ಟರಲ್ಲಿ ಅವರ ಮೊಬೈಲ್‌ಗೆ 'ತುರ್ತಾಗಿ ಮರಳು ಬೇಕು' ಎಂದು ಪರಿಚಯದವರೊಬ್ಬರಿಂದ ಕರೆಬಂದಿತ್ತು. ಪತ್ನಿ ಫಾತಿಮತ್ ನುಸ್ರಾ ಹಾಗೂ ಮಕ್ಕಳಿಬ್ಬರನ್ನು ಅಣಿಯಾಗಿರುವಂತೆ ಹೇಳಿ ಮರಳು ಹಾಕಿಬರಲು ಅವರು ತೆರಳಿದ್ದರು' ಎಂದು ರಹಿಮಾನ್ ಅವರ ಬಂಧುವೊಬ್ಬರು ತಿಳಿಸಿದರು.

'ರಹಿಮಾನ್ ಊರಿಗೆ ಉಪಕಾರಿ ಆಗಿದ್ದ. ಎಲ್ಲರಿಗೆ ಒಳ್ಳೆಯದನ್ನೇ ಮಾಡುತ್ತಿದ್ದ. ಎಷ್ಟೋ ಬಡವರಿಗೆ ಉಚಿತವಾಗಿ ಮರಳು ನೀಡಿದ್ದ. ಅಂತಹವನನ್ನೇ ಗೆಳೆಯರೇ ಮರಳು ಬೇಕು ಎಂದು ಹೇಳಿ ಕರೆಸಿಕೊಂಡು ಕೊಂದರು' ಎಂದು ಕಣ್ಣೀರಿಟ್ಟರು.

'ತುಂಬಾ ಬಡ ಕುಟುಂಬದ ಹೆಣ್ಣನ್ನು ಹುಡುಕಿ ಆತ ಮದುವೆಯಾಗಿದ್ದ. ತನ್ನ ಕುಟುಂಬದ ಜೊತೆಗೆ ಪತ್ನಿಯ ಕುಟುಂಬಕ್ಕೂ ಆತನೇ ಆಧಾರವಾಗಿದ್ದ. ಕೋವಿಡ್ ಸಮಯದಲ್ಲಿ ತಾಯಿ (ಐಸಮ್ಮ) ಆರೋಗ್ಯ ಹದಗೆಟ್ಟಿತ್ತು. ಅವರನ್ನು ಉಳಿಸಿಕೊಳ್ಳಲು ಕಷ್ಟ ಪಟ್ಟಿದ್ದ. ಕೊಳತ್ತಮಜಲು ಮೊಹಿಯುದ್ದೀನ್ ಜುಮ್ಮ ಮಸೀದಿಯಲ್ಲಿ ಕಾರ್ಯದರ್ಶಿಯಾಗಿ ಉತ್ತಮ ಕೆಲಸ ಮಾಡಿದ್ದ' ಎಂದು ನೆನಪಿಸಿಕೊಂಡರು.

ಕೋಮುದ್ವೇಷ ಹರಡಲು ಕಾರಣವಾದ ವ್ಯಕ್ತಿಯನ್ನು ಬಂಧಿಸಿದ ಅರ್ಧಗಂಟೆಯಲ್ಲಿ ಆತನ ಬಿಡುಗಡೆಯಾಗುತ್ತದೆ. ಪರಿಸ್ಥಿತಿ ಹೀಗಾದರೆ ಅಮಾಯಕರು ಬದುಕುವುದು ಹೇಗೆ' ಎಂದು ಅವರು ಪ್ರಶ್ನಿಸಿದರು.

ಮರಳು ಇದ್ದರೂ ಮತ್ತೆ ತರಿಸಿಕೊಂಡರು?

ಅಬ್ದುಲ್ ರಹಿಮಾನ್‌ಗೆ ಕರೆ ಮಾಡಿದ್ದ ಪರಿಚಯದ ವ್ಯಕ್ತಿ 'ತುರ್ತಾಗಿ ಮರಳು ಬೇಕು' ಎಂದು ಹೇಳಿದ್ದರು. ಅವರ ಮನೆಗೆ ರಹಿಮಾನ್ ತನ್ನ ಪಿಕಪ್ ವಾಹನದಲ್ಲಿ ಮರಳು ಕೊಂಡೊಯ್ದಾಗ ಅಲ್ಲಿ ಅದಾಗಲೇ ಎರಡು ಲೋಡ್ ಆಗುವಷ್ಟು ಮರಳು ಇತ್ತು. ಮರಳನ್ನು ಇಳಿಸುವಷ್ಟರಲ್ಲಿ ಸ್ಥಳಕ್ಕೆ ಬೈಕಿನಲ್ಲಿ ಬಂದ ದುಷ್ಕರ್ಮಿಗಳು ತಲವಾರಿನಿಂದ ಮಾರಣಾಂತಿಕವಾಗಿ ಹಲ್ಲೆ ನಡೆಸಿದ್ದರು' ಎಂದು ಸ್ಥಳೀಯರೊಬ್ಬರು ತಿಳಿಸಿದರು.

'ರಹಿಮಾನ್ ಜೊತೆ ಸಹಾಯಕನಾಗಿ ತೆರಳಿದ್ದ ಕಲಂದರ್ ಶಾಫಿ, ದಾಳಿ ನಡೆದಾಗ ವಾಹನದಿಂದ ಜಿಗಿದು ತಪ್ಪಿಸಿಕೊಂಡಿದ್ದ. ಚಾಲಕನ ಸೀಟಿನಲ್ಲಿ ಕುಳಿತಿದ್ದ ರಹಿಮಾನ್ ಸುಲಭವಾಗಿ ದುಷ್ಕರ್ಮಿಗಳ ಕೈಗೆ ಸಿಕ್ಕ. ಚಿಕಿತ್ಸೆ ಪಡೆಯುತ್ತಿರುವ ಶಾಫಿ ಚೇತರಿಸಿಕೊಂಡಿದ್ದಾನೆ' ಎಂದು ಅವರು ತಿಳಿಸಿದರು.

ಮಾವು, ಹಲಸಿನ ಮೇಳ ನಾಳೆಯಿಂದ ಆರಂಭ

ಪ್ರಜಾವಾಣಿ ವಾರ್ತೆ



ಬೆಂಗಳೂರು: ತೋಟಗಾರಿಕೆ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ನಿಗಮದ ಸಹಯೋಗದಲ್ಲಿ ಮೇ 30ರಿಂದ ಜೂನ್ 24ರವರೆಗೆ ಲಾಲ್‌ಬಾಗ್‌ನಲ್ಲಿ ಮಾವು, ಹಲಸಿನ ಹಣ್ಣುಗಳ ಪ್ರದರ್ಶನ ಹಾಗೂ ಮಾರಾಟ ಮೇಳ ಆಯೋಜಿಸಲಾಗಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ನಿಗಮದ ಅಧ್ಯಕ್ಷ ಸಿ.ಜಿ. ನಾಗರಾಜ್, 'ಸಹಜವಾಗಿ ಮಾಗಿದ ಹಣ್ಣುಗಳನ್ನು ಗ್ರಾಹಕರಿಗೆ ಪೂರೈಸುವ ಉದ್ದೇಶದಿಂದ ಮೇಳವನ್ನು ಆಯೋಜಿಸಲಾಗುತ್ತದೆ. ಇಲ್ಲಿ ರೈತರು ಮತ್ತು ಗ್ರಾಹಕರ ನಡುವೆ ನೇರ ಸಂಪರ್ಕ ಅವಕಾಶ ಕಲ್ಪಿಸಲಾಗಿದೆ. ರಾಜ್ಯದ ವಿವಿಧ ಭಾಗಗಳ ರೈತರು ವೈವಿಧ್ಯಮಯ ಮಾವು ಮತ್ತು ಹಲಸಿನ ಹಣ್ಣುಗಳ ತಳಿಗಳ ಪ್ರದರ್ಶನ ಹಾಗೂ ಮಾರಾಟಕ್ಕೆ ಅವಕಾಶ ಕಲ್ಪಿಸಲಾಗಿದೆ' ಎಂದು ಹೇಳಿದರು.

'ಮೇಳದಲ್ಲಿ ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ ಸೇರಿದಂತೆ ಎಂಟು ಜಿಲ್ಲೆಗಳ ಮಾವು ಮತ್ತು ಹಲಸು ಬೆಳೆಗಾರರು ಭಾಗವಹಿಸಲಿದ್ದಾರೆ. ಸುಮಾರು 40ರಿಂದ 50 ಮಾವಿನ ತಳಿ ಮತ್ತು 10 ರಿಂದ 12 ಹಲಸಿನ ತಳಿಗಳು ಕಾಣಬಹುದು. ಮಾವು ಬೆಳೆಗಾರರಿಗೆ 80, ಹಲಸು ಬೆಳೆಗಾರರಿಗೆ ಎಂಟು ಮಳಿಗೆಗಳನ್ನು ಹಂಚಿಕೆ ಮಾಡಲಾಗಿದೆ' ಎಂದರು.

ತೋಟಗಾರಿಕೆ ಇಲಾಖೆ ನಿರ್ದೇಶಕ ಡಿ.ಎಸ್.ರಮೇಶ್ ಮಾತನಾಡಿ, 'ಭೌಗೋಳಿಕ ಮಾನ್ಯತೆ(ಜಿಐ) ಪಡೆದಿರುವ ಉತ್ತರ ಕನ್ನಡ ಜಿಲ್ಲೆಯ ಕರಿ ಇಶಾಡ್ ಮಾವು ಮೇಳದಲ್ಲಿ ಇರಲಿದೆ. ಬಾದಾಮಿ, ರಸಪುರಿ, ಮಲಗೋವಾ, ಮಲ್ಲಿಕಾ, ಸಿಂಧೂರ, ತೋತಾಪುರಿ, ದಶೇರಿ, ಸಕ್ಕರಗುತ್ತಿ ಸೇರಿದಂತೆ ವಿವಿಧ ಮಾವು ತಳಿಗಳನ್ನು ಮೇಳದಲ್ಲಿ ಮಾರಾಟಕ್ಕೆ ಲಭ್ಯ ಇದೆ' ಎಂದು ತಿಳಿಸಿದರು.

ಮೇ 30ರಂದು ಬೆಳಿಗ್ಗೆ 11 ಗಂಟೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೇಳವನ್ನು ಉದ್ಘಾಟಿಸಲಿದ್ದಾರೆ.

ಮಳೆ ಹಾನಿ: ಪರಿಹಾರಕ್ಕೆ ಆಗ್ರಹಿಸಿ ಸಿ.ಎಂಗೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಳೆ ಹಾನಿ ಹಾಗೂ ಭೂ ಕುಸಿತದ ಪ್ರದೇಶಗಳಲ್ಲಿ ತಕ್ಷಣ ಪರಿಹಾರ ವಿತರಿಸಬೇಕು. ಶಾಶ್ವತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಪತ್ರ ಬರೆದಿದ್ದಾರೆ.

ಅವಧಿಗೂ ಮೊದಲೇ ಮುಂಗಾರು ರಾಜ್ಯವನ್ನು ಪ್ರವೇಶಿಸಿ, ಬಿರುಗಾಳಿ, ಮಳೆ ಸುರಿದ ಪರಿಣಾಮ ಸಾರ್ವಜನಿಕರ ಆಸ್ತಿ, ಬೆಳೆ ನಷ್ಟವಾಗಿದೆ. ಮಲೆನಾಡಿನ ಹಲವೆಡೆ ಭೂಕುಸಿತವಾಗಿದೆ. ಭೂಕುಸಿತವಾದ ಹಾಸನ ಜಿಲ್ಲೆ ಸೇರಿದಂತೆ ಹಲವೆಡೆ ಪ್ರವಾಸ ಹಮ್ಮಿಕೊಂಡು ಜನರ ಸಮಸ್ಯೆ ಆಲಿಸಿರುವೆ. ಅನುದಾನ ಕೊರತೆಯ ನೆಪ ಹೇಳದೆ ತಕ್ಷಣ ಪರಿಹಾರ ಕಾರ್ಯ, ರಕ್ಷಣಾ ಕಾರ್ಯಾಚರಣೆ ಆರಂಭಿಸಬೇಕು ಎಂದು ಒತ್ತಾಯಿಸಿದ್ದಾರೆ.

'ಮಳೆಯಿಂದ ಹಾನಿಗೊಳಗಾದ ರಸ್ತೆ, ಸೇತುವೆ ಪುನರ್ ನಿರ್ಮಾಣ, ಸ್ಥಳಾಂತರಗೊಂಡ ಕುಟುಂಬಗಳಿಗೆ ಆಹಾರ ಸೇರಿದಂತೆ ಅಗತ್ಯ ಸೌಕರ್ಯ, ಮನೆ, ಜಾನುವಾರು ಕಳೆದುಕೊಂಡವರಿಗೆ ಪರಿಹಾರ ನೀಡಬೇಕು' ಎಂದು ಆಗ್ರಹಿಸಿದ್ದಾರೆ.

ಜಿಲ್ಲೆಗಳಲ್ಲೇ ಕೈಗಾರಿಕೆಗಳ ಸ್ಥಾಪನೆ: ಸಿ.ಎಂ ಸಲಹೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಬೆಂಗಳೂರಿನಲ್ಲಿ ಭೂಮಿ ಬೆಲೆ ಹೆಚ್ಚಾಗಿದ್ದು, ಆಯಾ ಜಿಲ್ಲೆಗಳಲ್ಲೇ ಕೈಗಾರಿಕೆ ಸ್ಥಾಪಿಸಲು ಉದ್ಯಮಿಗಳು ಮನಸ್ಸು ಮಾಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ ನೀಡಿದರು.

ಬುಧವಾರ ನಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರ ಸಭೆಯಲ್ಲಿ ಮಾತನಾಡಿದ ಅವರು, ಎಲ್ಲರೂ ಬೆಂಗಳೂರಿನಲ್ಲೇ ಉದ್ದಿಮೆ ಸ್ಥಾಪನೆಗೆ ಒಲವು ತೋರುತ್ತಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರ ಕೈಗಾರಿಕೆಗಳಿಗೆ ಇದುವರೆಗೂ 192 ಎಕರೆ ಮಂಜೂರಾಗಿದೆ. ಇನ್ನೂ 280 ಎಕರೆಗೆ ಬೇಡಿಕೆ ಸಲ್ಲಿಸಲಾಗಿದೆ. ಮನವಿಯನ್ನು ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಿರಿಸಿದ ಕೈಗಾರಿಕಾ ಜಾಗವನ್ನು ಬೇರೆಯವರಿಗೆ ನೀಡಲಾಗಿದೆ ಎಂದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರ ಸಂಘ ಗಮನಕ್ಕೆ ತಂದಿದೆ. ಇಂತಹ ಪ್ರಕರಣಗಳಿಗೆ ಅವಕಾಶ ನೀಡಬಾರದು. ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಈ ವರ್ಗದ ಉದ್ದಿಮೆದಾರರಿಗೆ ಕೆಐಎಡಿಬಿ ಕೈಗಾರಿಕಾ ಪ್ರದೇಶದಲ್ಲಿ ವಿವಾದಗಳಿರುವಂತಹ ಭೂಮಿಗಳನ್ನು ಹಂಚಿಕೆ ಮಾಡಲಾಗಿದೆ. ವಿವಾದಮುಕ್ತ ಜಾಗವನ್ನೇ ನೀಡಬೇಕು. ಸಮಾಜ ಕಲ್ಯಾಣ ಇಲಾಖೆ ಉದ್ದಿಮೆದಾರರಿಗೆ ನೀಡಬೇಕಿರುವ ಬಾಕಿ ಹಣ ಶೀಘ್ರ ಬಿಡುಗಡೆ ಮಾಡಬೇಕು. ಕೆಐಎಡಿಬಿ ಇ-ಖಾತಾ ಹಂಚಿಕೆಯ ಸಮಸ್ಯೆಗಳನ್ನು ಪರಿಹರಿಸಬೇಕು ಎಂದು ಉದ್ದಿಮೆದಾರರು ಮನವಿ ಮಾಡಿದರು.

ಉದ್ದಿಮೆದಾರರಿಗೆ ಆರ್ಥಿಕ ಶಕ್ತಿ ತುಂಬುವುದು ಸರ್ಕಾರದ ಉದ್ದೇಶ. ಅದಕ್ಕೆ ಬೇಕಾದ ಎಲ್ಲಾ ನೆರವನ್ನು ಸರ್ಕಾರ ನೀಡಲಿದೆ ಎಂದು ಮುಖ್ಯಮಂತ್ರಿ ಭರವಸೆ ನೀಡಿದರು.

ಕೋವಿಡ್: 40 ಹೊಸ ಪ್ರಕರಣ ದೃಢ

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜ್ಯದಲ್ಲಿ ಬುಧವಾರ 40 ಕೋವಿಡ್ ಪ್ರಕರಣಗಳು ಹೊಸದಾಗಿ ವರದಿಯಾಗಿವೆ. ಈ ವರ್ಷ ವರದಿಯಾದ ಒಟ್ಟು ಕೋವಿಡ್ ಪ್ರಕರಣಗಳ ಸಂಖ್ಯೆ 211ಕ್ಕೆ ಏರಿಕೆಯಾಗಿದೆ.

ಕೋವಿಡ್ ಪರೀಕ್ಷೆಗಳ ಸಂಖ್ಯೆ ಹೆಚ್ಚಿಸಿದ್ದು, 24 ಗಂಟೆಗಳ ಅವಧಿಯಲ್ಲಿ 395 ಪರೀಕ್ಷೆಗಳನ್ನು ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 10.12ರಷ್ಟಿದೆ. ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ 126ಕ್ಕೆ ತಲುಪಿದೆ.

ಸಕ್ರಿಯ ಪ್ರಕರಣಗಳಲ್ಲಿ 124 ಮಂದಿ ಮನೆ ಆರೈಕೆಗೆ ಒಳಗಾಗಿದ್ದಾರೆ. ಇಬ್ಬರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಬಿಬಿಎಂಪಿ ಶಾಲಾ, ಕಾಲೇಜು ಇಂದಿನಿಂದ ಶುರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ಶಿಶುವಿಹಾರ, ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಪದವಿ ಪೂರ್ವ ಕಾಲೇಜು, ಪದವಿ ಹಾಗೂ ಸ್ನಾತಕೋತ್ತರ ಪದವಿ ಕಾಲೇಜುಗಳು ಮೇ 29ರಿಂದ ಪ್ರಾರಂಭವಾಗಲಿವೆ ಎಂದು ಶಿಕ್ಷಣ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ತಿಳಿಸಿದರು.

2025-26ನೇ ಶೈಕ್ಷಣಿಕ ಸಾಲಿನ ವಿವಿಧ ತರಗತಿಗಳಿಗೆ ಪ್ರವೇಶ ಪ್ರಾರಂಭವಾಗಿದ್ದು, ಜೂನ್ 20ರವರೆಗೆ ನಡೆಯಲಿದೆ ಎಂದರು.

ಬಿಬಿಎಂಪಿ ಶಾಲಾ, ಕಾಲೇಜುಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಉಚಿತವಾಗಿ ನೋಟ್ ಪುಸ್ತಕಗಳು, ಪಠ್ಯ ಪುಸ್ತಕಗಳು, ಸಮವಸ್ತ್ರಗಳು, ಶೂ ಮತ್ತು ಕಾಲುಚೀಲ, ಬ್ಯಾಗ್, ಸ್ವೆಟರ್ ಸಿಗಲಿವೆ. ಮಧ್ಯಾಹ್ನ ಬಿಸಿಯೂಟ (ಶಿಶುವಿಹಾರ, ಪದವಿ ಪೂರ್ವ ಕಾಲೇಜು, ಪದವಿ ಹಾಗೂ ಸ್ನಾತಕೋತ್ತರ ಪದವಿ ಕಾಲೇಜು ವಿದ್ಯಾರ್ಥಿಗಳಿಗೆ) ಬಿಸಿ ಹಾಲು, ಮೊಟ್ಟೆ, ಬಾಳೆಹಣ್ಣು ಹಾಗೂ ಚಿಕ್ಕಿ (ಶಿಶುವಿಹಾರ ಶಾಲಾ ಮಕ್ಕಳಿಗೆ), ಮಕ್ಕಳ ಆಟಿಕೆಗಳು (ಶಿಶುವಿಹಾರ ಶಾಲಾ ಮಕ್ಕಳಿಗೆ), ಆಸೀನರಾಗಲು ಮ್ಯಾಟ್‌ಗಳು (ಶಿಶುವಿಹಾರ ಶಾಲಾ ಮಕ್ಕಳಿಗೆ), ಉನ್ನತ ಶಿಕ್ಷಣ ಒದಗಿಸಲು ಸ್ಮಾರ್ಟ್ ತರಗತಿ, ಗಣಕಯಂತ್ರ ತರಬೇತಿ (ಕಂಪ್ಯೂಟರ್ ಲ್ಯಾಬ್) ನೀಡಲಾಗುತ್ತದೆ ಎಂದು ಮಾಹಿತಿ ನೀಡಿದರು.

ಎಸ್‌ಎಸ್‌ಎಲ್‌ಸಿಯಲ್ಲಿ ಅತ್ಯುನ್ನತ ಶ್ರೇಣಿ (ಶೇ 85) ಪಡೆದ ವಿದ್ಯಾರ್ಥಿಗಳಿಗೆ ತಲಾ ₹25 ಸಾವಿರ, ದ್ವಿತೀಯ ಪಿಯುಸಿಯಲ್ಲಿ ಅತ್ಯುನ್ನತ ಶ್ರೇಣಿ ಪಡೆದ ವಿದ್ಯಾರ್ಥಿಗಳಿಗೆ ತಲಾ ₹35 ಸಾವಿರ ಪ್ರೋತ್ಸಾಹ ಧನ ನೀಡಲಾಗುತ್ತದೆ ಎಂದರು.

ಭಾನುವಾರವೂ ಸಮೀಕ್ಷೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಸಾರ್ವಜನಿಕ ರಜಾ ದಿನವಾದ ಭಾನುವಾರವೂ (ಜೂನ್ 1) ಪರಿಶಿಷ್ಟ ಜಾತಿ ಸಮಗ್ರ ಸಮೀಕ್ಷಾ ಕಾರ್ಯ ಮಾಡಲು ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚಿಸಿದರು.

ದಕ್ಷಿಣ ಹಾಗೂ ಬೊಮ್ಮನಹಳ್ಳಿ ವಲಯಗಳಲ್ಲಿ ಪರಿಶಿಷ್ಟ ಜಾತಿ ಸಮೀಕ್ಷಾ ಕಾರ್ಯದ ಪ್ರಗತಿ ಸಭೆಯಲ್ಲಿ ಅವರು ಮಾತನಾಡಿದರು.

'ಪರಿಶಿಷ್ಟ ಜಾತಿ ಸಮೀಕ್ಷಾ ಕಾರ್ಯದಲ್ಲಿ ಎಲ್ಲರೂ ಪಾಲ್ಗೊಳ್ಳಬೇಕು. ಈ ಉದ್ದೇಶದಿಂದ ಪರಿಶಿಷ್ಟ ಜಾತಿ ಸಮುದಾಯಗಳು ಹೆಚ್ಚು ವಾಸವಿರುವ ಪ್ರದೇಶಗಳಲ್ಲಿ ಬೂತ್ ಮಟ್ಟದಲ್ಲಿ ಪ್ರಚಾರ ಕಾರ್ಯಗಳನ್ನು ಕೈಗೊಳ್ಳಬೇಕು' ಎಂದು ಸಹಾಯಕ ಕಂದಾಯ ಅಧಿಕಾರಿಗಳಿಗೆ ಸೂಚಿಸಿದರು.

KIRLOSKAR ELECTRIC COMPANY LIMITED

REGD OFFICE: No.19, 2nd Main Road, Peenya 1st Stage, Phase-1, Peenya, Bengaluru - 560 058.
Phone no: 080-28397256; **Fax:** 080-28396727; **Website:** www.kirloskarelectric.com
Email: investors@kirloskarelectric.com; **CIN:** L31100KA1946PLC000415

EXTRACT OF STATEMENT OF AUDITED FINANCIAL RESULTS FOR THE QUARTER AND YEAR ENDED MARCH 31, 2025

(₹. in Lakhs)

Sr. No.	Particulars	STANDALONE				CONSOLIDATED			
		Quarter ended		Year ended		Quarter ended		Year ended	
		March 31, 2025	March 31, 2024	March 31, 2025	March 31, 2024	March 31, 2025	March 31, 2024	March 31, 2025	March 31, 2024
		Audited	Audited	Audited	Audited	Audited	Audited	Audited	Audited
1	Total income from operations	13,154	17,077	55,075	56,528	13,230	17,081	55,157	56,534
2	Net Profit / (Loss) for the period (before Tax, Exceptional and/or Extraordinary items)	683	574	748	1,517	(367)	542	(596)	1,408
3	Net Profit / (Loss) for the period before tax (after Exceptional and/or Extraordinary Items)	683	574	1,743	1,517	(367)	542	399	1,408
4	Net Profit / (Loss) for the period after tax (after Exceptional and/or Extraordinary Items)	665	574	1,725	1,517	(385)	542	374	1,408
5	Total Comprehensive Income for the period [Comprising Profit / (Loss) for the period (after tax) and Other Comprehensive Income (after tax)]	700	(1,787)	4,592	(839)	(350)	(1,819)	3,241	(948)
6	Equity share capital	6,641	6,641	6,641	6,641	6,641	6,641	6,641	6,641
7	Reserves (excluding revaluation reserves as shown in the Balance Sheet of previous year)	NA	NA	NA	NA	NA	NA	NA	NA
8	Earnings Per Share (EPS) (₹.)								
	(a) Basic EPS before extra ordinary items (not annualised)	1.00	0.86	2.60	2.28	(0.58)	0.82	0.56	2.12
	(b) Diluted EPS before extra ordinary items (not annualised)	1.00	0.86	2.60	2.28	(0.58)	0.82	0.56	2.12
	(c) Basic EPS after extra ordinary items (not annualised)	1.00	0.86	2.60	2.28	(0.58)	0.82	0.56	2.12
	(d) Diluted EPS after extra ordinary items (not annualised)	1.00	0.86	2.60	2.28	(0.58)	0.82	0.56	2.12

NOTE:
1. The above audited standalone and consolidated financial results have been reviewed by the Audit Committee and approved by the Board of Directors in their meeting held on May 28, 2025.
2. The standalone and consolidated financial results of the Company for the quarter and year ended March 31, 2025 have been audited by its Statutory auditors.
3. The above is an extract of the detailed format of the audited financial results for the quarter and year ended March 31, 2025 filed with the Stock Exchanges under Regulation 33 of the SEBI (Listing Obligations and Disclosure Requirements) Regulations, 2015 as amended. The full format of the audited financial results are available on the stock exchange websites (www.bseindia.com, www.nseindia.com) and also on the company's website (http://www.kirloskarelectric.com/investors/investors-information/financial.html) and can also be accessed by scanning the below quick response code.

Place : Bengaluru
Date : May 28, 2025

Sd/-
Vijay R Kirloskar
Executive Chairman

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in
ಪ್ರಜಾವಾಣಿ ಗುರುವಾರ • ಮೇ 29, 2025

ಅಭಿಮತ



ಸುಭಾಷಿತ

ಭಾಗ್ಯವಿರಬಹುದು, ಬೇಕಾದವರು ಇರಬಹುದು, ಫಲ ಮಾತ್ರ ಪಡೆದಷ್ಟೇ.

–ಎ.ಆರ್.ಕೃಷ್ಣಶಾಸ್ತ್ರೀ

ಕೋವಿಡ್ ಪ್ರಕರಣಗಳ ನಿರ್ವಹಣೆ ನಿರಂತರ ನಿಗಾ ವ್ಯವಸ್ಥೆ ಬೇಕು

ದೇಶದ ವಿವಿಧೆಡೆಗಳಿಂದ ಕೋವಿಡ್ ಪ್ರಕರಣಗಳು ಮತ್ತೆ ವರದಿಯಾಗುತ್ತಿವೆ. ಆದರೆ, ವರದಿಯಾಗಿರುವ ಪ್ರಕರಣಗಳ ಸಂಖ್ಯೆ ಕಡಿಮೆ ಇದೆ, ಸೋಂಕಿನ ಪರಿಣಾಮವು ಮಂದವಾಗಿದೆ. ಹದಿನೈದು ದಿನಗಳ ಅವಧಿಯಲ್ಲಿ ಒಂದು ಸಾವಿರಕ್ಕೂ ಹೆಚ್ಚು ಕೋವಿಡ್ ಪ್ರಕರಣಗಳು ವರದಿಯಾಗಿವೆ. ಅದರಲ್ಲೂ ಕೇರಳ, ಮಹಾರಾಷ್ಟ್ರ ಮತ್ತು ದೆಹಲಿಯಲ್ಲಿ ಈ ಪ್ರಕರಣಗಳು ಹೆಚ್ಚಾಗಿವೆ. ಇದು, ತುಸು ಕಳವಳ ಮೂಡಿಸುವಂತಿದೆ. ಕರ್ನಾಟಕದಲ್ಲಿ 100 ಸಕ್ರಿಯ ಪ್ರಕರಣಗಳು ಇವೆ. ಕೋವಿಡ್ ಸೋಂಕಿತರು ಮೃತಪಟ್ಟ ವರದಿಗಳೂ ಇವೆ. ಆದರೆ ಅವರ ಸಾವಿಗೆ ಕೋವಿಡ್ ಕಾರಣ ಎಂದು ಹೇಳಿಲ್ಲ. ಕೋವಿಡ್ ಪರೀಕ್ಷಾ ಕಿಟ್‌ಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳುವಂತೆ ಅಧಿಕಾರಿಗಳಿಗೆ, ಹೃದಯ ಸಂಬಂಧಿ ಮತ್ತು ಉಸಿರಾಟ ಸಂಬಂಧಿ ಸಮಸ್ಯೆಗಳು ಇರುವ ರೋಗಿಗಳನ್ನು ತಪಾಸಣೆಗೆ ಒಳಪಡಿಸುವಂತೆ ಆಸ್ಪತ್ರೆಗಳಿಗೆ ರಾಜ್ಯ ಸರ್ಕಾರವು ಸೂಚನೆ ನೀಡಿದೆ. ಮುನ್ನೆಚ್ಚರಿಕೆ ಕ್ರಮಗಳಿಗೆ ಸಂಬಂಧಿಸಿದ ಮಾರ್ಗಸೂಚಿಗಳನ್ನು ಹಾಗೂ ಸೂಚನೆಗಳನ್ನು ಆಸ್ಪತ್ರೆಗಳಿಗೆ ಮತ್ತು ಶಾಲೆಗಳಿಗೆ ಕಳುಹಿಸಲಾಗಿದೆ. ಕೋವಿಡ್ ಹರಡುವುದರ ಮೇಲೆ ನಿಗಾ ಇರಿಸಲು, ಹರಡುವುದನ್ನು ತಡೆಯುವ ಸುರಕ್ಷತಾ ಕ್ರಮಗಳು ಜಾರಿಯಲ್ಲಿ ಇವೆ ಎಂಬುದನ್ನು ಖಾತರಿಪಡಿಸಲು ಇತರ ರಾಜ್ಯಗಳು ಕೂಡ ಇದೇ ಬಗೆಯ ಕ್ರಮಗಳನ್ನು ಕೈಗೊಂಡಿವೆ.



ಕೋವಿಡ್‌ನಿಂದ ರಕ್ಷಣೆಗೆ ಇರುವ ಮಾರ್ಗೋಪಾಯಗಳ ಬಗ್ಗೆ ವ್ಯಾಪಕ ಪ್ರಚಾರ ಆಗಬೇಕು. ಸರ್ಕಾರಗಳು, ವೈದ್ಯಕೀಯ ವ್ಯವಸ್ಥೆ ಮತ್ತು ಸಾರ್ವಜನಿಕರು ಎಚ್ಚರಿಕೆಯಿಂದ ಇರಬೇಕು

ಹಾಂಗ್‌ಕಾಂಗ್, ವಿಯೆಟ್ನಾಂ, ಸಿಂಗಪುರ ಮತ್ತು ಥಾಯ್ಲೆಂಡ್‌ನಲ್ಲಿ ಈಚಿನ ವಾರಗಳಲ್ಲಿ ಕೋವಿಡ್ ಪ್ರಕರಣಗಳಲ್ಲಿ ಏರಿಕೆ ಆಗಿದೆ. 2023ರ ಆಗಸ್ಟ್‌ನಲ್ಲಿ ಮೊದಲು ಪತ್ತೆಯಾಗಿದ್ದ ಜೆಎನ್.1 ತಳಿಯ ಕೊರೊನಾ ವೈರಾಣು ಈ ಹೆಚ್ಚಳಕ್ಕೆ ಕಾರಣ ಎಂದು ಗುರುತಿಸಲಾಗಿದೆ. ಇದು ಒಮಿಕ್ರಾನ್ ತಳಿಯ ರೂಪಾಂತರಿ, ಇದು ಬಹಳ ಬೇಗ ಹರಡುತ್ತದೆ ಯಾದರೂ ಗಂಭೀರ ಸ್ವರೂಪದ ಸಮಸ್ಯೆಗಳನ್ನು ಇದು ಉಂಟುಮಾಡುವುದಿಲ್ಲ ಎಂದು ವರದಿಗಳು ಹೇಳುತ್ತಿವೆ. ಭಾರತದಲ್ಲಿ ಪತ್ತೆಯಾಗಿರುವ ಕೋವಿಡ್ ಉಪತಳಿಗಳ ಮೂಲ ಇರುವುದು ಜೆಎನ್.1 ತಳಿಯಲ್ಲಿ. ಕೋವಿಡ್ ಪ್ರಕರಣಗಳಲ್ಲಿನ ಹೆಚ್ಚಳಕ್ಕೆ ಹಲವು ಕಾರಣಗಳು ಇದ್ದಿರಬಹುದು. ಲಸಿಕೆಯ ಕಾರಣದಿಂದಾಗಿ ಸಿಕ್ಕಿದ್ದ ರೋಗನಿರೋಧಕ ಶಕ್ತಿ ಹಾಗೂ ರೋಗ ಬಂದಿದ್ದರಿಂದಾಗಿ ಸಮುದಾಯದಲ್ಲಿ ಮೂಡಿದ್ದ ರೋಗ ನಿರೋಧಕ ಶಕ್ತಿಯು ಕೆಲವರಲ್ಲಿ ಈಗ ಕುಗ್ಗಿರಬಹುದು. ಬೂಸ್ಟರ್ ಲಸಿಕೆಯನ್ನು ಹಾಕಿಸಿಕೊಳ್ಳದೇ ಇರುವುದು ಕೂಡ ಇದಕ್ಕೆ ಒಂದು ಕಾರಣ ಆಗಿರಬಹುದು. ಕೊರೊನಾ ವೈರಾಣು ರೂಪಾಂತರ ಹೊಂದಿ, ಹೊಸ ತಳಿಗಳನ್ನು, ಉಪತಳಿಗಳನ್ನು ಸೃಷ್ಟಿಸಿರಬಹುದು, ಇವುಗಳಿಗೆ ಲಸಿಕೆಯು ಹೆಚ್ಚು ಪರಿಣಾಮ ಕಾರಿಯಾಗಿ ಕೆಲಸ ಮಾಡದೇ ಇರಬಹುದು.

ಕೆಲವು ದೇಶಗಳಲ್ಲಿ ವಾರ್ಷಿಕ ಕೋವಿಡ್ ಬೂಸ್ಟರ್ ಲಸಿಕೆ ನೀಡುವುದಕ್ಕೆ ವ್ಯವಸ್ಥೆ ಮಾಡಲಾಗಿದೆ. ಅದರಲ್ಲೂ ಮುಖ್ಯವಾಗಿ, ಕೋವಿಡ್‌ನಿಂದಾಗಿ ಹೆಚ್ಚಿನ ಅಪಾಯ ಎದುರಿಸುವ ಸಾಧ್ಯತೆ ಇರುವವರಿಗೆ ಈ ವ್ಯವಸ್ಥೆ ಕಲ್ಪಿಸಲಾಗಿದೆ. ಭಾರತದಲ್ಲಿಯೂ ಈ ಬಗ್ಗೆ ಆಲೋಚಿಸಬಹುದು. ವೈರಾಣುವಿನ ಬಗ್ಗೆ, ಸಮುದಾಯದಲ್ಲಿ ಅದು ಹರಡುವ ಬಗೆಯ ಕುರಿತು, ಲಸಿಕೆಗಳು ಅದೆಷ್ಟು ಪರಿಣಾಮಕಾರಿ ಎಂಬ ಕುರಿತು ನಿರಂತರವಾಗಿ ಸಂಶೋಧನೆ ನಡೆಯಬೇಕು. ಲಸಿಕೆಗಳನ್ನು ಕಾಲಕಾಲಕ್ಕೆ ಮೇಲ್ದರ್ಜೆಗೆ ಏರಿಸಬೇಕು. ಹಿರಿಯ ನಾಗರಿಕರು, ಕೋವಿಡ್‌ಗೆ ಸುಲಭವಾಗಿ ತುತ್ತಾಗುವವರನ್ನು ಗಮನದಲ್ಲಿ ಇರಿಸಿಕೊಂಡು ಸಾರ್ವಜನಿಕ ಜಾಗೃತಿ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಮಾಸ್ಕ್ ಧರಿಸುವುದು, ಕೈಗಳನ್ನು ಆಗಾಗ ತೊಳೆದುಕೊಳ್ಳುವುದು ಕೋವಿಡ್‌ನಿಂದ ರಕ್ಷಣೆಗೆ ಇರುವ ಮಾರ್ಗೋಪಾಯಗಳ ಪೈಕಿ ಕೆಲವು. ಇಂತಹ ಕ್ರಮಗಳ ಬಗ್ಗೆ ವ್ಯಾಪಕ ಪ್ರಚಾರ ಆಗಬೇಕು. ಕೋವಿಡ್ ಈಗ ನಿರ್ದಿಷ್ಟ ಪ್ರದೇಶಗಳಲ್ಲಿ ಶಾಶ್ವತವಾಗಿ ಕಂಡುಬರುವ ಒಂದು ಆರೋಗ್ಯ ಸಮಸ್ಯೆಯಾಗಿ ಪರಿವರ್ತನೆ ಕಂಡಿದೆ. ಅದು ಈಗ ಮೊದಲಿನಷ್ಟು ಅಪಾಯಕಾರಿ ಆಗಿಲ್ಲದಿರಬಹುದು. ಆದರೆ ವೈರಾಣು ರೂಪಾಂತರ ಹೊಂದಿ ಅಪಾಯಕಾರಿ ಕೂಡ ಆಗಬಲ್ಲದು. ಸರ್ಕಾರಗಳು, ವೈದ್ಯಕೀಯ ವ್ಯವಸ್ಥೆ ಮತ್ತು ಸಾರ್ವಜನಿಕರು ಎಚ್ಚರಿಕೆಯಿಂದ ಇರಬೇಕು. ಇಂತಹ ಆರೋಗ್ಯ ಸಮಸ್ಯೆಗಳನ್ನು ಎದುರಿಸುವ ಉದ್ದೇಶದಿಂದ ವಿಶ್ವ ಆರೋಗ್ಯ ಸಂಸ್ಥೆಯ (ಡಬ್ಲ್ಯುಎಚ್‌ಒ) ನೇತೃತ್ವದಲ್ಲಿ ವಿವಿಧ ದೇಶಗಳು ಒಪ್ಪಂದವೊಂದಕ್ಕೆ ಸಹಿ ಹಾಕಿವೆ. ಇದರಿಂದಾಗಿ ಇಂತಹ ಸಮಸ್ಯೆಗಳನ್ನು ಎದುರಿಸಲು ಜಗತ್ತು ಈಗ ಹೆಚ್ಚು ಪರಿಣಾಮಕಾರಿಯಾಗಿ ಸಜ್ಜಾಗಿದೆ ಎನ್ನಬಹುದು.

ದಿನದ ಟ್ವೀಟ್

ಅವಾಸ್ತವಿಕ ಹೇಳಿಕೆ ಸಲ್ಲದು



2009ರಲ್ಲಿ ಬೆಂಗಳೂರಿಗೆ ಬಂದು ತಮಿಳು ನನ್ನಮ್ಮ, ಆದರೆ ಕನ್ನಡ ಚಿಕ್ಕಮ್ಮ, ಚಿಕ್ಕಮ್ಮ ಎಂದರೆ ಅಮ್ಮನಷ್ಟೇ ಪ್ರೀತಿ ಅಂತೆಲ್ಲ ಹೊಗಳಿ, ಈಗ ಚಿಕ್ಕಮ್ಮನ್ನ ಮಗಳು ಮಾಡಿದ್ರೆ ಹೆಂಗೆ, ಕಮಲ್ ಹಾಸನ್ ಅವರೇ? ಇಲ್ಲಿ ಬಂದಾಗ ಒಂದು ಮಾತು, ಅಲ್ಲಿ ಹೋದಾಗ ಇನ್ನೊಂದು ಮಾತು! ನೀವೊಬ್ಬ ಅದ್ಭುತ ನಟ, ವಾಸ್ತವವಲ್ಲದ ಹೇಳಿಕೆಗಳನ್ನು ಕೊಡಬೇಡಿ.

ಕಿರಣ್ ಕೊಡ್ಲಾಡಿ

ಕಿಡಿನುಡಿ



ಬೆಂಗಳೂರಿನ ಎಚ್‌ಎಎಲ್‌ಗೆ ತನ್ನದೇ ಆದ ಇತಿಹಾಸ ಇದೆ. ಅದನ್ನು ಆಂಧ್ರಪ್ರದೇಶಕ್ಕೆ ಸ್ಥಳಾಂತರಿಸುವಂತೆ ಅಲ್ಲಿನ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಬೇಡಿಕೆ ಇಟ್ಟಿದ್ದು ಖಂಡನೀಯ. ಅವರು ಕೇಂದ್ರ ಸರ್ಕಾರದಿಂದ ಅನುದಾನ ಮಂಜೂರು ಮಾಡಿಸಿ, ಆಂಧ್ರ ಪ್ರದೇಶದಲ್ಲಿ ಬೇರೆ ಘಟಕ ಸ್ಥಾಪಿಸಬೇಕು. ಅಲ್ಲಿನ ಜನರಿಗೆ ಅನುಕೂಲವಾಗುತ್ತದೆ.

ಸಂತೋಷ್ ಲಾಡ್, ಕಾರ್ಮಿಕ ಸಚಿವ

25 ವರ್ಷಗಳ ಹಿಂದೆ

ಸೋಮವಾರ, 29-5-2000

• ಮಿಡಿದ ಮಂಡ್ಯ ರೈತರ ಅಂತಃಕರಣ

ಮಂಡ್ಯ, ಮೇ 28– ಕೆಆರ್‌ಎಸ್‌ನಿಂದ ಮೈಸೂರು ನಗರಕ್ಕೆ ಸರಬರಾಜಾಗುತ್ತಿದ್ದ ಕುಡಿಯುವ ನೀರಿಗೆ ಈ ತಿಂಗಳ 16ರಿಂದ ವಿಧಿಸಿದ್ದ ನಿರ್ಬಂಧವನ್ನು ಜಿಲ್ಲೆಯ ಪಾಲಹಳ್ಳಿ ಮತ್ತು ಸುತ್ತಲಿನ ರೈತರು ಹಿಂಪಡೆಯುವ ಮೂಲಕ ಎರಡೂ ಜಿಲ್ಲೆಗಳ ನಡುವಿನ ವಿವಾದಕ್ಕೆ ತಾತ್ಕಾಲಿಕ ತೆರೆ ಎಳೆದಿದ್ದಾರೆ.

ಜಿಲ್ಲೆಯ ಬೆಳೆಗಳಿಗೆ ನೀರು ಪೂರೈಸುವ ವಿ.ಸಿ. (ವಿಶ್ವೇಶ್ವರಯ್ಯ) ನಾಲೆ, ಆರ್‌ಬಿಎಲ್‌ಎಲ್ (ಬಲದಂಡೆ ಕೆಳಹಂತ) ನಾಲೆ, ಸಿಡಿಎಸ್ (ಚಿಕ್ಕದೇವರಾಯ) ನಾಲೆ, ದೇವರಾಯ ನಾಲೆಗಳಲ್ಲಿ ನೀರು ಬಾರದೆ ಬೆಳೆಗಳೆಲ್ಲ ಒಣಗಿಹೋಗುತ್ತಿರುವುದನ್ನು ಕಂಡ ರೈತರು ಮೈಸೂರು ನಗರಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ಮಾರ್ಗದ ತೂಬನ್ನು ದಿಢೀರೆಂದು ಬಂದ್ ಮಾಡಿದ್ದರು. ಇದರಿಂದಾಗಿ ಎರಡೂ ಜಿಲ್ಲೆಗಳ ಜನರ ನಡುವೆ ಎರಡು ವಾರಗಳಿಂದ ಭಿನ್ನಾಭಿಪ್ರಾಯ ಮೂಡಿ ವಿವಾದವೆದ್ದಿತ್ತು.

• ಮೋಸದಾಟ: 30 ಸಾವಿರ ಕೋಟಿ ರೂ. ಕಪ್ಪುಹಣ

ನವದೆಹಲಿ, ಮೇ 28– ಕ್ರಿಕೆಟ್ ಮೋಸದಾಟಕ್ಕೆ ಸಂಬಂಧಿಸಿದಂತೆ ಸತ್ಯವನ್ನು ಬಯಲಿಗೆಳೆಯಲು ಸಿಬಿಐ ಒಂದರಿಂದಲೇ ಅಸಾಧ್ಯ ಎಂದೆನಿಸತೊಡಗಿರುವುದರಿಂದ ಆದಾಯ ತೆರಿಗೆ ಇಲಾಖೆ ಮತ್ತು ಜಾರಿ ನಿರ್ದೇಶನಾಲಯ ಕೂಡಾ ತನಿಖೆ ನಡೆಸಲಿವೆ ಎಂದು ಆದಾಯ ತೆರಿಗೆ ಇಲಾಖೆಯ ಹೆಚ್ಚುವರಿ ಕಮಿಷನರ್ ವಿಶ್ವಬಂಧು ಗುಪ್ತಾ ಇಂದು ಇಲ್ಲಿ ಹೇಳಿದರು.

‘ಈ ವ್ಯವಹಾರದಲ್ಲಿ ಸುಮಾರು 30 ಸಾವಿರ ಕೋಟಿ ರೂಪಾಯಿಗಳಿಗೂ ಹೆಚ್ಚು ಕಪ್ಪುಹಣ ತೊಡಗಿಸಲ್ಪಟ್ಟಿದೆ’ ಎಂದು ಅವರು ಹೇಳಿದ್ದು, ಸಜ್ಜನರ ಕ್ರೀಡೆಯ ಮತ್ತೊಂದು ಕರಾಳಮುಖದ ಪರಿಚಯ ಮಾಡಿಕೊಟ್ಟಿದ್ದಾರೆ. ಆದರೆ 20 ವರ್ಷಗಳಿಂದ ಆದಾಯ ತೆರಿಗೆ ಇಲಾಖೆಯವರು ಒಬ್ಬನೇ ಒಬ್ಬ ಕ್ರಿಕೆಟಿಗನ ಮನೆಯ ಮೇಲೆ ದಾಳಿ ನಡೆಸದಿರುವುದು ಆಶ್ಚರ್ಯಕರವಾಗಿದೆ ಎಂದಿದ್ದಾರೆ.

50 ವರ್ಷಗಳ ಹಿಂದೆ

ಗುರುವಾರ, 29-5-1975

• ರೈತರೊಡನೆ ಸತತ ಸಮಾಲೋಚನೆ ಅಗತ್ಯ

ನವದೆಹಲಿ, ಮೇ 28– ಕೃಷಿ ಸಂಶೋಧನೆಯ ಉದ್ದೇಶಗಳನ್ನು ಸಾಧಿಸಲು ಕಾರ್ಯನಿರತ ರೈತರೊಡನೆ ಸತತ ಸಮಾಲೋಚನೆ ನಡೆಸುತ್ತಿರಬೇಕೆಂದು ಕೃಷಿ ಮತ್ತು ನೀರಾವರಿ ಸಚಿವ ಜಗಜೀವನರಾಂ ಅವರು ಇಂದು ಕೃಷಿ ವಿಜ್ಞಾನಿಗಳಿಗೆ ತಿಳಿಸಿದರು.

ಅನೇಕ ಶತಮಾನಗಳಿಂದ ರೈತರು ಅನುಸರಿಸಿಕೊಂಡು ಬರುತ್ತಿರುವ ಪ್ರಾಚೀನ ಕೃಷಿ ಪದ್ಧತಿಗಳನ್ನೂ ಅವುಗಳಿಗೆ ಕಾರಣವನ್ನೂ ಸಾಕಷ್ಟು ಸರಿಯಾಗಿ ಅರಿತುಕೊಳ್ಳದೆ ಅವುಗಳನ್ನು ಬದಲಾಯಿಸಲು ಪ್ರಯತ್ನಿಸಿದರೆ, ‘ಬದಲಾವಣೆ ಮಾಡುವ ಪ್ರಯತ್ನದಲ್ಲಿ ನಾವು ಯಶಸ್ವಿಯಾಗಲಾರೆವು’ ಎಂದರು.

• ದುರಾಚಾರರಹಿತ ‘ಸುರಾಜ್ಯ’ ಸ್ಥಾಪನೆಗೆ ಹೋರಾಡಿ: ಕೆಂಗಲ್

ಚಿಕ್ಕಮಗಳೂರು, ಮೇ 28– ಇಂದು ವ್ಯಾಪಕವಾಗಿರುವ ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಮತ್ತಿತರ ಕೆಡುಕುಗಳನ್ನು ನಿರ್ಮೂಲ ಮಾಡಲು ಸ್ವಾತಂತ್ರ್ಯ ಯೋಧರು ನೆರವಾಗಬೇಕೆಂದು ಸಂಸತ್ ಸದಸ್ಯ ಕೆಂಗಲ್ ಹನುಮಂತಯ್ಯ ಅವರು ಕರೆಯಿತ್ತರು.

ಶ್ರೀಯುತರು ಅಖಿಲ ಭಾರತ ಸ್ವಾತಂತ್ರ್ಯ ಹೋರಾಟಗಾರರ ಸಮ್ಮೇಳನ ಉದ್ಘಾಟಿಸಿ ಮಾತನಾಡಿ, ಸ್ವಾತಂತ್ರ್ಯ ಹೋರಾಟಗಾರರು ಸ್ವರಾಜ್ಯ ಗಳಿಸಲು ಹೋರಾಡಿದಂತೆಯೇ ಕೆಡುಕುರಹಿತ ‘ಸುರಾಜ್ಯ’ ಸ್ಥಾಪನೆಗಾಗಿ ಹೋರಾಡಬೇಕೆಂದು ಮನವಿ ಮಾಡಿಕೊಂಡರು.

ಮಧ್ಯಪ್ರದೇಶದ ಉಪಮುಖ್ಯಮಂತ್ರಿ, ಸಚಿವರ ಮಾತಿಗೆ ಮೌನವೇಕೆ?

ಮನ ಕೊಳಕಾದರೆ ತೊಳೆಯುವುದು ಕಷ್ಟ!



ಅನುಸಂಧಾನ

ರವೀಂದ್ರ ಭಟ್ಟ

1956ರಲ್ಲಿ ಮೆಹಬೂಬ್‌ನಗರದಲ್ಲಿ ರೈಲೊಂದು ಅಪಘಾತಕ್ಕೀಡಾಯಿತು. ಆಗ ರೈಲ್ವೆ ಸಚಿವರಾಗಿದ್ದವರು ಲಾಲ್ ಬಹದ್ದೂರ್ ಶಾಸ್ತ್ರಿ ಅವರು. ರೈಲು ಅಪಘಾತದ ನೈತಿಕ ಹೊಣೆ ಹೊತ್ತು ತಮ್ಮ ಸಚಿವ ಸ್ಥಾನಕ್ಕೆ ಅವರು ರಾಜೀನಾಮೆ ಸಲ್ಲಿಸಿದರು. ಆದರೆ ಆಗಿನ ಪ್ರಧಾನಿ ಜವಾಹರಲಾಲ್ ನೆಹರೂ ಅವರು ರಾಜೀನಾಮೆಯನ್ನು ಅಂಗೀಕರಿಸಲಿಲ್ಲ. ಅದಾದ ಎರಡೂವರೆ ತಿಂಗಳಿನಲ್ಲಿ ಅರಿಯಲೂರಿನಲ್ಲಿ ಮತ್ತೊಂದು ರೈಲು ಅಪಘಾತಕ್ಕೆ ಈಡಾಯಿತು. ಹಲವಾರು ಮಂದಿ ಪ್ರಾಣ ಕಳೆದುಕೊಂಡರು. ಆ ಬಾರಿ ಶಾಸ್ತ್ರಿಯವರು ಮತ್ತೆ ರಾಜೀನಾಮೆ ನೀಡಿದರು. ಅಲ್ಲದೆ, ಯಾರು ಹೇಳಿದರೂ ತಮ್ಮ ರಾಜೀನಾಮೆಯನ್ನು ವಾಪಸು ಪಡೆಯಲು ಒಪ್ಪಿಕೊಳ್ಳಲಿಲ್ಲ.

1956ರ ರಾಜಕಾರಣಕ್ಕೂ 2025ರ ರಾಜಕಾರಣಕ್ಕೂ ಬಹಳಷ್ಟು ವ್ಯತ್ಯಾಸ ಇದೆ. ಆಗ ರಾಜಕಾರಣದಲ್ಲಿ ನೈತಿಕತೆ ಜೀವಂತ ಇತ್ತು. ನೈತಿಕತೆಯ ನೆಲೆಯಲ್ಲಿ ಪ್ರಶ್ನೆ ಮಾಡುವ ವಾತಾವರಣವೂ ಇತ್ತು. ಈಗ ನೈತಿಕತೆಯ ನೆಲೆಯಲ್ಲಿ ಪ್ರಶ್ನೆ ಮಾಡುವ ವಾತಾವರಣವೇ ಇಲ್ಲ. ಈಗ ಯಾರಾದರೂ ಯಾರದ್ದಾದರೂ ನೈತಿಕತೆ ಪ್ರಶ್ನೆ ಮಾಡಿದರೆ ‘ನಮಗೆ ಗೊತ್ತಿಲ್ವಾ ಅವರೇನು ಅಂತ. ಅವರದ್ದನ್ನೆಲ್ಲಾ ಬಿಚ್ಚಿಡಲಾ’ ಎನ್ನುತ್ತಾರೆ. ಅವರಿಗೂ ನೈತಿಕತೆ ಇಲ್ಲ, ಇವರಿಗೂ ಇಲ್ಲ ಎನ್ನುವ ಸ್ಥಿತಿ.

2025ರ ಏಪ್ರಿಲ್ 22ರಂದು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಭಯೋತ್ಪಾದಕರು ದಾಳಿ ಮಾಡಿ 26 ಪ್ರವಾಸಿಗರನ್ನು ನಿರ್ದಯವಾಗಿ ಕೊಂದು ಹಾಕಿದರು. ಇದೊಂದು ಅತ್ಯಂತ ನೀಚತನದ, ಹೇಯ ಕೃತ್ಯ. ಯಾವ ಕಾರಣಕ್ಕೂ ಕ್ಷಮೆಯೇ ಇಲ್ಲದ ಭಯೋತ್ಪಾದಕ ಘಟನೆ. ಇಡೀ ದೇಶ ಇದಕ್ಕಾಗಿ ದುಃಖಪಟ್ಟಿತು. ಪ್ರಪಂಚದ ಮಾನವೀಯ ಮನಸ್ಸುಗಳೆಲ್ಲ ಇದನ್ನು ಅತ್ಯಂತ ತೀಕ್ಷ್ಣವಾಗಿ ಖಂಡಿಸಿದವು. ನಂತರ ಭಾರತ ‘ಆಪರೇಷನ್ ಸಿಂಧೂರ’ ಕಾರ್ಯಾಚರಣೆ ನಡೆಸಿ ಪಾಕಿಸ್ತಾನದ ಉಗ್ರರ ನೆಲೆಗಳನ್ನು ಕೆಡವಿಹಾಕಿತು. ಭಾರತದ ದಿಟ್ಟ ಉತ್ತರಕ್ಕೆ ಎಲ್ಲೆಡೆಯಿಂದ ಮೆಚ್ಚುಗೆ ವ್ಯಕ್ತವಾಯಿತು. ನಮ್ಮ ಸೈನಿಕರ ಸಾಹಸವನ್ನು ಕೊಂಡಾಡಲಾಯಿತು. ಉಗ್ರವಾದಕ್ಕೆ ತಕ್ಕ ಉತ್ತರ ನೀಡಲಾಗುವುದು ಎಂಬ ಸಂದೇಶವನ್ನು ಜಗತ್ತಿಗೇ ರವಾನಿಸಲಾಯಿತು. ಪಾಕಿಸ್ತಾನದ ಕುಕೃತ್ಯಗಳನ್ನು ಬಯಲು ಮಾಡಲು ಸಂಸದರ ನಿಯೋಗಗಳೂ ಬೇರೆ ಬೇರೆ ದೇಶಗಳಿಗೆ ಪ್ರಯಾಣ ಬೆಳೆಸಿದವು. ಇವೆಲ್ಲ ಸರಿ, ಆದರೆ ಪಹಲ್ಗಾಮ್ ಘಟನೆಗೆ ವೀರಾವೇಶದ ಪ್ರತಿಕ್ರಿಯೆಗಳು ಬಂದವೇ ವಿನಾ ಪಶ್ಚಾತ್ತಾಪದ ಲವಲೇಶವೂ ಯಾವ ಮೂಲೆಯಲ್ಲಿಯೂ ಪ್ರಕಟವಾಗಲಿಲ್ಲ. ಆತ್ಮಾವಲೋಕನದ ಯತ್ನಗಳೂ ಕಾಣಲಿಲ್ಲ.

ಪಹಲ್ಗಾಮ್ ದಾಳಿಯ ನಂತರ ಬೇಹುಗಾರಿಕೆ ವೈಫಲ್ಯದ ಬಗ್ಗೆ ಹೆಚ್ಚಿನ ಚರ್ಚೆಯಾಗಲಿಲ್ಲ. ಭದ್ರತಾ ವೈಫಲ್ಯದ ಬಗ್ಗೆಯೂ ಚರ್ಚೆ ನಿರೀಕ್ಷಿತ ಮಟ್ಟದಲ್ಲಿ ನಡೆಯಲಿಲ್ಲ. ಅಲ್ಲೊಬ್ಬರು ಇಲ್ಲೊಬ್ಬರು ಗೊಣಗಿದರೇ ವಿನಾ ಅದೇ ಪ್ರಧಾನ ಚರ್ಚೆಯಾಗಲಿಲ್ಲ. ಹಾಗೆ ಪ್ರಶ್ನೆ ಕೇಳಿದವರ ನೈತಿಕತೆಯನ್ನು ಕಸಿಯುವ ಪ್ರಯತ್ನಗಳು ನಡೆದವೇ ವಿನಾ ಭದ್ರತಾ ವೈಫಲ್ಯದ ಬಗ್ಗೆ ಸರ್ಕಾರದ ಕಡೆಯಿಂದ ಯಾವುದೇ ಸ್ಪಷ್ಟನೆ ಕೂಡಾ ಬರಲಿಲ್ಲ. ಘಟನೆಗೆ ಕಾರಣರಾದವರ ಪತ್ತೆಯೂ ಆಗಲಿಲ್ಲ.

ಪಹಲ್ಗಾಮ್ ಪ್ರಕರಣದ ನಂತರ ಭಯೋತ್ಪಾದಕರ ಮೂಲೋಚ್ಚಾಟನೆ ಕುರಿತು ಅಬ್ಬರದ ಮಾತುಗಳು ಕೇಳಿಬಂದವೇ ವಿನಾ ಆದ ಘಟನೆಯ ನೈತಿಕ ಜವಾಬ್ದಾರಿಯನ್ನು ಒಬ್ಬರೂ ಹೊರಲೇ ಇಲ್ಲ. ಪ್ರಧಾನಿಯಾಗಲಿ, ಕೇಂದ್ರ ಗೃಹ ಸಚಿವರಾಗಲಿ, ರಕ್ಷಣಾ ಸಚಿವರಾಗಲಿ ಘಟನೆಯಲ್ಲಿ ಪ್ರಾಣ ಕಳೆದುಕೊಂಡ ಕುಟುಂಬದವರ ಕ್ಷಮೆ ಕೋರಿದ್ದರೆ, ದೇಶದ ಕ್ಷಮೆ ಕೇಳಿದ್ದರೆ ಅವರು ಇನ್ನೂ ದೊಡ್ಡವರಾಗುತ್ತಿದ್ದರು. ಸೇಡು ತೀರಿಸಿಕೊಳ್ಳುವುದು ಬೇರೆ, ಮಾನವೀಯ ನಡೆ ಬೇರೆ, ಆತ್ಮಾವಲೋಕನ ಬೇರೆ.

ಅದು ಹೋಗಲಿ, ಪಹಲ್ಗಾಮ್ ಪ್ರಕರಣದಲ್ಲಿ ಪ್ರಾಣ ಕಳೆದುಕೊಂಡವರ ಪತ್ನಿಯರ ನೈತಿಕತೆಯನ್ನೇ ಪ್ರಶ್ನೆ ಮಾಡುವ ಮಹಾಪುರುಷರ ಬಾಯಿಗೆ ಬೀಗ ಹಾಕುವ ಕೆಲಸವನ್ನೂ ಮಾಡಲಿಲ್ಲ. ರಾಜ್ಯಸಭಾ ಸದಸ್ಯ ರಾಮಚಂದ್ರ ಜಾಂಗಡಾ ‘ಭಯೋತ್ಪಾದಕರ ವಿರುದ್ಧ ಮಹಿಳೆಯರು ಯಾಕೆ ಹೋರಾಟ ನಡೆಸಲಿಲ್ಲ?’ ಎಂದು ಪ್ರಶ್ನೆ ಮಾಡಿದರು. ‘ಪತಿಯನ್ನು ಕಳೆದುಕೊಂಡ ಮಹಿಳೆಯರು ವೀರಾಂಗನೆಯರ ತರಹ ವರ್ತಿಸಬೇಕಿತ್ತು, ಪ್ರವಾಸಿಗರು ಅಗ್ನಿವೀರರ ರೀತಿಯಲ್ಲಿ ತರಬೇತಿ ಪಡೆದುಕೊಂಡವರಾಗಿದ್ದರೆ ಸಾವಿನ ಸಂಖ್ಯೆ ಕಡಿಮೆಯಾಗುತ್ತಿತ್ತು. ಪತಿಯನ್ನು ಕಳೆದುಕೊಂಡ ಮಹಿಳೆಯರಲ್ಲಿ ಹುಮ್ಮಸ್ಸು ಇರಲಿಲ್ಲ. ವೀರಾಂಗನೆಯರ ಭಾವ ಇರಲಿಲ್ಲ. ಹೀಗಾಗಿ ಅವರು ದಾಳಿಗೆ ಒಳಗಾದರು. ಬೇಡಿಕೊಂಡ ಮಾತ್ರಕ್ಕೆ ಭಯೋತ್ಪಾದಕರು ಅವರನ್ನು ಬಿಡುವುದಿಲ್ಲ. ನಮ್ಮ ಜನ ಕೈಮುಗಿದು ನಿಂತು ಪ್ರಾಣ ಕಳೆದುಕೊಂಡರು’ ಎಂದು ಅಸೂಕ್ಷ್ಮ ಹೇಳಿಕೆ ನೀಡಿದರು.

‘ನಿನ್ನ ಧರ್ಮ ಯಾವುದು?’ ಎಂದು ಕೇಳಿ ಹತ್ಯೆ ಮಾಡಿದ ಭಯೋತ್ಪಾದಕರ ಮನಃಸ್ಥಿತಿಗಿಂತ ಜಾಂಗಡಾ ಅವರ ಮನಃಸ್ಥಿತಿ ಭಿನ್ನವಾಗಿರಲಿಲ್ಲ. ನಮ್ಮ ಮಹಿಳೆಯರನ್ನು ಇಷ್ಟೊಂದು ಹೀನಾಯವಾಗಿ ನಿಂದಿಸಿದ ಆ ವ್ಯಕ್ತಿಯ ವಿರುದ್ಧ ಇನ್ನೂ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ. ಅದಕ್ಕೊಂದು ವಿಷಾದ ಕೂಡಾ ಆ ಪಕ್ಷದ ವತಿಯಿಂದ ಹೊರಬಿದ್ದಿಲ್ಲ. ಜಾಂಗಡಾ ಅವರ ಮಾತುಗಳು ಇಡೀ ಹೆಣ್ಣು ಕುಲವನ್ನು ಅಣಕಿಸುವಂತೆ ಇವೆ. ಆದರೂ ನಮಗೆ ಅಸಹನೆ ಉಂಟಾಗಲಿಲ್ಲ. ಅವರಿಗೆ ಛೀಮಾರಿ ಹಾಕುವ ಪ್ರಯತ್ನವೂ ನಡೆಯಲೇ ಇಲ್ಲ.

ಲಾಲ್ ಬಹದ್ದೂರ್ ಶಾಸ್ತ್ರಿ ಅವರು ಪ್ರಧಾನಿಯಾಗಿದ್ದಾಗ ಭಾರತ–ಪಾಕಿಸ್ತಾನದ ನಡುವೆ ಎರಡನೇ ಯುದ್ಧವಾಯಿತು. ಆಗ ಶಾಸ್ತ್ರಿ ಅವರು ಜೈ ಜವಾನ್, ಜೈ ಕಿಸಾನ್ ಎಂಬ ಘೋಷಣೆ ಮಾಡಿದರು. ಅದು ಈಗಲೂ ಅತ್ಯಂತ ಜನಪ್ರಿಯ ಘೋಷಣೆ. ಆದರೆ ಈಗ ನಮ್ಮ ಮನಃಸ್ಥಿತಿ ಎಷ್ಟು ಬದಲಾಗಿದೆ ಎಂದರೆ, ಮಧ್ಯಪ್ರದೇಶದ ಉಪಮುಖ್ಯಮಂತ್ರಿ ಜಗದೀಶ್ ದೇವ್ಡಾ ‘ಇಡೀ ದೇಶ, ಸೇನೆ ಮತ್ತು ಯೋಧರು ಪ್ರಧಾನಿ ನರೇಂದ್ರ ಮೋದಿ ಅವರ ಕಾಲಿಗೆ ನಮಸ್ಕರಿಸುತ್ತಾರೆ’ ಎಂದು ಹೇಳಿಕೆ ನೀಡಿದರು. ಇದು ನಮ್ಮ ಸೇನೆಗೆ ಮಾಡುವ ಅವಮಾನ ಎಂದು ನಮ್ಮನ್ನು ಆಳುವ ಪ್ರಭುಗಳಿಗೆ ಅನ್ನಿಸಲೇ ಇಲ್ಲ. ಅಂತಹವರ ಬಾಯಿ ಮುಚ್ಚಿಸುವ ಕೆಲಸವೂ ಆಗಲಿಲ್ಲ.

ಭಯೋತ್ಪಾದಕರ ಮೂಲ ನೆಲೆಗಳ ಮೇಲೆ ದಾಳಿ ಮಾಡುವ ಕಾರ್ಯಾಚರಣೆಗೆ ‘ಆಪರೇಷನ್ ಸಿಂಧೂರ’ ಎಂದು ಹೆಸರಿಟ್ಟಿದ್ದು, ಕಾರ್ಯಾಚರಣೆಯ ವಿವರಗಳನ್ನು ಪ್ರಕಟಿಸುವ ಜವಾಬ್ದಾರಿಯನ್ನು ಇಬ್ಬರು ಮಹಿಳೆಯರಿಗೆ ನೀಡಿದ್ದು ಎಲ್ಲವೂ ಲೆಕ್ಕಾಚಾರದ ನಡೆ. ಆದರೆ ಮಧ್ಯ ಪ್ರದೇಶದ ಸಚಿವ ವಿಜಯ್ ಶಾ ಅವರು ಕರ್ನಲ್ ಸೋಫಿಯಾ ಖುರೇಷಿ ಅವರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದ್ದರು. ಸೋಫಿಯಾ ಅವರನ್ನು ‘ಭಯೋತ್ಪಾದಕರ ಸಹೋದರಿ’ ಎಂದು ಕರೆದಿದ್ದರು. ನಂತರ ಅವರು ಕ್ಷಮೆ ಕೇಳಿದರಾದರೂ ಅದನ್ನು ಸುಪ್ರೀಂ ಕೋರ್ಟ್ ಒಪ್ಪಿಕೊಳ್ಳಲಿಲ್ಲ. ‘ವಿಜಯ್ ಶಾ ಅವರ ಹೇಳಿಕೆ ಇಡೀ ದೇಶಕ್ಕೆ ಮಾಡಿದ ಅವಮಾನ’ ಎಂದು ಸುಪ್ರೀಂ ಕೋರ್ಟ್ ಹೇಳಿದ್ದರೂ ಬಿಜೆಪಿಯು ಅವರ ಹೇಳಿಕೆಯನ್ನು ಖಂಡಿಸಲೂ ಇಲ್ಲ, ಶಾ ವಿರುದ್ಧ ಕ್ರಮವನ್ನೂ ಕೈಗೊಳ್ಳಲಿಲ್ಲ. ಇವೆಲ್ಲವೂ ಏನನ್ನು ಸೂಚಿಸುತ್ತವೆ?

ಕರ್ನಾಟಕದಲ್ಲಿಯೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸಿದ್ರಾಮುಲ್ಲಾ ಖಾನ್ ಎಂದು ಹಂಗಿಸುವುದು, ಸಚಿವ ದಿನೇಶ್ ಗುಂಡೂರಾವ್ ಅವರ ಮನೆಯಲ್ಲೇ ‘ಅರ್ಧ ಪಾಕಿಸ್ತಾನ ಇದೆ’ ಎಂದು ಕಿಚಾಯಿಸುವುದು, ಕಲಬುರಗಿಯ ಜಿಲ್ಲಾಧಿಕಾರಿಯನ್ನು ಪಾಕಿಸ್ತಾನಿ ಎಂದು ಟೀಕಿಸುವುದು ನಡೆಯುತ್ತಲೇ ಇದೆ. ನಮ್ಮ ಜೊತೆಗೇ ಇರುವ ಒಂದು ಸಮುದಾಯವನ್ನು ಇಷ್ಟೊಂದು ಹೀನಾಯವಾಗಿ ಅವಹೇಳನ ಮಾಡಲಾಗುತ್ತಿದ್ದರೂ ನೋಡಿಯೂ ನೋಡದಂತೆ ಇರುವ, ಕೇಳಿಯೂ ಕೇಳದಂತೆ ಇರುವ ವ್ಯವಸ್ಥೆಗೆ ಏನನ್ನಬೇಕು?

ಈಗ ಆಡಳಿತ ನಡೆಸುತ್ತಿರುವ ಪಕ್ಷ ಮುಂದೆ ಸೋಲಬಹುದು. ಪ್ರಧಾನಿ ಬದಲಾಗಬಹುದು. ಆದರೆ ನಮ್ಮ ನಡುವೆಯೇ ಕಟ್ಟಿದ ಈ ಗೋಡೆಗಳನ್ನು ಕೆಡಹುವುದಕ್ಕೆ ಇನ್ನೆಷ್ಟು ಶತಮಾನಗಳು ಬೇಕಾಗಬಹುದು? ಸ್ಪಂದನೆಯೇ ಇಲ್ಲದ ಸಮಾಜ ಸುಧಾರಣೆಯಾಗುವುದು ಯಾವಾಗ? ಮೈ ಕೊಳಕಾದರೆ ತೊಳೆದುಕೊಳ್ಳಬಹುದು, ಮನ ಕೊಳಕಾದರೆ ದುರಂತ ಖಚಿತ.



ಚುರುಮುರಿ



ಬ್ರ್ಯಾಂಡ್ ಅಂಬಾಸಿಡರ್

• ಗುರು ಪಿ.ಎಸ್.

‘ಅಬ್ಬಬ್ಬಾ! ಏನ್ ಅಂದ, ಏನ್ ಚೆಂದ... ಮದುವೆ ಗಂಡಿನಂಗೆ ರೆಡಿ ಆಗಿ ಎಲ್ಲಿಗೆ ಹೊರಟಿದ್ದೀರ್ರೀ?’ ಕೇಳಿದಳು ಹೆಂಡತಿ.

‘ಎಲ್ಲಿಗಿರಬಹುದು ನೀನೇ ಗೆಸ್ ಮಾಡು’ ಮೈಸೂರು ಪೇಟ ಸರಿ ಮಾಡಿಕೊಳ್ಳುತ್ತಾ ಕೇಳಿದೆ.

‘ಎಲ್ಲಿಗೆ ಹೇಳ್ರೀ... ಗೊತ್ತಾಗ್ತಿಲ್ಲ’.

‘ಅದೇ ಕಣೆ, ರಾಜ್ಯ ಸರ್ಕಾರದವರು ಮೈಸೂರು ಸ್ಯಾಂಡಲ್ ಸೋಪ್‌ಗೆ ಪ್ರಚಾರ ರಾಯಭಾರಿ ಬೇಕು ಅಂತ ಹುಡುಕ್ತಿದ್ದಾರಲ್ಲ’.

‘ಅದಕ್ಕೆ?!’

‘ಅದಕ್ಕೇ ನಾನೇ ಬ್ರ್ಯಾಂಡ್ ಅಂಬಾಸಿಡರ್ ಆಗೋಣ ಅಂತ...’ ನನ್ನ ಮಾತು ಮುಗಿಸುವುದಕ್ಕೆ ಮುನ್ನವೇ ಜೋರಾಗಿ ನಗತೊಡಗಿದಳು ಹೆಂಡತಿ.

‘ನೀವಾ! ಆ ಸೋಪ್ ಬಳಸಿದರೆ ನಿಮ್ಮ ಥರ ಆಗ್ತಾರೆ ಅನ್ನೋದಕ್ಕಿಂತ, ಆ ಸೋಪ್ ಬಳಸದಿದ್ದರೆ ನಿಮ್ಮ ಥರ ಆಗ್ತಾರೆ ನೋಡಿ ಅಂತ ಹೆದರಿಸೋಕೆ ನಿಮ್ಮನ್ನು ಬಳಸಿಕೋಬೇಕಷ್ಟೆ?’

‘ಅದ್ಯಾರೋ ಪರಭಾಷಾ ನಟಿಗೆ 6 ಕೋಟಿ ರೂಪಾಯಿ ಕೊಡ್ತಿದ್ದಾರಂತೆ, ನಾನಾದರೆ ಫ್ರೀ ಆಗಿ ಮಾಡಿಕೊಡ್ತೀನಿ’.

‘ನೀವು ಬ್ರ್ಯಾಂಡ್ ಅಂಬಾಸಿಡರ್ ಆಗ್ತೀನಿ ಅನ್ನೋದಕ್ಕಿಂತ, ಆಗಲ್ಲ ಅಂದರೆ ದುಡ್ಡು ಕೊಡಬಹುದೇನೋ’ ಮತ್ತೆ ನಕ್ಕಳು.

‘ನಮ್ಮ ನಾಡಿನ ಸೋಪ್‌ಗೆ ಪರಭಾಷಾ ನಟಿಯಿಂದ ಪ್ರಚಾರ ಬೇಕಿತ್ತಾ?’ ಎಂದೆ.

‘ಕರ್ನಾಟಕದಲ್ಲಿ ನಮ್ ಮೈಸೂರು ಸ್ಯಾಂಡಲ್ ಸೋಪ್ ಎಲ್ಲರಿಗೂ ಗೊತ್ತು, ದೇಶ-ವಿದೇಶದಲ್ಲಿ ಸೋಪ್ ಫೇಮಸ್ ಆಗಲಿ ಅಂತ ಆ ನಟಿಯನ್ನು ರಾಯಭಾರಿ ಮಾಡಿದ್ದಾರಷ್ಟೇ’.

‘ಓಹ್, ಈಗ ಗೊತ್ತಾಯ್ತು?’

‘ಏನ್ ಗೊತ್ತಾಯ್ತು?’

‘109 ವರ್ಷಗಳಿಂದ ತನ್ನದೇ ಆದ ಬ್ರ್ಯಾಂಡ್ ಹೊಂದಿರೋ ಸೋಪ್‌ನ ಪ್ರಚಾರಕ್ಕೆ ಕೋಟಿ ದುಡ್ಡು ಖರ್ಚು ಮಾಡಿ ಪರಭಾಷಾ ನಟಿಯನ್ನು ಕರೆತರೋದು, ಬೆಂಗಳೂರಿನ ಸೌಂದರ್ಯ ವೀಕ್ಷಣೆಗೆ ಸ್ಕೈಡೆಕ್ ನಿರ್ಮಾಣ ಮಾಡೋದು ಎರಡೂ ಒಂದೇ ಅಂತ ಗೊತ್ತಾಯ್ತು’.

‘ಅಂದ್ರೆ?’

‘ಇದ್ದರೂ ನಡೆಯುತ್ತೆ, ಇರದಿದ್ದರೂ ನಡೆಯುತ್ತೆ ಅಂತ!’

ಸಂಗತ

ಕನ್ನಡ: ಗಂಟಲಲ್ಲಿ ಇಳಿಯುವ ಕಡುಬು!

ಕನ್ನಡ ಪಠ್ಯವನ್ನು ಕ್ಲಿಷ್ಟಗೊಳಿಸಿ ಮಕ್ಕಳು ಅದರಿಂದ ದೂರ ಸರಿಯುವಂತೆ ಮಾಡದೆ, ಅದನ್ನು ಆಕರ್ಷಕವಾಗಿಸಿ ಮಕ್ಕಳು ಖುಷಿಯಿಂದ ಕಲಿಯುವಂತೆ ಮಾಡಬೇಕಾಗಿದೆ

• ಸದಾಶಿವ್ ಸೊರಟೂರು

ಈ ವರ್ಷದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 1.32 ಲಕ್ಷ ಮಕ್ಕಳು ಪ್ರಥಮ ಭಾಷೆ ಕನ್ನಡದಲ್ಲಿ ನಪಾಸಾಗಿದ್ದಾರೆ. ಇದು ಒಟ್ಟು ವಿದ್ಯಾರ್ಥಿಗಳ ಪೈಕಿ ಶೇ 21ರಷ್ಟು. ಅಂಕ ಗಳಿಕೆಯ ಗುಣಾತ್ಮಕತೆಯೂ ಅಷ್ಟೇನೂ ಸಮಾಧಾನಕರವಾಗಿಲ್ಲ. ಇದು ಬರೀ ಈ ವರ್ಷದ ವಿದ್ಯಮಾನವಲ್ಲ; ಪ್ರತಿವರ್ಷದ್ದು! ಮಾತೃಭಾಷೆ, ರಾಜ್ಯಭಾಷೆ ಎಲ್ಲವೂ ಕನ್ನಡವೇ ಆಗಿರುವಾಗ ಅದರಲ್ಲೇ ಹೆಚ್ಚು ಮಂದಿ ನಪಾಸಾಗುವುದು ಎಂದರೇನು ಎಂಬ ಪ್ರಶ್ನೆ ಮೂಡುವುದು ಸಹಜ.


‘ಕನ್ನಡವು ಸುಲಿದ ಬಾಳೆಯ ಹಣ್ಣಿನಂತೆ’ ಎಂದಿದ್ದಾರೆ ಕವಿ ಮಹಲಿಂಗರಂಗ. ಆದರೆ ನಮ್ಮ ಮಕ್ಕಳು ಭಾಷೆಯ ಕಲಿಕೆಯಲ್ಲಿ ಸೋಲುತ್ತಿದ್ದಾರೆ. ಅಷ್ಟು ಸುಲಭದ ಭಾಷೆಯು ಗಂಟಲಲ್ಲಿ ಇಳಿಯದ ಕಡುಬಿನಂತೆ ಆದದ್ದು ಹೇಗೆ? ಮೊದಲನೆಯದು, ಈ ಭಾಷೆಯ ಮೇಲಿನ ನಮ್ಮ ತಾತ್ಸಾರ. ಇದು ಎಲ್ಲೆಡೆಯಲ್ಲೂ ನಿರ್ಲಕ್ಷ್ಯಕ್ಕೆ ಒಳಪಟ್ಟ ವಿಷಯ. ಶಾಲೆಯಲ್ಲಿ ಬೇರೆ ವಿಷಯಕ್ಕೆ ಸಿಗುವಷ್ಟು ಆದ್ಯತೆ ಕನ್ನಡಕ್ಕೆ ಸಿಗುವುದಿಲ್ಲ. ‘ಬಿಡಿ, ಕನ್ನಡ ಅಲ್ವಾ’ ಎಂಬ ಧೋರಣೆ. ವಿಶೇಷ ತರಗತಿಯಿಂದ ಹಿಡಿದು ಕೊನೆಗೆ ಪರೀಕ್ಷೆಯವರೆಗೂ ಅದನ್ನು ಗಂಭೀರವಾಗಿ ಪರಿಗಣಿಸಿದ್ದೇ ಇಲ್ಲ.

ಪಠ್ಯವು ಸರಳವೊ ಕಠಿಣವೊ ಅನ್ನುವುದಕ್ಕಿಂತ ಪಠ್ಯದಿಂದ ಪರೀಕ್ಷೆಗೆ ಕೇಳಲಾಗುವ ಪ್ರಶ್ನೆಗಳ ಸ್ವರೂಪ ತ್ರಾಸದಾಯಕವಾಗಿ ಇರುತ್ತದೆ. ಪದಗಳ ಅರ್ಥದ ಒಂದು ಪ್ರಶ್ನೆಗೆ, ಪಠ್ಯದಲ್ಲಿರುವ ಹಲವಾರು ಪದಗಳನ್ನು ಮಗು ಅರ್ಥೈಸಿಕೊಳ್ಳಬೇಕು. ಭಾಷೆ ಎಂದೂ ನೇರವಾದ ಉತ್ತರವನ್ನು ಬಯಸುವುದಿಲ್ಲ. ಅದು ಮಗುವಿನ ಭಾಷಾ ಸಾಮರ್ಥ್ಯ, ಪದ ಬಳಕೆ, ವಾಕ್ಯರಚನೆ, ಮಂಡನೆಯ ಶೈಲಿಯನ್ನು ಬಯಸುತ್ತದೆ. ಹೆಚ್ಚಿನವು ಪ್ರಬಂಧದ ಶೈಲಿಯಲ್ಲಿ ಇರುತ್ತವೆ. ಬಹುತೇಕ ಮಕ್ಕಳು ಪರೀಕ್ಷೆ ಬರೆದು ಬಂದ ಮೇಲೆ ‘ಸಮಯ ಸಾಲಲಿಲ್ಲ’, ‘ಉತ್ತರ ಗೊತ್ತಿತ್ತು, ಆದರೆ ಹೇಗೆ ಬರೆಯಬೇಕು ಎಂಬುದು ತಿಳಿಯಲಿಲ್ಲ’ ಎಂದೆಲ್ಲ ಹೇಳುತ್ತಾರೆ.

ಮಗುವಿಗೆ ಕನ್ನಡವನ್ನು ಒಂದು ಭಾಷೆಯಾಗಿ ಕಲಿಸದಿರುವುದೇ ನಮ್ಮ ಮೊದಲ ಸೋಲು. ಮಗುವಿನ ಕನ್ನಡಕ್ಕೂ ಪಠ್ಯದ ಕನ್ನಡಕ್ಕೂ ವ್ಯತ್ಯಾಸವಿದೆ. ಅದೂ ಮಗುವನ್ನು ಪ್ರಭಾವಿಸಬಹುದು. ಆಯಾ ತರಗತಿಯಲ್ಲಿ ಮಗು ತಾನು ಎಷ್ಟರಮಟ್ಟಿಗೆ ಭಾಷೆಯನ್ನು ಕಲಿಯಬೇಕೋ ಅಷ್ಟರಮಟ್ಟಿಗೆ ಕಲಿಯದೆ ಹತ್ತನೇ ತರಗತಿಗೆ ಬಂದು ಕೂತಿರಬಹುದು. ಆಗ, ಒಂದು ಭಾಷೆ ಬಯಸುವ ಎಲ್ಲಾ ಕೌಶಲಗಳನ್ನು ಒಮ್ಮೆಲೇ ಪರೀಕ್ಷಿಸಲು ನಾವು ಮುಂದಾದಾಗ ಅದು ಕಂಗಾಲಾಗುತ್ತದೆ. ಮಾತೃಭಾಷೆಯಲ್ಲಿ ಅನುತ್ತೀರ್ಣವಾಗುವುದು ಶಿಕ್ಷಣದ ಬಗೆಗಿನ ಮಗುವಿನ ಆತ್ಮವಿಶ್ವಾಸವನ್ನು ಕುಗ್ಗಿಸುತ್ತದೆ.

ಕನ್ನಡ ವಿಷಯವು ಪರೀಕ್ಷೆಯಲ್ಲಿ ಹೆಚ್ಚು ಬರೆಯುವುದನ್ನು ಬಯಸುತ್ತದೆ. ಉತ್ತೀರ್ಣವಾಗಲು ಮೂವತ್ತೈದು ಅಂಕ ಕಡ್ಡಾಯ. ಬೇರೆ ವಿಷಯಗಳಲ್ಲಿ ಇಪ್ಪತ್ತೆಂಟು ಅಂಕ ಸಾಕು. ಮಕ್ಕಳು ಕನ್ನಡ ವಿಷಯವನ್ನು ಮೂರು ಗಂಟೆಯಲ್ಲಿ ನೂರು ಅಂಕಕ್ಕೆ ಬರೆಯಬೇಕು. ಬೇರೆ ವಿಷಯಗಳು ಎಂಬತ್ತು ಅಂಕಕ್ಕೆ ಇರುತ್ತವೆ. ಇದರ ಅರ್ಥ, ಕನ್ನಡ ವಿಷಯ ಹೆಚ್ಚಿನ ಶ್ರಮವನ್ನು ಬೇಡುತ್ತದೆ. ಆದರೆ ಈ ವಿಷಯ ಉದಾಸೀನಕ್ಕೆ ಒಳಗಾದದ್ದೇ ಹೆಚ್ಚು.

ಪಠ್ಯ ಸರಳವೂ ಆಕರ್ಷಕವೂ ಆಗಬೇಕಾಗಿದೆ. ಕೆಲವೊಂದು ಪಾಠಗಳು ಏನು ಹೇಳುತ್ತವೆ ಎಂಬುದನ್ನು ಮಕ್ಕಳಿಗೆ ತಲುಪಿಸಲು ಕಷ್ಟವಾಗುತ್ತದೆ ಎನ್ನುವುದು ಶಿಕ್ಷಕರ ಅನುಭವ. ಹಳೆಗನ್ನಡ ಮತ್ತು ವ್ಯಾಕರಣದಂತಹ ಶುಷ್ಕ ವಿಷಯಗಳು ಮಗುವಿನ ಆಸಕ್ತಿಯನ್ನು ಕುಗ್ಗಿಸುತ್ತವೆ. ಇಂಗ್ಲಿಷ್ ಭಾಷೆಯ ಬಗೆಗಿನ ಪೋಷಕರ ವ್ಯಾಮೋಹ ಮತ್ತು ಇಂಗ್ಲಿಷ್ ಮಾಧ್ಯಮದಲ್ಲಿ ಕಲಿಯುವವರ ಸಂಖ್ಯೆಯಲ್ಲಿನ ಹೆಚ್ಚಳವು ಕನ್ನಡದ ಕಲಿಕೆ ಗಟ್ಟಿಯಾಗುವಲ್ಲಿ ತೊಡಕಾಗಿವೆ.



ಈ ಬೆಳವಣಿಗೆಯಿಂದ ಕನ್ನಡ ಭಾಷೆ ಗಂಭೀರವಾದ ಪರಿಣಾಮವನ್ನು ಎದುರಿಸಬೇಕಾಗುತ್ತದೆ. ನಮ್ಮ ಮುಂದಿನ ತಲೆಮಾರಿಗೆ ನಾವು ಭಾಷೆಯನ್ನು ನಮ್ಮ ಮಕ್ಕಳ ಮೂಲಕವೇ ಸಮರ್ಥವಾಗಿ ತಲುಪಿಸಬೇಕು. ಮಕ್ಕಳು ಭಾಷೆಯ ಕಲಿಕೆಯಲ್ಲಿ ಸೋತಾಗ ಅದರ ನೇರ ಪರಿಣಾಮ ಭಾಷೆಯ ಮೇಲಾಗುತ್ತದೆ.

ಕನ್ನಡವನ್ನು ಕ್ಲಿಷ್ಟ ಮಾಡಿಟ್ಟಾಗ ಮಕ್ಕಳು ಕ್ರಮೇಣ ಅದರಿಂದ ದೂರ ಸರಿಯುತ್ತಾರೆ. ಇದು ಕನ್ನಡ ಭಾಷೆಯ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಪರಂಪರೆಯ ಬಗ್ಗೆ ಅವರಲ್ಲಿ ಅನಾಸಕ್ತಿ ಮೂಡಿಸಬಹುದು. ಕನ್ನಡದ ಕಾವ್ಯ, ಗದ್ಯ ಮತ್ತು ಐತಿಹಾಸಿಕ ಸಾಹಿತ್ಯದ ಆಳವಾದ ತಿಳಿವಳಿಕೆಯಿಲ್ಲದೆ ಕನ್ನಡದ ಶ್ರೀಮಂತ ಪರಂಪರೆ ಮಸುಕಾಗುತ್ತದೆ. ದೀರ್ಘಕಾಲದಲ್ಲಿ ಕನ್ನಡ ಭಾಷೆಯ ಬಳಕೆ ಮತ್ತು ಜನಪ್ರಿಯತೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರಬಹುದು. ಈಗಾಗಲೇ ಬೇರೆ ಬೇರೆ ಪ್ರಭಾವಗಳು ಕನ್ನಡದ ಬಳಕೆಯನ್ನು ಕಡಿಮೆ ಮಾಡುತ್ತಿರುವಾಗ, ಶೈಕ್ಷಣಿಕ ವ್ಯವಸ್ಥೆಯಲ್ಲಿ ಕನ್ನಡದ ಕಷ್ಟಕರ ಸ್ವರೂಪವು ಅದನ್ನು ಇನ್ನಷ್ಟು ಉಲ್ಬಣಗೊಳಿಸುತ್ತದೆ.

ಕರ್ನಾಟಕದಲ್ಲಿ ಕನ್ನಡ ಭಾಷೆಯನ್ನು ಶಿಕ್ಷಣ ಮತ್ತು ಆಡಳಿತದಲ್ಲಿ ಕಡ್ಡಾಯಗೊಳಿಸುವ ರಾಜ್ಯ ಸರ್ಕಾರದ ಭಾಷಾ ನೀತಿಯು ಈ ಸವಾಲಿನಿಂದ ದುರ್ಬಲವಾಗುತ್ತದೆ. ಇದು ಕನ್ನಡ ಭಾಷೆಯ ಶೈಕ್ಷಣಿಕ ಬಳಕೆಯನ್ನು ಕಡಿಮೆ ಮಾಡುತ್ತದೆ.

ಕನ್ನಡ ಉಳಿಯಬೇಕಾದರೆ ಕನ್ನಡ ಕಲಿಯಬೇಕು, ಬಳಸಲ್ಪಡಬೇಕು. ಕನ್ನಡದ ಬಳಕೆಯೇ ಕಡಿಮೆಯಾಗುತ್ತಿರುವಾಗ ಅದನ್ನು ಶಾಲಾ ಹಂತದಲ್ಲಾದರೂ ವ್ಯವಸ್ಥಿತವಾಗಿ ಕಲಿಸುವ ಪ್ರಯತ್ನಗಳಾಗಬೇಕು. ಆ ದಿಸೆಯಲ್ಲಿ ನಾವು ಕಾರ್ಯಪ್ರವೃತ್ತರಾಗಬೇಕು.

ವಾಚಕರ ವಾಣಿ

ತಾತ್ವಿಕತೆಯ ವೈರುಧ್ಯ ಅರಿಯಬೇಕಿದೆ

‘ಹಿಂದೂ ಆಚರಣೆಗಳಿಗೆ ತಡೆ ಹೇರಬೇಡಿ’ ಎಂದು ಅಖಿಲ ಭಾರತ ವೀರಶೈವ ಮಹಾಸಭಾದ ರಾಜ್ಯ ಘಟಕದ ಅಧ್ಯಕ್ಷ ಶಂಕರ ಬಿದರಿ ಅವರು ಹೇಳಿರುವುದಾಗಿ ವರದಿಯಾಗಿದೆ. ವೀರಶೈವ ವೇದಿಕೆಯಲ್ಲಿ ಅವರು ‘ಆಚರಣೆಗಳು ಜನರ ವೈಯಕ್ತಿಕ ವಿಚಾರ’ ಮತ್ತು ‘ಬಸವತತ್ವ ಪಾಲನೆ ಮಾಡುವುದು ಅಗತ್ಯ’ ಎಂಬಂತಹ ಗೊಂದಲದ ಮಾತನಾಡಿದ್ದಾರೆ. ಇದು ಸಾಧ್ಯವೇ? ಬಸವಣ್ಣನ ತಾತ್ವಿಕತೆಗೂ ಹಿಂದೂ ಆಚರಣೆಗಳಿಗೂ ಎಣ್ಣೆ– ಸೀಗೆ ಸಂಬಂಧ. ಲಿಂಗಾಯತ– ವೀರಶೈವ ತಾತ್ವಿಕತೆಯ ವೈರುಧ್ಯವನ್ನು ಬಿದರಿ ಅವರು ಅರ್ಥ ಮಾಡಿಕೊಳ್ಳುವುದು ಅಗತ್ಯ. ಹಾಗೆಯೇ ಕುಲಾಧಿಕ್ಯವನ್ನು ಧಿಕ್ಕರಿಸಿದ ಬಸವಣ್ಣನು ಮನುಧರ್ಮ ಪ್ರಣೀತ ಹಿಂದೂ ಧರ್ಮದ ಅವೈಜ್ಞಾನಿಕ ಆಚರಣೆಗಳ ವಿರುದ್ಧವೇ ಸಿಡಿದೆದ್ದವನು ಎಂಬ ಸತ್ಯವನ್ನೂ ತಿಳಿಯಬೇಕು. ಪ್ರಸ್ತುತ ಹಿಂದೂ ಆಚರಣೆಗಳನ್ನು ಅನುಸರಿಸುತ್ತಿರುವ ಲಿಂಗಾಯತ ಸ್ತ್ರೀ- ಪುರುಷರು ಶರಣರ ವಚನಗಳನ್ನು ಗಮನವಿಟ್ಟು ಓದಿದರೆ, ಇದನ್ನು ಅರಿಯಬಲ್ಲರು.

ಚಂದ್ರಶೇಖರ ತಾಳ್ಯ, ಹೊಳಲ್ಕೆರೆ

ಬುಕರ್ ಗರಿ: ವಕೀಲರ ಪಾಲಿನ ಹೆಮ್ಮೆ

ಬಹಳಷ್ಟು ಜನಪರ ಹೋರಾಟಗಳಲ್ಲಿ ಭಾಗಿಯಾಗಿ ಸ್ತ್ರೀಪರ ಧೋರಣೆಯ ದಿಟ್ಟ ನಿಲುವನ್ನು ಹೊಂದಿರುವ ಬರಹಗಾರ್ತಿ ಮತ್ತು ವಕೀಲೆ ಬಾನು ಮುಷ್ತಾಕ್ ಅವರ ‘ಎದೆಯ ಹಣತೆ’ಯ ಭಾಷಾಂತರ ಕೃತಿ ‘ಹಾರ್ಟ್ ಲ್ಯಾಂಪ್’ಗೆ ಅಂತರರಾಷ್ಟ್ರೀಯ ಬುಕರ್ ಪ್ರಶಸ್ತಿ ದೊರಕಿರುವುದು, ವಿಶೇಷವಾಗಿ ವಕೀಲ ಸಮುದಾಯದ ಪ್ರತಿಷ್ಠೆಯನ್ನು ಹೆಚ್ಚಿಸಿದೆ.

ನಾನು ಕಂಡಂತೆ 1990ರಲ್ಲಿ ‘ಲಂಕೇಶ್ ಪತ್ರಿಕೆ’ಯ ನಂಟಿನೊಂದಿಗೆ ವಕೀಲಿ ವೃತ್ತಿ ಪ್ರವೇಶಿಸಿದ ಬಾನು ಮುಷ್ತಾಕ್, ತಮ್ಮ 35 ವರ್ಷಗಳ ಸುದೀರ್ಘ ವೃತ್ತಿ ಬದುಕಿನಲ್ಲಿ ಮಹಿಳೆಯರ ಪರವಾಗಿಯೇ ವಕಾಲತ್ತು ವಹಿಸುತ್ತಾ ನ್ಯಾಯಾಲಯಗಳಲ್ಲಿ ಅವಿರತವಾಗಿ ಶ್ರಮಿಸುತ್ತಿದ್ದಾರೆ. ಇವರ ಕಥೆಗಳಲ್ಲಿ ವ್ಯಕ್ತವಾಗಿರುವ ಸ್ತ್ರೀಪರ ನಿಲುವನ್ನು ಕೂಲಂಕಷವಾಗಿ ಗಮನಿಸಿದಾಗ, ಕೋರ್ಟ್‌ನ ಆವರಣದಲ್ಲಿ ದಕ್ಕಿದ ಮಹಿಳೆಯರ ಬದುಕಿನ ಯಥೇಚ್ಛ ಒಳನೋಟಗಳು ಇವರ ಸಂವೇದನಾಶೀಲ ಬರವಣಿಗೆಯ ತೀವ್ರತೆಗೆ ಕಾರಣವಾಗಿರುವುದು ನಿರ್ವಿವಾದ. ಈಗಾಗಲೇ ಹತ್ತಾರು ಪ್ರಶಸ್ತಿಗಳನ್ನು ತಮ್ಮ ಮುಡಿಗೇರಿಸಿಕೊಂಡಿರುವ ಬಾನು ಮುಷ್ತಾಕ್ ಈಗ ನಾಡಿಗಷ್ಟೇ ಅಲ್ಲದೆ ರಾಷ್ಟ್ರಕ್ಕೂ ಹೆಮ್ಮೆಯೆನಿಸಿದ್ದಾರೆ.

ಸಿ.ಎಚ್.ಹನುಮಂತರಾಯ, ಬೆಂಗಳೂರು

ಸಾವಿರ ಕುದುರೆ ಸರದಾರನಾದರೂ...

ಫ್ರಾನ್ಸ್ ಅಧ್ಯಕ್ಷ ಎಮಾನ್ಯುಯೆಲ್ ಮ್ಯಾಕ್ರನ್ ಮುಖಕ್ಕೆ ಅವರ ಪತ್ನಿ ಬ್ರಿಜೆಟ್ ತಿವಿದರು ಎಂಬ ವರದಿಯನ್ನು (ಪ್ರ.ವಾ., ಮೇ 27) ಓದಿ ಅಪಾರ ಸಂತೋಷವಾಯಿತು, ನೆಮ್ಮದಿಯಾಯಿತು. ನಾವ್ಯಾರೂ ಇನ್ನು ಮುಂದೆ ಪರಿತಪಿಸಬೇಕಾಗಿಲ್ಲ, ಮನೆ ಬಿಟ್ಟು ಓಡಿಹೋಗಬೇಕಾಗಿಲ್ಲ! ವಿಶ್ವದಾದ್ಯಂತ, ಮೀಸೆ ಹೊತ್ತ ಎಲ್ಲ ಗಂಡಸರ ಕಥೆಯೂ ಇಷ್ಟೇ, ಉಪಕಥೆಯೂ ಇದುವೇ ಎಂದುಕೊಂಡು ನೆಮ್ಮದಿಯಿಂದ, ಆಯಷ್ಯ ಇರುವವರೆಗೂ ಬದುಕಿಕೊಂಡು ಇರೋಣ. ಇದರಿಂದ ಪ್ರೇರಿತನಾಗಿ ನಾನೊಂದು ಹೊಸ ಗಾದೆ ಹೆಣೆದಿದ್ದೇನೆ– ‘ಸಾವಿರ ಕುದುರೆ ಸರದಾರನಾದರೂ ಅಷ್ಟೆ, ರಾಷ್ಟ್ರದ ಅಧ್ಯಕ್ಷನಾದರೂ ಅಷ್ಟೆ, ಹೆಂಡತಿಯಿಂದ ಸ್ವಾಟೆ ತಿವಿಸಿಕೊಳ್ಳುವುದು ತಪ್ಪುವುದಿಲ್ಲ!’

ಎಸ್.ಕೆ.ಕುಮಾರ್, ಬೇಲೂರು

ಸಮ್ಮೇಳನದ ಖರ್ಚು ಉಳಿಸಿ, ಶಾಲೆ ಸಬಲೀಕರಿಸಿ

ಬೆಳಗಾವಿ ಜಿಲ್ಲೆಯ ನಿಡಗುಂದಿ ಗ್ರಾಮದ ಅಂಬೇಡ್ಕರ್ ನಗರದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ಅಗತ್ಯವಾಗಿ ಬೇಕಾಗಿರುವ ಕೊಠಡಿಗಳ ಮಂಜೂರಾತಿಗೆ ಕೋರಿ ಶಾಲೆಯ ಮುಖ್ಯ ಶಿಕ್ಷಕ ವೀರಣ್ಣ ಮಡಿವಾಳರ ಉಪವಾಸ ಮತ್ತು ಮೌನ ಕಾಲ್ನಡಿಗೆ ಜಾಥಾ ನಡೆಸಿದ್ದಾಗಿ ವರದಿಯಾಗಿದೆ. ನಮ್ಮ ಸರ್ಕಾರಗಳು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದ ಬಗ್ಗೆ ತೋರುತ್ತಿರುವ ತೀವ್ರ ನಿರ್ಲಕ್ಷ್ಯ ಒಳ್ಳೆಯದಲ್ಲ. ಸರ್ಕಾರಿ ಶಾಲೆಗಳ ಸಬಲೀಕರಣ ಇಂದಿನ ತುರ್ತು. ಇದು ಕನ್ನಡ ಭಾಷೆಯ ಉಳಿವು ಅಳಿವಿನ ಪ್ರಶ್ನೆ. ನನ್ನ ಒಂದು ವಿನಮ್ರ ಸಲಹೆ, ಸರ್ಕಾರ ಪ್ರತಿ ವರ್ಷವೂ ₹ 30 ಕೋಟಿಯಿಂದ ₹ 40 ಕೋಟಿ ಖರ್ಚು ಮಾಡಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸುವುದನ್ನು ಸದ್ಯ ಐದು ವರ್ಷ ತಾತ್ಕಾಲಿಕವಾಗಿ ನಿಲ್ಲಿಸಲಿ. ಅದೇ ಹಣವನ್ನು ಶಾಲಾ ಸಬಲೀಕರಣಕ್ಕೆ ಬಳಸಲಿ. ನಮ್ಮ ಕನ್ನಡದ ಬಡಮಕ್ಕಳ ಅಕ್ಷರಾಭ್ಯಾಸಕ್ಕೆ ಅನುವು ಮಾಡಿಕೊಡಲಿ.

ಎಸ್.ಜಿ.ಸಿದ್ಧರಾಮಯ್ಯ, ಬೆಂಗಳೂರು

ಮಾನವೀಯತೆ ಮೆರೆದ ಅಪರೂಪದ ಪ್ರಸಂಗ

ಬ್ರಿಗೇಡಿಯರ್ ಎಂ.ಎಲ್.ಖೇತ್ರಪಾಲ್ ತಮ್ಮ ಪುತ್ರ ಅರುಣ್ ಅವರನ್ನು ಗುಂಡಿಕ್ಕಿ ಕೊಂದಿದ್ದ ಪಾಕಿಸ್ತಾನದ ಬ್ರಿಗೇಡಿಯರ್ ಖ್ವಾಜಾ ಮೊಹಮ್ಮದ್ ನಾಸೆರ್ ಅವರ ಮನೆಯಲ್ಲಿ ಅತಿಥಿಯಾಗಿ ತಂಗಿದ್ದ ಪ್ರಸಂಗ ಕುರಿತ ಕ್ಯಾಪ್ಟನ್ ಜಿ.ಆರ್.ಗೋಪಿನಾಥ್ ಅವರ ಲೇಖನ (ಪ್ರ.ವಾ., ಮೇ 26) ಓದಿದಾಗ ಮನಸ್ಸು ಮೂಕವಾಯಿತು. ಅನುಕಂಪ, ಮಾನವೀಯತೆಗೆ ಜಾತಿ, ಧರ್ಮ, ಗಡಿಗಳ ಹಂಗಿಲ್ಲ. ಈ ಸಂದರ್ಭದಲ್ಲಿ ಎರಡು ಚಾರಿತ್ರಿಕ ಸಂಗತಿಗಳು ನೆನಪಾಗುತ್ತಿವೆ:


ಪ್ರಧಾನಿಯಾಗಿದ್ದ ರಾಜೀವ್ ಗಾಂಧಿ ಹತ್ಯೆ ಪ್ರಕರಣದಲ್ಲಿ ತಮಿಳುನಾಡಿನ ಜೈಲಿನಲ್ಲಿ ಶಿಕ್ಷೆ ಅನುಭವಿಸುತ್ತಿದ್ದ ನಳಿನಿಯನ್ನು ರಾಜೀವ್ ಅವರ ಮಕ್ಕಳಾದ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಭೇಟಿ ಮಾಡಿದ್ದರು. ಆಗ ಪ್ರಿಯಾಂಕಾ ಭಾವುಕರಾಗಿ ನಳಿನಿಯನ್ನು ತಬ್ಬಿ ‘ನಿಮ್ಮ ಬಗ್ಗೆ ಮರುಕವಾಗುತ್ತದೆ’ ಎಂದು ಹೇಳಿದ್ದರು. ಗಾಂಧೀಜಿ ಹತ್ಯೆಯ ಅಪರಾಧಿಗಳಲ್ಲಿ ಒಬ್ಬರಾಗಿದ್ದ ಗೋಪಾಲ್ ಗೋಡ್ಸೆ (ನಾಥೂರಾಮ್ ಗೋಡ್ಸೆ ಸಹೋದರ) ಜೈಲು ಶಿಕ್ಷೆ ಅನುಭವಿಸಿದ ನಂತರ ಪುಣೆಯಲ್ಲಿ ವಾಸವಾಗಿದ್ದರು. ಅವರಿಗೆ ಗಾಂಧೀಜಿ ಪುತ್ರ ರಾಮದಾಸ್ ಕ್ಯಾನ್ಸರ್‌ನಿಂದಾಗಿ ಮುಂಬೈನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಸುದ್ದಿ ಗೊತ್ತಾಯಿತು. ಗಾಂಧೀಜಿ ಹತ್ಯೆಯ ಅಪರಾಧಿಗಳಿಗೆ ಮರಣದಂಡನೆ ವಿಧಿಸಬಾರದು ಎಂದು, ಗೃಹ ಸಚಿವರಾಗಿದ್ದ ವಲ್ಲಭಭಾಯಿ ಪಟೇಲ್ ಅವರಿಗೆ ರಾಮದಾಸ್ ಮನವಿ ಸಲ್ಲಿಸಿದ್ದರು. ಅವರು ತಮ್ಮ ಬಗ್ಗೆ ತೋರಿದ ಅನುಕಂಪ ನೆನಪಾಗಿ, ಗೋಪಾಲ್ ಗೋಡ್ಸೆ ಮುಂಬೈಗೆ ತೆರಳಿ, ಆಸ್ಪತ್ರೆಯಲ್ಲಿ ಮಲಗಿದ್ದ ಅವರ ಚರಣ ಮುಟ್ಟಿ ನಮಸ್ಕರಿಸಿದ್ದರು. ‘ವೈರವನ್ನು ಸಾಧಿಸಿಕೊಂಡು ಹೋಗಲು ಜೀವನ ದೀರ್ಘವಾಗಿಲ್ಲ’ ಎಂಬ ಹಿತನುಡಿಯನ್ನು ನಾವೆಲ್ಲರೂ ನೆನಪಿನಲ್ಲಿ ಇಟ್ಟುಕೊಳ್ಳಬೇಕು.

ಮಲ್ಲಿಕಾರ್ಜುನ ಹೆಗ್ಗಳಗಿ, ಮುಧೋಳ


Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಜಗತ್ತಿನ 4ನೇ ಆರ್ಥಿಕತೆಯತ್ತ ಭಾರತ


ಭಾರತವು ವಿಶ್ವದ ನಾಲ್ಕನೇ ಅತಿ ದೊಡ್ಡ ಆರ್ಥಿಕತೆಯಾಗಿದೆ ಎಂದು ನೀತಿ ಆಯೋಗದ ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಸಿಇಒ) ಬಿ.ವಿ.ಆರ್.ಸುಬ್ರಹ್ಮಣ್ಯಂ ಅವರು ಪ್ರಕಟಿಸಿದ್ದಾರೆ. ಪ್ರಧಾನಿ ಮೋದಿ ಕೂಡ ಇದೇ ಮಾತನ್ನು ಪುನರಾವರ್ತಿಸಿದ್ದಾರೆ. ಆದರೆ, ವಾಸ್ತವವಾಗಿ ಸುಬ್ರಹ್ಮಣ್ಯಂ ಅವರೇ ಉಲ್ಲೇಖಿಸಿರುವ ಐಎಂಎಫ್‌ನ ಜಾಗತಿಕ ಆರ್ಥಿಕ ಮುನ್ನೋಟ–2025ರ ಪ್ರಕಾರ, ಭಾರತವು ನಾಲ್ಕನೇ ದೊಡ್ಡ ಆರ್ಥಿಕತೆಯ ದೇಶವಾಗುವುದು 2025–26ರ ಆರ್ಥಿಕ ವರ್ಷದ ಅಂತ್ಯಕ್ಕೆ. ಹಲವು ರೀತಿಯ ಜಾಗತಿಕ ವಿದ್ಯಮಾನಗಳು, ಸವಾಲುಗಳ ನಡುವೆಯೂ ಇದೊಂದು ಸಾಧನೆಯೇ. ಆದರೆ, ತಲಾವಾರು ಜಿಡಿಪಿ, ತಲಾ ಆದಾಯದ ವಿಚಾರದಲ್ಲಿ ಭಾರತವು ಹಿಂದುಳಿದಿದ್ದು, ದೇಶದ ಅಭಿವೃದ್ಧಿಯ ಅಸಮಾನತೆಯನ್ನು ಸೂಚಿಸುತ್ತಿದೆ ಎಂದು ವಿಶ್ಲೇಷಿಸಲಾಗುತ್ತಿದೆ











‘ನಾವು ನಾಲ್ಕನೇ ಅತಿ ದೊಡ್ಡ ಆರ್ಥಿಕತೆಯಾಗಿದ್ದೇವೆ. ನಮ್ಮದೀಗ 4 ಲಕ್ಷ ಕೋಟಿ ಡಾಲರ್ ಗಾತ್ರದ ಆರ್ಥಿಕತೆ. ಇದು ನನ್ನ ದತ್ತಾಂಶ ಅಲ್ಲ. ಐಎಂಎಫ್‌ನ ದತ್ತಾಂಶ. ಭಾರತವು ಇವತ್ತು ಜಪಾನ್‌ಗಿಂತ ದೊಡ್ಡ ಆರ್ಥಿಕತೆಯಾಗಿದೆ’

– ನಾಲ್ಕು ದಿನಗಳ ಹಿಂದೆ ನೀತಿ ಆಯೋಗದ ಸಿಇಒ ಬಿ.ವಿ.ಆರ್.ಸುಬ್ರಹ್ಮಣ್ಯಂ ಅವರು ಸುದ್ದಿಗೋಷ್ಠಿಯಲ್ಲಿ ನೀಡಿದ ಹೇಳಿಕೆ.

ಸುಬ್ರಹ್ಮಣ್ಯಂ ಅವರ ಹೇಳಿಕೆಯನ್ನೇ ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಗುಜರಾತ್‌ನ ಗಾಂಧಿನಗರದಲ್ಲಿ, ಬುಧವಾರ ದೆಹಲಿಯಲ್ಲಿ ಪುನರಾವರ್ತಿಸಿದ್ದಾರೆ. ಈವರೆಗೂ ನಾಲ್ಕನೇ ಸ್ಥಾನದಲ್ಲಿದ್ದ ಜಪಾನ್ ಅನ್ನು ಆರ್ಥಿಕತೆಯಲ್ಲಿ ಭಾರತ ಹಿಂದಿಕ್ಕಿದೆ ಎಂದು ಅವರು ಹೇಳಿದ್ದಾರೆ. 2014ರಲ್ಲಿ ತಾವು ಅಧಿಕಾರಕ್ಕೆ ಬಂದಾಗ ಭಾರತದ ಆರ್ಥಿಕತೆಯು ಜಾಗತಿಕ ಮಟ್ಟದಲ್ಲಿ 11ನೇ ಸ್ಥಾನದಲ್ಲಿತ್ತು. ಅದು ಈಗ ನಾಲ್ಕನೇ ಸ್ಥಾನಕ್ಕೆ ಏರಿದೆ ಎಂದು ಮೋದಿ ಅವರು 10 ವರ್ಷಗಳ ತಮ್ಮ ಸಾಧನೆಯ ಬಗ್ಗೆ ಹೇಳಿಕೊಂಡಿದ್ದಾರೆ.

ಈ ವಿಚಾರದ ಬಗ್ಗೆ ದೇಶದಲ್ಲಿ ಈಗ ಪರ- ವಿರೋಧ ಚರ್ಚೆ ನಡೆಯುತ್ತಿದೆ. ವಾಸ್ತವದಲ್ಲಿ ಭಾರತ ಇನ್ನೂ ನಾಲ್ಕನೇ ಸ್ಥಾನಕ್ಕೆ ಏರಿಲ್ಲ. ಅಂತರರಾಷ್ಟ್ರೀಯ ಹಣಕಾಸು ನಿಧಿಯು (ಐಎಂಎಫ್) ಈ ವರ್ಷದ ಏಪ್ರಿಲ್ 22ರಂದು ಜಾಗತಿಕ ಆರ್ಥಿಕ ಮುನ್ನೋಟ–2025 ಅನ್ನು ಬಿಡುಗಡೆ ಮಾಡಿದೆ. ಅದರ ಪ್ರಕಾರ ಭಾರತವು, ಜಗತ್ತಿನ ಆರ್ಥಿಕತೆಗಳ ಪಟ್ಟಿಯಲ್ಲಿ ಸದ್ಯ ಐದನೇ ಸ್ಥಾನದಲ್ಲಿದೆ. ದೇಶದ ಆರ್ಥಿಕ ಬೆಳವಣಿಗೆ ನಿರೀಕ್ಷೆಯಂತೆ ಸಾಗಿದರೆ, ಈ ಹಣಕಾಸು ವರ್ಷದ ಅಂತ್ಯಕ್ಕೆ ಭಾರತದ ಆರ್ಥಿಕತೆಯ ಗಾತ್ರ (ಜಿಡಿಪಿ ಗಾತ್ರ) ಜಪಾನ್‌ಗಿಂತ ದೊಡ್ಡದಾಗಲಿದೆ. ಆಗ ನಾಲ್ಕನೇ ಸ್ಥಾನಕ್ಕೆ ಏರಲಿದೆ.

ಐಎಂಎಫ್ ಅಂದಾಜಿಸಿರುವ ಪ್ರಕಾರ, ಭಾರತದ ಜಿಡಿಪಿ ಗಾತ್ರ (ಪ್ರಸ್ತುತ ಮಾರುಕಟ್ಟೆ ದರದ ಆಧಾರದಲ್ಲಿ) 2025–26ರ ಅಂತ್ಯದ ಹೊತ್ತಿಗೆ ₹357.49 ಲಕ್ಷ ಕೋಟಿ (4.187 ಲಕ್ಷಕೋಟಿ ಡಾಲರ್) ಆಗಲಿದೆ. ಇದೇ ಸಮಯಕ್ಕೆ ಜಪಾನ್‌ನ ಜಿಡಿಪಿ ಗಾತ್ರ ₹357.40 ಲಕ್ಷ ಕೋಟಿ ಇರಲಿದೆ. ಅಂದರೆ, ತೀರಾ ಅಲ್ಪ ಅಂತರದಿಂದ ಭಾರತವು ಮೇಲೇರಲಿದೆ. ನೀತಿ ಆಯೋಗದ ಸದಸ್ಯ ಅರವಿಂದ್ ವೀರಮಣಿ ಅವರ ಪ್ರಕಾರ, ಭಾರತವು ಈ ಸಾಧನೆಯನ್ನು 2025ರ ಅಂತ್ಯಕ್ಕೆ ಮಾಡಲಿದೆ.

ಭಾರತವು ಜಾಗತಿಕ ಆರ್ಥಿಕತೆಗಳ ಪಟ್ಟಿಯಲ್ಲಿ ನಾಲ್ಕನೇ ಸ್ಥಾನಕ್ಕೆ ಏರಲಿರುವ ಬಗ್ಗೆ ಅಮಿತಾಭ್ ಬಚ್ಚನ್, ಆನಂದ್ ಮಹೀಂದ್ರಾ, ಹರ್ಷ್ ಗೋಯೆಂಕಾ, ಕುನಾಲ್ ಬಹ್ಲ್ ಸೇರಿದಂತೆ ದೇಶದ ಖ್ಯಾತನಾಮರು ಹರ್ಷ ವ್ಯಕ್ತಪಡಿಸಿದ್ದಾರೆ. ‘ನವಭಾರತದ ಪ್ರಾಧಾನ್ಯ ಜಾಗತಿಕ ಮಟ್ಟದಲ್ಲಿ ಹೆಚ್ಚುತ್ತಿರುವುದನ್ನು ಇದು ತೋರುತ್ತಿದೆ; ಜಗತ್ತಿನ ಮೂರನೇ ಆರ್ಥಿಕತೆಯಾಗುವ ಮತ್ತು ವಿಕಸಿತ ಭಾರತ–2047ರ ಸಾಧನೆಯ ದಿಸೆಯಲ್ಲಿ ಇದು ನಿರ್ಣಾಯಕ ಹೆಜ್ಜೆಯಾಗಿದೆ’ ಎಂದು ಆಂಧ್ರಪ್ರದೇಶದ ಉಪಮುಖ್ಯಮಂತ್ರಿ ಪವನ್ ಕಲ್ಯಾಣ್ ಹೇಳಿದ್ದಾರೆ.

ಆದರೆ, ಐಎಂಎಫ್ ವರದಿಯ ಬಗ್ಗೆಯೇ ಹಲವರು ಆಕ್ಷೇಪಣೆ ಎತ್ತಿದ್ದಾರೆ. ಭಾರತ ಸರ್ಕಾರ ನೀಡಿರುವ ದತ್ತಾಂಶ ಆಧರಿಸಿ ಐಎಂಎಫ್ ಆರ್ಥಿಕತೆಯ ಅಂದಾಜು ಮಾಡಿದೆಯೇ ಹೊರತು ತಾನೇ ದತ್ತಾಂಶ ಸಂಗ್ರಹಿಸಿಲ್ಲ. ಜತೆಗೆ, ಟ್ರಂಪ್ ಅವರ ತೆರಿಗೆ ಸಂಬಂಧಿ ನೀತಿಗಳಿಂದ ಜಗತ್ತಿನ ವ್ಯಾಪಾರ ವಲಯದಲ್ಲಿ ಭಾರಿ ಅಸ್ಥಿರತೆ ಉಂಟಾಗಿದ್ದು, ಅದು ಮುಂದಿನ ದಿನಗಳಲ್ಲಿ ಯಾವ ದೇಶದ ಆರ್ಥಿಕತೆಯ ಮೇಲೆ ಎಂಥ ಪರಿಣಾಮ ಬೀರಲಿದೆ ಎನ್ನುವುದು ಅನಿಶ್ಚಿತವಾಗಿದೆ. 2008ರಲ್ಲಿ ಆರ್ಥಿಕ ಹಿಂಜರಿತ ಉಂಟಾಗಿದ್ದಾಗ ಐಎಂಎಫ್ ಅಂದಾಜುಗಳು ಸುಳ್ಳಾಗಿದ್ದವು. ದೇಶದ ಜಿಡಿಪಿ ಅಂದಾಜಿನ ಬಗ್ಗೆಯೂ ಕೆಲವು ತಕರಾರುಗಳಿವೆ. ಈ ಎಲ್ಲ ಅಂಶಗಳನ್ನು ಗಮನಿಸಿದರೆ, ಭಾರತ ನಾಲ್ಕನೇ ದೊಡ್ಡ ಆರ್ಥಿಕತೆ ಆಗಲಿದೆ ಎಂದು ಸಂಭ್ರಮಿಸಲಾಗದು ಎನ್ನುವ ಮಾತುಗಳೂ ಕೇಳಿಬಂದಿವೆ.

ಮತ್ತೊಂದು ಮುಖ್ಯ ಆಕ್ಷೇಪಣೆ ಎಂದರೆ, ಭಾರತವು ಜಿಡಿಪಿ ಆಧಾರದಲ್ಲಿ ಆರ್ಥಿಕ ಪ್ರಗತಿ ಸಾಧಿಸುತ್ತಿದೆ. ಆದರೆ, ದೇಶದ ಸಂಪತ್ತು ಕೆಲವೇ ಶತಕೋಟ್ಯಧಿಪತಿಗಳಲ್ಲಿ ಕ್ರೋಡೀಕರಣವಾಗುತ್ತಿದ್ದು, ಸರಾಸರಿ ಮಾಪನಗಳಿಂದ ದೇಶದ ಅಸಮಾನತೆ ಕಣ್ಣಿಗೆ ಕಾಣುತ್ತಿಲ್ಲ ಎಂದು ಕೆಲವರು ಟೀಕಿಸಿದ್ದಾರೆ. ದೇಶದ ಶ್ರೀಮಂತರ ಸಂಪತ್ತನ್ನು ಹೊರತುಪಡಿಸಿದರೆ, ಭಾರತ ಸ್ಥಾನಮಾನ ತೀರಾ ಕೆಳಕ್ಕೆ ಕುಸಿಯುತ್ತದೆ; ತಲಾ ಆದಾಯ ಮತ್ತು ಬಡವರು ಹಾಗೂ ಶ್ರೀಮಂತರ ನಡುವಿನ ಅಂತರ ಅರಿಯದ ಆರ್ಥಿಕ ಪ್ರಗತಿ ಅಪೂರ್ಣ ಎನ್ನುವ ವಿಶ್ಲೇಷಣೆಯೂ ಕೇಳಿಬಂದಿದೆ.

ಆಧಾರ: ಐಎಂಎಫ್‌ನ ‘ಜಾಗತಿಕ ಆರ್ಥಿಕ ಮುನ್ನೋಟ–2025’, ಪಿಟಿಐ, ಮಾಧ್ಯಮ ವರದಿಗಳು

ಗಣನೀಯ ಸಾಧನೆ

30 ವರ್ಷಗಳಲ್ಲಿ ಭಾರತವು ಜಿಡಿಪಿ ಬೆಳವಣಿಗೆಯಲ್ಲಿ ಅದ್ಭುತ ಪ್ರಗತಿ ಸಾಧಿಸಿದೆ ಎಂದು ಹೇಳಲಾಗಿದೆ. 2000ದಲ್ಲಿ ಭಾರತವು ಜಗತ್ತಿನ ಮೊದಲ ಹತ್ತು ಆರ್ಥಿಕತೆಗಳ ಸನಿಹವೂ ಇರಲಿಲ್ಲ . ನಂತರದಲ್ಲಿ ದೇಶದ ಆರ್ಥಿಕತೆ ವೇಗವಾಗಿ ಬೆಳೆಯತೊಡಗಿತು. ಬ್ರೆಜಿಲ್, ಇಟಲಿ ಮತ್ತು ಕೆನಡಾ ದೇಶಗಳನ್ನು ಹಿಂದಿಕ್ಕಿ 2015ರಲ್ಲಿ 7ನೇ ಸ್ಥಾನಕ್ಕೆ ಏರಿತು. ನಂತರ 2022ರಲ್ಲಿ ಫ್ರಾನ್ಸ್ ಮತ್ತು ಬ್ರಿಟನ್ ಅನ್ನು ಹಿಂದಿಕ್ಕಿ ಐದನೇ ಸ್ಥಾನಕ್ಕೆ ಏರಿತ್ತು. ಐಎಂಎಫ್ ಮುನ್ನೋಟದ ಪ್ರಕಾರ, ಮುಂದಿನ ವರ್ಷ ನಾಲ್ಕನೇ ಸ್ಥಾನಕ್ಕೆ ಏರಲಿರುವ ಭಾರತವು 2028–29ರ ಹೊತ್ತಿಗೆ 5 ಲಕ್ಷ ಕೋಟಿ ಡಾಲರ್ ಆರ್ಥಿಕತೆಯಾಗಲಿದೆ. ಜರ್ಮನಿಯನ್ನು ಹಿಂದಿಕ್ಕಿ ಮೂರನೇ ಅತಿ ದೊಡ್ಡ ಆರ್ಥಿಕ ಶಕ್ತಿಯಾಗಲಿದೆ.

ಅನುಕೂಲ ಏನು?

- ಜಾಗತಿಕ ಮಟ್ಟದಲ್ಲಿ ಪ್ರಭಾವ ಹೆಚ್ಚಳ, ಪ್ರಭಾವಿ ಕಂಪನಿಗಳು ಭಾರತದತ್ತ ಮುಖಮಾಡುವ ಸಾಧ್ಯತೆ
- ದೇಶದಲ್ಲಿ ಬಂಡವಾಳ ಹೂಡಿಕೆ ಜಾಸ್ತಿಯಾಗಲಿದೆ
- ಉದ್ಯೋಗಾವಕಾಶ ಹೆಚ್ಚಳ, ಉದ್ಯಮಿಗಳಿಗೆ ಹೆಚ್ಚು ಅವಕಾಶ
- ಜನರ ಆದಾಯವೂ ಏರಿಕೆಯಾಗಬಹುದು

ಸಾಗಬೇಕಿದೆ ಇನ್ನೂ ದೂರ

ಜಗತ್ತಿನ ನಾಲ್ಕನೇ ಅತಿ ದೊಡ್ಡ ಆರ್ಥಿಕತೆಯಾಗಿ ಭಾರತ ಹೊರಹೊಮ್ಮಿದರೂ ಅರ್ಥ ವ್ಯವಸ್ಥೆಗೆ ಸಂಬಂಧಿಸಿದಂತೆ ದೇಶದ ಮುಂದೆ ಹಲವು ಸವಾಲುಗಳಿವೆ. ಅಮೆರಿಕ, ಚೀನಾ ಸೇರಿದಂತೆ ಜಗತ್ತಿನ ಇತರ ಒಂಬತ್ತು ದೊಡ್ಡ ಆರ್ಥಿಕತೆಗಳಿಗೆ ಹೋಲಿಸಿದರೆ, ಜಗತ್ತಿನಲ್ಲೇ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಭಾರತದ ತಲಾವಾರು ಜಿಡಿಪಿ ತುಂಬಾ ಕಡಿಮೆ ಇದೆ. ಐಎಂಎಫ್ ಪ್ರಕಾರ, ಸದ್ಯ ಭಾರತದ ತಲಾವಾರು ಜಿಡಿಪಿ 2,711 ಡಾಲರ್ (₹2.31 ಲಕ್ಷ). ಮುಂದಿನ ವರ್ಷ ಅದು 2,878 ಡಾಲರ್‌ಗೆ (₹2.46 ಲಕ್ಷ) ಏರಲಿದೆ. ಚೀನಾದ ತಲಾವಾರು ಜಿಡಿಪಿ 13,312 ಡಾಲರ್ (₹11.37 ಲಕ್ಷ) ಇದ್ದರೆ, ಜಪಾನ್‌ನದ್ದು 32,498 ಡಾಲರ್ (₹27.74 ಲಕ್ಷ) ಇದೆ. ಅಮೆರಿಕದ ತಲಾವಾರು ಜಿಡಿಪಿ 85,105 ಡಾಲರ್ (₹72.66 ಲಕ್ಷ). ಭಾರತದ ತಲಾವಾರು ಜಿಡಿಪಿ ಎಷ್ಟು ಕಡಿಮೆ ಎಂದರೆ, ಪಟ್ಟಿಯಲ್ಲಿ ಅದರ ಸ್ಥಾನ 100ರ ಒಳಗಡೆಯೂ ಇಲ್ಲ. ಜನಸಂಖ್ಯೆ ಹೆಚ್ಚಿರುವುದು ತಲಾವಾರು ಜಿಡಿಪಿಯ ಮೇಲೆ ಪರಿಣಾಮ ಬೀರುತ್ತಿದೆ.

ತಲಾ ಆದಾಯವೂ ಕಡಿಮೆ: ಅಮೆರಿಕ, ಜಪಾನ್, ಜರ್ಮನಿ, ಫ್ರಾನ್ಸ್, ಚೀನಾ ಸೇರಿದಂತೆ ಆರ್ಥಿಕವಾಗಿ ಪ್ರಗತಿ ಹೊಂದಿದ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತದ ತಲಾ ಆದಾಯವೂ ತೀರಾ ಕಡಿಮೆ.

ವಿಶ್ವಬ್ಯಾಂಕ್‌ನ ‘ವಿಶ್ವ ಅಭಿವೃದ್ಧಿ ವರದಿ–2024 ಮಧ್ಯಮ ಆದಾಯದ ಬಲೆ’ ವರದಿಯ ಪ್ರಕಾರ, ಅಮೆರಿಕದ ತಲಾ ಆದಾಯ ₹67.42 ಲಕ್ಷ ಇದ್ದರೆ, ಜಪಾನ್, ಫ್ರಾನ್ಸ್, ಬ್ರಿಟನ್‌ಗಳಲ್ಲಿ ನಾಗರಿಕರ ತಲಾ ಆದಾಯ ಕ್ರಮವಾಗಿ ₹32.77 ಲಕ್ಷ, ₹37.84 ಲಕ್ಷ, ₹40.13 ಲಕ್ಷ ಇದೆ. ಚೀನಾದ ತಲಾ ಆದಾಯ ₹11.25 ಲಕ್ಷ ಇದ್ದರೆ, ಭಾರತದ್ದು ಕೇವಲ ₹2.13 ಲಕ್ಷ.

ಯಾವ ದೇಶದ ತಲಾ ಆದಾಯವು ₹11,95,746 ಕ್ಕಿಂತ ಹೆಚ್ಚು ಇರುತ್ತದೆಯೋ, ಅದು ಹೆಚ್ಚು ಆದಾಯದ ದೇಶ ಎಂದು ವಿಶ್ವಬ್ಯಾಂಕ್ ಹೇಳಿದೆ.

ದಶಕದಲ್ಲಿ ತಲಾ ಆದಾಯ ದುಪ್ಪಟ್ಟು ಆಗಿದ್ದರೂ ಬೇರೆ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ತುಂಬಾ ಕಡಿಮೆ ಇರುವುದನ್ನು ಐಎಂಎಫ್ ಅಂಕಿ ಅಂಶಗಳು ಹೇಳುತ್ತಿವೆ. ದೇಶವು ಜಾಗತಿಕವಾಗಿ ದೊಡ್ಡ ಆರ್ಥಿಕ ಶಕ್ತಿಯಾಗುತ್ತಿದೆ ಎಂಬುದನ್ನು ಸಂಭ್ರಮಿಸಲು ಇನ್ನೂ ದೂರ ಸಾಗಬೇಕಿದೆ. ನಿರುದ್ಯೋಗ, ಬಡತನ, ಅನಕ್ಷರತೆ, ಆರೋಗ್ಯ ಕ್ಷೇತ್ರದ ಸಮಸ್ಯೆಗಳು, ಮೂಲಸೌಕರ್ಯಗಳ ಕೊರತೆ, ಸಾಮಾಜಿಕ–ಆರ್ಥಿಕ ಅಸಮಾನತೆ ಸೇರಿದಂತೆ ಹಲವು ಸಮಸ್ಯೆಗಳು ದೇಶವನ್ನು ಈಗಲೂ ಕಾಡುತ್ತಿವೆ. ಭಾರತವು ಇವುಗಳನ್ನೆಲ್ಲ ಮೆಟ್ಟಿನಿಂತಾಗ ದೇಶ ನಿಜವಾಗಿಯೂ ದೊಡ್ಡ ಆರ್ಥಿಕ ಶಕ್ತಿಯಾಗಲಿದೆ ಎಂದು ಹೇಳುತ್ತಾರೆ ಆರ್ಥಿಕ ತಜ್ಞರು.

ರಾಷ್ಟ್ರೀಯ

ಅಯೋಧ್ಯೆ: ಜೂನ್ 5ಕ್ಕೆ ಏಳು ವಿಗ್ರಹಗಳ ಪ್ರಾಣ ಪ್ರತಿಷ್ಠಾಪನೆ

ಪ್ರಜಾವಾಣಿ ವಾರ್ತೆ



ಲಖನೌ: ಅಯೋಧ್ಯೆಯ ರಾಮಮಂದಿರ ಸಂಕೀರ್ಣದೊಳಗೆ ಏಳು ವಿಗ್ರಹಗಳ ಪ್ರಾಣ ಪ್ರತಿಷ್ಠಾಪನಾ ಕಾರ್ಯ ಜೂನ್ 5ರಿಂದ ನಡೆಯಲಿದೆ.

‘ಈ ಕಾರ್ಯಕ್ರಮಕ್ಕೆ ಅಗತ್ಯ ಸಿದ್ಧತೆಗಳು ಪೂರ್ಣಗೊಂಡಿವೆ. ಜೂನ್ 3ರಿಂದ ವಿಧಿ-ವಿಧಾನಗಳಿಗೆ ಚಾಲನೆ ದೊರೆಯಲಿದೆ. ಜೂನ್ 5 ಮತ್ತು 7ರಂದು ವಿಗ್ರಹಗಳ ಪ್ರತಿಷ್ಠಾಪನಾ ಕಾರ್ಯ ನಡೆಯಲಿವೆ’ ಎಂದು ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಬುಧವಾರ ತಿಳಿಸಿದರು.

ಜೂನ್ ಐದರಂದು ನಡೆಯುವ ಕಾರ್ಯಕ್ರಮದಲ್ಲಿ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಪಾಲ್ಗೊಳ್ಳಲಿದ್ದಾರೆ. ದೇಶದ ವಿವಿಧ ಭಾಗಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ದಾರ್ಶನಿಕರು ಮತ್ತು ಸಂತರು ಭಾಗವಹಿಸಲಿದ್ದಾರೆ ಎಂದರು.

‘ಜೂನ್ 5 ಶುಭದಿನವಾಗಿದ್ದು, ಅಂದು ಗಂಗಾ ದಸರಾ ಉತ್ಸವವನ್ನು ಆಚರಿಸಲಾಗುತ್ತದೆ. ಹಿಂದೂ ಪುರಾಣದ ಪ್ರಕಾರ, ಇದು ಗಂಗೆಯು ಭೂಮಿಗೆ ಬಂದ ಸುದಿನ’ ಎಂದು ಅವರು ವಿವರಿಸಿದರು.

ರಾಮ ಮಂದಿರದ ಮೊದಲ ಮಹಡಿಯಲ್ಲಿರುವ ಶೇಷಾವತಾರ ಮಂದಿರದಲ್ಲಿ ಲಕ್ಷ್ಮಣನ (ರಾಮನ ಕಿರಿಯ ಸಹೋದರ) ವಿಗ್ರಹ ಪ್ರತಿಷ್ಠಾಪಿಸಲಾಗುವುದು. ಬಳಿಕ ಏಳು ದೇಗುಲಗಳಲ್ಲಿ ಏಳು ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗುವುದು ಎಂದು ಅವರು ಮಾಹಿತಿ ನೀಡಿದರು.

‘ಪಿಣರಾಯಿ’ ಸಾಕ್ಷ್ಯಚಿತ್ರ ಬಿಡುಗಡೆ

ತಿರುವನಂತಪುರ (ಪಿಟಿಐ): ಕೇರಳದಲ್ಲಿ ವಿರೋಧ ಪಕ್ಷಗಳ ವ್ಯಾಪಕ ಟೀಕೆಯ ಹೊರತಾಗಿಯೂ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ವೈಯಕ್ತಿಕ, ರಾಜಕೀಯ ಪಯಣ ಹಾಗೂ ಆಡಳಿತಾತ್ಮಕ ಸಾಧನೆಗಳನ್ನು ತೋರಿಸುವ ಸಾಕ್ಷ್ಯಚಿತ್ರವನ್ನು ಬುಧವಾರ ಪ್ರದರ್ಶಿಸಲಾಯಿತು.

‘ಪಿಣರಾಯಿ ದಿ ಲೆಜೆಂಡ್’ ಎಂಬ 30 ನಿಮಿಷಗಳ ಸಾಕ್ಷ್ಯಚಿತ್ರವನ್ನು ಹಿರಿಯ ನಟ ಕಮಲ ಹಾಸನ್ ಅವರು ಬಿಡುಗಡೆ ಮಾಡಿದರು.

ಪಿಣರಾಯಿ ಅವರ ಸಂಪುಟ ಸಚಿವರಾದ ವಿ. ಶಿವನ್‌ಕುಟ್ಟಿ, ರಾಜ್ಯಸಭಾ ಸದಸ್ಯ ಎ.ಎ.ರಹೀಂ ಮತ್ತು ಇತರ ನಾಯಕರ ಸಮ್ಮುಖದಲ್ಲಿ ಇದನ್ನು ಬಿಡುಗಡೆ ಮಾಡಲಾಯಿತು.

ವಿಜಯನ್ ಸರ್ಕಾರದ ಎರಡನೇ ಅವಧಿಯ 4ನೇ ವಾರ್ಷಿಕೋತ್ಸವ ಸ್ಮರಣಾರ್ಥ ಕೇರಳ ಸಚಿವಾಲಯದ ನೌಕರರ ಸಂಘ ಇಲ್ಲಿನ ಕೇಂದ್ರ ಕ್ರೀಡಾಂಗಣದಲ್ಲಿ ಸಮಾರಂಭ ಹಮ್ಮಿಕೊಂಡಿತ್ತು. ಮುಖ್ಯಮಂತ್ರಿ ಪಿಣರಾಯಿ ಅವರು ಈ ವೇಳೆ ಕೇಕ್ ಕತ್ತರಿಸಿದರು.

‘ಪಿಣರಾಯಿ ವಿಜಯನ್ ಅವರು ಸಚಿವಾಲಯದ ನೌಕರರನ್ನು ಅತ್ಯಂತ ಗೌರವಯುತವಾಗಿ ನೋಡಿಕೊಂಡಿದ್ದಾರೆ. ಈ ನಿಟ್ಟಿನಲ್ಲಿ ಅವರು ರಾಜ್ಯವನ್ನಾಳಿದ ಹಿಂದಿನ ಮುಖ್ಯಮಂತ್ರಿಗಳಿಗಿಂತ ಮುಂದಿದ್ದಾರೆ’ ಎಂದು ನೌಕರರ ಸಂಘದ ಅಧ್ಯಕ್ಷ ಪಿ. ಹನಿ ತಿಳಿಸಿದರು.

‘ಮಣಿಪುರ: ಸರ್ಕಾರ ರಚಿಸಲು ಬಿಜೆಪಿಯ 44 ಶಾಸಕರು ಸಿದ್ಧ’

ಇಂಫಾಲ್ (ಪಿಟಿಐ): ಮಣಿಪುರದಲ್ಲಿ ನೂತನ ಸರ್ಕಾರ ರಚಿಸಲು 44 ಶಾಸಕರು ಒಟ್ಟುಗೂಡಿ ಸಿದ್ಧರಿದ್ದಾರೆ ಎಂದು ಬಿಜೆಪಿ ಶಾಸಕ ಥೋಕ್‌ಚೋಮ್ ರಾಧೇಶ್ಯಾಮ್ ಸಿಂಗ್ ಹೇಳಿದ್ದಾರೆ.


ಒಂಬತ್ತು ಶಾಸಕರ ಜೊತೆಗೆ ಬುಧವಾರ ರಾಜಭವನದಲ್ಲಿ ರಾಜ್ಯಪಾಲ ಅಜಯ್ ಕುಮಾರ್ ಭಲ್ಲಾ ಅವರೊಂದಿಗೆ ಚರ್ಚಿಸಿದ ಬಳಿಕ ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು.

‘ಜನರ ಆಶಯದಂತೆ ಹೊಸ ಸರ್ಕಾರ ರಚಿಸಲು 44 ಶಾಸಕರು ಸಿದ್ಧರಿದ್ದಾರೆ. ಇದನ್ನು ರಾಜ್ಯಪಾಲರಿಗೂ ಮನವರಿಕೆ ಮಾಡಿಕೊಟ್ಟಿದ್ದೇವೆ’ ಎಂದು ತಿಳಿಸಿದರು.

ಸರ್ಕಾರ ರಚನೆಗೆ ಹಕ್ಕು ಪ್ರತಿಪಾದಿಸಿದ್ದೀರಾ ಎಂಬ ಪ್ರಶ್ನೆಗೆ, ‘ಬಿಜೆಪಿಯ ಕೇಂದ್ರ ನಾಯಕತ್ವ ಈ ಬಗ್ಗೆ ನಿರ್ಧಾರ ಕೈಗೊಳ್ಳಲಿದೆ. ಆದರೆ, ನಾವು ಹಕ್ಕು ಪ್ರತಿಪಾದಿಸಲು ಸಿದ್ಧರಿದ್ದೇವೆ’ ಎಂದು ಹೇಳಿದರು.

‘ಸ್ಪೀಕರ್ ಸತ್ಯವ್ರತ ಅವರು 44 ಶಾಸಕರ ಜೊತೆಗೆ ಒಟ್ಟಾಗಿ ಮತ್ತು ಪ್ರತ್ಯೇಕವಾಗಿ ಚರ್ಚಿಸಿದ್ದಾರೆ. ಹೊಸ ಸರ್ಕಾರ ರಚಿಸುವ ಯತ್ನಕ್ಕೆ ಯಾರಿಂದಲೂ ವಿರೋಧ ವ್ಯಕ್ತವಾಗಿಲ್ಲ’ ಎಂದು ಪ್ರತಿಕ್ರಿಯಿಸಿದರು.

ಗುಂಡಣ್ಣ



ತುಂಬಬೇಕು, ತುಂಬಿದ್ದು ಹರಿಯಬೇಕು

ನುಡಿ ಬೆಳಗು



ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

205

ಹದಿನೆಂಟನೇ ಶತಮಾನದಲ್ಲಿ ಆಡಂ ಸ್ಮಿತ್ ಎಂಬುವವ ಅರ್ಥಶಾಸ್ತ್ರ ಬರೆದ. ಅರ್ಥಶಾಸ್ತ್ರ ಎಂದರೆ ಸಂಪತ್ತನ್ನು ಅರಿಯುವ ಶಾಸ್ತ್ರ ಎಂದು ಬರೆದ. ನೂರು ವರ್ಷಗಳ ನಂತರ ಇನ್ನೊಬ್ಬ ಅರ್ಥಶಾಸ್ತ್ರಜ್ಞ ಬಂದ, ಪ್ರೊ.ಮಾರ್ಷಲ್ ಅಂತ. ಅವ ಅರ್ಥಶಾಸ್ತ್ರ ಎಂದರೆ ಬರೀ ಸಂಪತ್ತನ್ನು ಅರಿಯುವುದಲ್ಲ. ಸಂಪತ್ತು ಕೇವಲ ಸಾಧನ. ಏನು ಸಂಪತ್ತು ಗಳಿಸಿರುತ್ತೇವೆ ಅದು ಮಾನವ ಕೋಟಿಗೆ ಉಪಯೋಗವಾಗಬೇಕು ಅದು ಅರ್ಥಶಾಸ್ತ್ರ ಎಂದ. ಆದರೆ ಆಶ್ಚರ್ಯ ಏನು ಎಂದರೆ, ಇವರೆಲ್ಲರಿಗಿಂತ 700 ವರ್ಷಗಳ ಮೊದಲೇ ಬಸವಣ್ಣ ಅರ್ಥಶಾಸ್ತ್ರ ಬರೆದಿದ್ದರು. ದುಡಿದು ಉಣ್ರಿ, ದುಡಿದಿದ್ದರಲ್ಲಿ ಸಮಾಜಕ್ಕೆ ಒಂದಿಷ್ಟು ಕೊಡ್ರಿ ಎಂದಿದ್ದರು ಬಸವಣ್ಣ. ಇದು ಕಾಯಕ, ಇದು ದಾಸೋಹ ಎಂದಿದ್ದರು. ದಾಸೋಹ ಪ್ರಜ್ಞೆ ಎಂದರೆ ಅಹಂ ಪ್ರಜ್ಞೆಯನ್ನು ಮೀರಬೇಕು. ಶಿವೋಹಂ ಪ್ರಜ್ಞೆಯನ್ನು ಸಂಪಾದಿಸಬೇಕು. ಅದು ದಾಸೋಹ ಪ್ರಜ್ಞೆಯಾಗಿ ವಿಸ್ತಾರ ಆಗಬೇಕು. ಇದು ಕಾಯಕ. ಇದನ್ನು ಕಲಿಯಬೇಕು ಮನುಷ್ಯ. ದಾಸೋಹ ಎಂದರೆ ಉಂಡವನ ಮುಖದಲ್ಲಿ ಏನು ಸಂತೋಷ ಇರುತ್ತದಲ್ಲ, ಅದೇ ಸಂತೋಷ ಉಣ್ಣಿಸಿದವನ ಮುಖದಲ್ಲಿಯೂ ಇರಬೇಕು.

ಅಬ್ದುಲ್ ಕಲಾಂ ಅವರಿಗೆ ಯಾರೋ ಒಬ್ಬರು ಒಮ್ಮೆ ‘ನಿಮಗೆ ಮನೆ, ಮಡದಿ, ಮಕ್ಕಳು ಯಾರೂ ಇಲ್ಲ. ಮನೆಗೆ ಹೋದರೆ ಉಂಡ್ಯಾ ಬಿಟ್ಯಾ ಎಂದು ಕೇಳೋರು ಇಲ್ಲ. ಆದರೂ ನೀವು ಆರೋಗ್ಯವಾಗಿದ್ದೀರಿ, ಸಂತೋಷವಾಗಿದ್ದೀರಿ. ಇದರ ಗುಟ್ಟು ಏನು’ ಎಂದು ಕೇಳಿದರು. ಅದಕ್ಕೆ ಕಲಾಂ ‘ನನ್ನ ಬಳಿಗೆ ಯಾರೇ ಬಂದರೂ ಅವರಿಂದ ನಾನು ಏನು ಪಡೆಯಬಹುದು ಎಂದು ಯೋಚಿಸುವುದಿಲ್ಲ. ನಾನು ಏನನ್ನು ಕೊಟ್ಟು ಅವರನ್ನು ಸಂತೋಷಪಡಿಸಬಹುದು ಎಂದು ಆಲೋಚಿಸುತ್ತೇವೆ. ಅದಕ್ಕೇ ನಾನು ಸಂತೋಷವಾಗಿಯೂ ಇದ್ದೇನೆ, ಆರೋಗ್ಯವಾಗಿಯೂ ಇದ್ದೇನೆ’ ಎಂದು ಹೇಳಿದರಂತೆ. ನಾವಾದರೆ ಇವನಿಂದ ನನಗೇನು ಲಾಭ ಎಂದು ಆಲೋಚಿಸುತ್ತೇವೆ. ಇದೇ ದುಃಖಕ್ಕೆ ಕಾರಣ. ಅದನ್ನು ಬಿಟ್ಟು ನಾವು ಏನನ್ನು ಕೊಡಬಹುದು ಎಂದು ಯೋಚಿಸಿದರೆ ಅದು ಸಂತೋಷಕ್ಕೆ ಕಾರಣವಾಗುತ್ತದೆ. ನಾವು ಕೊಡೋದಿಲ್ಲ ಅಂದ್ರೆ ಆಗೋದಿಲ್ಲ. ಉಸಿರು ತೆಗೆದುಕೊಂಡಿದ್ದನ್ನು ಬಿಡಲೇಬೇಕು. ಉಂಡಿದ್ದನ್ನು ಹೊರಗೆ ಹಾಕಲೇಬೇಕು. ಹಾಕೋದಿಲ್ಲ ಎಂದರೆ ಆಗುತ್ತದೇನು? ನಿಸರ್ಗ ಹಾಗೇ ಇದೆ. ಈಗ ಕೆರೆ ಕಟ್ಟುತ್ತಾರೆ. ಎಷ್ಟೇ ದೊಡ್ಡ ಕೆರೆ ಕಟ್ಟಿದರೂ ಅದಕ್ಕೆ ಕೋಡಿ ಬಿಟ್ಟಿರುತ್ತಾರೆ. ಯಾಕೆಂದರೆ, ಕೆರೆ ತುಂಬುತ್ತಿರಬೇಕು. ತುಂಬಿದ್ದು ಹಾಗೆಯೇ ಹೋಗುತ್ತಿರಬೇಕು. ಇಲ್ಲವಾದರೆ ಕೆರೆ ಒಡೆಯುತ್ತದೆ. ಹಾಗೆಯೇ ಮನುಷ್ಯ ಗಳಿಸಿದ್ದನ್ನು ದಾನದ ರೂಪದಲ್ಲಿ ಕೊಡಬೇಕು. ಇಲ್ಲವಾದರೆ ಒಡೆಯುತ್ತದೆ. ಕೆರೆ ಒಡೆದ ಹಾಗೆ ಜೀವನವೂ ಒಡೆಯುತ್ತದೆ. ತುಂಬುತ್ತಿರಬೇಕು, ಹರಿಯುತ್ತಿರಬೇಕು. ಎರಡೂ ಬೇಕು.

ನದಿಯ ನೀರು ಯಾಕೆ ಸಿಹಿ, ಸಮುದ್ರದ ನೀರು ಯಾಕೆ ಉಪ್ಪು? ನದಿ ನೀರನ್ನು ಎಲ್ಲರಿಗೂ ಹಂಚುತ್ತದೆ. ಅದಕ್ಕೆ ಅದು ಸಿಹಿ ಆತು. ಸಮುದ್ರ ಎಲ್ಲ ನೀರನ್ನೂ ಇಟ್ಟುಕೊಂಡಿದೆ ಅದಕ್ಕೇ ಅದು ಉಪ್ಪಾತು. ಇಟ್ಟುಕೊಂಡವರು ಉಪ್ಪಾಗುತ್ತಾರೆ. ಹಂಚುವವರು ಸಿಹಿಯಾಗುತ್ತಾರೆ. ಮನುಷ್ಯ ಇದನ್ನು ಕಲಿಯಬೇಕು. ನಮ್ಮದು ಕೊಡುವುದು ಎಂದರೆ ದೇವರಾಣೆಗೂ ಆಗೋದಿಲ್ಲ. ಬರುವುದಿದ್ದರೆ ಎಷ್ಟಾದರೂ ಬರಲಿ ಅಂತೀವಿ. ನಾವು ಕೊಟ್ಟು ದಾನಿಗಳು ಅನಿಸಿಕೊಳ್ಳಿಲ್ಲ. ಬೇಡಿ ಬೇಡಿ ದೇವರು ಎಷ್ಟೇ ಕೊಟ್ಟರೂ ಭಿಕ್ಷುಕರಾಗಿದ್ದೀವಿ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಗುರುವಾರ ಮೇ 29, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಜ್ಯೇಷ್ಠ ಶುಕ್ಲ ತೃತೀಯ ಗಂ.23-19 ನಕ್ಷತ್ರ: ಆರ್ದ್ರಾ ಗಂ. 22-39 ಯೋಗ: ಶೂಲ ಗಂ. 15-47 ಕರಣ: ತೈತಿಲ ಗಂ. 12-32, ವೃಷಭ ಮಾಸದ 15 ನೇ ದಿನ.
ರಾಹುಕಾಲ : ಮಧ್ಯಾಹ್ನ 01-30 – 03-00
ಸೂರ್ಯೋದಯ : 06-06 ಸೂರ್ಯಾಸ್ತ : 06-50
ಮುಸ್ಲಿಂ ದಿನಾಂಕ : 01 ಜುಲ್‌ಹಿಜಾ
ಅದೃಷ್ಟ ಸಂಖ್ಯೆ : 8, 11

ಮೇಷ: ಪ್ರತಿ ಕಾರ್ಯಕ್ಕೂ ಹಲವು ಬಾರಿ ಪ್ರಯತ್ನ ಪಡಬೇಕಾಗುವುದು ಅನಿವಾರ್ಯ. ತೀರ್ಮಾನ ಅಥವಾ ಮುಂದಾಲೋಚನೆ ಇಲ್ಲದೇ ಯಾವುದೇ ಭರವಸೆಯನ್ನೂ ನೀಡಬೇಡಿ.

ವೃಷಭ: ಬಟ್ಟೆ ವ್ಯಾಪಾರಿಗಳು ಬಂಡವಾಳದ ಎರಡರಷ್ಟು ಲಾಭ ಪಡೆಯುವಂತಾಗಲಿದೆ. ರಾಜಕೀಯ ವಿದ್ಯಮಾನಗಳಿಂದಾಗಿ ಓಡಾಟ ಅಧಿಕಗೊಳ್ಳುವುದು. ರಿಯಲ್ ಎಸ್ಟೇಟ್‌ದಾರರಿಗೆ ವ್ಯವಹಾರಗಳು ವೃದ್ಧಿಗೊಳ್ಳಲಿವೆ.

ಮಿಥುನ: ಅಧಿಕಾರದಲ್ಲಿ ಸ್ಥಾನಮಾನ ಪಡೆಯಲು ದೇವರ ಸೇವೆಯಂಥ ಧಾರ್ಮಿಕ ಕಾರ್ಯಗಳನ್ನು ನಡೆಸುವುದು ಒಳ್ಳೆಯದು. ಭೂ ಸಂಬಂಧ ಕೆಲಸ ಕಾರ್ಯಗಳು ಸಂಪನ್ನಗೊಳ್ಳುವುದು.

ಕರ್ಕಾಟಕ: ಹೋಟೆಲ್ ಉದ್ಯಮಿಗಳಿಗೆ ವ್ಯಾಪಾರದಲ್ಲಿ ಅನುಕೂಲವಾಗುತ್ತದೆ. ಜೀವನದಲ್ಲಿ ಮಹತ್ವದ ನಿರ್ಧಾರ ಕೈಗೊಳ್ಳಬೇಕಾದ ಅನಿವಾರ್ಯತೆ ಉಂಟಾಗಲಿದೆ. ಗೆಳೆಯರೊಂದಿಗೆ ಪ್ರವಾಸ ನಿಶ್ಚಿತವಾಗುವುದು.

ಸಿಂಹ: ಭಾಷಾ ಅಧ್ಯಾಪಕರಿಗೆ ಮತ್ತು ನಾಟಕ ಕಲಾವಿದವರಿಗೆ ಮನ್ನಣೆ ಸಿಗುವುದು. ಮಕ್ಕಳ ಜೊತೆ ಸಮಾರಂಭಗಳಲ್ಲಿ ಭಾಗವಹಿಸುವಿರಿ. ಸಂಸಾರದಲ್ಲಿ ಅಂತಃಕಲಹಗಳು ನಡೆದು, ಅಸಮಾಧಾನಕ್ಕೆ ಕಾರಣವಾಗುವಂತೆ ಆಗಲಿದೆ.

ಕನ್ಯಾ: ಶೈಕ್ಷಣಿಕ ರಂಗದವರಿಗೆ ಪರಸ್ಪರ ವರ್ಗಾವಣೆ ಮಾಡಿಕೊಳ್ಳುವ ಅವಕಾಶ ಸಿಗುವುದು. ನೆನಪಿನ ಶಕ್ತಿಯ ಕೊರತೆ ಉಂಟಾಗಿ ಮನಸ್ಸಿಗೆ ನಿರಾಸೆಯಾಗಲಿದೆ. ಬುದ್ಧಿಕೌಶಲದಿಂದ ಕಾರ್ಯಕ್ಷೇತ್ರದಲ್ಲಿ ಮುನ್ನಡೆ.

ತುಲಾ: ಬಾಕಿ ಇರುವ ಕೆಲಸಗಳನ್ನು ಆದಷ್ಟು ಬೇಗ ಪೂರ್ಣಗೊಳಿಸುವುದಕ್ಕೆ ಸಹೋದ್ಯೋಗಿ ನೆರವಾಗುವರು. ಪೊಲೀಸ್ ವೃತ್ತಿಯಲ್ಲಿ ಇರುವವರಿಗೆ ಮಹತ್ವದ ಕಾರ್ಯಾಚರಣೆಗಾಗಿ ದೂರ ಸಂಚಾರ ಕಂಡುಬರಲಿದೆ.

ವೃಶ್ಚಿಕ: ಎಲ್ಲ ಸವಾಲುಗಳನ್ನು ಎದುರಿಸುವ ಆತ್ಮಸ್ಥೈರ್ಯ ಬಂದಿದೆ. ಆದರೂ ಮುನ್ನೆಚ್ಚರಿಕೆ ಅಗತ್ಯ. ಆಡಿಟಿಂಗ್ ಕೆಲಸಗಳಿಂದ ವರಮಾನ ಗಳಿಸುವಿರಿ. ಇತರರ ಮಾತಿಗೆ ಕಿವಿಗೊಡದೆ ಇರುವುದು ಉತ್ತಮವಾಗಿರುತ್ತದೆ.

ಧನು: ಅನಗತ್ಯವಾಗಿ ಮಾಡುತ್ತಿರುವಂಥ ಖರ್ಚು-ವೆಚ್ಚಗಳಿಗೆ ಕಡಿವಾಣ ಹಾಕುವುದರಿಂದ ಆರ್ಥಿಕ ಸಂಕಷ್ಟ ಅರ್ಧದಷ್ಟು ಕಳೆಯುವುದು. ಅಮೂಲ್ಯವಾದ ವಸ್ತುವೊಂದನ್ನು ಉಡುಗೊರೆಯಾಗಿ ಪಡೆಯಲಿದ್ದೀರಿ.

ಮಕರ: ಯಾವುದೇ ಕೆಲಸಗಳಿಗೆ ಹಣದ ಅಡಚಣೆ ಇರುವುದಿಲ್ಲ. ವ್ಯವಹಾರದಲ್ಲಿ ಸೋದರರನ್ನು ಸೇರಿಸಿಕೊಂಡು ಅಥವಾ ಸಂಬಂಧಿಗಳನ್ನು ಸೇರಿಸಿಕೊಂಡು ಸಂಬಂಧ ಹಾಳುಮಾಡಿಕೊಳ್ಳುವ ರೀತಿ ಆಗಬಹುದು.

ಕುಂಭ: ಆಫೀಸಿನಲ್ಲಿ ಉಂಟಾಗಿದ್ದ ಸಮಸ್ಯೆಗಳು ತನ್ನಂತಾನೆ ಬಗೆ ಹರಿದು ಮನಸ್ಸು ನಿರಾಳವಾಗಲಿವೆ. ಕೀಲು ನೋವು, ವಾತದಂಥ ಕಾಯಿಲೆಯಿಂದ ಬಳಲುತ್ತಿರುವವರು ಆರೋಗ್ಯದ ಮೇಲೆ ವಿಶೇಷ ಕಾಳಜಿ ವಹಿಸಿ.


ಮೀನ: ಸಹೋದ್ಯೋಗಿಗಳೊಂದಿಗೆ ಆತ್ಮೀಯ ನಡೆ ಮತ್ತು ನುಡಿ ಮನಸ್ತಾಪಗಳನ್ನು ದೂರ ಮಾಡಲಿದೆ. ಇತರರೊಂದಿಗೆ ವಿವಾದಾತ್ಮಕ ವಿಷಯಗಳ ಕುರಿತು ಚರ್ಚಿಸುವುದು ಉಚಿತವಲ್ಲ. ಹೊಸ ಕಾರ್ಯ ಕೈಗೊಳ್ಳಲು ಸಕಾಲ.

ಪದಬಂಧ 6057

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಲೋಭ ನಡುವಿದ್ದಾಗ ಆಸೆ ಮೂಡಿತಲ್ಲಾ (4)
3.ವಿಷ್ಣುವನ್ನು ಹೀಗೂ ಕರೆವರು (4)
5.ಮುಳ್ಳುಗಳ ನಡುವೆ ಅರಳುವ ಸುಂದರ ಹೂ (3)
7.ಸಜಾತಿಯಲ್ಲೇ ಬಂದಿರುವ ಜೈಲುವಾಸ (2)
9.ರಮಣನ ಎದುರು ನಡೆದ ಕಾಳಗ (2)
11.ವಾನರದ ಹತ್ತಿರವಿರುವ ಮನುಷ್ಯ (2)
12.ಮಿತಿಗೆ ಒಳಪಟ್ಟಿದ್ದು ಮಿಡಿತದಲ್ಲಿದೆ (2)
14.ಪಾಕ ಮಾಡುವಾಗ ಕುಡಿದಿರುವ ಶರಬತ್ತು (3)
16.ಕಡ ಕೇಳಿ ಪಡೆದಿರುವ ಭರಣಿ (4)
17.ತಂದೆಯ ತಂದೆಯಿವನು (4)

ಮೇಲಿಂದ ಕೆಳಕ್ಕೆ
1.ಪ್ರಯಾಸದಿಂದ ಕೈಗೊಂಡ ಸಂಚಾರ (3)
2.ನಡುಗುವುದನ್ನು ನೋಡಿದ್ದಕ್ಕೇ ಮಂದಹಾಸ! (2)
3.ಬಿಂಕದಿಂದ ತಯಾರಿಸಿಕೊಟ್ಟ ಲೋಹದ ಎಳೆ (2)
4.ತಾರುಣ್ಯವನ್ನು ಹೊಂದಿದವನು (3)
6.ಅತಿಯಾದ ಆಸೆ (3)
8.ಮತ್ತೊಬ್ಬನ ಸಾಲಕ್ಕೆ ಹೊಣೆ ನಿಂತ ವ್ಯಕ್ತಿ (5)
9.ಮಾಘ ಶುದ್ಧ ಸಪ್ತಮಿಯನ್ನು ಹೀಗೂ ಹೇಳುವರು (5)
10.ಜನ ಮಾಡುತ್ತಿರುವ ಊಟ (3)
11.ನಡುವಿನಿಂದ ಪ್ರಾರಂಭವಾದ ಕಂಪನ (3)
13.ಪ್ರಕಾರ ಈ ವಿಧವಾಗಿ ಬಂದಿದೆ (3)
14.ಪಾನಕ ಕುಡಿದು ಮಾಡಿರುವ ಅಡುಗೆ (2)
15.ಪಿನಾಕದ ಹತ್ತಿರ ಮಂಗ ಕಾಣುತ್ತಿದೆ (2)



6056ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಚದುರಂಗ 3.ಮತಿಹೀನ
5.ಯಾಚಕ 6.ದಿನಕರ
8.ರಸಮಯ 10.ಕಬಳಿಸು
12.ಅವಾಂತರ 14.ದಡಿಯ
15.ವರ್ಧಮಾನ 16.ತರಕಾರಿ

ಮೇಲಿಂದ ಕೆಳಕ್ಕೆ:
1.ಚತುಷ್ಪಾದಿ 2.ಗಡಿಯಾರ
3.ಮಧುಕರ 4.ನಡುಪ್ರಾಯ
7.ನವಾಬ 9.ಮಹಂತ
10.ಮಧುಕರ 11.ಸುದರ್ಶನ
12.ಅಯಸ್ಕಾಂತ 13.ರಹದಾರಿ

ಸುಡೊಕು 6441

				4		8		7
4		8						
	9			7		6		4
	5		7				6	
				9				
2		3			4		7	
7								6
	1		2		9		4	
6		2				9		5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6440 ಸುಡೊಕು

7	6	3	5	9	2	4	1	8
1	9	4	8	7	3	5	6	2
8	5	2	1	6	4	3	9	7
5	1	7	2	4	9	6	8	3
4	2	8	6	3	1	7	5	9
6	3	9	7	5	8	1	2	4
2	8	5	4	1	7	9	3	6
3	4	1	9	2	6	8	7	5
9	7	6	3	8	5	2	4	1

ಹೊಸ ಕರಡು ಮಸೂದೆ ಸಿದ್ಧಪಡಿಸಿರುವ ಭೂಸಂಪನ್ಮೂಲ ಇಲಾಖೆ

ದಾಖಲೆ ನೋಂದಣಿ: ಆಧಾರ್ ಐಚ್ಛಿಕ

ನವದೆಹಲಿ (ಪಿಟಿಐ): ಜಮೀನು ಕಾಗದಪತ್ರಗಳನ್ನು ಆನ್‌ಲೈನ್ ಮೂಲಕ ನೋಂದಾಯಿಸುವವರು ಆಧಾರ್ ಸಂಖ್ಯೆ ಹೊಂದಿಲ್ಲದೆ ಇದ್ದರೆ ಅಥವಾ ಆಧಾರ್ ಸಂಖ್ಯೆಯನ್ನು ನೀಡಲು ಬಯಸದೆ ಇದ್ದರೆ, ಅವರಿಗೆ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸುವ ಉದ್ದೇಶವನ್ನು ಪ್ರಸ್ತಾವಿತ ಮಸೂದೆ ಹೊಂದಿದೆ.

ಹೊಸ ಮಸೂದೆಯು 117 ವರ್ಷಗಳಷ್ಟು ಹಳೆಯದಾಗಿರುವ ನೋಂದಣಿ ಕಾಯ್ದೆ–1908ರ ಬದಲಿಗೆ ಜಾರಿಗೆ ಬರಲಿದೆ.

ಗ್ರಾಮೀಣ ಅಭಿವೃದ್ಧಿ ಸಚಿವಾಲಯದ ಭೂಸಂಪನ್ಮೂಲ ಇಲಾಖೆಯು ಸಿದ್ಧಪಡಿಸಿರುವ ಈ ಮಸೂದೆಯ ಕರಡನ್ನು ಸಾರ್ವಜನಿಕರ ಅವಗಾಹನೆಗೆ ಪ್ರಕಟಿಸಲಾಗಿದೆ, ಸಲಹೆಗಳು ಇದ್ದರೆ ಸಲ್ಲಿಸುವಂತೆ ಸೂಚಿಸಲಾಗಿದೆ. ಆನ್‌ಲೈನ್ ನೋಂದಣಿ, ದಾಖಲೆಗಳನ್ನು ಎಲೆಕ್ಟ್ರಾನಿಕ್ ರೂಪದಲ್ಲಿ ಸಲ್ಲಿಸುವುದು ಹಾಗೂ ಅವುಗಳನ್ನು ಸ್ವೀಕರಿಸುವುದು, ಎಲೆಕ್ಟ್ರಾನಿಕ್ ರೂಪದಲ್ಲಿ ನೋಂದಣಿ ಪ್ರಮಾಣಪತ್ರ ನೀಡುವುದು, ದಾಖಲೆಗಳನ್ನು ಡಿಜಿಟಲ್ ಸ್ವರೂಪದಲ್ಲಿ ಇರಿಸಿಕೊಳ್ಳುವುದಕ್ಕೆ ಅವಕಾಶ ಕಲ್ಪಿಸುವ ಅಂಶವು ಮಸೂದೆಯಲ್ಲಿದೆ.

ಆಧಾರ್ ಸಂಖ್ಯೆಯನ್ನು ಬಳಸಿ ದೃಢೀಕರಿಸುವ ವ್ಯವಸ್ಥೆಗೂ ಅವಕಾಶ ಇದೆ ಎಂದು ಮಸೂದೆ ಹೇಳುತ್ತದೆ.

ನೋಂದಣಿ ಕಾಯ್ದೆಯ ಅಡಿಯಲ್ಲಿ ಸ್ಥಿರಾಸ್ತಿಗಳಿಗೆ ಸಂಬಂಧಿಸಿದ ಮಾರಾಟ ಕ್ರಯಪತ್ರ, ಉಡುಗೊರೆ ರೂಪದಲ್ಲಿ ನೀಡಿದ ಆಸ್ತಿಗಳ ಕ್ರಯಪತ್ರ, ಭೋಗ್ಯಕ್ಕೆ ನೀಡಿದ ಆಸ್ತಿ ಕುರಿತ ದಾಖಲೆಗಳನ್ನು ನೋಂದಣಿ ಮಾಡಿಸಬೇಕು. ಉಯಿಲು, ಅಧಿಕಾರಪತ್ರ, ಆಸ್ತಿ ಹಕ್ಕುಗಳ ಕುರಿತಾಗಿ ನ್ಯಾಯಾಲಯ ನೀಡಿದ ಆದೇಶಗಳನ್ನು ನೋಂದಣಿ ಮಾಡಿಸಬೇಕು ಎಂದು ಕೂಡ ಕಾಯ್ದೆ ಹೇಳುತ್ತದೆ.

ಪ್ರಸ್ತುತ ಕಾಲಘಟ್ಟದ ಆಸ್ತಿ ಮತ್ತು ವಹಿವಾಟು ಪದ್ಧತಿಗಳನ್ನು ಒಳಗೊಳ್ಳುವ ಗುರಿಯೊಂದಿಗೆ ಕರಡು ಮಸೂದೆಯು ಕಡ್ಡಾಯ ನೋಂದಣಿಯ ವ್ಯಾಪ್ತಿಯನ್ನು ಹಿಗ್ಗಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕರಡು ಮಸೂದೆಯಲ್ಲಿನ ಅಂಶಗಳು...

- ವ್ಯಕ್ತಿಗಳಿಗೆ ಹಾಗೂ ಸಣ್ಣ ಉದ್ದಿಮೆಗಳಿಗೆ ನೋಂದಣಿ ಪ್ರಕ್ರಿಯೆಯು ಸುಲಭವಾಗಿ ದಕ್ಕುವಂತೆ ಆಗಬೇಕು ಎಂಬ ಉದ್ದೇಶದಿಂದ ಭಾಷೆಯನ್ನು ಸರಳಗೊಳಿಸುವುದಕ್ಕೆ ಇದು ಉತ್ತೇಜನ ನೀಡುತ್ತದೆ
- ಈಗಿರುವ ಕಾನೂನಿನ ಪ್ರಕಾರ ದಾಖಲೆಗಳನ್ನು ನೋಂದಣಿ ಕಚೇರಿಯಲ್ಲಿ ಸಲ್ಲಿಸಬೇಕು. ಕರಡು ಮಸೂದೆಯು ದಾಖಲೆಗಳನ್ನು ಖುದ್ದಾಗಿ ಅಥವಾ ಎಲೆಕ್ಟ್ರಾನಿಕ್ ರೂಪದಲ್ಲಿ ಸಲ್ಲಿಸಬಹುದು ಎಂದು ಹೇಳುತ್ತದೆ
- ಹೊಸ ಮಸೂದೆಯು ವ್ಯಕ್ತಿಯ ಭಾವಚಿತ್ರವನ್ನು ಡಿಜಿಟಲ್ ಕ್ಯಾಮೆರಾ ಮೂಲಕ ಕ್ಲಿಕ್ಕಿಸಿ ಸಲ್ಲಿಸಬಹುದು ಎಂದು ಹೇಳುತ್ತದೆ, ಬೆರಳಚ್ಚನ್ನು ಬಯೋಮೆಟ್ರಿಕ್ ಸಾಧನದ ಮೂಲಕವೂ ಸಲ್ಲಿಸಲು ಅವಕಾಶ ಕಲ್ಪಿಸುತ್ತದೆ
- ಡಿಜಿಟಲ್ ಸಹಿಗಳನ್ನು ಕೂಡ ಸಲ್ಲಿಸಲು ಅವಕಾಶ ಇದೆ. ಆಧಾರ್ ಸಂಖ್ಯೆ ಇಲ್ಲ ಎಂಬ ಕಾರಣಕ್ಕೆ ಯಾರಿಗೂ ನೋಂದಣಿ ಸೌಲಭ್ಯ ನಿರಾಕರಿಸುವಂತಿಲ್ಲ

ಫರಂಗಿಪೇಟೆ, ಬಿ.ಸಿ.ರೋಡ್ ಅಘೋಷಿತ ಬಂದ್

ಒಂದನೇ ಪುಟದಿಂದ...

ಬಿ.ಸಿ.ರೋಡ್‌ನ ಮಿತ್ತಬೈಲ್ ಜುಮ್ಮಾ ಮಸೀದಿ ಬಳಿ ಭಾರಿ ಸಂಖ್ಯೆಯಲ್ಲಿ ಜನ ಸೇರಿದ್ದರು. ಅಲ್ಲೂ ಬಹುತೇಕ ಅಂಗಡಿ ಮಳಿಗೆಗಳು ಮುಚ್ಚಿದ್ದವು. ತೆರೆದಿದ್ದ ಕೆಲವು ಮಳಿಗೆಗಳನ್ನು ಕೆಲವು ಯುವಕರು ಬಲವಂತದಿಂದ ಮುಚ್ಚಿಸಿದರು.

ಕೆಲ ಸಿಟಿ ಬಸ್ ಸಂಚಾರ ಸ್ಥಗಿತ: ಮಂಗಳೂರು ಹಾಗೂ ಬಿ.ಸಿ. ರೋಡ್‌ನಲ್ಲಿ ಕೆಲವು ಸಿಟಿಬಸ್‌ಗಳು ಬುಧವಾರ ಬೆಳಿಗ್ಗೆ ಸಂಚಾರ ಸ್ಥಗಿತಗೊಳಿಸಿದವು. ಇದರಿಂದಾಗಿ ವಿದ್ಯಾರ್ಥಿಗಳು, ಕಚೇರಿಗೆ ತೆರಳುವವರು ಸಮಸ್ಯೆ ಎದುರಿಸಿದರು.

ಬಸ್‌ಗೆ ಕಲ್ಲು: ಮಂಗಳೂರಿನಿಂದ ಕಟೀಲಿಗೆ ಸಂಚರಿಸುವ ನಂದಿನಿ ಬಸ್‌ಗೆ ಸುರತ್ಕಲ್‌ನಲ್ಲಿ ಕಿಡಿಗೇಡಿಗಳು ಕಲ್ಲು ತೂರಿದ್ದಾರೆ. ಆ ಬಸ್ ಸಂಚಾರವನ್ನು ಸ್ಥಗಿತಗೊಳಿಸಿದ್ದರಿಂದ ಪ್ರಯಾಣಿಕರು ಬೇರೆ ಬಸ್‌ನಲ್ಲಿ ತೆರಳಿದರು. ಈ ಘಟನೆ ಬಳಿಕ ಕೆಲವರು ಅಂಗಡಿ ಮುಚ್ಚಿದರು.



ಅಬ್ದುಲ್ ರಹಿಮಾನ್ ಅಂತಿಮ ಯಾತ್ರೆ ಬಿ.ಸಿ.ರೋಡ್‌ನಲ್ಲಿ ಸಾಗುವಾಗ ಸೇರಿದ್ದ ಜನಸ್ತೋಮ ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್.

ಕೊಳತ್ತಮಜಲಿನಲ್ಲಿ ಅಂತ್ಯಕ್ರಿಯೆ

ಬಂಟ್ವಾಳ (ದಕ್ಷಿಣಕನ್ನಡ): ಹತ್ಯೆಗೊಳಗಾದ ಅಬ್ದುಲ್ ರಹಿಮಾನ್ ಅವರ ಅಂತ್ಯಕ್ರಿಯೆ ಅವರ ಊರು ಬಡಗಬೆಳ್ಳೂರು ಗ್ರಾಮದ ಕೊಳತ್ತಮಜಲುವಿನಲ್ಲಿ ಬುಧವಾರ ನೆರವೇರಿತು. ಭಾರಿ ಸಂಖ್ಯೆಯಲ್ಲಿ ಸೇರಿದ್ದ ಜನರು ಅವರ ಅಂತಿಮ ದರ್ಶನ ಪಡೆದರು.

ಪಾರ್ಥಿವ ಶರೀರವನ್ನು ಅಬ್ದುಲ್ ರಹಿಮಾನ್ ಮನೆಗೆ ಒಯ್ಯಲಾಯಿತು. ಅವರ ತಂದೆ ಅಬ್ದುಲ್ ಖಾದರ್, ತಾಯಿ ಐಸಮ್ಮ, ಪತ್ನಿ ಫಾತಿಮತ್ ನುಸ್ರಾ, ಮಕ್ಕಳು ಹಾಗೂ ಬಂಧುಗಳು ಅಂತಿಮ ದರ್ಶನ ಪಡೆದರು.

ಪಾರ್ಥಿವ ಶರೀರವನ್ನು ಮನೆಗೆ ತರುತ್ತಿದ್ದಂತೆಯೇ ಬಂಧುಗಳ ಆಕ್ರಂದನ ಮುಗಿಲು ಮುಟ್ಟಿತ್ತು. ಬಳಿಕ ಸ್ಥಳೀಯ ಜುಮ್ಮಾ ಮಸೀದಿಯಲ್ಲಿ ಧರ್ಮಗುರುಗಳು ಪ್ರಾರ್ಥನೆ ಸಲ್ಲಿಸಿ ಅಂತಿಮ ವಿಧಿಗಳನ್ನು ನೆರವೇರಿಸಿದರು.

ಸ್ಥಳೀಯ ಜುಮ್ಮಾ ಮಸೀದಿಯಲ್ಲಿ ಮಯ್ಯತ್ ನಮಾಜ್ ನೆರವೇರಿಸಲಾಯಿತು. ಅಂತಿಮ ಪ್ರಾರ್ಥನೆ ಸಲ್ಲಿಕೆ ಬಳಿಕ ಸ್ಥಳೀಯ ಸ್ಮಶಾನದಲ್ಲಿ ಅವರನ್ನು ದಫನ ಮಾಡಲಾಯಿತು.

ಮಸೀದಿ ಅಧ್ಯಕ್ಷ ಅಬ್ದುಲ್ ಅಜೀಜ್, ಮುಖಂಡ ಸಬೂಕ್ ದಾರಿಮಿ, ಕಾಂಗ್ರೆಸ್ ಮುಖಂಡ ಅಶ್ರಫ್ ಕೆ., ಎಸ್‌ಡಿಪಿಐ ಮುಖಂಡ ಅಥಾವುಲ್ಲ ಜೋಕಟ್ಟೆ ಹಾಗೂ ಜಿಲ್ಲೆಯ ಮುಸ್ಲಿಂ ಸಮುದಾಯದ ಹಲವು ಮುಖಂಡರು ಭಾಗವಹಿಸಿದರು.

ಆರೋಪಿಗಳ ಬಂಧನಕ್ಕೆ ಕುಟುಂಬ ಆಗ್ರಹ

ಅಬ್ದುಲ್ ರಹಿಮಾನ್ ಹತ್ಯೆಯಿಂದ ನೋವಿಗೊಳಗಾದ ಕುಟುಂಬದವರು ಈ ಸಾವಿಗೆ ನ್ಯಾಯ ಸಿಗಬೇಕು ಎಂದು ಆಗ್ರಹಿಸಿದ್ದಾರೆ.

‘ಊರಿನವರೊಂದಿಗೆ ಅನ್ಯೋನ್ಯವಾಗಿ ಇದ್ದ ಮಗ ಮನೆಗೂ ಆಧಾರಸ್ತಂಭವಾಗಿದ್ದ. ಅವನನ್ನು ಹತ್ಯೆ ಮಾಡಿದ ಆರೋಪಿಗಳನ್ನು ಕೂಡಲೇ ಬಂಧಿಸಿ ನಮಗೆ ನ್ಯಾಯ ದೊರಕಿಸಿಕೊಡಬೇಕು’ ಎಂದು ಮೃತ ವ್ಯಕ್ತಿಯ ತಂದೆ ಅಬ್ದುಲ್ ಖಾದರ್ ಒತ್ತಾಯಿಸಿದರು.

‘ನನ್ನ ಸೋದರನು ಪತ್ನಿ ಮತ್ತು ಇಬ್ಬರು ಪುಟ್ಟ ಮಕ್ಕಳನ್ನು (ಮೂರೂವರೆ ವರ್ಷದ ಮಗಳು ಫಾತಿಮತ್ ನಶ್ವಾ ಹಾಗೂ ಒಂದೂವರೆ ವರ್ಷದ ಮಗ ಮೊಹಮ್ಮದ್ ನಶೀಫ್) ಹೊಂದಿದ್ದ. ಹೊಸ ಮನೆ ನಿರ್ಮಾಣಕ್ಕೆ ಮುಂದಾಗಿದ್ದ. ಅಮಾಯಕ ಸಹೋದರನನ್ನು ಹತ್ಯೆ ಮಾಡಿದ ಆರೋಪಿಗಳಿಗೆ ತಕ್ಕ ಶಿಕ್ಷೆಯಾಗಬೇಕು’ ಎಂದು ಮೃತರ ಸಹೋದರಿ ಶಬಾನಾ ಆಗ್ರಹಿಸಿದರು.

ಕಾಂಗ್ರೆಸ್‌ಗೆ ಸಾಮೂಹಿಕ ರಾಜೀನಾಮೆ?

ಒಂದನೇ ಪುಟದಿಂದ...

‘ಬಂದ್‌ಗೆ ಕರೆ ನೀಡಿ ಸಾರ್ವಜನಿಕ ಆಸ್ತಿಪಾಸ್ತಿ ನಷ್ಟಕ್ಕೆ ಕಾರಣರಾದವರ ವಿರುದ್ಧವೂ ಕ್ರಮ ಆಗುತ್ತಿಲ್ಲ. ಇದರಿಂದ ಬೇಸತ್ತು ಬೂತ್ ಮಟ್ಟದಿಂದ ರಾಜ್ಯಮಟ್ಟದವರೆಗೆ ವಿವಿಧ ಹುದ್ದೆಗಳಲ್ಲಿರುವ ಮುಸ್ಲಿಂ ಸಮುದಾಯದ ಮುಖಂಡರು ತಮ್ಮ ಹುದ್ದೆಗಳಿಗೆ ರಾಜೀನಾಮೆ ನೀಡಲು ಮುಂದಾಗಿದ್ದೇವೆ’ ಎಂದು ಶಾಹುಲ್ ಹಮೀದ್ ‘ಪ್ರಜಾವಾಣಿ’ಗೆ ತಿಳಿಸಿದರು.

ಪಕ್ಷದ ಸ್ಥಳೀಯ ಘಟಕಗಳ ಪ್ರಮುಖರು ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷರಿಗೆ ಈಗಾಗಲೇ ರಾಜೀನಾಮೆ ಸಲ್ಲಿಸಿದ್ದಾರೆ.

ರಾಜ್ಯಸಭೆ: 1 ಸ್ಥಾನ ಎಂಎನ್‌ಎಂಗೆ ನೀಡಿದ ಡಿಎಂಕೆ

ಚೆನ್ನೈ (ಪಿಟಿಐ): ರಾಜ್ಯಸಭೆಗೆ ಜೂನ್ 19ರಂದು ನಡೆಯಲಿರುವ ಚುನಾವಣೆಯಲ್ಲಿ ತಮಿಳುನಾಡಿನ 6 ಸ್ಥಾನಗಳ ಪೈಕಿ ನಾಲ್ಕು ಸ್ಥಾನಗಳಿಗೆ ಸ್ಪರ್ಧಿಸುವುದಾಗಿ ಆಡಳಿತಾರೂಢ ಡಿಎಂಕೆ ಬುಧವಾರ ಹೇಳಿದೆ. ಮಿತ್ರಪಕ್ಷವಾದ, ಕಮಲ್ ಹಾಸನ್ ನೇತೃತ್ವದ ಎಂಎನ್‌ಎಂ ಪಕ್ಷಕ್ಕೆ ಒಂದು ಸ್ಥಾನ ಬಿಟ್ಟುಕೊಟ್ಟಿದೆ.



ಕಮಲ್ ಹಾಸನ್

ರಾಜ್ಯಸಭೆಯ ಹಾಲಿ ಸದಸ್ಯ ಹಾಗೂ ಹಿರಿಯ ವಕೀಲ ಪಿ. ವಿಲ್ಸನ್ ಅವರು ಪಕ್ಷದ ಅಭ್ಯರ್ಥಿಯಾಗಿ ಪುನಃ ಕಣಕ್ಕೆ ಇಳಿಯಲಿದ್ದಾರೆ.

ಎಸ್.ಆರ್. ಶಿವಲಿಂಗಂ ಮತ್ತು ರುಕಯ್ಯಾ ಮಲಿಕ್ ಅವರು ಪಕ್ಷದಿಂದ ಕಣಕ್ಕೆ ಇಳಿಯಲಿರುವ ಇನ್ನಿಬ್ಬರು ಅಭ್ಯರ್ಥಿಗಳು. ಶಿವಲಿಂಗಂ ಅವರು ಪಕ್ಷದ ಮುಖಂಡ, ರುಕಯ್ಯಾ ಅವರು ಪಕ್ಷದ ಪದಾಧಿಕಾರಿ ಹಾಗೂ ಲೇಖಕಿ.

ಕಮಲ್ ಹಾಸನ್ ನೇತೃತ್ವದ ಎಂಎನ್‌ಎಂ ಪಕ್ಷದ ಜೊತೆ 2024ರ ಲೋಕಸಭಾ ಚುನಾವಣೆಗೆ ಮೊದಲು ಮಾಡಿಕೊಂಡ ಒಪ್ಪಂದಕ್ಕೆ ಅನುಗುಣವಾಗಿ ಆ ಪಕ್ಷಕ್ಕೆ ಒಂದು ಸ್ಥಾನ ಬಿಟ್ಟುಕೊಡಲಾಗಿದೆ ಎಂದು ಡಿಎಂಕೆ ಪಕ್ಷದ ಅಧ್ಯಕ್ಷರೂ ಆಗಿರುವ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಿಎಂಕೆಯ ಅನ್ಬುಮಣಿ ರಾಮದಾಸ್, ಎಂಡಿಎಂಕೆ ನಾಯಕ ವೈಕೊ ಸೇರಿದಂತೆ ತಮಿಳುನಾಡಿನ ಆರು ಮಂದಿ ಸದಸ್ಯರು ರಾಜ್ಯಸಭೆಯಿಂದ ನಿವೃತ್ತರಾಗಲಿದ್ದಾರೆ.

ತನ್ನ ಹಾಗೂ ಮಿತ್ರಪಕ್ಷಗಳ ಸದಸ್ಯರ ಬೆಂಬಲದೊಂದಿಗೆ ಡಿಎಂಕೆ ನಾಲ್ಕು ಸ್ಥಾನಗಳನ್ನು ಸುಲಭವಾಗಿ ಗೆಲ್ಲುವ ಅವಕಾಶ ಇದೆ.

ಎಐಎಡಿಎಂಕೆ ಪಕ್ಷವು ಬಿಜೆಪಿ ಸೇರಿದಂತೆ ತನ್ನ ಮಿತ್ರಪಕ್ಷಗಳ ನೆರವಿನಿಂದ ಎರಡು ಸ್ಥಾನಗಳನ್ನು ಗೆಲ್ಲುವ ಅವಕಾಶ ಇದೆ.

ಹಕ್ಕೊತ್ತಾಯ ಮಂಡಿಸಿರುವ ತೃಣಮೂಲ ಕಾಂಗ್ರೆಸ್

‘ಸಿಂಧೂರ ಚರ್ಚೆಗೆ ವಿಶೇಷ ಅಧಿವೇಶನ’

ನವದೆಹಲಿ (ಪಿಟಿಐ): ‘ಆಪರೇಷನ್ ಸಿಂಧೂರ’ ಕಾರ್ಯಾಚರಣೆ ಮತ್ತು ಸಂಬಂಧಿತ ಬೆಳವಣಿಗೆ ಕುರಿತು ಚರ್ಚಿಸಲು ಸಂಸತ್ತಿನ ವಿಶೇಷ ಅಧಿವೇಶನ ಕರೆಯಬೇಕು ಎಂದು ತೃಣಮೂಲ ಕಾಂಗ್ರೆಸ್ ಆಗ್ರಹಪಡಿಸಿದೆ.

ಮುಂಗಾರು ಅಧಿವೇಶನ ಬಹುತೇಕ ಜುಲೈ ತಿಂಗಳು ನಡೆಯುವ ಸಂಭವವಿದೆ. ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿ ಕೃತ್ಯದ ನಂತರ ವಿಶೇಷ ಅಧಿವೇಶನ ಕರೆಯುವಂತೆ ಪ್ರತಿಪಕ್ಷಗಳು ಹಕ್ಕೊತ್ತಾಯ ಮಂಡಿಸಿವೆ.



ಸಾಗರಿಕಾ

ಆಪರೇಷನ್ ಸಿಂಧೂರ ಕುರಿತು ನಡೆದಿದ್ದ ಸರ್ವ-ಪಕ್ಷಗಳ ಸಭೆಯಲ್ಲಿಯೂ ಈ ಒತ್ತಡ ಕೇಳಿಬಂದಿತ್ತು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ,



ರಾಜ್ಯಸಭೆಯಲ್ಲಿ ತೃಣಮೂಲ ಕಾಂಗ್ರೆಸ್ ಪಕ್ಷದ ಉಪ ನಾಯಕರಾಗಿರುವ ಸಾಗರಿಕಾ ಘೋಷ್ ಅವರು, ಪಹಲ್ಗಾಮ್ ದಾಳಿಯ ನಂತರ ಹಾಗೂ ಸಿಂಧೂರ ಕಾರ್ಯಾಚರಣೆಗೆ ಸಂಬಂಧಿಸಿ ಪಕ್ಷವು ಸರ್ಕಾರಕ್ಕೆ ಪೂರ್ಣವಾಗಿ ಬೆಂಬಲವಾಗಿ ನಿಂತಿತ್ತು ಎಂದು ಉಲ್ಲೇಖಿಸಿದರು.

‘ಸರ್ಕಾರಕ್ಕೆ ಸಂಪೂರ್ಣ ಬೆಂಬಲ ನೀಡಿದ್ದ ಪಕ್ಷವಾಗಿ ಈಗ ಸಂಸತ್ತಿನ ವಿಶೇಷ ಅಧಿವೇಶನ ಕರೆಯಬೇಕು ಎಂಬ ಸಂಸದ ಕಪಿಲ್ ಸಿಬಲ್ ಅವರ ಬೇಡಿಕೆಗೂ ಪಕ್ಷವು ಬೆಂಬಲಿಸುತ್ತದೆ. ಮುಂಗಾರು ಅಧಿವೇಶನಕ್ಕೂ ಮೊದಲೇ ಜೂನ್‌ನಲ್ಲೇ ವಿಶೇಷ ಅಧಿವೇಶನ ಕರೆಯಬೇಕು ಎಂಬುದು ನಮ್ಮ ಆಗ್ರಹ’ ಎಂದು ಸಾಗರಿಕಾ ತಿಳಿಸಿದರು.

ವಧುವಿಗೆ ‘ಸಿಂಧೂರ’ದ ಉಡುಗೊರೆ

ಹರ್ದೋಯಿ (ಉತ್ತರ ಪ್ರದೇಶ)(ಪಿಟಿಐ): ಸಾಮೂಹಿಕ ವಿವಾಹ ಯೋಜನೆಯಡಿ ವಧುವಿಗೆ ‘ಸಿಂಧೂರ ದಾನಿ’ಯ ಉಡುಗೊರೆ ನೀಡಲಾಗುವುದು ಎಂದು ಉತ್ತರ ಪ್ರದೇಶದ ಸಮಾಜ ಕಲ್ಯಾಣ ಸಚಿವ ಅಸೀಮ್ ಅರುಣ್ ಬುಧವಾರ ಪ್ರಕಟಿಸಿದರು.

‘ಉಡುಗೊರೆಯು ಆರ್ಥಿಕ ಮೌಲ್ಯದಲ್ಲಿ ಸಣ್ಣದಾಗಿದ್ದರೂ ವಿವಾಹದಲ್ಲಿ ಪ್ರಮುಖ ಪಾತ್ರ ವಹಿಸಲಿದೆ’ ಎಂದು ಕಾರ್ಯಕ್ರಮವೊಂದರಲ್ಲಿ ಹೇಳಿದರು.


ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ರೂಪಿಸಿರುವ ‘ಮುಖ್ಯಮಂತ್ರಿ ಸಾಮೂಹಿಕ ವಿವಾಹ ಯೋಜನೆ’ಯು ಸಂಪ್ರದಾಯ ಮತ್ತು ಮಹಿಳೆಯರ ಘನತೆ ಹೆಚ್ಚಿಸುವಲ್ಲಿ ರಾಜ್ಯದ ಬದ್ಧತೆಯನ್ನು ಪ್ರತಿಬಿಂಬಿಸುತ್ತಿದೆ ಎಂದಿದ್ದಾರೆ.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು


ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,826
ಇಂದಿನ ಅಂತ್ಯ	24,752
▼	73
ದಿನದ ಕನಿಷ್ಠ	24,737

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹605
12 ಕ್ಕೆ	₹80
ಮೈಸೂರು	
100ಕ್ಕೆ	₹610

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಪ್ರ.ಕಿ)	₹295-543
ದ್ವಿತಳಿ (ಪ್ರ.ಕಿ)	₹389-752

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್‌-4	₹196
ಆರ್‌ಎಸ್‌ಎಸ್‌-5	₹191.50
ಗುಡ್ ಲಾಟ್	₹181.50

(ಪ್ರತಿ ಕೆ.ಜಿಗೆ)

ಕೊಬ್ಬರಿ ಧಾರಣೆ



(ಕ್ವಿಂಟಲ್‌ಗೆ)

ಅರಸೀಕೆರೆ	₹20500-21000
ದಾವಣಗೆರೆ	₹15000-15000
ತುಮಕೂರು	₹11500-16500

ಅಡಿಕೆ ಧಾರಣೆ (₹ಗಳಲ್ಲಿ)

ಕುಮಟ		ರಾಶಿ	48509-58589	ರಾಶಿ	41609-46299
ಚಾಲಿ	38899-43699	ಸರಕು	55599-85029	ತಟ್ಟಿಬೆಟ್ಟೆ	28689-44669
ಚಿಪ್ಪು	27569-32099	ಸಿದ್ದಾಪುರ		ಶಿರಸಿ	
ಕೋಕ	7089-19999	ಬಿಳಿಗೋಟು	25009-32899	ಬೆಟ್ಟೆ	26461-42909
ಫ್ಯಾಕ್ಟರಿ	6099-25749	ಚಾಲಿ	35469-42749	ಬಿಳಿಗೋಟು	17899-34234
ಹೊಸಚಾಲಿ	37699-44599	ಕೋಕ	14689-28899	ಚಾಲಿ	35899-43941
ಶಿವಮೊಗ್ಗ		ಹಳೆಚಾಲಿ	40899-40899	ಕೆಂಪುಗೋಟು	11099-26609
ಬೆಟ್ಟೆ	50509-58300	ಕೆಂಪುಗೋಟು	22709-24109	ರಾಶಿ	42399-47609
ಗೊರಬಲು	17590-30009				

ಸುದ್ದಿ 2 ನಿಮಿಷ

2ನೇ ದಿನವೂ ಷೇರುಪೇಟೆ ಇಳಿಕೆ

ಮುಂಬೈ (ಪಿಟಿಐ): ಸತತ ಎರಡನೇ ದಿನವಾದ ಬುಧವಾರದ ವಹಿವಾಟಿನಲ್ಲಿಯೂ ಷೇರು ಸೂಚ್ಯಂಕಗಳು ಇಳಿಕೆ ಕಂಡಿವೆ.

ಎಫ್‌ಎಂಸಿಜಿ ಮತ್ತು ಐಟಿಸಿ ಷೇರುಗಳ ಮೌಲ್ಯ ಇಳಿಕೆ ಕಂಡಿದ್ದರಿಂದ ಷೇರುಪೇಟೆಯಲ್ಲಿ ನಕಾರಾತ್ಮಕ ವಹಿವಾಟು ನಡೆದಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 239 ಅಂಶ ಇಳಿಕೆ ಕಂಡು, 81,312 ಅಂಶಗಳಲ್ಲಿ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 73 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು.



ಐಟಿಸಿ ಷೇರಿನ ಮೌಲ್ಯದಲ್ಲಿ ಶೇ 3ರಷ್ಟು ಇಳಿಕೆಯಾಗಿದೆ. ಇಂಡಸ್ ಇಂಡ್ ಬ್ಯಾಂಕ್, ನೆಸ್ಲೆ, ಅಲ್ಟ್ರಾಟೆಕ್ ಸಿಮೆಂಟ್, ಮಹೀಂದ್ರ ಆ್ಯಂಡ್ ಮಹೀಂದ್ರ, ಪವರ್ ಗ್ರಿಡ್, ಏಷ್ಯನ್ ಪೇಂಟ್ಸ್, ಸನ್ ಫಾರ್ಮಾ, ಟೆಕ್ ಮಹೀಂದ್ರ ಷೇರಿನ ಮೌಲ್ಯ ಇಳಿಕೆಯಾಗಿದೆ.

ಬಜಾಜ್ ಫೈನಾನ್ಸ್, ಭಾರ್ತಿ ಏರ್‌ಟೆಲ್, ಐಸಿಐಸಿಐ ಬ್ಯಾಂಕ್, ಅದಾನಿ ಪೋರ್ಟ್ಸ್, ಎಚ್‌ಸಿಎಲ್ ಟೆಕ್ ಷೇರಿನ ಮೌಲ್ಯ ಏರಿಕೆ ಕಂಡಿದೆ.

ಎಲ್‌ಐಸಿ ಷೇರಿನ ಮೌಲ್ಯ ಶೇ 8ರಷ್ಟು ಏರಿಕೆ: ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಷೇರಿನ ಮೌಲ್ಯದಲ್ಲಿ ಶೇ 8ರಷ್ಟು ಹೆಚ್ಚಳವಾಗಿದೆ. ಮಾರುಕಟ್ಟೆ ಬಂಡವಾಳ ಮೌಲ್ಯಕ್ಕೆ (ಎಂ–ಕ್ಯಾಪ್) ₹45,223 ಕೋಟಿ ಸೇರ್ಪಡೆಯಾಗಿದೆ. ಒಟ್ಟು ಎಂ–ಕ್ಯಾಪ್ ₹5.96 ಲಕ್ಷ ಕೋಟಿ ಆಗಿದೆ.

ಕೈಗಾರಿಕಾ ಉತ್ಪಾದನೆ ಇಳಿಕೆ

ನವದೆಹಲಿ (ಪಿಟಿಐ): ದೇಶದ ಕೈಗಾರಿಕಾ ಉತ್ಪಾದನಾ ಬೆಳವಣಿಗೆಯು ಏಪ್ರಿಲ್ ತಿಂಗಳಲ್ಲಿ ಶೇ 2.7ಕ್ಕೆ ಇಳಿಕೆಯಾಗಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಬುಧವಾರ ತಿಳಿಸಿದೆ.

ತಯಾರಿಕಾ, ಗಣಿಗಾರಿಕೆ ಮತ್ತು ವಿದ್ಯುತ್ ಉತ್ಪಾದನೆಯಲ್ಲಿ ಇಳಿಕೆಯಾಗಿದೆ. ಹೀಗಾಗಿ, ಒಟ್ಟಾರೆ ಬೆಳವಣಿಗೆ ಕುಂಠಿತವಾಗಿದೆ ಎಂದು ತಿಳಿಸಿದೆ. ಕಳೆದ ವರ್ಷದ ಏಪ್ರಿಲ್‌ನಲ್ಲಿ ಕೈಗಾರಿಕಾ ಉತ್ಪಾದನೆಯು ಶೇ 5.2ರಷ್ಟು ದಾಖಲಾಗಿತ್ತು. ಪ್ರಸಕ್ತ ವರ್ಷದ ಮಾರ್ಚ್‌ನಲ್ಲಿ ಶೇ 3.9ರಷ್ಟಿತ್ತು.


ಕಳೆದ ವರ್ಷದ ಏಪ್ರಿಲ್‌ನಲ್ಲಿ ತಯಾರಿಕಾ ವಲಯ ಶೇ 4.2, ಗಣಿಗಾರಿಕೆ ಶೇ 6.8 ಮತ್ತು ವಿದ್ಯುತ್ ಉತ್ಪಾದನೆ ಶೇ 10.2ರಷ್ಟಿತ್ತು. ಈ ಬಾರಿ ಕ್ರಮವಾಗಿ ಶೇ 3.4, ಶೇ 0.2 ಮತ್ತು ಶೇ 1ರಷ್ಟಕ್ಕೆ ಇಳಿದಿದೆ.

ಕೈಗಾರಿಕಾ ಉತ್ಪಾದನಾ ಸೂಚ್ಯಂಕ (ಐಐಪಿ) ಆಧಾರದ ಮೇಲೆ ಈ ಪ್ರಗತಿಯನ್ನು ಲೆಕ್ಕ ಹಾಕಲಾಗುತ್ತದೆ.

₹3 ಲಕ್ಷ ಅಲ್ಪಾವಧಿ ಕೃಷಿ ಸಾಲ ಪಡೆಯಲು ರೈತರಿಗೆ ಅನುಕೂಲ

ಬಡ್ಡಿ ಸಹಾಯಧನ ಅಬಾಧಿತ

ಪ್ರಜಾವಾಣಿ ವಾರ್ತೆ



ನವದೆಹಲಿ: 2025-26ನೇ ಸಾಲಿಗೆ ‘ಮಾರ್ಪಡಿಸಿದ ಬಡ್ಡಿ ಸಹಾಯಧನ ಯೋಜನೆ’ಯನ್ನು (ಎಂಐಎಸ್‌ಎಸ್) ಮುಂದುವರಿಸಲು ಕೇಂದ್ರ ಸರ್ಕಾರ ಬುಧವಾರ ಅನುಮೋದನೆ ನೀಡಿದೆ. ಈ ಯೋಜನೆಯಡಿ ರೈತರು ಕಿಸಾನ್ ಕ್ರೆಡಿಟ್ ಕಾರ್ಡ್‌ಗಳ (ಕೆಸಿಸಿ) ಮೂಲಕ ಕೈಗೆಟುಕುವ ದರದಲ್ಲಿ ಅಲ್ಪಾವಧಿ ಸಾಲ ಪಡೆಯುತ್ತಾರೆ.

2025-26ನೇ ಆರ್ಥಿಕ ವರ್ಷಕ್ಕೆ ಈ ಯೋಜನೆಯನ್ನು ಅಸ್ತಿತ್ವದಲ್ಲಿರುವ ಶೇ 1.5ರಷ್ಟು ಬಡ್ಡಿ ಸಹಾಯಧನ ದೊಂದಿಗೆ ಮುಂದುವರಿಸಲು ಸಚಿವ ಸಂಪುಟ ನಿರ್ಧಾರ ತೆಗೆದುಕೊಂಡಿದೆ ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಮಾಹಿತಿ ತಿಳಿಸಿದರು.

ಈ ಯೋಜನೆಯ ಮುಂದುವರಿಕೆಯಿಂದ ಖಜಾನೆಗೆ ₹15,640 ಕೋಟಿ ವೆಚ್ಚವಾಗಲಿದೆ. ದೇಶದಲ್ಲಿ 7.75 ಕೋಟಿಗೂ ಹೆಚ್ಚು ಕಿಸಾನ್ ಕ್ರೆಡಿಟ್ ಕಾರ್ಡ್ ಖಾತೆಗಳಿವೆ.

ಈ ಯೋಜನೆಯಡಿ ರೈತರು ಕಿಸಾನ್ ಕ್ರೆಡಿಟ್ ಕಾರ್ಡ್‌ಗಳ ಮೂಲಕ ಶೇ 7ರ ಬಡ್ಡಿದರದಲ್ಲಿ ₹3 ಲಕ್ಷದವರೆಗೆ ಅಲ್ಪಾವಧಿಯ ಕೃಷಿ ಸಾಲ ಪಡೆಯುತ್ತಾರೆ. ಸಾಲ ನೀಡುವ ಸಂಸ್ಥೆಗಳಿಗೆ ಶೇ 1.5ರ ಬಡ್ಡಿ ಸಹಾಯಧನ ನೀಡಲಾಗುತ್ತದೆ. ಹೆಚ್ಚುವರಿಯಾಗಿ ಸಕಾಲಕ್ಕೆ ಸಾಲ ಮರುಪಾವತಿಸುವ ರೈತರು ಶೇ 3ರ ವರೆಗಿನ ಪ್ರೋತ್ಸಾಹ ಧನಕ್ಕೆ ಅರ್ಹರಾಗುತ್ತಾರೆ. ಅಂತಹವರಿಗೆ ಕೆಸಿಸಿ ಅಡಿ ಶೇ 4ರ ಬಡ್ಡಿದರದಲ್ಲಿ ಸಾಲ ಸಿಗಲಿದೆ ಎಂದು ತಿಳಿಸಿದರು.

ಪಶುಸಂಗೋಪನೆ ಅಥವಾ ಮೀನುಗಾರಿಕೆಗೆ ಪ್ರತ್ಯೇಕವಾಗಿ ತೆಗೆದುಕೊಂಡ ಸಾಲಗಳಿಗೆ ಬಡ್ಡಿ ಸೌಲಭ್ಯವು ₹2 ಲಕ್ಷದವರೆಗೆ ಅನ್ವಯವಾಗುತ್ತದೆ ಎಂದು ಹೇಳಿದ್ದಾರೆ.

₹10.5 ಲಕ್ಷ ಕೋಟಿ ಕೆಸಿಸಿ ಸಾಲ ವಿತರಣೆ

ದೇಶದಲ್ಲಿ ಕೃಷಿ ಉತ್ಪಾದಕತೆ ಹೆಚ್ಚಳ ಮತ್ತು ಅತಿಸಣ್ಣ, ಸಣ್ಣ ರೈತರನ್ನು ಬ್ಯಾಂಕಿಂಗ್ ವ್ಯವಸ್ಥೆಗೆ ಸೇರ್ಪಡೆಗೊಳಿಸುವ ಉದ್ದೇಶದಿಂದ ಈ ಯೋಜನೆಯನ್ನು ವಿಸ್ತರಿಸಲಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

2014ರಲ್ಲಿ ₹4.26 ಲಕ್ಷ ಕೋಟಿ ಕೆಸಿಸಿ ಸಾಲ ನೀಡಲಾಗಿತ್ತು. 2024ರ ಡಿಸೆಂಬರ್ ಅಂತ್ಯಕ್ಕೆ ಈ ಸಾಲದ ಮೊತ್ತವು ₹10.5 ಲಕ್ಷ ಕೋಟಿಗೆ ಮುಟ್ಟಿದೆ ಎಂದು ಹೇಳಿದೆ.

2013–14ರಲ್ಲಿ ಕೃಷಿ ವಲಯಕ್ಕೆ ನೀಡಿದ್ದ ಸಾಲದ ಮೊತ್ತವು ₹7.3 ಲಕ್ಷ ಕೋಟಿ ಇತ್ತು. 2023–24ರಲ್ಲಿ ₹25.49 ಲಕ್ಷ ಕೋಟಿಗೆ ತಲುಪಿದೆ ಎಂದು ತಿಳಿಸಿದೆ.


ಪ್ರಸ್ತುತ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ರೆಪೊ ದರವನ್ನು ಕಡಿತಗೊಳಿಸಿದೆ. ಬ್ಯಾಂಕ್‌ಗಳ ಈಗಿರುವ ಮಾರ್ಜಿನಲ್ ಕಾಸ್ಟ್ ಆಫ್ ಫಂಡ್ಸ್ ಆಧರಿತ ಸಾಲ (ಎಂಸಿಎಲ್‌ಆರ್) ಮತ್ತು ರೆಪೊ ದರದ ಸ್ಥಿತಿಯನ್ನು ಅವಲೋಕಿಸಬೇಕಿದೆ. ಸಹಕಾರ ಬ್ಯಾಂಕ್‌ಗಳು ರೈತರಿಗೆ ಅಲ್ಪಾವಧಿ ಕೃಷಿ ಸಾಲ ಒದಗಿಸಬೇಕು ಎಂದಾದರೆ ಅವುಗಳು ನೀಡುವ ಸಾಲಕ್ಕೆ ಶೇ 1.5ರಷ್ಟು ಬಡ್ಡಿ ವಿನಾಯಿತಿಯನ್ನು ಮುಂದುವರಿಸಬೇಕಿದೆ ಎಂದು ವಿವರಿಸಿದೆ.

‘ಎಚ್‌ಎಎಲ್ ಸ್ಥಳಾಂತರಿಸಲು ಕೋರಿಲ್ಲ’

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಕರ್ನಾಟಕದಲ್ಲಿನ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ಅನ್ನು ಆಂಧ್ರ ಪ್ರದೇಶಕ್ಕೆ ಸ್ಥಳಾಂತರಿಸುವ ಪ್ರಯತ್ನಗಳು ನಡೆಯುತ್ತಿವೆ ಎಂಬ ವರದಿಗಳು ಮತ್ತು ಈ ಕುರಿತ ರಾಜಕೀಯ ಆರೋಪಗಳನ್ನು ಆಂಧ್ರ ಪ್ರದೇಶದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ತಳ್ಳಿಹಾಕಿದ್ದಾರೆ.

ಕಡಪದಲ್ಲಿ ಬುಧವಾರ ನಡೆದ ‘ಮಹಾನಾಡು’ ಸಭೆಯಲ್ಲಿ ಮಾತನಾಡಿದ ಅವರು, ‘ನಾನು ಆಂಧ್ರ ಪ್ರದೇಶವನ್ನು ರಕ್ಷಣಾ ಉತ್ಪಾದನಾ ತಾಣವನ್ನಾಗಿ ಅಭಿವೃದ್ಧಿಪಡಿಸುವಂತೆ ಕೇಂದ್ರವನ್ನು ಕೋರಿದ್ದೇನೆಯೇ ಹೊರತು, ಇತರ ರಾಜ್ಯಗಳಲ್ಲಿ ಅಸ್ತಿತ್ವದಲ್ಲಿರುವ ಸಂಸ್ಥೆಗಳನ್ನು ಸ್ಥಳಾಂತರಿಸುವಂತೆ ಮನವಿ ಮಾಡಿಲ್ಲ’ ಎಂದು ಸ್ಪಷ್ಟಪಡಿಸಿದರು.



ಎನ್. ಚಂದ್ರಬಾಬು ನಾಯ್ಡು

‘ಬೆಂಗಳೂರಿನಲ್ಲಿರುವ ಎಚ್‌ಎಎಲ್ ಅನ್ನು ಆಂಧ್ರಕ್ಕೆ ಸ್ಥಳಾಂತರಿಸುವಂತೆ ನಾನು ಎಂದಿಗೂ ಕೇಳಿಲ್ಲ. ಎಚ್‌ಎಎಲ್ ಒಂದು ಬೃಹತ್ ಕಾರ್ಯತಂತ್ರದ ಸೌಲಭ್ಯ ಹೊಂದಿರುವ ಸಂಸ್ಥೆ. ಅಂಥದ್ದನ್ನು ಸ್ಥಳಾಂತರಿಸಲು ಸಾಧ್ಯವಿಲ್ಲ ಮತ್ತು ಸ್ಥಳಾಂತರಿಸಬಾರದು’ ಎಂದು ಅವರು ಪ್ರತಿಪಾದಿಸಿದರು.

ಭಾರತದ ಮಾರುಕಟ್ಟೆಯಿಂದ ಹೊರಹೋಗಲ್ಲ: ನಿಸ್ಸಾನ್

ನವದೆಹಲಿ (ಪಿಟಿಐ): ‘ಭಾರತದ ಆಟೊಮೊಬೈಲ್ ಮಾರುಕಟ್ಟೆಯಲ್ಲಿ ಕಂಪನಿಯು ಗಟ್ಟಿಯಾಗಿ ಬೇರೂರಿದೆ. ಹಾಗಾಗಿ, ಇಲ್ಲಿಂದ ಹೊರಹೋಗುವ ಯಾವುದೇ ಉದ್ದೇಶ ಹೊಂದಿಲ್ಲ’ ಎಂದು ನಿಸ್ಸಾನ್ ಮೋಟರ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಸೌರಭ್ ವತ್ಸ ಹೇಳಿದ್ದಾರೆ.



ಮುಂದಿನ ಎರಡು ವರ್ಷದೊಳಗೆ ಹೊಸ ಕಾರುಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲು ನಿರ್ಧರಿಸಲಾಗಿದೆ. ಹಾಲಿ ಇರುವ ಡೀಲರ್‌ಶಿಪ್‌ಗೆ ಈ ವರ್ಷದಲ್ಲಿ ಹೊಸದಾಗಿ 20 ಡೀಲರ್‌ಶಿಪ್‌ಗಳನ್ನು ಸೇರ್ಪಡೆಗೊಳಿಸಲು ನಿರ್ಧರಿಸಲಾಗಿದೆ ಎಂದು ತಿಳಿಸಿದ್ದಾರೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶೀಯ ಹಾಗೂ ಜಾಗತಿಕ ಮಾರುಕಟ್ಟೆಯಲ್ಲಿ 1 ಲಕ್ಷಕ್ಕೂ ಹೆಚ್ಚು ವಾಹನಗಳ ಮಾರಾಟಕ್ಕೆ ತೀರ್ಮಾನಿಸಲಾಗಿದೆ ಎಂದು ತಿಳಿಸಿದ್ದಾರೆ.

‘ಆರು ದಶಕದಿಂದಲೂ ಭಾರತದ ಮಾರುಕಟ್ಟೆಯಲ್ಲಿ ನಿಸ್ಸಾನ್ ಕಾರ್ಯಾಚರಣೆ ನಡೆಸುತ್ತಿದೆ. ಹಾಗಾಗಿ, ಇಲ್ಲಿಂದ ಹೊರಗೋಗಲಿದೆ ಎಂಬುದು ಕೇವಲ ಊಹಾಪೋಹವಾಗಿದೆ’ ಎಂದು ಹೇಳಿದ್ದಾರೆ.

ಮಧ್ಯಂತರ ವ್ಯಾಪಾರ ಒಪ್ಪಂದ: ಜೂನ್ 25ರೊಳಗೆ ಪೂರ್ಣ?

ನವದೆಹಲಿ (ಪಿಟಿಐ): ಭಾರತ ಮತ್ತು ಅಮೆರಿಕ ನಡುವಿನ ದ್ವಿಪಕ್ಷೀಯ ವ್ಯಾಪಾರ ಕುರಿತ ಮಧ್ಯಂತರ ಒಪ್ಪಂದ ಪ್ರಕ್ರಿಯೆಯು ಜೂನ್ 25ರೊಳಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ ಎಂದು ಮೂಲಗಳು ತಿಳಿಸಿವೆ.

ಅಮೆರಿಕದ ಅಧಿಕಾರಿಗಳ ತಂಡವು ವ್ಯಾಪಾರ ಒಪ್ಪಂದ ಕುರಿತಂತೆ ಚರ್ಚಿಸಲು ಮುಂದಿನ ತಿಂಗಳು ಭಾರತಕ್ಕೆ ಭೇಟಿ ನೀಡುವ ಸಾಧ್ಯತೆಯಿದೆ. ಈಗಾಗಲೇ, ಒಪ್ಪಂದ ಕುರಿತ ಮಾತುಕತೆ ಪ್ರಗತಿಯಲ್ಲಿದೆ. ಹಾಗಾಗಿ, ಯಾವ ವಿಷಯಗಳ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳಬೇಕು ಎಂಬ ಹಾದಿಯೂ ಸುಗಮವಾಗಿದೆ ಎಂದು ಹೇಳಿವೆ.

ಕೇಂದ್ರ ವಾಣಿಜ್ಯ ಇಲಾಖೆಯ ವಿಶೇಷ ಕಾರ್ಯದರ್ಶಿ ರಾಜೇಶ್ ಅಗರವಾಲ್ ಅವರು ಭಾರತದ ಪರ ಮುಖ್ಯ ಸಮಾಲೋಚಕರಾಗಿದ್ದಾರೆ. ಕಳೆದ ವಾರ ವಾಷಿಂಗ್ಟನ್‌ಗೆ ಭೇಟಿ ನೀಡಿದ್ದ ವೇಳೆ ಪ್ರಸ್ತಾವಿತ ಒಪ್ಪಂದದ ಬಗ್ಗೆ ಅಲ್ಲಿನ ಅಧಿಕಾರಿಗಳ ಜೊತೆಗೆ ಚರ್ಚಿಸಿದ್ದಾರೆ.

ಅಲ್ಲದೆ, ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಕೂಡ ಕಳೆದ ವಾರ ಅಮೆರಿಕಕ್ಕೆ ಭೇಟಿ ನೀಡಿ ಮಾತುಕತೆ ನಡೆಸಿದ್ದರು.

ಭಾರತದ ಮೇಲೆ ಅಮೆರಿಕವು ಶೇ 26ರಷ್ಟು ಪ್ರತಿ ಸುಂಕ ಹೇರಿದ್ದು, ಇದರ ಜಾರಿಗೆ ಜುಲೈ 9ರ ವರೆಗೆ ತಾತ್ಕಾಲಿಕ ವಿರಾಮ ನೀಡಿದೆ. ಈ ಗಡುವಿನೊಳಗೆ ಮಧ್ಯಂತರ ಒಪ್ಪಂದವನ್ನು ಅಂತಿಮಗೊಳಿಸುವುದು ಉಭಯ ರಾಷ್ಟ್ರಗಳ ಗುರಿಯಾಗಿದೆ.

ದೂರು ವಜಾಗೊಳಿಸಿದ ಲೋಕಪಾಲ ಸಂಸ್ಥೆ

ಮಾಧವಿ ಪುರಿಗೆ ಕ್ಲೀನ್‌ಚಿಟ್

ನವದೆಹಲಿ (ಪಿಟಿಐ): ಹಿತಾಸಕ್ತಿ ಸಂಘರ್ಷ ಆರೋಪ ಕುರಿತಂತೆ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ಮಾಜಿ ಅಧ್ಯಕ್ಷೆ ಮಾಧವಿ ಪುರಿ ಬುಚ್ ವಿರುದ್ಧ ದಾಖಲಾಗಿದ್ದ ದೂರುಗಳನ್ನು ಭ್ರಷ್ಟಾಚಾರ ನಿಗ್ರಹ ಸಂಸ್ಥೆಯಾದ ಲೋಕಪಾಲ ಬುಧವಾರ ವಜಾಗೊಳಿಸಿದೆ.

ಅಮೆರಿಕದ ಶಾರ್ಟ್ ಸೆಲ್ಲರ್ ಕಂಪನಿ ಹಿಂಡೆನ್‌ಬರ್ಗ್ ವರದಿ ಆಧರಿಸಿ ಮಾಧವಿ ಅವರ ವಿರುದ್ಧ ಎರಡು ದೂರು ದಾಖಲಾಗಿದ್ದವು. ಈ ಪೈಕಿ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷದ ಸಂಸದೆ ಮಹುವಾ ಮೊಯಿತ್ರಾ ಸಲ್ಲಿಸಿದ್ದ ದೂರು ಕೂಡ ಒಂದಾಗಿದೆ.



ಮಾಧವಿ ಪುರಿ ಬುಚ್

ಈ ದೂರುಗಳ ಬಗ್ಗೆ ಲೋಕಪಾಲ ಮುಖ್ಯಸ್ಥರಾದ ನ್ಯಾಯಮೂರ್ತಿ ಎ.ಎಂ. ಖಾನ್ವಿಲ್ಕರ್ ಅವರಿದ್ದ ಆರು ಸದಸ್ಯರ ಪೀಠವು ವಿಚಾರಣೆ ನಡೆಸಿತು.


ದೂರುಗಳಿಗೆ ಸಂಬಂಧಿಸಿದಂತೆ ದೂರುದಾರರು ಪರಿಶೀಲಿಸಬಹುದಾದ ಪೂರಕ ದಾಖಲೆಗಳನ್ನು ಸಲ್ಲಿಸಿಲ್ಲ. ಕೇವಲ ಹಿಂಡೆನ್‌ಬರ್ಗ್ ವರದಿ ಆಧಾರದ ಮೇಲೆ ಪೂರ್ವಗ್ರಹಿಕೆಯಿಂದ ಕೂಡಿದ ದೂರುಗಳನ್ನು ಸಲ್ಲಿಸಿದ್ದಾರೆ. ಹಾಗಾಗಿ, ವಜಾಗೊಳಿಸಲಾಗಿದೆ ಎಂದು ತಿಳಿಸಿದೆ.

ಅದಾನಿ ಸಮೂಹದ ಸಾಗರೋತ್ತರ ಹೂಡಿಕೆಯಲ್ಲಿ ಮಾಧವಿ ಮತ್ತು ಅವರ ಪತಿ ಧವಳ್ ಬುಚ್ ಅವರು, ಸಾಗರ ಪಾಲುದಾರಿಕೆ ಹೊಂದಿದ್ದಾರೆ ಎಂದು ಹಿಂಡೆನ್‌ಬರ್ಗ್ ರಿಸರ್ಚ್ ಆರೋಪಿಸಿತ್ತು. ಇದನ್ನು ಬುಚ್ ದಂಪತಿ ಅಲ್ಲಗಳೆದಿದ್ದರು.

ರಸ್ತೆ ಸುರಕ್ಷತೆ ಕುರಿತ ಹಾಡು ಬಿಡುಗಡೆ ಶೀಘ್ರ

ನವದೆಹಲಿ (ಪಿಟಿಐ): ರಸ್ತೆ ಸುರಕ್ಷತೆ ಕುರಿತು ಅರಿವು ಮೂಡಿಸುವ ಹಾಡಿಗೆ ಹಿನ್ನೆಲೆ ಗಾಯಕ ಶಂಕರ್ ಮಹದೇವನ್ ಅವರು ಸಂಗೀತ ಸಂಯೋಜನೆ ಮಾಡಿದ್ದಾರೆ. ಶೀಘ್ರವೇ ಈ ಹಾಡನ್ನು 22 ಭಾಷೆಗಳಲ್ಲೂ ಬಿಡುಗಡೆ ಮಾಡಲಾಗುವುದು ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು,



ನಿತಿನ್ ಗಡ್ಕರಿ

‘ಸಾಮಾಜಿಕ ಜಾಲತಾಣಗಳಲ್ಲಿ ಈ ಹಾಡನ್ನು ಹಂಚಿಕೊಳ್ಳುವ ಮೂಲಕ ರಸ್ತೆ ಸುರಕ್ಷತೆ ಬಗ್ಗೆ ಜನರಲ್ಲಿ ಹೆಚ್ಚಿನ ಅರಿವು ಮೂಡಿಸಬೇಕಿದೆ’ ಎಂದರು. ಕಾರು ಚಾಲನೆ ವೇಳೆ ಕಡ್ಡಾಯವಾಗಿ ಸೀಟ್‌ಬೆಲ್ಟ್ ಧರಿಸಬೇಕಿದೆ. ರಸ್ತೆ ಸುರಕ್ಷತಾ ನಿಯಮಾವಳಿಗಳನ್ನು ಉಲ್ಲಂಘಿಸಬಾರದು ಎಂದರು.

ಹಮಾಸ್ ನಾಯಕ ಮೊಹಮ್ಮದ್ ಸಿನ್ವರ್ ಹತ್ಯೆ

ಕೈರೊ (ಎಪಿ): ‘ಹಮಾಸ್‌ನ ಸಶಸ್ತ್ರ ವಿಭಾಗದ ಮುಖ್ಯಸ್ಥ ಎಂದು ಹೇಳಲಾದ ಮೊಹಮ್ಮದ್ ಸಿನ್ವರ್‌ನನ್ನು ಹತ್ಯೆ ಮಾಡಲಾಗಿದೆ’ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಬುಧವಾರ ಹೇಳಿದ್ದಾರೆ.

ಗಾಜಾಪಟ್ಟಿ ಮೇಲೆ ಇತ್ತೀಚೆಗೆ ಇಸ್ರೇಲ್ ನಡೆಸಿದ ದಾಳಿಯಲ್ಲಿ ಈತ ಹತನಾಗಿದ್ದಾನೆ ಎಂದು ಅವರು ತಿಳಿಸಿದ್ದಾರೆ. ಆದರೆ ಇದನ್ನು ಹಮಾಸ್ ದೃಢಪಡಿಸಿಲ್ಲ.

2023ರ ಅಕ್ಟೋಬರ್ 7ರಂದು ಇಸ್ರೇಲ್ ವಿರುದ್ಧ ಹಮಾಸ್ ನಡೆಸಿದ ದಾಳಿಯ ಪ್ರಮುಖ ಸೂತ್ರದಾರ ಯಾಹ್ಯಾ ಸಿನ್ವರ್‌ನ ಕಿರಿಯ ಸಹೋದರನೇ ಮೊಹಮ್ಮದ್ ಸಿನ್ವರ್. ಈ ಕೃತ್ಯಕ್ಕೆ ಮೊಹಮ್ಮದ್ ಅಣ್ಣನಿಗೆ ನೆರವಾಗಿದ್ದ. ಇಸ್ರೇಲ್ ಪಡೆಗಳು 2024ರ ಅಕ್ಟೋಬರ್‌ನಲ್ಲಿ ಯಾಹ್ಯಾ ಸಿನ್ವರ್‌ನ ಹತ್ಯೆ ಮಾಡಿದ್ದವು.

ಸಂಸತ್ತಿನಲ್ಲಿ ಭಾಷಣ ಮಾಡಿದ ನೆತನ್ಯಾಹು, ಸಿನ್ವರ್ ಹತ್ಯೆಯನ್ನು ಪ್ರಸ್ತಾಪಿಸಿದರು. ‘ನಾವು 10 ಸಾವಿರ ಭಯೋತ್ಪಾದಕರನ್ನು ಕೊಂದಿದ್ದೇವೆ. ಮೊಹಮ್ಮದ್, ಇಸ್ಮಾಯಿಲ್, ಯಾಹ್ಯಾ ಸಿನ್ವರ್ ಮತ್ತು ಮೊಹಮ್ಮದ್ ಸಿನ್ವರ್ ಅವರನ್ನು ಕೊಂದಿದ್ದೇವೆ ಎಂದು ಮಾಹಿತಿ ನೀಡಿದರು.



ಚುನಾವಣೆಗೆ ಒತ್ತಾಯ

ಬಾಂಗ್ಲಾದೇಶದಲ್ಲಿ ಶೀಘ್ರ ಸಾರ್ವತ್ರಿಕ ಚುನಾವಣೆ ನಡೆಸುವಂತೆ ಒತ್ತಾಯಿಸಿ ಬಾಂಗ್ಲಾದೇಶ ರಾಷ್ಟ್ರೀಯವಾದಿ ಪಕ್ಷದ (ಬಿಎನ್‌ಪಿ) ಕಾರ್ಯಕರ್ತರು ಢಾಕಾದಲ್ಲಿ ಬುಧವಾರ ಬೃಹತ್ ರ್‍ಯಾಲಿ ನಡೆಸಿದರು –ಎಪಿ/ಪಿಟಿಐ ಚಿತ್ರ

₹15,441 ಕೋಟಿ ಹೂಡಿಕೆಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ₹15,441.17 ಕೋಟಿ ಮೊತ್ತದ ಬಂಡವಾಳ ಹೂಡಿಕೆ ಯೋಜನೆಗಳಿಗೆ ರಾಜ್ಯ ಉನ್ನತಮಟ್ಟದ ಒಪ್ಪಿಗೆ ನೀಡಿಕೆ ಸಮಿತಿಯು ಅನುಮೋದನೆ ನೀಡಿದ್ದು, ಯೋಜನೆಗಳು ಕಾರ್ಯಗತಗೊಂಡರೆ 5,277 ಜನರಿಗೆ ಉದ್ಯೋಗ ಲಭಿಸಲಿದೆ.

ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ 65ನೇ ಸಭೆಯಲ್ಲಿ ನಾಲ್ಕು ಹೊಸ, ವಿಸ್ತರಣಾ ಬಂಡವಾಳ ಹೂಡಿಕೆ ಪ್ರಸ್ತಾವ ಹಾಗೂ ಎರಡು ಹೆಚ್ಚುವರಿ ಬಂಡವಾಳ ಹೂಡಿಕೆ ಪ್ರಸ್ತಾವ ಸೇರಿದಂತೆ ಅನುಷ್ಠಾನದ ವಿವಿಧ ಹಂತದಲ್ಲಿರುವ ಒಟ್ಟು 10 ತಿದ್ದುಪಡಿ ಯೋಜನೆಗಳಿಗೆ ಅನುಮೋದನೆ ನೀಡಲಾಯಿತು.

ಶ್ರೀ ಸಿಮೆಂಟ್ ಲಿಮಿಟೆಡ್ ಸಂಸ್ಥೆಯ ₹2,406 ಕೋಟಿ ಹೊಸ ಬಂಡವಾಳ ಹೂಡಿಕೆಯ ಯೋಜನೆಯಿಂದ 300 ಉದ್ಯೋಗ, ದಾಲ್ಮಿಯಾ (ಭಾರತ್) ಸಂಸ್ಥೆಯ ₹3,000 ಕೋಟಿ ಹೂಡಿಕೆಯಿಂದ 570 ಉದ್ಯೋಗ ಹಾಗೂ ದಾಲ್ಮಿಯಾ (ಭಾರತ್) ಸಂಸ್ಥೆಯ ₹3,020 ಕೋಟಿ ಹೂಡಿಕೆಯಿಂದ 570 ಉದ್ಯೋಗ, ಎಂವೀ ಎನರ್ಜಿ ಸಂಸ್ಥೆಯ ₹5,495 ಕೋಟಿ ಹೂಡಿಕೆಯಿಂದ 2,508 ಉದ್ಯೋಗ ಸೃಷ್ಟಿಯಾಗಲಿದೆ. ನೂತನ ಹೂಡಿಕೆ ಪ್ರಸ್ತಾವಗಳಿಂದ ಒಟ್ಟು ₹13,921 ಕೋಟಿ ಹೂಡಿಕೆಯಾಗಲಿದ್ದು, 3,948 ಉದ್ಯೋಗ ಸೃಷ್ಟಿಯಾಗಲಿವೆ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಸಭೆಯ ನಂತರ ಮಾಹಿತಿ ನೀಡಿದರು.

ಸಚಿವರಾದ ಎನ್. ಚಲುವರಾಯಸ್ವಾಮಿ, ಪ್ರಿಯಾಂಕ್ ಖರ್ಗೆ, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಉಪಸ್ಥಿತರಿದ್ದರು.

14 ಬೆಳೆಗಳ ಕನಿಷ್ಠ ಬೆಂಬಲ ಬೆಲೆ ಹೆಚ್ಚಳ

ಒಂದನೇ ಪುಟದಿಂದ...

ಭತ್ತಕ್ಕೆ ನೀಡುವ ಕನಿಷ್ಠ ಬೆಂಬಲ ಬೆಲೆಯು ಪ್ರತಿ ಕ್ವಿಂಟಲ್‌ಗೆ ಶೇ 3 (₹69), ದ್ವಿದಳ ಧಾನ್ಯಗಳು ಹಾಗೂ ಎಣ್ಣೆಬೀಜಗಳ ಎಂಎಸ್‌ಪಿ ಶೇ 9ರಷ್ಟು ಹೆಚ್ಚಳವಾಗಿದೆ. ದೇಶೀಯ ಉತ್ಪಾದನೆ ಹೆಚ್ಚಿಸಲು ಹಾಗೂ ಆಮದು ಅವಲಂಬನೆ ಕಡಿಮೆ ಮಾಡಲು ದೊಡ್ಡ ಪ್ರಮಾಣದಲ್ಲಿ ಬೆಂಬಲ ಬೆಲೆ ಜಾಸ್ತಿ ಮಾಡಲಾಗಿದೆ ಎಂದರು.

‘14 ಬೆಳೆಗಳಿಗೆ ನೀಡಲಾಗುವ ಕನಿಷ್ಠ ಬೆಂಬಲ ಬೆಲೆಯು ಉತ್ಪಾದನೆ ವೆಚ್ಚದ ಒಂದೂವರೆ ಪಟ್ಟು ಇರಲಿದೆ. 2018ರಲ್ಲಿ ಮಂಡಿಸಿದ ಬಜೆಟ್‌ನಲ್ಲಿ ಈ ಕುರಿತ ಸ್ಪಷ್ಟ ನಿರ್ಧಾರವನ್ನು ಕೇಂದ್ರ ಸರ್ಕಾರ ಕೈಗೊಂಡಿತ್ತು. ಆ ನೀತಿಗೆ ಅನುಗುಣವಾಗಿ ಸಂಪುಟ ಸಭೆಯಲ್ಲಿ ನಿರ್ಧಾರ ತೆಗೆದುಕೊಳ್ಳಲಾಗಿದೆ’ ಎಂದು ಅವರು ಮಾಹಿತಿ ನೀಡಿದರು.

ಕಳೆದ 10-11 ವರ್ಷಗಳಲ್ಲಿ, ಕೃಷಿ ವೆಚ್ಚ ಮತ್ತು ಬೆಲೆಗಳ ಆಯೋಗದ ಶಿಫಾರಸಿಗೆ ಅನುಗುಣವಾಗಿ 14 ಬೆಳೆಗಳ ಎಂಎಸ್‌ಪಿಯಲ್ಲಿ ಭಾರಿ ಹೆಚ್ಚಳವಾಗಿದೆ ಎಂದು ಅವರು ಹೇಳಿದರು.

ವರ್ಮಾ– ವಾಗ್ದಂಡನೆ ನಿಲುವಳಿ: ವಿಪಕ್ಷಗಳಿಗೆ ಸಿಪಿಐ ಸಂಸದ ಪತ್ರ

ನವದೆಹಲಿ (ಪಿಟಿಐ): ಅಲಹಾಬಾದ್ ಹೈಕೋರ್ಟ್ ನ್ಯಾಯಮೂರ್ತಿ ಯಶವಂತ ವರ್ಮಾ ಅವರ ದೆಹಲಿಯಲ್ಲಿನ ಅಧಿಕೃತ ನಿವಾಸದಲ್ಲಿ ಸುಟ್ಟ ನಗದು ಪತ್ತೆಯಾದ ಪ್ರಕರಣಕ್ಕೆ ಸಂಬಂಧಿಸಿ ಅವರ ವಿರುದ್ಧ ವಾಗ್ದಂಡನೆಗೆ ನಿಲುವಳಿ ಮಂಡಿಸಲು ಬೆಂಬಲ ನೀಡುವಂತೆ ಸಿಪಿಐ ಸಂಸದ ಪಿ. ಸಂತೋಷ್ ಕುಮಾರ್ ಅವರು ಎಲ್ಲ ರಾಜಕೀಯ ಪಕ್ಷಗಳಿಗೆ ಪತ್ರ ಬರೆದಿದ್ದಾರೆ.

‘ವರ್ಮಾ ವಿರುದ್ಧದ ಆರೋಪಗಳು ಸಾಬೀತಾದರೆ ಅದು ಕೇವಲ ಜನರಿಗೆ ಎಸಗಿದ ನಂಬಿಕೆಗೆ ದ್ರೋಹ ಮಾತ್ರವಾಗಿರದೇ, ನಮ್ಮ ನ್ಯಾಯಾಂಗ ವ್ಯವಸ್ಥೆಗೆ ಮಾಡಿದ ಅವಮಾನವೂ ಆಗಿರುತ್ತದೆ. ದೇಶದ ನ್ಯಾಯಾಂಗ ವ್ಯವಸ್ಥೆಯ ಮೇಲಿನ ವಿಶ್ವಸಾರ್ಹತೆಯನ್ನು ಉಳಿಸಲು ಎಲ್ಲ ರಾಜಕೀಯ ಪಕ್ಷಗಳು ಪಕ್ಷಾತೀತವಾಗಿ ಮುಂದಾಗಬೇಕು’ ಎಂದು ಕುಮಾರ್ ಅವರು ಪತ್ರದಲ್ಲಿ ಒತ್ತಾಯಿಸಿದ್ದಾರೆ.

ಕೆಪಿಸಿಎಲ್ ಎ.ಇ–ಜೆ.ಇ ಆಯ್ಕೆ ಪಟ್ಟಿ ರದ್ದು

ಒಂದನೇ ಪುಟದಿಂದ...

ಏಕಸದಸ್ಯ ನ್ಯಾಯಪೀಠದ ಈ ಆದೇಶ ಪ್ರಶ್ನಿಸಿ ಬೆಂಗಳೂರಿನ ಎನ್.ನವೀನ್ ಕುಮಾರ್ ಸೇರಿದಂತೆ ನಾಲ್ವರು ಸಲ್ಲಿಸಿದ್ದ ರಿಟ್ ಮೇಲ್ಮನವಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ಪ್ರಕಟಿಸಿದೆ.

‘2024ರ ಫೆಬ್ರುವರಿ 18ರಂದು ನಡೆಸಲಾದ ಪರೀಕ್ಷೆಗೆ ಹಾಜರಾದ ಎಲ್ಲ ಅಭ್ಯರ್ಥಿಗಳಿಗೆ ಮರು ಪರೀಕ್ಷೆ ನಡೆಸಬೇಕು ಮತ್ತು ಒಂದು ವೇಳೆ ಋಣಾತ್ಮಕ ಅಂಕ ಪದ್ಧತಿ ಇದ್ದರೆ ಈ ಬಗ್ಗೆ ಅಭ್ಯರ್ಥಿಗಳಿಗೆ ಮುಂಚಿತವಾಗಿಯೇ ಮಾಹಿತಿ ನೀಡಬೇಕು’ ಎಂದು ನ್ಯಾಯಪೀಠ, ಕೆಪಿಸಿಎಲ್ ಹಾಗೂ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಸೂಚಿಸಿದೆ.

ಪ್ರಕರಣವೇನು?: ಸಿವಿಲ್, ಮೆಕ್ಯಾನಿಕಲ್ ಹಾಗೂ ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ವಿಭಾಗಗಳಲ್ಲಿನ ಎ.ಇ ಹಾಗೂ ಜೆ.ಇ ಸೇರಿದಂತೆ 404 ಹುದ್ದೆಗಳ ಭರ್ತಿಗೆ ಕೆಪಿಸಿಎಲ್ 2017ರ ಆಗಸ್ಟ್ 3ರಂದು ಅಧಿಸೂಚನೆ ಹೊರಡಿಸಿತ್ತು. ಇದಕ್ಕಾಗಿ ತಾಂತ್ರಿಕ ಹಾಗೂ ಕನ್ನಡ ಪತ್ರಿಕೆಗಳ ಪರೀಕ್ಷೆಯನ್ನು 2018ರ ಜನವರಿಯಲ್ಲಿ ನಡೆಸಲಾಗಿತ್ತು.

ಏತನ್ಮಧ್ಯೆ, ಕೆಪಿಸಿಎಲ್ 2018ರಲ್ಲಿ ನಡೆಸಿದ ಎಲ್ಲ ಪರೀಕ್ಷೆಗಳನ್ನು ರದ್ದುಗೊಳಿಸಿ ಹೊಸದಾಗಿ ನೇಮಕಾತಿ ಪರೀಕ್ಷೆಗಳನ್ನು ನಡೆಸುವ ಹೊಣೆಯನ್ನು ಕೆಇಎ ಹೆಗಲಿಗೆ ವಹಿಸಲಾಗಿತ್ತು.

ಇದರನ್ವಯ ಕೆಇಎ, 2024ರ ಫೆಬ್ರುವರಿಯಲ್ಲಿ ಪರೀಕ್ಷೆಗಳನ್ನು ನಡೆಸಿತ್ತು. ಆಗ ಕನ್ನಡ ಪ್ರಶ್ನೆಪತ್ರಿಕೆಗೆ 150 ಅಂಕಗಳನ್ನು ನಿಗದಿಪಡಿಸಲಾಗಿತ್ತು. ಇದನ್ನು ಪ್ರಶ್ನಿಸಿ ಕೆಲವರು ಹೈಕೋರ್ಟ್ ಮೆಟ್ಟಿಲೇರಿದ್ದರು. ಆಗ ಹೊಸದಾಗಿ ಪರೀಕ್ಷೆ ನಡೆಸಿ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಲಾಗಿತ್ತು. ಮತ್ತೊಂದು ಸುತ್ತಿನ ಕಾನೂನು ಹೋರಾಟದ ಬಳಿಕ ಪರಿಷ್ಕೃತ ಆಯ್ಕೆಪಟ್ಟಿ ಪ್ರಕಟಿಸಲಾಗಿತ್ತು.

‘ನೇಮಕಾತಿ ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿದೆ’ ಎನ್ನುವ ಕಾರಣಕ್ಕೆ ವಿಭಾಗೀಯ ನ್ಯಾಯಪೀಠ 2023ರಲ್ಲಿ, ತಾತ್ಕಾಲಿಕ ನೇಮಕಾತಿ ಆದೇಶ ನೀಡುವಂತೆ ಮಧ್ಯಂತರ ಆದೇಶ ಹೊರಡಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಎಂಟು ವರ್ಷ ವಿಳಂಬ


ಕೆಪಿಸಿಎಲ್‌ನ ಖಾಲಿ ಹುದ್ದೆಗಳ ಭರ್ತಿಗೆ ಅಧಿಸೂಚನೆ ಹೊರಬಿದ್ದು ಎಂಟು ವರ್ಷಗಳಾಗಿವೆ.

ಕೆಪಿಸಿಎಲ್‌ನಲ್ಲಿ ಖಾಲಿ ಇದ್ದ ಸಿವಿಲ್, ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ಸ್, ಆಟೊಮೊಬೈಲ್, ಮೆಕ್ಯಾನಿಕಲ್ ವಿಭಾಗಗಳ ಸಹಾಯಕ ಎಂಜಿನಿಯರ್, ಕಿರಿಯ ಎಂಜಿನಿಯರ್ ಹಾಗೂ ರಸಾಯನಶಾಸ್ತ್ರಜ್ಞ, ರಾಸಾಯನಿಕ ಮೇಲ್ವಿಚಾರಕರ ಹುದ್ದೆಗಳ ಭರ್ತಿಗೆ 2018ರಲ್ಲಿ ನಡೆದಿದ್ದ ಪರೀಕ್ಷೆಯನ್ನು ಪರೀಕ್ಷಾ ಅಕ್ರಮ, ಪ್ರಶ್ನೆಪತ್ರಿಕೆ ಸೋರಿಕೆ ಮೊದಲಾದ ವಿಚಾರಕ್ಕೆ ಕೋರ್ಟ್ ರದ್ದು ಮಾಡಿತ್ತು. ಕೋರ್ಟ್ ಆದೇಶದಂತೆ ಮರು ಪರೀಕ್ಷೆ ನಡೆಸುವುದಾಗಿ 2018ರ ಜೂನ್‌ನಲ್ಲೇ ಕೆಪಿಸಿಎಲ್ ಅಭ್ಯರ್ಥಿಗಳಿಗೆ ಭರವಸೆ ನೀಡಿದರೂ ಆರು ವರ್ಷಗಳ ಕಾಲಹರಣ ಮಾಡಿತ್ತು. ಅಂತಿಮವಾಗಿ 2024ರ ಫೆಬ್ರುವರಿಯಲ್ಲಿ 622 ಹುದ್ದೆಗಳ ನೇಮಕಾತಿಗೆ ಮರು ಪರೀಕ್ಷೆ ನಡೆಸಲಾಗಿತ್ತು.

ಅಧಿಸೂಚನೆಯಲ್ಲಿ ಇಲ್ಲದಿದ್ದರೂ ಮರು ಪರೀಕ್ಷೆಯಲ್ಲಿ ಋಣಾತ್ಮಕ ಅಂಕಗಳನ್ನು ಅನುಸರಿಸಿದ್ದನ್ನು ಪ್ರಶ್ನಿಸಿ ಕೆಲವರು ಮತ್ತೆ ಕೋರ್ಟ್ ಮೊರೆ ಹೋಗಿದ್ದರು. ಈಗ 404 ಸಹಾಯಕ ಎಂಜಿನಿಯರ್ (ಎ.ಇ) ಮತ್ತು ಕಿರಿಯ ಎಂಜಿನಿಯರ್ (ಜೆ.ಇ) ನೇಮಕಾತಿ ಪಟ್ಟಿ ರದ್ದಾಗಿದೆ.

ನೇಮಕಾತಿ ಅಧಿಸೂಚನೆ	2017
ಮೊದಲ ಪರೀಕ್ಷೆ	2018
ಮರು ಪರೀಕ್ಷೆ	2024





ಜೂನ್ 12ಕ್ಕೆ ಹರಿ ಹರ ವೀರಮಲ್ಲು



ನಟ ಪವನ್ ಕಲ್ಯಾಣ್ ನಟನೆಯ ಪ್ಯಾನ್ ಇಂಡಿಯಾ ಸಿನಿಮಾ 'ಹರಿ ಹರ ವೀರಮಲ್ಲು' ಜೂನ್ 12ರಂದು ತೆರೆಕಾಣಲಿದೆ. ಚಿತ್ರಕ್ಕೆ ಜ್ಯೋತಿ ಕೃಷ್ಣ ಮತ್ತು ಕ್ರಿಶ್ ಜಗರ್ಲಮುಡಿ ಆ್ಯಕ್ಷನ್ ಕಟ್ ಹೇಳಿದ್ದಾರೆ.

ಲೋಕಿಯ ದಿಲ್‌ದಾರ್ ಪಯಣ

'ಭಜರಂಗಿ' ಚಿತ್ರದಲ್ಲಿ ಖಳನಾಯಕನಾಗಿ ಜನಪ್ರಿಯರಾದ ಸೌರವ್ ಲೋಕೇಶ್, ಶ್ರೇಯಸ್ ಮಂಜು, ರವಿಚಂದ್ರನ್ ನಟನೆಯ 'ದಿಲ್‌ದಾರ್' ಚಿತ್ರದ ಪ್ರಮುಖ ಖಳನಟನಾಗಿ ನಟಿಸುತ್ತಿದ್ದಾರೆ. ತೆಲುಗಿನ ಸ್ಟಾರ್ ನಟರೊಬ್ಬರ ಚಿತ್ರದಲ್ಲಿಯೂ ಕಾಣಿಸಿಕೊಳ್ಳುತ್ತಿದ್ದಾರೆ. ಹಲವು ಭಾಷೆಯ ಸಿನಿಮಾಗಳಲ್ಲಿ ಬ್ಯುಸಿಯಾಗಿರುವ ಅವರು ತಮ್ಮ ಸಿನಿಪಯಣದ ಕುರಿತು ಮಾತನಾಡಿದ್ದಾರೆ...

'ದಿಲ್‌ದಾರ್' ಚಿತ್ರದಲ್ಲಿ ಲೋಕಿ ಅವರ ಪಾತ್ರವನ್ನು ಪರಿಚಯಿಸುವ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಮಧು ಜಿ. ಗೌಡ ಆ್ಯಕ್ಷನ್-ಕಟ್ ಹೇಳುತ್ತಿರುವ ಚಿತ್ರ ಕಾಲೇಜ್ ಕ್ಯಾಂಪಸ್‌ನಲ್ಲಿ ನಡೆಯುವ ಪ್ರೇಮಕಥೆಯನ್ನು ಹೊಂದಿದೆ. ಕೆ.ಮಂಜು ಪುತ್ರ ಶ್ರೇಯಸ್ ಮಂಜು ನಾಯಕನಾಗಿದ್ದು, ರವಿಚಂದ್ರನ್ ಪ್ರಮುಖ ಪಾತ್ರದಲ್ಲಿ ನಟಿಸುತ್ತಿರುವ ಚಿತ್ರ ಎರಡು ವರ್ಷಗಳ ಹಿಂದೆ ಸೆಟ್ಟೇರಿತ್ತು.

'ಮಿ.ಆ್ಯಂಡ್ ಮಿಸಸ್ ರಾಮಾಚಾರಿ', 'ಜಾಗ್ವಾರ್' ಚಿತ್ರಗಳ ಬಳಿಕ ಮತ್ತೆ ಕಾಲೇಜ್ ಕಥೆಯಲ್ಲಿ ನಟಿಸಿದ್ದೇನೆ. ಇದೊಂದು ಕಮರ್ಷಿಯಲ್ ಚಿತ್ರ. ಕಾಲೇಜಿನ ಎರಡು ಪ್ರತಿಸ್ಪರ್ಧಿಗಳ ನಡುವಿನ ಸೆಣಸಾಟ ಎನ್ನಬಹುದು. ನಾಯಕನ ವಿರುದ್ಧ ಹೋರಾಡುವ ರಗಡ್ ಪಾತ್ರ. ನನ್ನ ಜನ್ಮದಿನದ ಪ್ರಯುಕ್ತ ಚಿತ್ರತಂಡ ಟೀಸರ್ ಬಿಡುಗಡೆಗೊಳಿಸಿ ಶುಭ ಹಾರೈಸಿದ್ದು ಖುಷಿಯನ್ನು ಇಮ್ಮಡಿಗೊಳಿಸಿದೆ' ಎಂದು ಮಾತು ಪ್ರಾರಂಭಿಸಿದರು ಲೋಕಿ.

'ಸವಾರಿ'ಯಿಂದ ಪ್ರಾರಂಭ

2009ರಲ್ಲಿ ಸಿನಿ 'ಸವಾರಿ' ಪ್ರಾರಂಭಿಸಿದ ಅವರು ಈತನಕ 40ಕ್ಕೂ ಹೆಚ್ಚು ಚಿತ್ರಗಳಿಗೆ ಬಣ್ಣ ಹಚ್ಚಿದ್ದಾರೆ. 'ಭಜರಂಗಿ', 'ರಥಾವರ' ಅವರ ವೃತ್ತಿ ಬದುಕಿಗೆ ತಿರುವು ನೀಡಿದ ಚಿತ್ರಗಳು. 'ಆಚಾರ್ಯ', 'ಸಲಾರ್'ನಂತಹ ತೆಲುಗಿನ ಚಿತ್ರಗಳಲ್ಲೂ ಕಾಣಿಸಿಕೊಂಡಿರುವ ಇವರು ಚಿರಂಜೀವಿ ಅಭಿನಯದ 'ವಿಶ್ವಂಭರ'ದಲ್ಲಿ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. 'ಚಿತ್ರೀಕರಣ ಪೂರ್ಣಗೊಂಡು ಚಿತ್ರದ ಪೋಸ್ಟ್-ಪ್ರೊಡಕ್ಷನ್ ಕೆಲಸ ನಡೆಯುತ್ತಿದೆ. ಚಿರಂಜೀವಿಯಂಥ ಮೆಗಾಸ್ಟಾರ್ ಜತೆ ನಟಿಸುವ ಅವಕಾಶ ಸಿಕ್ಕಿರುವುದೇ ಒಂದು ಖುಷಿಯ ಸಂಗತಿ. ಚಿತ್ರದಲ್ಲಿ ಇಬ್ಬರು ವಿಲನ್‌ಗಳಿದ್ದು, ನಾನು ಮತ್ತು ಕುನಾಲ್ ಕಪೂರ್ ನಟಿಸಿದ್ದೇವೆ' ಎಂದರು.


ಪವನ್ ಕಲ್ಯಾಣ್ ಜತೆ ನಟಿಸುತ್ತಿರುವಿರಾ ಎಂಬ ಪ್ರಶ್ನೆಗೆ ಉತ್ತರಿಸಲು ನಿರಾಕರಿಸಿದ ಅವರು, 'ಇದೀಗ ಮುಂಬೈನಲ್ಲಿ ಮತ್ತೊಂದು ತೆಲುಗು ಸ್ಟಾರ್ ಸಿನಿಮಾದ ಚಿತ್ರೀಕರಣದಲ್ಲಿರುವೆ. ಆದರೆ ಈ ಬಗ್ಗೆ ಚಿತ್ರತಂಡವೇ ಅಧಿಕೃತ ಮಾಹಿತಿ ನೀಡಲಿದೆ. ತೆಲುಗಿನ 'ಘೋಡಾ' ಚಿತ್ರ ಬಿಡುಗಡೆಗೆ ಸಿದ್ಧವಿದೆ. ಈಗ ಕಲಾವಿದರಿಗೆ, ಕಲೆಗೆ ಭಾಷೆಯ ಗಡಿಯಿಲ್ಲ. ಯಾವುದೇ ಭಾಷೆಯಲ್ಲಿಯೂ ಕೆಲಸ ಮಾಡಬಹುದು. ವಿಶ್ವಂಭರ ಚಿತ್ರಕ್ಕೆ ಆರು ದಿನಗಳ ಕಾಲ ಡಬ್ಬಿಂಗ್ ನಾನೇ ಮಾಡಿದ್ದೇನೆ' ಎನ್ನುತ್ತಾರೆ.

'ನಾನು ಈ ನಡುವೆ ಎಲ್ಲ ಚಿತ್ರಗಳನ್ನು ಒಪ್ಪಿಕೊಳ್ಳುವುದಿಲ್ಲ. 'ರಥಾವರ' ಬಳಿಕ ತೃತೀಯ ಲಿಂಗಿ ಪಾತ್ರಕ್ಕಾಗಿ ಸಾಕಷ್ಟು ಚಿತ್ರಗಳಿಂದ ಅವಕಾಶ ಬಂತು. ಆದರೆ ಯಾವುದನ್ನೂ ಒಪ್ಪಿಕೊಳ್ಳಲಿಲ್ಲ. ವಿಶ್ವಂಭರಕ್ಕೆ ವರ್ಷಗಳ ಕಾಲ ಮೀಸಲಿಟ್ಟೆ. ಅದಕ್ಕೂ ಮೊದಲೇ ಒಪ್ಪಿಕೊಂಡ ಮತ್ತೊಂದು ಚಿತ್ರ ಮುಗಿಸುತ್ತಿರುವೆ. ನಟನಾಗಬೇಕೆಂದು ಕನಸು ಕಂಡವನು. 15 ವರ್ಷಗಳ ಸಿನಿಪಯಣ. ಸಣ್ಣ, ಸಣ್ಣ ಪಾತ್ರಗಳನ್ನು ಮಾಡಿಕೊಂಡು ಬಂದೆ. ಇಂದು ಉತ್ತಮ ಪಾತ್ರಗಳು ಸಿಗುತ್ತಿವೆ' ಎಂದು ಸಂತಸ ವ್ಯಕ್ತಪಡಿಸಿದರು.

'ಇಷ್ಟೇ ತಿನ್ನಬೇಕು, ಇಷ್ಟೇ ವರ್ಕ್‌ಔಟ್ ಮಾಡಬೇಕು ಎಂಬ ತತ್ವ ನನ್ನದು. ಶಿಸ್ತನ್ನು ಯಾವತ್ತೂ ಬಿಡಬಾರದು, ಯಾವುದೋ ಪಾತ್ರಕ್ಕೆ ತೂಕ ಹೆಚ್ಚಿಸಿಕೊಳ್ಳಬೇಕು ಅಥವಾ ಕಡಿಮೆ ಮಾಡಿಕೊಳ್ಳಬೇಕು ಎಂದಾಗ ಎರಡಕ್ಕೂ ತಯಾರಿರಬೇಕು. ಹೀಗಾಗಿ ನಾನು ಯಾವಾಗಲೂ ಸಿದ್ಧತೆಯಲ್ಲಿರುತ್ತೇನೆ. ಜತೆಗೆ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಫಿಟ್ನೆಸ್ ಮುಖ್ಯ' ಎಂದು ಮಾತಿಗೆ ವಿರಾಮವಿತ್ತರು.

ನಾಯಕನಾಗುವ ಇರಾದೆಯಿಲ್ಲ

'ನಾಯಕನಾಗಿ ಕಾಣಿಸಿಕೊಳ್ಳಬೇಕು ಎಂಬ ಇರಾದೆ ಅಷ್ಟೊಂದು ಇಲ್ಲ. ಹೀಗೆ ಆಗುತ್ತೇನೆ, ಆಗಬೇಕು ಎಂದು ಯಾವತ್ತೂ ಅಂದುಕೊಂಡಿಲ್ಲ. ಸಿಕ್ಕ ಕೆಲಸ ಮಾಡುತ್ತ ಬಂದಿರುವೆ. ಒಂದು ಸಲ ಖಳನಾಯಕನಾದರೆ ಎಲ್ಲ ಪಾತ್ರಗಳಲ್ಲಿಯೂ ಆ ಶೇಡ್ ಕಾಣಿಸುತ್ತದೆ. ಆದರೆ ನಟನಾಗಿ ಎಲ್ಲ ಬಗೆಯ ಚಿತ್ರಗಳಲ್ಲಿಯೂ ನಟಿಸಬೇಕು ಎಂಬ ಆಸೆಯಿದೆ. 'ಭಜರಂಗಿ'ಯಲ್ಲಿ ಖಳನಾಯಕ. 'ಭಜರಂಗಿ-2' ಚಿತ್ರದಲ್ಲಿ ಸಂಪೂರ್ಣ ಪಾಸಿಟಿವ್ ಪಾತ್ರದಲ್ಲಿ ಕಾಣಿಸಿಕೊಂಡೆ. ನಾನು ಮಾಡದ ಯಾವುದೇ ಪಾತ್ರ ಬಂದರೂ ನನಗೆ ಇಷ್ಟ. ಯಾವುದೇ ಒಂದು ಪಾತ್ರಕ್ಕೆ ನ್ಯಾಯ ಒದಗಿಸಲು ಸಾಧ್ಯವಿಲ್ಲ ಎಂದು ನನಗೇ ಅನ್ನಿಸಿದರೆ, ಅಂಥ ಪಾತ್ರ ಮಾಡುವುದಿಲ್ಲ' ಎನ್ನುತ್ತಾರೆ.



ಸೌರವ್ ಲೋಕೇಶ್



ತೇಜ್‌ಸಜ್ಜಾ


ಸೆ.5ಕ್ಕೆ ತೇಜ್ ಸಜ್ಜಾ ಮಿರಾಯ್ ರಿಲೀಸ್

ತೆಲುಗಿನಲ್ಲಿ 'ಹನುಮಾನ್' ಚಿತ್ರದ ಮೂಲಕ ಮೋಡಿ ಮಾಡಿದ್ದ ನಟ ತೇಜ್ ಸಜ್ಜಾ ಅಭಿನಯದ ಹೊಸ ಪ್ಯಾನ್ ಇಂಡಿಯಾ ಸಿನಿಮಾ 'ಮಿರಾಯ್' ಸೆ.5ರಂದು ತೆರೆಕಾಣಲಿದೆ. ಬುಧವಾರ(ಮೇ 28) ಚಿತ್ರದ ಟೀಸರ್ ಬಿಡುಗಡೆಯಾಗಿದೆ.

'ಕಾರ್ತಿಕೇಯ', 'ಕಾರ್ತಿಕೇಯ-2', 'ಧಮಾಕ' ಸೇರಿದಂತೆ ಹಲವು ಹಿಟ್ ಚಿತ್ರಗಳ ಸಾರಥಿ ಕಾರ್ತಿಕ್ ಗಟ್ಟಮ್ನೇನಿ ಸಜ್ಜಾ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. 'ಹನುಮಾನ್'ನಲ್ಲಿ ಸೂಪರ್ ಹೀರೊ ಆಗಿದ್ದ ತೇಜ್ ಈಗ 'ಮಿರಾಯ್'ನಲ್ಲಿ ಸೂಪರ್ ಯೋಧನಾಗಿದ್ದಾರೆ. 'ಮಿರಾಯ್' ಎಂದರೆ ಭವಿಷ್ಯ ಎಂದರ್ಥ. ಅಶೋಕ ಚಕ್ರವರ್ತಿ ಹಾಗೂ ಆತನ 9 ರಹಸ್ಯ ಕಥೆಗಳನ್ನು ಬಿಚ್ಚಿಡುವ ಕಥೆಯನ್ನು ಸಿನಿಮಾ ಹೊಂದಿದೆ ಎಂದಿದೆ ಚಿತ್ರತಂಡ. ಬಹುಭಾಷಾ ನಟ ಜಯರಾಮ್, ಶ್ರಿಯಾ ಶರಣ್, ಜಗಪತಿ ಬಾಬು ಚಿತ್ರದಲ್ಲಿದ್ದಾರೆ. ರಿತಿಕಾ ನಾಯಕ್ ಚಿತ್ರದ ನಾಯಕಿ. ಮಂಚು ಮನೋಜ್ ಖಳನಾಯಕನಾಗಿ ಬಣ್ಣಹಚ್ಚಿದ್ದಾರೆ.

ಚಿತ್ರದಲ್ಲಿ ಭರ್ಜರಿ ಆ್ಯಕ್ಷನ್ ದೃಶ್ಯಗಳಿರಲಿದ್ದು, ವಿಶೇಷವಾಗಿ ಈ ಚಿತ್ರವು 2D ಮತ್ತು 3D ಮಾದರಿಯಲ್ಲಿ ತೆರೆಕಾಣಲಿದೆ. ಪೀಪಲ್ ಮೀಡಿಯಾ ಫ್ಯಾಕ್ಟರಿಯಡಿ ಟಿ.ಜಿ.ವಿಶ್ವಪ್ರಸಾದ್ ಈ ಚಿತ್ರ ನಿರ್ಮಾಣ ಮಾಡಿದ್ದಾರೆ. ಶ್ರೀ ನಾಗೇಂದ್ರ ತಂಗಳ ಕಲಾ ನಿರ್ದೇಶನ, ಗೌರ ಹರಿ ಸಂಗೀತ ಚಿತ್ರಕ್ಕಿದೆ.

ಮೇ 30ಕ್ಕೆ 'ಠಾಣೆ'



ಪ್ರವೀಣ್



ಎಸ್.ಭಗತ್ ರಾಜ್

ಎಸ್.ಭಗತ್ ರಾಜ್ ನಿರ್ದೇಶನದ, ಪ್ರವೀಣ್ ನಾಯಕನಾಗಿ ನಟಿಸಿರುವ 'ಠಾಣೆ' ಸಿನಿಮಾ ಮೇ 30ರಂದು ತೆರೆಕಾಣುತ್ತಿದೆ.

ಪಿ.ಸಿ.ಡಿ 2 ಫಿಲಂ ಫ್ಯಾಕ್ಟರಿ ಲಾಂಛನದಲ್ಲಿ ಗಾಯತ್ರಿ ಎಂ. ಈ ಸಿನಿಮಾ ನಿರ್ಮಿಸಿದ್ದಾರೆ. ನಟಿ ಮಾಲತಿ ಸುಧೀರ್ ಇತ್ತೀಚೆಗೆ ಚಿತ್ರದ ಟ್ರೇಲರ್ ಬಿಡುಗಡೆ ಮಾಡಿದರು.

'ಒಂದು ಪೊಲೀಸ್ ಠಾಣೆಯಲ್ಲಿನ ಒಂದು ಪ್ರಕರಣದ ಕುರಿತು ಹಾಗೂ ನಾಲ್ಕು ಪ್ರಮುಖ ಪಾತ್ರಗಳ ಸುತ್ತ ನಡೆಯುವ ಕಥಾಹಂದರವನ್ನು ಈ ಚಿತ್ರ ಹೊಂದಿದೆ. ಚಿತ್ರದಲ್ಲಿ ತಂದೆ-ಮಗನ, ಅಣ್ಣ-ತಂಗಿಯ ನಡುವಿನ ಭಾವನಾತ್ಮಕ ದೃಶ್ಯಗಳಿವೆ, ಜೊತೆಗೊಂದು ಪ್ರೇಮಕಥೆಯೂ ಇದೆ. ಚಿತ್ರಕ್ಕೆ 'C/O ಶ್ರೀರಾಮಪುರ' ಎಂಬ ಅಡಿಬರಹವನ್ನು ನೀಡಿದ್ದೇವೆ. ಅದು ಏನಕ್ಕೆ ಎಂಬುವುದನ್ನು ಸಿನಿಮಾದಲ್ಲೇ ನೋಡಬೇಕು' ಎಂದರು ಭಗತ್ ರಾಜ್.

ರಂಗಭೂಮಿ ಹಿನ್ನೆಲೆಯಿಂದ ಬಂದಿರುವ ನಾಯಕ ಪ್ರವೀಣ್ ಅವರಿಗೆ ಇದು ಚೊಚ್ಚಲ ಸಿನಿಮಾ. ರೋಹಿತ್ ನಾಗೇಶ್, ಪಿ.ಡಿ.ಸತೀಶ್ ಚಂದ್ರ, ಮಾನಸ ಹೊಳ್ಳ ಚಿತ್ರದ ತಾರಾಬಳಗದಲ್ಲಿದ್ದಾರೆ. ಪ್ರಶಾಂತ್ ಸಾಗರ್ ಛಾಯಾಚಿತ್ರಗ್ರಹಣ ಹಾಗೂ ಸುರೇಶ್ ಅರಸ್ ಸಂಕಲನ ಚಿತ್ರಕ್ಕಿದೆ.

ಜೂನ್ 13ಕ್ಕೆ ತೆರೆಗೆ 'ಮಾತೊಂದ ಹೇಳುವೆ'

ಆರ್‌ಜೆ ಆಗಿರುವ ಮಯೂರ್ ಕಡಿ ನಿರ್ದೇಶಿಸಿ, ನಾಯಕನಾಗಿ ನಟಿಸಿರುವ 'ಮಾತೊಂದ ಹೇಳುವೆ' ಸಿನಿಮಾ ಜೂನ್.13ರಂದು ಬಿಡುಗಡೆಯಾಗಲಿದೆ.

'ಚಿತ್ರದ ಕಥೆಯಲ್ಲಿ ನಾಯಕ ಉತ್ತರ ಕರ್ನಾಟಕದ ರೇಡಿಯೊ ಜಾಕಿ(ಆರ್‌ಜೆ) ಆಗಿರುತ್ತಾನೆ. ನಾಯಕಿ ಮೈಸೂರಿನಿಂದ ಧಾರವಾಡಕ್ಕೆ ಆಗಮಿಸುತ್ತಾಳೆ. ಇಬ್ಬರೂ ಭೇಟಿ ಆದಾಗ ನಡೆಯುವ ಘಟನೆಗಳೇ ಚಿತ್ರದ ಕಥಾಹಂದರ. ಇದೊಂದು ವಿಭಿನ್ನ ಪ್ರೇಮಕಥೆ. ಕುಟುಂಬ ಸಮೇತ ನೋಡಬಹುದಾದ ಚಿತ್ರವಿದು' ಎನ್ನುತ್ತಾರೆ ಮಯೂರ್ ಕಡಿ.

ತಾರಾಗಣದಲ್ಲಿ ಮಯೂರ್ ಕಡಿ ಅವರ ಜೊತೆಯಲ್ಲಿ ಅಪೂರ್ವ ಆರಾಧ್ಯ, ಗಿರೀಶ್ ಶಿವಣ್ಣ, ಪಿ.ಡಿ. ಸತೀಶ್ ಚಂದ್ರ, ಪ್ರತೀಕ್ ರಡ್ಡೇರ್, ಚೇತನ್ ಮರಂಬೀಡ್, ವಿದ್ಯಾಸಾಗರ ದೀಕ್ಷಿತ್, ಪ್ರತೀಕ್, ಕಾರ್ತಿಕ್ ಪತ್ತಾರ್, ಸುನಿಲ್ ಪತ್ರಿ, ಜ್ಯೋತಿ ಪುರಾಣಿಕ್ ಮುಂತಾದವರಿದ್ದಾರೆ. ಮಹೇಶ್ವರ ಮೋಷನ್ ಪಿಕ್ಚರ್ಸ್ ಲಾಂಛನದಲ್ಲಿ ನಿರ್ಮಾಣವಾಗಿರುವ ಈ ಚಿತ್ರಕ್ಕೆ ಪ್ರಭು ಸವಣೂರ್ ಹಾಗೂ ಅವಿನಾಶ್ ಯು.ಎಸ್. ನಿರ್ಮಾಣದಲ್ಲಿ ಕೈಜೋಡಿಸಿದ್ದಾರೆ. ಪರ್ವತೇಶ್ ಪೋಲ್ ಛಾಯಾಚಿತ್ರಗ್ರಹಣ, ಉಲ್ಲಾಸ್ ಕುಲಕರ್ಣಿ ಸಂಗೀತ ನಿರ್ದೇಶನ ಹಾಗೂ ಅಭಯ್ ಕಡಿ ಸಂಕಲನ ಚಿತ್ರಕ್ಕಿದೆ. ಪ್ರಸನ್ನ ಕುಮಾರ್ ಎಂ.ಎಸ್. ಹಿನ್ನೆಲೆ ಸಂಗೀತ ನೀಡಿದ್ದಾರೆ.



ಮಯೂರ್ ಕಡಿ, ಗಿರೀಶ್ ಶಿವಣ್ಣ

ತರೂರ್ ಹೇಳಿಕೆಗೆ ಕಾಂಗ್ರೆಸ್ ಆಕ್ರೋಶ

ನವದೆಹಲಿ (ಪಿಟಿಐ): 'ಭಾರತವು ಗಡಿ ನಿಯಂತ್ರಣ ರೇಖೆಯನ್ನು (ಎಲ್‌ಒಸಿ) ದಾಟಿ ಭಯೋತ್ಪಾದನಾ ನೆಲೆಗಳ ಮೇಲೆ 2016ರಲ್ಲಿ ನಿರ್ದಿಷ್ಟ ದಾಳಿ (ಸರ್ಜಿಕಲ್ ಸ್ಟ್ರೈಕ್) ನಡೆಸಿತ್ತು. ಈ ರೀತಿ ಹಿಂದೆಂದೂ ಭಾರತ ಮಾಡಿರಲಿಲ್ಲ' ಎಂದಿರುವ ಕಾಂಗ್ರೆಸ್ ನಾಯಕ ಶಶಿ ತರೂರ್ ಅವರ ಹೇಳಿಕೆಗೆ ಕಾಂಗ್ರೆಸ್ ಆಕ್ರೋಶ ವ್ಯಕ್ತಪಡಿಸಿದೆ. ಪಹಲ್ಗಾಮ್‌ನಲ್ಲಿ ಉಗ್ರರ ದಾಳಿ, 'ಆಪರೇಷನ್ ಸಿಂಧೂರ' ಮತ್ತು ಭಯೋತ್ಪಾದನೆಯನ್ನು ಸರ್ಕಾರದ ನೀತಿಯಾಗಿಸಿಕೊಂಡಿರುವ ಪಾಕಿಸ್ತಾನದಂತಹ ವಿಚಾರಗಳಲ್ಲಿ ಭಾರತದ ನಿಲುವನ್ನು ವಿವರಿಸಲು ಸರ್ವಪಕ್ಷಗಳ ಸಂಸದೀಯ ನಿಯೋಗವೊಂದನ್ನು ಮುನ್ನಡೆಸುತ್ತಿರುವ ಶಶಿ ತರೂರ್ ಅವರು ಮಂಗಳವಾರ ಪನಾಮ ದೇಶದಲ್ಲಿ ಮಾತನಾಡಿದ್ದರು.

'ನಾವು ಡಂಗೂರ ಸಾರಿರಲಿಲ್ಲ'

'ಪ್ರಧಾನಿ ಮೋದಿಗೂ ಮೊದಲು ಎಲ್‌ಒಸಿ ಅನ್ನು ಯಾರೂ ದಾಟಿರಲಿಲ್ಲ' ಎನ್ನುವ ಮೂಲಕ ಕಾಂಗ್ರೆಸ್‌ನ ಸುವರ್ಣ ಇತಿಹಾಸವನ್ನು ನೀವು ಹೇಗಾದರೂ ಅವಹೇಳನ ಮಾಡಲು ಸಾಧ್ಯ. 1965ರಲ್ಲಿ ಭಾರತೀಯ ಸೇನೆಯು ಪಾಕಿಸ್ತಾನವನ್ನು ಹಲವು ಕಡೆಗಳಿಂದ ಪ್ರವೇಶ ಮಾಡಿತ್ತು. ಪಾಕ್‌ನ ಲಾಹೋರ್ ವಲಯವು ಇದನ್ನು ನಿರೀಕ್ಷಿಸಿಯೇ ಇರಲಿಲ್ಲ. 1971ರಲ್ಲಿ ಭಾರತವು ಪಾಕಿಸ್ತಾನವನ್ನು ಎರಡು ಭಾಗ ಮಾಡಿತು. ಯುಪಿಎ ಸರ್ಕಾರದಲ್ಲಿ ಹಲವು ಬಾರಿ ನಿರ್ದಿಷ್ಟ ದಾಳಿ ನಡೆಸಲಾಗಿದೆ. ಆದರೆ, ರಾಜಕೀಯ ಲಾಭಕ್ಕಾಗಿ ಇದನ್ನು ನಾವು ಡಂಗೂರ ಸಾರಿರಲಿಲ್ಲ. ತಮ್ಮ ಪರವಾಗಿ ಚೆನ್ನಾಗಿ ವಾದ ಮಾಡಲು ಬಿಜೆಪಿಗೆ ಮತ್ತ್ಯಾರೂ ಸಿಗಲಿಲ್ಲ. ಪಾಕಿಸ್ತಾನದ ಮುಖವಾಡ ಕಳಚಿ ಎಂದು ಕಳುಹಿಸಿದರೆ, ಪ್ರಧಾನಿ ಮೋದಿ ಅವರನ್ನು ಹೊಗಳುವುದರಲ್ಲಿ ಬ್ಯುಸಿಯಾಗಿದ್ದಾರೆ

ಉದಿತ್ ರಾಜ್, ಕಾಂಗ್ರೆಸ್ ಮುಖಂಡ

ಬುರ್ಕಿ ಕದನ ಚಿತ್ರ ಹಂಚಿಕೊಂಡ ಖೇರಾ

1. ಇದು ಬುರ್ಕಿ ಕದನದ (ಲಾಹೋರ್ ಕದನ ಎಂದೂ ಕರೆಯಲಾಗುತ್ತದೆ) ಚಿತ್ರ. 1965ರಲ್ಲಿ ಭಾರತ ಮತ್ತು ಪಾಕಿಸ್ತಾನ ಮಧ್ಯೆ ನಡೆದ ಯುದ್ಧದ ಮಹತ್ವದ ಘಟನೆ. ಬುರ್ಕಿ ಗ್ರಾಮವು ಲಾಹೋರ್‌ನ ಆಗ್ನೇಯ ದಿಕ್ಕಿಗೆ ಬರುತ್ತದೆ. ಭಾರತ-ಪಾಕಿಸ್ತಾನ ಗಡಿಯ ಹತ್ತಿರದ ಪ್ರದೇಶವಿದು. ಲಾಹೋರ್‌ನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಈ ಗ್ರಾಮವು 11 ಕಿ.ಮೀ ದೂರದಲ್ಲಿದೆ.
2. 'ಮಾಜಿ ಪ್ರಧಾನಿ ಮನಮೋಹನ ಸಿಂಗ್: ಯುಪಿಎ ಸರ್ಕಾರ ಅಧಿಕಾರಾವಧಿಯಲ್ಲಿ ಹಲವು ನಿರ್ದಿಷ್ಟ ದಾಳಿಗಳನ್ನು ಕೈಗೊಳ್ಳಲಾಗಿದೆ' (ಮಾಧ್ಯಮವೊಂದರ ವರದಿಯ ಲಿಂಕ್ ಬಳಸಿ ಮಾಡಿದ 'ಎಕ್ಸ್' ಪೋಸ್ಟ್)

ಪವನ್ ಖೇರಾ, ಕಾಂಗ್ರೆಸ್ ಮಾಧ್ಯಮ ಮತ್ತು ಪ್ರಸಾರ ವಿಭಾಗದ ಮುಖ್ಯಸ್ಥ (ಎರಡೂ 'ಎಕ್ಸ್' ಪೋಸ್ಟ್‌ಗಳನ್ನು ಖೇರಾ ಅವರು ಶಶಿ ತರೂರ್‌ಗೆ 'ಸಿಸಿ' ಎಂದು ಬರೆದು ಟ್ಯಾಗ್ ಮಾಡಿದ್ದಾರೆ)



ಬುರ್ಕಿಯಲ್ಲಿರುವ ಪೊಲೀಸ್ ಠಾಣೆ ಮುಂದೆ ಭಾರತೀಯ ಸೇನೆ ನಿಂತು 1965ರ ಯುದ್ಧದ ವೇಳೆ ತೆಗೆಸಿಕೊಂಡಿದ್ದ ಫೋಟೊ —ಪವನ್ ಖೇರಾ 'ಎಕ್ಸ್'ನಲ್ಲಿ ಹಂಚಿಕೊಂಡಿರುವ ಚಿತ್ರ

'ತನ್ನದೇ ನಾಯಕರ ಮೇಲೆ ಕ್ಷಿಪಣಿ ದಾಳಿ'

ಪಹಲ್ಗಾಮ್ ಭಯೋತ್ಪಾದನಾ ದಾಳಿಯ ವಿಚಾರವಾಗಿ ಕಾಂಗ್ರೆಸ್ ಪಕ್ಷವು ಪಾಕಿಸ್ತಾನಕ್ಕೆ 'ಕ್ಲೀನ್ ಚಿಟ್' ನೀಡುತ್ತಿದೆ. ಪಾಕ್‌ನ ಡಿಜಿ ಐಎಸ್‌ಪಿಆರ್ (ಅಹಮ್ಮದ್ ಶರೀಫ್ ಚೌಧರಿ) ಅವರಂತೆ ಕಾಂಗ್ರೆಸ್ ಪಕ್ಷವು ತನ್ನದೇ ನಾಯಕರ ಮೇಲೆ ಕ್ಷಿಪಣಿ ದಾಳಿ ನಡೆಸುತ್ತಿದೆ. ಆ ಪಕ್ಷವು ಪಾಕಿಸ್ತಾನದ ವಿರುದ್ಧ ಒಂದೇ ಒಂದು ಮಾತನಾಡುವುದಿಲ್ಲ.

ಶೆಹಜಾದ್ ಪೂನಾವಾಲ, ಬಿಜೆಪಿ ರಾಷ್ಟ್ರೀಯ ವಕ್ತಾರ

'ಒಂದು ಕೈಯಿಂದ ಚಪ್ಪಾಳೆ ಸಾಧ್ಯವಿಲ್ಲ'

ಅತ್ಯಾಚಾರ ಆರೋಪಿಗೆ ಮಧ್ಯಂತರ ಜಾಮೀನು ನೀಡಿದ ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): 40 ವರ್ಷದ ಮಹಿಳೆ ಮೇಲೆ ಅತ್ಯಾಚಾರ ಎಸಗಿದ ಆರೋಪ ಎದುರಿಸುತ್ತಿರುವ 23 ವರ್ಷದ ಸಾಮಾಜಿಕ ಮಾಧ್ಯಮ ಇನ್‌ಫ್ಲುಯೆನ್ಸರ್‌ಗೆ ಸುಪ್ರೀಂ ಕೋರ್ಟ್ ಮಧ್ಯಂತರ ಜಾಮೀನು ನೀಡಿದೆ.

ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಹಾಗೂ ಸತೀಶ್ ಚಂದ್ರ ಶರ್ಮಾ ಅವರು ಇದ್ದ ನ್ಯಾಯಪೀಠವು ಅರ್ಜಿ ವಿಚಾರಣೆ ನಡೆಸಿ, 'ವ್ಯಕ್ತಿ ವಿರುದ್ಧ ಆರೋಪ ಮಾಡಿರುವ ಮಹಿಳೆ ಮಗು ಅಲ್ಲ. ಅಲ್ಲದೇ, ಒಂದು ಕೈಯಿಂದ ಚಪ್ಪಾಳೆ ಸಾಧ್ಯ ಇಲ್ಲ' ಎಂದು ಹೇಳಿದೆ.

'ಆರೋಪಿಯನ್ನು ಜೈಲಿನಲ್ಲಿರಿಸಿ 9 ತಿಂಗಳು ಗತಿಸಿದ್ದರೂ ಆತನ ವಿರುದ್ಧ ಆರೋಪ ನಿಗದಿ ಮಾಡಿಲ್ಲ' ಎಂದೂ ಹೇಳಿದೆ.

'ಮಹಿಳೆಯೇನೂ ಸಣ್ಣ ಮಗುವಲ್ಲ. ಆಕೆಗೆ 40 ವರ್ಷವಾಗಿದ್ದು, ಇಬ್ಬರೂ ಜೊತೆಯಾಗಿ ಜಮ್ಮುವಿಗೆ ಹೋಗಿದ್ದಾರೆ. ಮಹಿಳೆ 7 ಬಾರಿ ಆರೋಪಿ ಜೊತೆ ಜಮ್ಮುವಿಗೆ ಹೋಗಿದ್ದರೂ ಆ ಬಗ್ಗೆ ಆಕೆಯ ಪತಿ ತಲೆಕೆಡಿಸಿಕೊಂಡಿಲ್ಲ. ಹೀಗಿರುವಾಗ ಐಪಿಸಿ ಸೆಕ್ಷನ್ 376ರ ಅಡಿ ಪ್ರಕರಣ ದಾಖಲಿಸಿದ್ದು ಏಕೆ' ಎಂದು ದೆಹಲಿ ಪೊಲೀಸರನ್ನು ನ್ಯಾಯಪೀಠ ಪ್ರಶ್ನಿಸಿದೆ.

'ಇಂತಹ ವ್ಯಕ್ತಿಗಳಿಂದ ಯಾರು ಪ್ರೇರಣೆ ಪಡೆಯುತ್ತಾರೆ?' ಎಂದು ಆರೋಪಿ ಕುರಿತು ಪೀಠವು ಹೇಳಿದೆ.

ಆರೋಪಿಯನ್ನು ವಿಚಾರಣಾ ನ್ಯಾಯಾಲಯದ ಮುಂದೆ ಹಾಜರು ಪಡಿಸಬೇಕು. ಆರೋಪಿ ತನಗೆ ದೊರೆತ ಈ ಸ್ವಾತಂತ್ರ್ಯವನ್ನು ದುರ್ಬಳಕೆ ಮಾಡಬಾರದು, ದೂರುದಾರ ಮಹಿಳೆಯನ್ನು ಸಂಪರ್ಕಿಸುವ ಪ್ರಯತ್ನ ಮಾಡಬಾರದು ಎಂದು ಸೂಚಿಸಿದೆ.

ದೂರುದಾರ ಮಹಿಳೆಯು 2021ರಲ್ಲಿ ಸಾಮಾಜಿಕ ಮಾಧ್ಯಮದ ಮೂಲಕ ಆರೋಪಿ ಸಂಪರ್ಕಕ್ಕೆ ಬಂದಿದ್ದರು. ತಾನು ಮಾರಾಟ ಮಾಡುವ ಬಟ್ಟೆಗಳ ಬ್ರ್ಯಾಂಡ್‌ಗೆ ಪ್ರಚಾರ ನೀಡುವಂತೆ ಕೋರಿದ್ದರು.

'ಕೆಲ ದಿನಗಳ ನಂತರ, ಭಿನ್ನಾಭಿಪ್ರಾಯಗಳಿಂದಾಗಿ ಆತನೊಂದಿಗಿನ ವ್ಯಾವಹಾರಿಕ ಸಂಬಂಧ ಕಡಿದುಕೊಳ್ಳಲು ನಿರ್ಧರಿಸಿದ್ದೆ' ಎಂದು ಮಹಿಳೆ ದೂರಿನಲ್ಲಿ ತಿಳಿಸಿದ್ದಾರೆ.

'2021ರ ಡಿಸೆಂಬರ್‌ನಲ್ಲಿ ಕನಾಟ್ ಪ್ಲೇಸ್‌ಗೆ ತೆರಳಿ, ಬ್ರ್ಯಾಂಡ್‌ವೊಂದರ ಚಿತ್ರೀಕರಣಕ್ಕೆ ಹೋಗಲು ಆರೋಪಿ ಮನವೊಲಿಸಿದ್ದ. ಪ್ರಯಾಣದ ವೇಳೆ, ಅಮಲು ಬರಿಸುವ ಪದಾರ್ಥಗಳನ್ನು ಲೇಪಿಸಿದ್ದ ಸಿಹಿಖಾದ್ಯಗಳನ್ನು ನೀಡಿದ್ದ. ಅವುಗಳನ್ನು ಸೇವಿಸಿದ ನಂತರ ನನಗೆ ಪ್ರಜ್ಞೆ ತಪ್ಪಿತ್ತು' ಎಂದು ದೂರಿನಲ್ಲಿ ವಿವರಿಸಿದ್ದಾರೆ.

'ಹಿಂದೂ ರಾವ್ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರೂ, ಆರೋಪಿಯು ನನ್ನನ್ನು ಆಸ್ಪತ್ರೆ ಹಿಂಭಾಗದ ನಿರ್ಜನ ಪ್ರದೇಶಕ್ಕೆ ಕರೆದೊಯ್ದು, ನನ್ನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ. ನಾನು ನಗ್ನಳಾಗಿರುವ ಫೋಟೊಗಳನ್ನು ಸೆರೆಹಿಡಿದ' ಎಂದು ದೂರಿದ್ದಾರೆ.

'ನಂತರ ನನ್ನನ್ನು ಬಲವಂತದಿಂದ ಜಮ್ಮುವಿಗೆ ಕರೆದುಕೊಂಡು ಹೋಗಿದ್ದಲ್ಲದೇ, ನಿರಂತರವಾಗಿ ಲೈಂಗಿಕ ಕಿರುಕುಳ ನೀಡಿ, ಸುಲಿಗೆ ಮಾಡಿದ್ದಾನೆ. ಎರಡೂವರೆ ವರ್ಷಗಳಿಗೂ ಹೆಚ್ಚು ಕಾಲದಿಂದ ಬೆದರಿಕೆ ಹಾಕುತ್ತಿದ್ದಾನೆ' ಎಂದೂ ದೂರಿನಲ್ಲಿ ವಿವರಿಸಿದ್ದಾರೆ.

ರಾಣಾ ಅರ್ಜಿ: ಪ್ರತಿಕ್ರಿಯೆಗೆ ಸೂಚನೆ

ನವದೆಹಲಿ (ಪಿಟಿಐ): ಮುಂಬೈ ಮೇಲಿನ ಭಯೋತ್ಪಾದಕ ದಾಳಿ ಪ್ರಕರಣದ ಆರೋಪಿ ತಹವ್ವುರ್ ಹುಸೇನ್ ರಾಣಾ ತನ್ನ ಕುಟುಂಬದವರ ಜೊತೆ ಮಾತನಾಡಲು ಅವಕಾಶ ಕೋರಿದ್ದು, ಆತನ ಕೋರಿಕೆಯ ಬಗ್ಗೆ ಪ್ರತಿಕ್ರಿಯೆ ಸಲ್ಲಿಸುವಂತೆ ದೆಹಲಿಯ ನ್ಯಾಯಾಲಯವೊಂದು ತಿಹಾರ್ ಜೈಲಿನ ಅಧಿಕಾರಿಗಳಿಗೆ ಸೂಚಿಸಿದೆ.

ರಾಣಾ ಅರ್ಜಿಗೆ ಸಂಬಂಧಿಸಿದಂತೆ ಜೈಲು ಅಧಿಕಾರಿಗಳಿಗೆ ನೋಟಿಸ್ ಜಾರಿಗೆ ಸೂಚಿಸಿದ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಚಂದರ್ ಜೀತ್ ಸಿಂಗ್ ಅವರು, ಜೂನ್ 4ಕ್ಕೆ ಮೊದಲು ವಸ್ತುಸ್ಥಿತಿ ವರದಿ ಸಲ್ಲಿಸುವಂತೆ ಅಧಿಕಾರಿಗಳಿಗೆ ಹೇಳಿದ್ದಾರೆ. ರಾಣಾ ಈಗ ನ್ಯಾಯಾಂಗ ಬಂಧನದಲ್ಲಿ ಇದ್ದಾನೆ.

ಮುಂಬೈ ದಾಳಿ ಪ್ರಕರಣದ ಪ್ರಮುಖ ಸೂತ್ರಧಾರಿ ಡೇವಿಡ್ ಕೋಲ್ಮನ್ ಹೆಡ್ಲಿ ಅಲಿಯಾಸ್ ದಾವೂದ್ ಗಿಲಾನಿಯ ನಿಕಟವರ್ತಿ ರಾಣಾ.

ವಿಚಾರಣೆ ಶುರುವಾಗುವುದಕ್ಕೂ ಮೊದಲು, ರಾಣಾ ಪರವಾಗಿ ವಕೀಲರು ಇದ್ದಾರೆಯೇ ಎಂದು ನ್ಯಾಯಾಧೀಶರು ಕೇಳಿದರು. ತನಗೆ ವಕೀಲರು ಇಲ್ಲ ಎಂದು ರಾಣಾ ತಿಳಿಸಿದ. ನಂತರ, ಆತನನ್ನು ಪ್ರತಿನಿಧಿಸಲು ದೆಹಲಿ ಕಾನೂನು ಸೇವೆಗಳ ಪ್ರಾಧಿಕಾರದಿಂದ ವಕೀಲರನ್ನು ನೀಡಲಾಗುತ್ತದೆ ಎಂದು ನ್ಯಾಯಾಧೀಶರು ಹೇಳಿದರು. ಇದಾದ ನಂತರದಲ್ಲಿ ವಕೀಲ ಪೀಯೂಷ್ ಸಚದೇವ ಅವರನ್ನು ರಾಣಾನನ್ನು ಪ್ರತಿನಿಧಿಸಲು ನೇಮಿಸಲಾಯಿತು.

'ರಾಜ್ಯಕ್ಕಾಗಿ ಬೇಡಿಕೆ ಈಗಲೂ ಪ್ರಸ್ತುತ'

ಗುಲ್‌ಮಾರ್ಗ್ (ಪಿಟಿಐ): 'ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯ ಸ್ಥಾನಮಾನ ನೀಡಬೇಕು ಎಂಬ ಬೇಡಿಕೆಯು ಈಗಲೂ ಪ್ರಸ್ತುತವಾಗಿದೆ' ಎಂದು ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಹೇಳಿದ್ದಾರೆ.

ಪ್ರವಾಸಿ ತಾಣ ಗುಲ್ ಮಾರ್ಗ್‌ನಲ್ಲಿ ಬುಧವಾರ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, 'ಪಹಲ್ಗಾಮ್ ಉಗ್ರರ ದಾಳಿ ನಂತರವೂ ಈ ಬೇಡಿಕೆ ಪ್ರಸ್ತುತವಾಗಿದೆ. ಇತ್ತೀಚೆಗೆ ನಡೆದ ನೀತಿ ಆಯೋಗದ ಸಭೆಯಲ್ಲೂ ಈ ಕುರಿತು ಗಮನಸೆಳೆದಿದ್ದೇನೆ' ಎಂದರು.

ಜಮ್ಮು ಮತ್ತು ಕಾಶ್ಮೀರವು ಪ್ರವಾಸೋದ್ಯಮಕ್ಕೆ ಸಿದ್ಧವಾಗಿದೆ ಎಂದು ಸಂದೇಶ ರವಾನಿಸಲು ಸಚಿವಾಲಯದ ಹೊರಗಡೆ, ವಿವಿಧ ಸ್ಥಳಗಳಲ್ಲಿ ಸಚಿವರು, ಅಧಿಕಾರಿಗಳ ಸಭೆ ನಡೆಸಲಾಗುತ್ತಿದೆ ಎಂದರು.

'ಪಹಲ್ಗಾಮ್‌ನ ಉಗ್ರರ ದಾಳಿ ಕೃತ್ಯಕ್ಕೆ ಸ್ಥಳೀಯ ಕಾಶ್ಮೀರಿಗಳನ್ನು ಹೊಣೆ ಮಾಡಬಾರದು. ಆ ಕೃತ್ಯಕ್ಕಾಗಿ ಕಾಶ್ಮೀರಿಗಳನ್ನು ದಂಡಿಸುವ ಕೆಲಸವೂ ಆಗಬಾರದು' ಎಂದು ಅವರು ತಿಳಿಸಿದರು.

ಪ್ರವಾಸಿಗರಲ್ಲಿ ಭರವಸೆ ಮೂಡಿಸುವ ಕ್ರಮವಾಗಿ ಹಾಗೂ ಪ್ರವಾಸಿಗಳನ್ನು ಸೆಳೆಯುವ ಮೊದಲು ಕಾಶ್ಮೀರಿಗಳು ವಿವಿಧ ತಾಣಗಳಿಗೆ ಭೇಟಿ ನೀಡಬೇಕಾಗಿದೆ ಎಂದು ಅಬ್ದುಲ್ಲಾ ಅವರು ಅಭಿಪ್ರಾಯಪಟ್ಟರು.

ಗುಲ್‌ಮಾರ್ಗ್‌ನಲ್ಲೂ ಸಭೆ

ಶ್ರೀನಗರ (ಪಿಟಿಐ): ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರು ಇಲ್ಲಿನ ಪ್ರವಾಸಿ ತಾಣ ಗುಲ್‌ಮಾರ್ಗ್‌ನಲ್ಲಿ ಬುಧವಾರ ಸಂಪುಟ ಸಚಿವರು ಮತ್ತು ಹಿರಿಯ ಅಧಿಕಾರಿಗಳ ಸಭೆಯನ್ನು ನಡೆಸಿದರು. ಮಂಗಳವಾರವಷ್ಟೇ ಮುಖ್ಯಮಂತ್ರಿ ಇಂತಹುದೇ ಸಭೆಯನ್ನು ಇತ್ತೀಚೆಗೆ ಉಗ್ರರ ದಾಳಿ ಕೃತ್ಯ ನಡೆದಿದ್ದ ಪಹಲ್ಗಾಮ್‌ನಲ್ಲಿ ನಡೆಸಿದ್ದರು.

ಪ್ರೊ. ಖಾನ್ ಜಾಮೀನು ವಿಸ್ತರಣೆ

ನವದೆಹಲಿ(ಪಿಟಿಐ): 'ಆಪರೇಷನ್ ಸಿಂಧೂರ' ಕುರಿತು ಅವಹೇಳನಕಾರಿ ಪೋಸ್ಟ್ ಮಾಡಿದ ಆರೋಪ ಎದುರಿಸುತ್ತಿರುವ ಅಶೋಕ ವಿಶ್ವವಿದ್ಯಾಲಯ ಪ್ರಾಧ್ಯಾಪಕ ಅಲಿ ಖಾನ್ ಮಹಮೂದಾಬಾದ್ ಅವರ ಮಧ್ಯಂತರ ಜಾಮೀನನ್ನು ಸುಪ್ರೀಂ ಕೋರ್ಟ್ ವಿಸ್ತರಿಸಿದೆ.

ಯುಪಿಎಸ್‌ಸಿ: ಹೊಸ ಪೋರ್ಟಲ್

ನವದೆಹಲಿ (ಪಿಟಿಐ): ಪರೀಕ್ಷಾರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ನಮೂನೆ ಭರ್ತಿ ಮಾಡಲು ಯುಪಿಎಸ್‌ಸಿ ಬುಧವಾರ ನೂತನ ಪೋರ್ಟಲ್‌ಗೆ ಚಾಲನೆ ನೀಡಿದೆ.

ಪರೀಕ್ಷಾರ್ಥಿಗಳು ಇನ್ನು ಮುಂದೆ ಹೊಸ ಪೋರ್ಟಲ್ ಮೂಲಕವೇ ಅರ್ಜಿಗಳನ್ನು ಭರ್ತಿ ಮಾಡಿ, ಪೂರಕ ದಾಖಲೆಗಳನ್ನು ಅಪ್‌ಲೋಡ್ ಮಾಡಬೇಕಾಗಿದೆ. ಪೋರ್ಟಲ್‌ನ ಯುಆರ್‌ಎಲ್: https://upsconline.nic.in

ಅಣ್ಣಾ ವಿ.ವಿ: ಜ್ಞಾನಶೇಖರನ್ ದೋಷಿ

ಚೆನ್ನೈ (ಪಿಟಿಐ): ಅಣ್ಣಾ ವಿಶ್ವವಿದ್ಯಾಲಯದ ವಿದ್ಯಾರ್ಥಿನಿ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಬಿರಿಯಾನಿ ಮಾರಾಟಗಾರ ಜ್ಞಾನಶೇಖರನ್ ಅಪರಾಧಿ ಎಂದು ಇಲ್ಲಿನ ಮಹಿಳಾ ನ್ಯಾಯಾಲಯ ತೀರ್ಪು ನೀಡಿದೆ. ಅಪರಾಧಿಗೆ ಗರಿಷ್ಠ ಶಿಕ್ಷೆ ನೀಡುವಂತೆ ಪ್ರಾಸಿಕ್ಯೂಷನ್ ಮನವಿ ಮಾಡಿದೆ.



ಕ್ವಾಲಿಫೈಯರ್ ಇಂದು: ರಾಯಲ್ ಚಾಲೆಂಜರ್ಸ್ ಬೆಂಗಳೂರು–ಪಂಜಾಬ್ ಕಿಂಗ್ಸ್ ಮುಖಾಮುಖಿ

ಫೈನಲ್ ಪ್ರವೇಶದತ್ತ ಬೆಂಗಳೂರು ಚಿತ್ತ

ಪ್ರಜಾವಾಣಿ ವಾರ್ತೆ

ಮುಲ್ಲನಪುರ, ಚಂಡೀಗಡ: ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಹದಿನೆಂಟನೇ ಆವೃತ್ತಿಯ ಎರಡು ಸಮಬಲಶಾಲಿ ತಂಡಗಳಾದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಪಂಜಾಬ್ ಕಿಂಗ್ಸ್ ಗುರುವಾರ ನಡೆಯಲಿರುವ ಕ್ವಾಲಿಫೈಯರ್‌ನಲ್ಲಿ ಮುಖಾಮುಖಿಯಾಗಲಿವೆ.

ಈ ಪಂದ್ಯದಲ್ಲಿ ಗೆದ್ದವರು ನೇರ ಫೈನಲ್ ಪ್ರವೇಶಿಸುವರು. ಸೋತ ತಂಡವು ಎರಡನೇ ಕ್ವಾಲಿಫೈಯರ್ ಆಡಬೇಕಾಗುತ್ತದೆ. ಅದರಲ್ಲಿ ಎಲಿಮಿನೇಟರ್ ಪಂದ್ಯದಲ್ಲಿ ಗೆದ್ದ ತಂಡವನ್ನು ಎದುರಿಸಬೇಕು.

ಈ ಟೂರ್ನಿಯಲ್ಲಿ ಉಭಯ ತಂಡಗಳೂ ತಲಾ 19 ಅಂಕಗಳನ್ನು ಗಳಿಸಿವೆ. ಆದರೆ ನಿವ್ವಳ ರನ್‌ರೇಟ್‌ನಲ್ಲಿ ತುಸು ಹೆಚ್ಚಿನ ಸಾಧನೆ ಮಾಡಿರುವ ಆತಿಥೇಯ ಪಂಜಾಬ್ ಮೊದಲ ಹಾಗೂ ನಂತರದ ಸ್ಥಾನದಲ್ಲಿ ಬೆಂಗಳೂರು ಇದೆ. ತಲಾ 14 ಪಂದ್ಯಗಳನ್ನು ಆಡಿವೆ. ತಲಾ 4 ಸೋತು, 9ರಲ್ಲಿ ಜಯಿಸಿವೆ. ಮಳೆಯಿಂದ ಒಂದೊಂದು ಪಂದ್ಯ ರದ್ದಾಗಿವೆ. ಪಂಜಾಬ್ ಮತ್ತು ಆರ್‌ಸಿಬಿ ತಂಡಗಳು ಲೀಗ್ ಹಂತದಲ್ಲಿ ಉಭಯ ತಂಡಗಳು ಎರಡು ಬಾರಿ ಮುಖಾಮುಖಿಯಾಗಿವೆ. ಶ್ರೇಯಸ್ ಅಯ್ಯರ್ ನಾಯಕತ್ವದ ಪಂಜಾಬ್ ತಂಡವು ಬೆಂಗಳೂರಿನಲ್ಲಿ ಮತ್ತು ರಜತ್ ಪಾಟೀದಾರ್ ಮುಂದಾಳತ್ವದ ಆರ್‌ಸಿಬಿಯು ಮುಲ್ಲನಪುರದಲ್ಲಿ ಜಯಿಸಿತ್ತು. ಇನ್ನೊಂದು ವಿಶೇಷವೆಂದರೆ; ಈ ಎರಡೂ ತಂಡಗಳೂ 2008ರಿಂದ ಐಪಿಎಲ್‌ನಲ್ಲಿ ಆಡುತ್ತಿವೆ. ಆದರೆ ಇದುವರೆಗೂ ಪ್ರಶಸ್ತಿ ಜಯಿಸಿಲ್ಲ. ಅದರಲ್ಲೂ ಕಿಂಗ್ಸ್ ತಂಡವು 11 ವರ್ಷಗಳ ನಂತರ ಕ್ವಾಲಿಫೈಯರ್ ಪ್ರವೇಶ ಗಿಟ್ಟಿಸಿದೆ.

ಬಲಾಬಲ	35 ಪಂದ್ಯ	18 ಕಿಂಗ್ಸ್ ಜಯ	17 ಆರ್‌ಸಿಬಿ ಜಯ

ಮುಂಬರುವ ವಾರವು ನಮ್ಮ ತಂಡಕ್ಕೆ ಅತ್ಯಂತ ಸಂಭ್ರಮದ ಅವಧಿಯಾಗುವ ಸಂಭವವಿದೆ. ಅಷ್ಟೇ ಅಲ್ಲ. ಮಹತ್ವದ ಸಾಧನೆಯ ವಾರ ಇದಾಗಲಿದೆ. ನಮ್ಮ ಮನೋದಾರ್ಢ್ಯದ ಪಾತ್ರ ಮಹತ್ವದ್ದಾಗಲಿದೆ
ಮೊ ಬೊಬಾಟ್, ಆರ್‌ಸಿಬಿ ನಿರ್ದೇಶಕ

ಇಲ್ಲಿಯವರೆಗೂ ನಮ್ಮ ತಂಡದ ಸಾಧನೆಯು ಅದ್ಭುತವಾಗಿದೆ. ಪಾಯಿಂಟ್ ಪಟ್ಟಿಯಲ್ಲಿ ಅಗ್ರ ಎರಡರಲ್ಲಿ ಸ್ಥಾನ ಪಡೆಯುವುದು ನಮ್ಮ ಗುರಿಯಾಗಿತ್ತು.ಆ ಸಾಧನೆಯನ್ನು ನಾವೆಲ್ಲರೂ ಮನತುಂಬಿ ಸಂಭ್ರಮಿಸಿದ್ದೇವೆ
ರಿಕಿ ಪಾಂಟಿಂಗ್, ಪಂಜಾಬ್ ಕಿಂಗ್ಸ್ ಮುಖ್ಯ ಕೋಚ್

ರಾಯಲ್ ಚಾಲೆಂಜರ್ಸ್ ಬೆಂಗಳೂರು

ಸಾಮರ್ಥ್ಯ

- ಬ್ಯಾಟಿಂಗ್ ವಿಭಾಗದಲ್ಲಿ ಸಂಘಟಿತ ಶಕ್ತಿ ಇದೆ. ವಿರಾಟ್ ಕೊಹ್ಲಿ (602 ರನ್), ಫಿಲ್ ಸಾಲ್ಟ್ (331), ರಜತ್ ಪಾಟೀದಾರ್ (271), ಜಿತೇಶ್ ಶರ್ಮಾ (237) ಮತ್ತು ಟಿಮ್ ಡೇವಿಡ್ (187) ಅಮೋಘ ಲಯದಲ್ಲಿದ್ದಾರೆ.
- ಪಂದ್ಯಗಳ ಗೆಲುವಿಗೆ ಕಾರಣರಾದ ಇಬ್ಬರು ಆಲ್‌ರೌಂಡರ್‌ಗಳು ಕೃಣಾಲ್ ಪಾಂಡ್ಯ (15 ವಿಕೆಟ್) ಮತ್ತು ರೊಮೆರಿಯೊ ಶೆಫರ್ಡ್. ಇವರೂ ಕೂಡ ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ಮಿಂಚಿದವರು.
- ಈ ಬಾರಿ ತಂಡವು ಕೇವಲ ಒಬ್ಬರು ಅಥವಾ ಇಬ್ಬರು ತಾರೆಗಳ ಮೇಲೆ ಅವಲಂಬಿತ-ವಾಗಿಲ್ಲ. ಏಳನೇ ಕ್ರಮಾಂಕದ ಬ್ಯಾಟರ್‌ಗಳವರೆಗೂ ಉಪಯುಕ್ತ ಕಾಣಿಕೆ ನೀಡುತ್ತಿದ್ದಾರೆ.

ದೌರ್ಬಲ್ಯಗಳು

- ಬೌಲಿಂಗ್ ವಿಭಾಗದಲ್ಲಿ ಜೋಶ್ ಹ್ಯಾಜಲ್‌ವುಡ್ ತಂಡಕ್ಕೆ ಮರಳಿದ್ದಾರೆ. ಆದರೆ ಅವರು ಏಪ್ರಿಲ್ 27ರಂದು ಭುಜದ ಗಾಯದಿಂದ ಚಿಕಿತ್ಸೆಗೆ ತೆರಳಿದ್ದರು. ಅದರ ನಂತರ ಅವರು ಯಾವುದೇ ಪಂದ್ಯದಲ್ಲಿಯೂ ಆಡಿಲ್ಲ. ತಮ್ಮ ತವರು ಆಸ್ಟ್ರೇಲಿಯಾಕ್ಕೆ ಮರಳಿದ್ದ ಅವರು ಅಲ್ಲಿ ಚಿಕಿತ್ಸೆ ಪಡೆದು ಮರಳಿದ್ದಾರೆ. ಲೀಗ್ ಹಂತದ ಕೊನೆಯ ಪಂದ್ಯದಲ್ಲಿಯೂ ಅವರು ಆಡಲಿಲ್ಲ. ಆದ್ದರಿಂದ ಅವರ ಫಿಟ್‌ನೆಸ್ ಕುರಿತು ಯಾವುದೇ ಸ್ಪಷ್ಟ ಮಾಹಿತಿ ಇಲ್ಲ.
- ಭುವನೇಶ್ವರ್ ಕುಮಾರ್ ಮತ್ತು ಯಶ್ ದಯಾಳ್ ಅವರ ಫಾರ್ಮ್‌ನಲ್ಲಿ ಏರಿಳಿತಗಳಿವೆ. ಈ ಹಂತದಲ್ಲಿ ಅವರು ತಮ್ಮ ಪೂರ್ಣ ಸಾಮರ್ಥ್ಯ ವಿನಿಯೋಗಿಸುವ ಸವಾಲು ಇದೆ. ಸ್ಪಿನ್ ವಿಭಾಗದಲ್ಲಿ ಪಂದ್ಯ ಗೆಲ್ಲಿಸುವ ಸಮರ್ಥ ಬೌಲರ್‌ಗಳ ಕೊರತೆ ಇದೆ. ಕೃಣಾಲ್ ಪಾಂಡ್ಯ ಒಬ್ಬರೇ ಒತ್ತಡ ನಿಭಾಯಿಸಬೇಕಿದೆ.
- ಆರಂಭಿಕ ಬ್ಯಾಟರ್ ವಿರಾಟ್ ಕೊಹ್ಲಿ ಅವರ ಉತ್ತಮ ಬ್ಯಾಟಿಂಗ್‌ನಿಂದ ತಂಡಕ್ಕೆ ಹೆಚ್ಚು ಗೆಲುವುಗಳು ಸಾಧ್ಯವಾಗಿವೆ. ಅವರು ಈ ಸಲ ಎಂಟು ಅರ್ಧಶತಕ ದಾಖಲಿಸಿದ್ದಾರೆ. ಆದರೆ ಆರ್‌ಸಿಬಿ ಸೋತಿರುವ ನಾಲ್ಕು ಪಂದ್ಯಗಳಲ್ಲಿಯೂ ಅವರು ಅರ್ಧಶತಕ ಹೊಡೆದಿಲ್ಲ. ಆದ್ದರಿಂದ ಪಂಜಾಬ್ ಬೌಲರ್‌ಗಳು ಅವರನ್ನು ಕಟ್ಟಿಹಾಕಲು ಗಮನ ನೀಡುವ ಸಾಧ್ಯತೆ ಹೆಚ್ಚು.



ಮಯಂಕ್ ಅಗರವಾಲ್



ವಿರಾಟ್ ಕೊಹ್ಲಿ

ಪಂಜಾಬ್ ಕಿಂಗ್ಸ್

ಸಾಮರ್ಥ್ಯ

- ಅಗ್ರ ಕ್ರಮಾಂಕದ ಮೂವರು ಬ್ಯಾಟರ್‌ಗಳು ತಲಾ 400ಕ್ಕಿಂತ ಹೆಚ್ಚು ರನ್‌ಗಳನ್ನು ಗಳಿಸಿದ್ದಾರೆ. ನಾಯಕ ಶ್ರೇಯಸ್ ಅಯ್ಯರ್ (514 ರನ್), ಪ್ರಭಸಿಮ್ರನ್ ಸಿಂಗ್ (499) ಮತ್ತು ಪ್ರಿಯಾಂಶ್ ಆರ್ಯ (424) ಅವರು ಅಮೋಘ ಲಯದಲ್ಲಿದ್ದಾರೆ.
- ಮಧ್ಯಮಕ್ರಮಾಂಕದಲ್ಲಿ ನೆಹಲ್ ವಧೇರಾ (298), ಶಶಾಂಕ್ ಸಿಂಗ್ (284) ಮತ್ತು ಜೋಶ್ ಇಂಗ್ಲಿಸ್ (197) ಅವರು ಕೂಡ ತಂಡದ ಬ್ಯಾಟಿಂಗ್ ವಿಭಾಗವನ್ನು ಬಲಾಢ್ಯಗೊಳಿಸಿದ್ದಾರೆ.
- ತಂಡದ ಸ್ಪಿನ್ನರ್ ಯಜುವೇಂದ್ರ ಚಾಹಲ್ (14 ವಿಕೆಟ್) ಮತ್ತು ಹರಪ್ರೀತ್ ಬ್ರಾರ್ (10 ವಿಕೆಟ್) ಅಮೋಘ ಲಯದಲ್ಲಿದ್ದಾರೆ. ವೇಗಿ ಅರ್ಷದೀಪ್ ಸಿಂಗ್ ಕೂಡ ಉತ್ತಮ ಲಯದಲ್ಲಿದ್ದಾರೆ.

ದೌರ್ಬಲ್ಯಗಳು

- ಪಂಜಾಬ್ ತಂಡದಲ್ಲಿರುವ ಬಹುತೇಕ ಆಟಗಾರರಿಗೆ ಇದು ಮೊದಲ ಕ್ವಾಲಿಫೈಯರ್ ಪಂದ್ಯವಾಗಿದೆ. ತಂಡವು 11 ವರ್ಷಗಳ ನಂತರ ಪ್ಲೇಆಫ್ ಹಂತಕ್ಕೆ ಪ್ರವೇಶಿಸಿರುವುದು ಇದಕ್ಕೆ ಕಾರಣ. ಚಾಹಲ್, ಶ್ರೇಯಸ್ ಅವರಿಗೆ ಈ ಹಿಂದೆ ಪ್ಲೇಆಫ್‌ಗಳಲ್ಲಿ ಆಡಿದ ಅನುಭವ ಇದೆ.
- ಪಂಜಾಬ್ ಬೌಲರ್‌ಗಳು ವಿಕೆಟ್ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಆದರೆ, ಓವರ್‌ಗೆ 8.5 ರನ್‌ಗಳನ್ನು ಬಿಟ್ಟುಕೊಟ್ಟು ದುಬಾರಿ ಕೂಡ ಆಗಿದ್ದಾರೆ.
- ಮುಲ್ಲನಪುರದಲ್ಲಿಯೇ ನಡೆದಿದ್ದ ಲೀಗ್ ಹಂತದ ಪಂದ್ಯದಲ್ಲಿ ಆರ್‌ಸಿಬಿಯು ಪಂಜಾಬ್ ತಂಡವನ್ನು ಸೋಲಿಸಿತ್ತು.




ಪಂಜಾಬ್ ಕಿಂಗ್ಸ್ ತಂಡದ ನಾಯಕ ಶ್ರೇಯಸ್ ಅಯ್ಯರ್ ಮತ್ತು ಸಹಮಾಲೀಕರಾದ ಬಾಲಿವುಡ್ ತಾರೆ ಪ್ರೀತಿ ಜಿಂಟಾ –ಪಿಟಿಐ ಚಿತ್ರ

ಪಿಚ್ ಹೇಗಿದೆ?

ಈ ಭಾಗದಲ್ಲಿ ಬೇಸಿಗೆಯ ಕಾವು ಜೋರಾಗಿದೆ. ಪಂದ್ಯ ನಡೆಯಲಿರುವ ದಿನ ಗರಿಷ್ಠ 38 ಡಿಗ್ರಿ ಸೆಲ್ಸಿಯಸ್ ಮತ್ತು ಕನಿಷ್ಠ 20 ಡಿಗ್ರಿ ಸೆಲ್ಸಿಯಸ್ ತಾಪಮಾನ ಇರಲಿದೆ ಎಂದು ಹವಾಮಾನ ಮುನ್ಸೂಚನೆಗಳಿವೆ. ಈ ಕ್ರೀಡಾಂಗಣದಲ್ಲಿ ನಡೆದ ಕಳೆದೆರಡೂ ಪಂದ್ಯಗಳ ಮೂರು ಇನಿಂಗ್ಸ್‌ಗಳಲ್ಲಿ 200 ರನ್‌ಗಳಿಗಿಂತಲೂ ಹೆಚ್ಚಿನ ಮೊತ್ತಗಳು ದಾಖಲಾಗಿವೆ. ಆದ್ದರಿಂದ ಈ ಫಂದ್ಯದಲ್ಲಿಯೂ ರನ್ ಹೊಳೆ ಹರಿಯುವ ಎಲ್ಲ ಸಾಧ್ಯತೆಗಳೂ ಇವೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ಜಿಯೊ ಹಾಟ್‌ಸ್ಟಾರ್ ಆ್ಯಪ್



ಫ್ರೆಂಚ್ ಓಪನ್‌ನಲ್ಲಿ ರಾಫೆಲ್ ನಡಾಲ್‌ಗೆ ವಿದಾಯ ಸಮಾರಂಭದ ಮೂಲಕ ಸನ್ಮಾನ!

ರಿಷಭ್ ಪಂತ್‌ಗೆ ₹ 30 ಲಕ್ಷ ದಂಡ

ಲಖನೌ (ಪಿಟಿಐ): ಲಖನೌ ಸೂಪರ್ ಜೈಂಟ್ಸ್ ತಂಡದ ನಾಯಕ ರಿಷಭ್ ಪಂತ್ ಅವರಿಗೆ ₹ 30 ಲಕ್ಷ ದಂಡ ವಿಧಿಸಲಾಗಿದೆ.

ಮಂಗಳವಾರ ಏಕನಾ ಕ್ರೀಡಾಂಗಣದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ ನಡೆದ ಪಂದ್ಯದಲ್ಲಿ ನಿಗದಿಯ ಅವಧಿಯೊಳಗೆ ಓವರ್‌ಗಳನ್ನು ಮುಗಿಸಿರಲಿಲ್ಲ.



ರಿಷಭ್ ಪಂತ್

'ಲಖನೌ ತಂಡವು ಮೂರನೇ ಸಲ ಸ್ಲೋ ಓವರ್ ರೇಟ್ ನಿಯಮ ಉಲ್ಲಂಘಿಸಿದೆ. ನಾಯಕ ಪಂತ್ ಅವರಿಗೆ ₹ 30 ಲಕ್ಷ ಮತ್ತು ತಂಡದ ಇಂಪ್ಯಾಕ್ಟ್ ಪ್ಲೇಯರ್ ಸೇರಿದಂತೆ ಉಳಿದೆಲ್ಲ ಆಟಗಾರರಿಗೂ ತಲಾ ₹ 12 ಲಕ್ಷ ಅಥವಾ ಪಂದ್ಯ ಶುಲ್ಕದ ಶೇ50 ರಷ್ಟು ದಂಡ ಹಾಕಲಾಗಿದೆ' ಎಂದು ಐಪಿಎಲ್ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸಾತ್ವಿಕ್–ಚಿರಾಗ್ ಶುಭಾರಂಭ

ಸಿಂಗಪುರ (ಪಿಟಿಐ): ಭಾರತದ ಅಗ್ರ ಡಬಲ್ಸ್ ಆಟಗಾರರಾದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಸಿಂಗಪುರ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯ ಮೊದಲ ಸುತ್ತಿನಲ್ಲಿ ಬುಧವಾರ ಸುಲಭ ಗೆಲುವು ಸಾಧಿಸಿದರು. ಆದರೆ ಪ್ರಮುಖ ಸಿಂಗಲ್ಸ್ ಆಟಗಾರ ಲಕ್ಷ್ಯ ಸೇನ್ ಅವರು ಮೊದಲ ಸುತ್ತಿನ ಪಂದ್ಯ ನಡೆಯುತ್ತಿದ್ದಾಗ ಬೆನ್ನುನೋವಿನ ಕಾರಣ ಅರ್ಧದಲ್ಲೇ ಹಿಂದೆಸರಿದರು.

ಮಾರ್ಚ್‌ನಲ್ಲಿ ಆಲ್ ಇಂಗ್ಲೆಂಡ್ ಓಪನ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ ಸಂದರ್ಭದಲ್ಲಿ ಚಿರಾಗ್ ಅವರಿಗೆ ಬೆನ್ನುನೋವು ಕಾಡಿ ಹಿಂದೆಸರಿದ ಬಳಿಕ ಇದೇ ಮೊದಲ ಬಾರಿ ಭಾರತದ ಆಟಗಾರರು ಕಣಕ್ಕಿಳಿದಿದ್ದರು. ಆದರೆ ವಿಶ್ವದ ಮಾಜಿ ಅಗ್ರಮಾನ್ಯ ಜೋಡಿ 40 ನಿಮಿಷಗಳಲ್ಲಿ ಮಲೇಷ್ಯಾದ ಚೂಂಗ್ ಹಾನ್ ಜಿಯಾನ್– ಮುಹಮ್ಮದ್ ಹೈಕಲ್ ಜೋಡಿಯನ್ನು 21–16, 21–13ರಿಂದ ಹಿಮ್ಮೆಟ್ಟಿಸಿ 16ರ ಸುತ್ತಿಗೆ ಮುನ್ನಡೆಯಿತು.

ಭಾರತದ ಅಗ್ರ ಸಿಂಗಲ್ಸ್ ಆಟಗಾರ ಸೇನ್, ಚೀನಾದ ಲಿನ್ ಚುನ್‌-ಯಿ ವಿರುದ್ಧದ ಪಂದ್ಯದಲ್ಲಿ 21–17, 15–21, 5–13ರಲ್ಲಿ ಹಿನ್ನಡೆಯಲ್ಲಿದ್ದಾಗ ಪಂದ್ಯ ಬಿಟ್ಟುಕೊಟ್ಟರು.



ಸಾತ್ವಿಕ್ ಮತ್ತು ಚಿರಾಗ್

ಮಿಶ್ರ ಡಬಲ್ಸ್‌ನಲ್ಲಿ ರೋಹನ್ ಕಪೂರ್ ಮತ್ತು ರುತ್ವಿಕಾ ಶಿವಾನಿ ಗದ್ದೆ ಜೋಡಿ 21–16, 21–19 ರಿಂದ ಅಮೆರಿಕದ ಚೆನ್ ಝಿ ಯಿ- ಫ್ರಾನ್ಸೆಸ್ಕಾ ಕಾರ್ಬೆಟ್ ಜೋಡಿಯನ್ನು ಮಣಿಸಿ ಪ್ರಿಕ್ವಾರ್ಟರ್‌ಫೈನಲ್ ತಲುಪಿತು.

ಮಹಿಳಾ ಸಿಂಗಲ್ಸ್‌ನಲ್ಲಿ ಆಕರ್ಷಿ ಕಶ್ಯಪ್, ಉನ್ನತಿ ಹೂಡಾ ಮತ್ತು ಅನುಪಮಾ ಉಪಾಧ್ಯಾಯ ಹೊರಬಿದ್ದರು. ಆಕರ್ಷಿ 21–17, 13–21, 7–21 ರಿಂದ ವಿಶ್ವದ ನಾಲ್ಕನೇ ಕ್ರಮಾಂಕದ ಆಟಗಾರ್ತಿ ಹಾನ್ ಯುಯಿಅವರಿಗೆ ಮಣಿದರು. ಉನ್ನತಿ 21–13, 9–21, 15–21 ರಿಂದ ಎರಡನೇ ಕ್ರಮಾಂಕದ ವಾಂಗ್ ಝಿ ಯಿ ಅವರಿಗೆ ಸೋತರು.

ಫ್ರೆಂಚ್ ಓಪನ್: ರುಡ್ ನಿರ್ಗಮನ ● ಶ್ವಾಂಟೆಕ್ ಮುನ್ನಡೆ


ಮೂರನೇ ಸುತ್ತಿಗೆ ಅಲ್ಕರಾಜ್

ಪ್ಯಾರಿಸ್ (ಎಎಫ್‌ಪಿ): ಪ್ರಶಸ್ತಿಗೆ ನೆಚ್ಚಿನ ಆಟಗಾರ, ಎರಡನೇ ಶ್ರೇಯಾಂಕದ ಕಾರ್ಲೋಸ್ ಅಲ್ಕರಾಜ್ ಅವರು ಬುಧವಾರ ನಡೆದ ಪಂದ್ಯದಲ್ಲಿ ಕೆಲಕಾಲ ಪರದಾಡಿದರೂ, ಅಂತಿಮವಾಗಿ ನಾಲ್ಕು ಸೆಟ್‌ಗಳಲ್ಲಿ ಗೆದ್ದು ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಮೂರನೇ ಸುತ್ತಿಗೆ ಮುನ್ನಡೆದರು. ಮಹಿಳೆಯರ ವಿಭಾಗದಲ್ಲಿ ಸತತ ನಾಲ್ಕನೇ ಪ್ರಶಸ್ತಿಯ ಯತ್ನದಲ್ಲಿರುವ ಹಾಲಿ ಚಾಂಪಿಯನ್ ಇಗಾ ಶ್ವಾಂಟೆಕ್ ಕೂಡ ಮುನ್ನಡೆ ಸಾಧಿಸಿದರು.

ಆದರೆ ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ಎರಡು ಬಾರಿ ರನ್ನರ್ ಅಪ್ ಆಗಿರುವ ಕ್ಯಾಸ್ಪರ್ ರುಡ್ ಅಭಿಯಾನ ಬೇಗನೇ ಅಂತ್ಯಗೊಂಡಿತು.

ಹಾಲಿ ಚಾಂಪಿಯನ್ ಅಲ್ಕರಾಜ್ 6–1, 4–6, 6–1, 6–2 ರಿಂದ ಹಂಗೆರಿಯ ಫ್ಯಾಬಿಯನ್ ಮೊರೊಜ್‌ಸಾನ್ ಅವರನ್ನು ಸೋಲಿಸಿದರು. ಇದು ಕ್ಲೇ ಅಂಕಣದಲ್ಲಿ ಸ್ಪೇನ್ ಆಟಗಾರನಿಗೆ ಈ ವರ್ಷ 18 ಪಂದ್ಯಗಳಲ್ಲಿ 17ನೇ ಜಯ.

ವಿಶ್ವ ಕ್ರಮಾಂಕದಲ್ಲಿ 41ನೇ ಸ್ಥಾನದಲ್ಲಿರುವ ಪೋರ್ಚುಗಲ್‌ನ ನುನೊ ಬೋರ್ಗೆಸ್ 2–6, 6–4, 6–1, 6–0 ಯಿಂದ ಏಳನೇ ಶ್ರೇಯಾಂಕದ ಪಡೆದಿರುವ ರುಡ್ ಅವರನ್ನು ಪರಾಭವಗೊಳಿಸಿದರು. ಮೊದಲ ಸೆಟ್ ಗೆದ್ದ ನಂತರ ನಾರ್ವೆಯ ರುಡ್ ಅವರಿಗೆ ಕಾಲಿನ ನೋವು ಕಾಡಿತು.



ಪೋಲೆಂಡ್‌ನ ಇಗಾ ಶ್ವಾಂಟೆಕ್ ಎಎಫ್‌ಪಿ ಚಿತ್ರ

ಉತ್ತಮ ಲಯದಲ್ಲಿರುವ ಲೊರೆಂಜೊ ಮುಸೆಟ್ಟಿ 6–4, 6–0, 6–4 ರಿಂದ ಕೊಲಂಬಿಯಾದ ಡೇನಿಯಲ್ ಇಲಾಹಿ ಗಾಲನ್ ಅವರನ್ನು ಸೋಲಿಸಿದರು. ಇಟಲಿಯ ಆಟಗಾರ ಇಲ್ಲಿ ಎಂಟನೇ ಶ್ರೇಯಾಂಕ ಪಡೆದಿದ್ದಾರೆ.

ಶ್ವಾಂಟೆಕ್ ಮುನ್ನಡೆ: ಪೋಲೆಂಡ್‌ನ ಶ್ವಾಂಟೆಕ್ ಎರಡನೇ ಸುತ್ತಿನಲ್ಲಿ 6–1, 6–2 ರಿಂದ ಅಮೆರಿಕ ಓಪನ್ ಮಾಜಿ ಚಾಂಪಿಯನ್ ಎಮ್ಮಾ ರಾಡುಕಾನು ಅವರನ್ನು ಸೋಲಿಸಿದರು. 102 ವರ್ಷಗಳ ಹಿಂದೆ ಸುಝೇನ್ ಲೆಂಗ್ಲೆನ್ ಕೊನೆಯ ಸಲ ಇಲ್ಲಿ ಸತತ ನಾಲ್ಕು ವರ್ಷ ಪ್ರಶಸ್ತಿ ಗೆದ್ದಿದ್ದು, 23 ವರ್ಷ ವಯಸ್ಸಿನ ಶ್ವಾಂಟೆಕ್ ಆ ಸಾಧನೆ ಸರಿಗಟ್ಟುವ ಯತ್ನದಲ್ಲಿದ್ದಾರೆ.

ಕಳೆದ ವರ್ಷದ ರನ್ನರ್ ಅಪ್, ನಾಲ್ಕನೇ ಶ್ರೇಯಾಂಕದ ಜಾಸ್ಮಿನ್ ಪಾವೊಲಿನಿ ಇನ್ನೊಂದು ಪಂದ್ಯದಲ್ಲಿ 6-3, 6-3 ರಿಂದ ಐಲಾ ಟೊಮಿನೊವಿಕ್ ಅವರನ್ನು ಸೋಲಿಸಿದರು.

ಒಲಿಂಪಿಕ್ ಚಾಂಪಿಯನ್ ಝೆಂಗ್ ಕ್ವಿನ್ವೆನ್ 6–2, 6–3 ರಿಂದ ಕೊಲಂಬಿಯಾದ ಎಮಿಲಿಯಾನ ಅರಂಗೊ ವಿರುದ್ಧ ಸುಲಭವಾಗಿ ಗೆದ್ದು 32ರ ಸುತ್ತಿಗೆ ಸ್ಥಾನ ಕಾದಿರಿಸಿದರು.

ಸಂಕ್ಷಿಪ್ತ ಸುದ್ದಿ

ಪ್ರೊ ಲೀಗ್ ಆಡಲು ಮಹಿಳಾ ತಂಡ ನೆದರ್ಲೆಂಡ್ಸ್‌ಗೆ

ನವದೆಹಲಿ (ಪಿಟಿಐ): ಎಫ್‌ಐಎಚ್ ಪ್ರೊ ಲೀಗ್‌ನ ಯುರೋಪ್ ಲೆಗ್‌ನಲ್ಲಿ ಉತ್ತಮ ಆಟವಾಡುವ ವಿಶ್ವಾಸದೊಂದಿಗೆ ಭಾರತ ಮಹಿಳಾ ಹಾಕಿ ತಂಡ ಬುಧವಾರ ಬೆಂಗಳೂರಿನಿಂದ ನೆದರ್ಲೆಂಡ್ಸ್‌ನ ಆಮ್‌ಸ್ಟರ್ಡಾಮ್‌ಗೆ ತೆರಳಿತು.

ಅಲ್ಲಿ ಜೂನ್ 8ರವರೆಗೆ ಶಿಬಿರದಲ್ಲಿ ಭಾಗಿಯಾದ ನಂತರ ತಂಡವು ಮೊದಲ ನಾಲ್ಕು ಪಂದ್ಯಗಳನ್ನು ಆಡಲು ಲಂಡನ್‌ಗೆ ತೆರಳಲಿದೆ. ಅಲ್ಲಿ ಆಸ್ಟ್ರೇಲಿಯಾ ವಿರುದ್ಧ (ಜೂನ್ 14 ಮತ್ತು 15ರಂದು) ಮತ್ತು ಅರ್ಜೆಂಟೀನಾ ವಿರುದ್ಧ (ಜೂನ್ 17 ಮತ್ತು 18ರಂದು) ಪಂದ್ಯಗಳನ್ನು ಆಡಲಿದೆ.

ಜೂನ್ 19ರಂದು ಆ್ಯಂಟ್‌ವರ್ಪ್‌ಗೆ ತೆರಳಲಿರುವ ಭಾರತ ಅಲ್ಲಿ 21 ಮತ್ತು 22ರಂದು ಬೆಲ್ಜಿಯಂ ವಿರುದ್ಧ ಎರಡು ಪಂದ್ಯಗಳನ್ನು ಆಡಲಿದೆ. ಬರ್ಲಿನ್‌ನಲ್ಲಿ ಚೀನಾ ವಿರುದ್ಧ 28 ಮತ್ತು 29ರಂದು ಮತ್ತೆರಡು ಪಂದ್ಯಗಳನ್ನು ಆಡುವ ಮೂಲಕ ಯುರೋಪಿಯನ್ ಲೆಗ್ ಮುಗಿಸಲಿದೆ.

ಸಲೀಮಾ ಟೆಟೆ ತಂಡದ ನೇತೃತ್ವ ವಹಿಸಿದ್ದು, ನವನೀತ್ ಕೌರ್ ಉಪನಾಯಕಿ ಆಗಿದ್ದಾರೆ.

ಜೂನಿಯರ್ ಮಹಿಳಾ ಹಾಕಿ: ಭಾರತ ತಂಡಕ್ಕೆ ಗೆಲುವು

ರೊಸಾರಿಯೊ (ಅರ್ಜೆಂಟೀನಾ), (ಪಿಟಿಐ): ಭಾರತದ ಗೋಲ್‌ಕೀಪರ್ ನಿಧಿ ಅವರು ಪೆನಾಲ್ಟಿ ಶೂಟೌಟ್‌ನಲ್ಲಿ ಅರ್ಜೆಂಟೀನಾ ತಂಡದ ಆಟಗಾರ್ತಿಯರ ನಾಲ್ಕು ಗೋಲು ಯತ್ನಗಳನ್ನು ತಡೆದು ಮಿಂಚಿದರು. ಅವರ ಈ ಉತ್ತಮ ನಿರ್ವಹಣೆಯಿಂದಾಗಿ ಭಾರತ ತಂಡವು ನಾಲ್ಕು ರಾಷ್ಟ್ರಗಳ ಜೂನಿಯರ್ ಮಹಿಳಾ ಹಾಕಿ ಟೂರ್ನಿಯ ಪಂದ್ಯದಲ್ಲಿ ಬುಧವಾರ ಆತಿಥೇಯ ತಂಡವನ್ನು 'ಪೆನಾಲ್ಟಿ ಶೂಟೌಟ್'ನಲ್ಲಿ 2–0 ಯಿಂದ ಸೋಲಿಸಿತು.

ನಿಗದಿತ ಅವಧಿಯ ಆಟ 1–1 ಸಮಬಲಗೊಂಡಿತ್ತು.

ನಿಗದಿ ಅವಧಿಯ ಆಟದಲ್ಲಿ ಕನಿಕಾ 44ನೇ ನಿಮಿಷ ಗೋಲು ಗಳಿಸಿದ್ದರು. ಪೆನಾಲ್ಟಿ ಯತ್ನಗಳಲ್ಲಿ ಲಾಲ್ರಿನ್‌ಪುಯಿ ಮತ್ತು ಲಾಲ್ತನ್ಲುವಾಂಗಿ ಚೆಂಡನ್ನು ಗುರಿತಲುಪಿಸಿದರು.

ಅರ್ಜೆಂಟೀನಾ ತಂಡದ ಪರ ಮಿಲಾಗ್ರೊಸ್ ಡೆಲ್ ವಲೆ ನಿಗದಿ ಅವಧಿಯ 10ನೇ ನಿಮಿಷ ಗೋಲು ಗಳಿಸಿದ್ದರು.

ಭಾರತ ಶುಕ್ರವಾರ ನಡೆಯುವ ಪಂದ್ಯದಲ್ಲಿ ಚಿಲಿ ತಂಡವನ್ನು ಎದುರಿಸಲಿದೆ.

ಅರ್ಜುನ್ ಇರಿಗೇಶಿಗೆ ಮಣಿದ ಗುಕೇಶ್

ಸ್ಟಾವೆಂಜರ್ (ನಾರ್ವೆ), (ಪಿಟಿಐ): ವಿಶ್ವ ಚಾಂಪಿಯನ್ ಡಿ.ಗುಕೇಶ್ ಮತ್ತೊಂದು ಸೋಲನ್ನು ಕಂಡರು. ನಾರ್ವೆ ಚೆಸ್ ಟೂರ್ನಿಯ ಎರಡನೇ ಸುತ್ತಿನ ಪಂದ್ಯದಲ್ಲಿ ಅರ್ಜುನ್ ಇರಿಗೇಶಿ ಅವರು ಗುಕೇಶ್ ಅವರ ರಕ್ಷಣಾ ಕೋಟೆಯನ್ನು ಮುರಿದು ಅಮೆರಿಕದ ಹಿಕಾರು ನಕಾಮುರ ಜೊತೆ ಜಂಟಿಯಾಗಿ ಅಗ್ರಸ್ಥಾನ ಹಂಚಿಕೊಂಡಿದ್ದಾರೆ.

ಇರಿಗೇಶಿ ಮತ್ತು ನಕಾಮುರ ತಲಾ 4.5 ಪಾಯಿಂಟ್ಸ್ ಗಳಿಸಿದ್ದಾರೆ. ನಕಾಮುರ ಮತ್ತೊಂದು ಪಂದ್ಯದಲ್ಲಿ ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ (4) ಅವರಿಗೆ ಸೋಲುಣಿಸಿದರು. ಮೂರನೇ ಕ್ರಮಾಂಕದ ಫ್ಯಾಬಿಯಾನೊ ಕರುವಾನ (3) ಮತ್ತೊಂದು ಪಂದ್ಯದಲ್ಲಿ ಚೀನಾದ ವೀ ಯಿ(1) ಅವರನ್ನು ಮಣಿಸಿದರು.



ಅರ್ಜುನ್

ಈ ಟೂರ್ನಿಯು ಆರು ಸುತ್ತುಗಳನ್ನು ಹೊಂದಿದ್ದು ಎರಡನೇ ಸುತ್ತಿನ ನಂತರ ಗುಕೇಶ್ ತಳದಲ್ಲಿದ್ದಾರೆ.

ಮೂರನೇ ಸುತ್ತಿನಲ್ಲಿ ಇರಿಗೇಶಿ, ಅಮೆರಿಕದ ಫ್ಯಾಬಿಯಾನೊ ಕರುವಾನ ಅವರನ್ನು ಎದುರಿಸಲಿದ್ದಾರೆ. ಗುರುವಾರ 19ನೇ ವರ್ಷಕ್ಕೆ ಕಾಲಿಡಲಿರುವ ಗುಕೇಶ್ ಅವರ ಎದುರಾಳಿ ನಕಾಮುರ.

ಹಾಲಿ ಚಾಂಪಿಯನ್ ಕಾರ್ಲ್‌ಸನ್ ಮತ್ತು ನಕಾಮುರ ನಡುವೆ ಕ್ಲಾಸಿಕಲ್ ಪಂದ್ಯ ಡ್ರಾ ಆಯಿತು. 'ಆರ್ಮ್‌ಗೆಡನ್' ನಲ್ಲಿ ನಕಾಮುರ ಜಯಗಳಿಸಿದರು.

ಹಂಪಿ, ವೈಶಾಲಿಗೆ ಸೋಲು: ಮಹಿಳೆಯರ ವಿಭಾಗದಲ್ಲಿ ಉಕ್ರೇನಿನ ಅನ್ನಾ ಮುಝಿಚುಕ್ (4.5), ಕೋನೇರು ಹಂಪಿ (3) ಅವರನ್ನು ಮಣಿಸಿದರು.

ವೈಶಾಲಿ ಮತ್ತು ಚೀನಾದ ಟೀ ಲಿಂಗ್ಜೀ (3) ನಡುವಣ ಪಂದ್ಯ ಡ್ರಾ ಆಯಿತು. ಆದರೆ ಆರ್ಮ್‌ಗೆಡನ್‌ನಲ್ಲಿ ವೈಶಾಲಿ ಸೋತರು.

ಏಷ್ಯನ್ ಅಥ್ಲೆಟಿಕ್ ಚಾಂಪಿಯನ್‌ಷಿಪ್: ಎರಡನೇ ದಿನ 4 ಬೆಳ್ಳಿ, 1 ಕಂಚು

4x400 ಮೀ. ಮಿಶ್ರ ರಿಲೇ ಚಿನ್ನ ಗೆದ್ದ ಭಾರತ

ಗುಮಿ (ದಕ್ಷಿಣ ಕೊರಿಯಾ), (ಪಿಟಿಐ): ಭಾರತ ತಂಡವು 26ನೇ ಏಷ್ಯನ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ 4x400 ಮೀ. ಮಿಶ್ರ ರಿಲೇ ಓಟದ ಚಿನ್ನವನ್ನು ತನ್ನಲ್ಲೇ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಯಿತು. ಈ ಸ್ವರ್ಣದ ಜೊತೆ ಕೂಟದ ಎರಡನೇ ದಿನವಾದ ಬುಧವಾರ ಭಾರತದ ಅಥ್ಲೀಟುಗಳು ವೈಯಕ್ತಿಕ ವಿಭಾಗದಲ್ಲಿ ನಾಲ್ಕು ಬೆಳ್ಳಿ, ಒಂದು ಕಂಚಿನ ಪದಕವನ್ನು ಗೆದ್ದುಕೊಂಡು ಗಮನ ಸೆಳೆದರು.

ರೂಪಲ್ ಚೌಧರಿ, ಸಂತೋಷ್ ಕುಮಾರ್, ವಿಶಾಲ್ ಟಿ.ಕೆ. ಮತ್ತು ಶುಭಾ ವೆಂಕಟೇಶನ್ ಅವರನ್ನೊಳಗೊಂಡ ತಂಡ 3ನಿ.18.12 ಸೆಕೆಂಡುಗಳಲ್ಲಿ ಗುರಿತಲುಪಿತು. ಇವರಲ್ಲಿ ರೂಪಲ್ ಚೌಧರಿ ಬೆಳಿಗ್ಗೆ ನಡೆದ ಮಹಿಳೆಯರ 400 ಮೀ. ಓಟದಲ್ಲಿ ಬೆಳ್ಳಿ ಪದಕವನ್ನೂ ಗೆದ್ದುಕೊಂಡಿದ್ದರು.

ಭಾರತ ತಂಡ ಬ್ಯಾಂಕಾಕ್‌ನಲ್ಲಿ ನಡೆದ 2023ರ ಆವೃತ್ತಿಯಲ್ಲೂ ಮಿಶ್ರ ರಿಲೇ ಸ್ಪರ್ಧೆಯಲ್ಲಿ ವಿಜಯಿಯಾಗಿತ್ತು. ಶುಭಾ ಆಗಿನ ತಂಡದಲ್ಲೂ ಓಡಿದ್ದರು.

ಸಾಕಷ್ಟು ಹಿಂದೆಬಿದ್ದು, 3ನಿ.20.52 ಸೆ.ಗಳಲ್ಲಿ ಓಟ ಕ್ರಮಿಸಿದ ಚೀನಾ ತಂಡ ಮತ್ತು 3ನಿ.21.95 ಸೆ.ಗಳಲ್ಲಿ ಓಟ ಪೂರೈಸಿದ ಶ್ರೀಲಂಕಾ ತಂಡಗಳು ಎರಡು ಮತ್ತು ಮೂರನೇ ಸ್ಥಾನ ಪಡೆದರೂ, ನಂತರ ಈ ಎರಡೂ ತಂಡಗಳನ್ನು ಅನರ್ಹಗೊಳಿಸಲಾಯಿತು. ಇದಕ್ಕೆ ಕಾರಣವನ್ನು ಬಹಿರಂಗಪಡಿಸಲಾಗಿಲ್ಲ.



ಚಿನ್ನ ಗೆದ್ದ ಮಿಶ್ರ ರಿಲೇ ತಂಡ (ಎಡದಿಂದ), ಶುಭಾ ವೆಂಕಟೇಶನ್, ವಿಶಾಲ್ ಟಿ.ಕೆ. ಸಂತೋಷಕುಮಾರ್ ತಮಿಳರಸನ್, ರೂಪಲ್ ಚೌಧರಿ –ಎಸ್‌ಎಐ ಟ್ವಿಟರ್ ಚಿತ್ರ

ಇವುಗಳ ಅನರ್ಹತೆಯಿಂದಾಗಿ ಕಜಕಸ್ಥಾನ (3:22.70) ಮತ್ತು ದಕ್ಷಿಣ ಕೊರಿಯಾ (3:22.87) ತಂಡಗಳು ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ತಮ್ಮದಾಗಿಸಿಕೊಂಡವು.

ಇದು ಭಾರತಕ್ಕೆ ಎರಡನೇ ಚಿನ್ನ. ಮೊದಲ ದಿನ 10,000 ಮೀ. ಓಟದಲ್ಲಿ ಗುಲ್ವೀರ್ ಸಿಂಗ್ ಅಗ್ರಸ್ಥಾನ ಪಡೆದಿದ್ದರು.

ತೇಜಸ್ವಿನ್‌ಗೆ ಬೆಳ್ಳಿ: ಬಹುತೇಕ ಅಮೆರಿಕದಲ್ಲೇ ನೆಲಸಿರುವ ತೇಜಸ್ವಿನ್ ಶಂಕರ್ ಹತ್ತು ಸ್ಪರ್ಧೆಗಳ ಡೆಕಥ್ಲಾನ್‌ನಲ್ಲಿ 7,618 ಪಾಯಿಂಟ್ಸ್ ಕಲೆಹಾಕಿ ಬೆಳ್ಳಿ ಪದಕ ಗೆದ್ದರು. ಚೀನಾದ ಫೀ ಷಿಯಾಂಗ್ (7634) ಅವರು 16 ಪಾಯಿಂಟ್ ಹೆಚ್ಚಿಗೆ ಪಡೆದು ಚಿನ್ನ ಗೆದ್ದರು. ಜಪಾನ್‌ನ ಕೀಸುಕೆ ಒಕುಡಾ (7602) ಕಂಚಿನ ಪದಕ ಪಡೆದರು.

ಪ್ರವೀಣ್ ಚಿತ್ರವೇಲ್ ಪುರುಷರ ಟ್ರಿಪಲ್ ಜಂಪ್‌ನಲ್ಲಿ 16.90 ಮೀ.ಗಳ ಜಿಗಿತದ ಉತ್ತಮ ಪ್ರಯತ್ನದೊಡನೆ ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು.

400 ಮೀ. ಓಟದಲ್ಲಿ ರೂಪಲ್ 52.68 ಸೆ.ಗಳಲ್ಲಿ ಓಟ ಪೂರೈಸಿ ಎರಡನೇ ಸ್ಥಾನ ಪಡೆದರು. ಭಾರತದ ಇನ್ನೊಬ್ಬ ಪ್ರಮುಖ ಓಟಗಾರ್ತಿ ವಿದ್ಯಾ ರಾಮರಾಜ್ (53.00 ಸೆ.) ನಾಲ್ಕನೇ ಸ್ಥಾನಕ್ಕೆ ಸರಿಯಬೇಕಾಯಿತು. ಈ ಓಟದಲ್ಲಿ ಜಪಾನ್‌ನ ನನಕೊ ಮತ್ಸುಮೋಟೊ (52.17 ಸೆ.) ಚಿನ್ನ ಗೆದ್ದರೆ, ಉಜ್ಬೇಕಿಸ್ತಾನದ ಜೊಂಬಿಬಿ ಹುಕ್ಮೊವಾ (52.79 ಸೆ.) ಕಂಚಿನ ಪದಕ ಗಳಿಸಿದರು.

ಮಹಿಳೆಯರ 1,500 ಮೀ. ಓಟವನ್ನು ಪೂಜಾ 4ನಿ.10.83 ಸೆ.ಗಳಲ್ಲಿ ಓಡಿ, ಭಾರತದ ಪದಕ ಪಟ್ಟಿಗೆ ಇನ್ನೊಂದು ಬೆಳ್ಳಿ ಸೇರಿಸಿದರು. ಚೀನಾದ ಲಿ ಚುನ್‌ಹುಯಿ (4ನಿ.10.58 ಸೆ.) ಅಗ್ರಸ್ಥಾನ ಪಡೆದರೆ, ಜಪಾನ್‌ನ ಟೊಮಕಾ ಕಿಮುರಾ ಕಂಚಿನ ಪದಕ ಗೆಲ್ಲುವ ಹಾದಿಯಲ್ಲಿ ತಮ್ಮ ವರ್ಷದ ಶ್ರೇಷ್ಠ ಕಾಲಾವಧಿ (4ನಿ.11.56ಸೆ.) ದಾಖಲಿಸಿದರು.

ಉತ್ತರ ಪ್ರದೇಶದ ಮೀರತ್ ಜಿಲ್ಲೆಯ ಶಾಪುರ ಜೈನ್‌ಪುರ ಗ್ರಾಮದ ರೈತಾಪಿ ಕುಟುಂಬದಿಂದ ಬಂದಿರುವ ರೂಪಲ್ ಉದಯೋನ್ಮುಖ ಓಟಗಾರ್ತಿ ಎನಿಸಿದ್ದಾರೆ. 20 ವರ್ಷ ವಯಸ್ಸಿನ ಈ ಓಟಗಾರ್ತಿ, 2022ರ ವಿಶ್ವ 20 ವರ್ಷದೊಳಗಿನವರ ಅಥ್ಲೆಟಿಕ್ ಕೂಟದಲ್ಲಿ ಒಂದು ಬೆಳ್ಳಿ (4x400 ಮೀ.) ಮತ್ತು ಒಂದು ಕಂಚು (400 ಮೀ. ಓಟ) ಗೆದ್ದು ಮೊದಲ ಸಲ ಗಮನ ಸೆಳೆದಿದ್ದರು.

ಪುರುಷರ ವಿಭಾಗದ 1,500 ಮೀ. ಓಟವನ್ನು ಯೂನುಸ್ ಶಾ 3ನಿ.43.03 ಸೆ.ಗಳಲ್ಲಿ ಓಡಿ ಕಂಚಿನ ಪದಕ ಗೆದ್ದರು. ಜಪಾನ್‌ನಿ ಕಝುಟೊ ಲಿಝಾವ (3ನಿ.42.56 ಸೆ.) ತಮ್ಮ ವೈಯಕ್ತಿಕ ಶ್ರೇಷ್ಠ ಓಟ ಓಡಿ ಚಿನ್ನದ ಪದಕದ ಒಡೆಯರಾದರು. ದಕ್ಷಿಣ ಕೊರಿಯಾದ ಜೇಯುಂಗ್ ಲೀ (3ನಿ.42.79 ಸೆ.) ಬೆಳ್ಳಿ ಪದಕ ಗೆದ್ದರು.

ವಿಶಾಲ್ ತೆನ್ನರಸು ಅವರು ಪುರುಷರ 400 ಮೀ. ಓಟದಲ್ಲಿ ವೈಯಕ್ತಿಕ ಶ್ರೇಷ್ಠ ಅವಧಿ (45.57 ಸೆ.) ದಾಖಲಿಸಿದರೂ, ನಾಲ್ಕನೇ ಸ್ಥಾನ ಪಡೆಯಲಷ್ಟೇ ಶಕ್ತರಾದರು.

ಮಹಿಳೆಯರ ಲಾಂಗ್‌ಜಂಪ್‌ನಲ್ಲಿ ಶೈಲಿ ಸಿಂಗ್ ಮತ್ತು ಆನ್ಸಿ ಸೋಜನ್ ಫೈನಲ್‌ಗೆ ಅರ್ಹತೆ ಪಡೆದರು. 20 ಮಂದಿಯ ಕಣದಲ್ಲಿ ಶೈಲಿ 6.17 ಮೀ.ಗಳ ಉತ್ತಮ ಯತ್ನದೊಡನೆ ಮೂರನೇ ಸ್ಥಾನದೊಡನೆ ಅರ್ಹತೆ ಪಡೆದರು. ಆನ್ಸಿ 6.14 ಮೀ. ದೂರ ದಾಖಲಿಸಿ ಫೈನಲ್‌ಗೆ ಅರ್ಹತೆ ಪಡೆದರು.

ಜ್ಯೋತಿ ಯರ್ರಾಜಿ 100 ಮೀ. ಹರ್ಡಲ್ಸ್ ಹೀಟ್ಸ್‌ನಲ್ಲಿ 13.18 ಸೆ.ಗಳ ಕಾಲಾವಧಿಯೊಡನೆ ಮುಂದಿನ ಸುತ್ತಿಗೆ ಅರ್ಹತೆ ಪಡೆದರು. ಅವರು ತಮ್ಮ ಹೀಟ್ಸ್‌ನಲ್ಲಿ ಮೂರನೇ ಸ್ಥಾನ ಗಳಿಸಿದರು.